ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

ಬೆಳಗಾವಿ ಸನ್ 2014-15ನೇ ಸಾಲಿನ

ಲೆಕ್ಕ ಪರಿಶೋಧನಾ ವರದಿ

OFFICE OF THE
ADDITIONAL DIRECTOR
REGIONAL OFFICE
O/O LOCAL AUDIT CIRCLE
PLOT NO:35B, RAMTEERTH NAGAR
2nd Stage, NEAR CHEMICAL LABORATORY,
KANBARGI ROAD, BELAGAVI- 590016
Phone No:0831-2454090
Email Id: adrobelagavi@gmail.com

(ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ)

ಅಪರ ನಿರ್ದೇಶಕರು,
ಪ್ರಾಂತೀಯ ಕಛೇರಿ,
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ,
ಬಡಾವಣೆ ಸಂಖ್ಯೆ:೩೫ಬಿ, ರಾಮತೀರ್ಥನಗರ,
೨ನೇ ಹಂತ, ರಾಸಾಯನಿಕ ಪ್ರಯೋಗಾಲಯದ ಹತ್ತಿರ
ಕಣಬರ್ಗಿ ರಸ್ತೆ, ಬೆಳಗಾವಿ- ೫೯೦೦೧೬
ದೂರವಾಣಿ: ೦೮೩೧-೨೪೫೪೦೯೦
Email Id: adrobelagavi@gmail.com

ಸಂ:ಅನಿ/ಪ್ರಾಂಕ.ಬೆ/ವಿತಾವಿ/2016-17/112 ದಿನಾಂಕ: 24-5-2016

ನೋಂದಾಯಿತ ಅಂಚೆ ಸ್ವೀಕೃತಿ ಪತ್ರದ ಮೂಲಕ

ಇವರಿಗೆ,
ಕುಲಸಚಿವರು,
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ,
ಮಚ್ಛೆ ಬೆಳಗಾವಿ.

ಮಾನ್ಯರೆ,

ವಿಷಯ:- ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯ 2014-15ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಕಳುಹಿಸುತ್ತಿರುವ ಕುರಿತು.

** ** **

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯ 2014-15ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ವಿಶ್ವವಿದ್ಯಾಲಯ ಅಧಿನಿಯಮ 1994ರ ನಿಯಮ 28 (2)ರ ಪ್ರಕಾರ ಕೈಗೊಂಡ ವರದಿಯನ್ನು ಈ ಪತ್ರದೊಂದಿಗೆ ಅಡಕವಿರಿಸಿ ಕಳುಹಿಸಿದೆ.

ವರದಿ ಸ್ವೀಕರಿಸಿದ ಸ್ವೀಕೃತಿ ಪತ್ರವನ್ನು ಕಳುಹಿಸಲು ಕೋರಿದೆ.

ತಮ್ಮ ವಿಶ್ವಾಸಿ,

ಅಡಕ: 2014-15ನೇ ಸಾಲಿನ
ಲೆಕ್ಕ ಪರಿಶೋಧನಾ ವರದಿ.

ಅಪರ ನಿರ್ದೇಶಕರು,
ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ,
ಮತ್ತು ಲೆಕ್ಕಪತ್ರ ಇಲಾಖೆ,
ಪ್ರಾಂತೀಯ ಕಛೇರಿ ಬೆಳಗಾವಿ.

ಪ್ರತಿಯನ್ನು ಗೌರವಗಳೊಂದಿಗೆ ಸಲ್ಲಿಸಿದೆ :-

1) ಮಾನ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, (ಉನ್ನತ ಶಿಕ್ಷಣ) ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಮಾನ್ಯ ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
3) ಕಛೇರಿ ಪ್ರತಿ.

Received in the Office of the Registrar
1 JUN 2016

Accounts
02/06/16

VISVESVARAYA TECHNOLOGICAL UNIVERSITY BELGAUM
3 JUN 2016
INWARD
511

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ
ಸನ್.2014-15ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ :-

-: ಭಾಗ-1 :-

1) ಸಾಮಾನ್ಯ ಪರಿಚಯ :-

1	ಸಂಸ್ಥೆಯ ಹೆಸರು	ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ
2	ಲೆಕ್ಕ ಪರಿಶೋಧನಾ ವರದಿ	2014-15 (01-04-2014 ರಿಂದ 31-03-2015)
3	ಲೆಕ್ಕ ಪರಿಶೋಧಕರ ಹೆಸರು	ಶ್ರೀ.ಕೆ.ಜಿ.ಕುಲಕರ್ಣಿ, ಲೆಪಅ
		ಶ್ರೀ.ವ್ಹಿ.ಎಸ್.ಬುಲಬುಲೆ, ಲೆಪಅ
		ಶ್ರೀ.ಎಸ್.ಎನ್.ಕಿತ್ತೂರ, ಲೆಅ
		ಶ್ರೀ.ಆರ್.ಎಸ್.ವಂಜೀರೆ, ಲೆಅ
		ಶ್ರೀ.ಟಿ.ಡಿ.ಬಿ.ಪಾಟೀಲ, ಲೆಅ
		ಶ್ರೀ.ಎಸ್.ಡಿ.ಪದ್ಮಮಣ್ಣವರ, ಲೆಪ
		ಶ್ರೀ.ಎಂ.ಜಿ.ಕುಲಕರ್ಣಿ, ಲೆಪ
		ಶ್ರೀ.ಮಲ್ಲಿಕಾರ್ಜುನ.ಸಬರದ, ಲೆಪ
4	ಲೆಕ್ಕ ಪರಿಶೋಧನೆ ಪ್ರಾರಂಭದ ದಿನಾಂಕ	01-10-2015
5	ಲೆಕ್ಕಪರಿಶೋಧನೆ ಮುಕ್ತಾಯ ದಿನಾಂಕ	11-03-2016
6	ಲೆಕ್ಕಪರಿಶೋಧನೆ ಉಪಯೋಗಿಸಿರುವ ಒಟ್ಟು ಮಾನವ ದಿನಗಳು	222 ಮಾನವ ದಿನಗಳು
7	ಮರು ಸಮೀಕ್ಷೆ ಮಾಡಿದ ಅಧಿಕಾರಿಗಳ ಹೆಸರು ಮತ್ತು ಹುದ್ದೆ	ಶ್ರೀ.ಮಹಂತಪ್ಪ ಆಯ್ ಸುಲಿಭಾವಿ, ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಛೇರಿ ಬೆಳಗಾವಿ.
8	ಮರು ಸಮೀಕ್ಷೆ ಮಾಡಿರುವ ದಿನಾಂಕ	04-04-2016

2) ವಿಶ್ವವಿದ್ಯಾಲಯದ ಅಧಿಕಾರಿಗಳ ವಿವರ ಮತ್ತು ಅವಧಿ :-

1	ಉಪಕುಲಪತಿಗಳು	ಡಾ|| ಎಚ್. ಮಹೇಶಪ್ಪ	01-04-2014 ರಿಂದ 31-03-2015
2	ಕುಲಸಚಿವರು (ಆಡಳಿತ)	ಡಾ|| ಕೆ. ಇ. ಪ್ರಕಾಶ	01-04-2014 ರಿಂದ 31-03-2015
3	ಕುಲಸಚಿವರು (ಪರೀಕ್ಷೆ)	ಡಾ|| ಎಚ್. ಈ. ಶೇಖರಪ್ಪ	01-04-2014 ರಿಂದ 31-03-2015
4	ಹಣಕಾಸು ಅಧಿಕಾರಿಗಳು	ಡಾ|| ಕೆ. ಇ ಪ್ರಕಾಶ	01-04-2014 ರಿಂದ 31-03-2015
5	ಸ್ಥಾನಿಕ ಅಭಿಯಂತರರು	ಬಿ ಸಿ ಶಾಂತಪ್ಪ	01-04-2014 ರಿಂದ 31-03-2015

ಪೀಠಿಕೆ :-

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ದಿನಾಂಕ:01-04-1998 ರಿಂದ ಪ್ರಾರಂಭವಾಗಿದ್ದು, ವರ್ಷದಿಂದ ವರ್ಷಕ್ಕೆ ಈ ವಿಶ್ವವಿದ್ಯಾಲಯದ ಕಾರ್ಯವ್ಯಾಪ್ತಿಯು ವಿಸ್ತಾರವಾಗುತ್ತಾ ಹೋಗುತ್ತಿದೆ. ಇದರಿಂದಾಗಿ ಸ್ವಾಭಾವಿಕವಾಗಿ/ಆಡಳಿತಾತ್ಮಕ/ ಆರ್ಥಿಕ ವಹಿವಾಟುಗಳು ಸಹ ಗಣನೀಯ ಪ್ರಮಾಣದಲ್ಲಿ ಬೆಳೆದಿರುತ್ತದೆ. ಇದರಿಂದಾಗಿ ಲೆಕ್ಕ ಪರಿಶೋಧನಾ ಕಾರ್ಯವು ಸಹ ಹೆಚ್ಚಾಗಿದ್ದು ಪ್ರಸಕ್ತ ನಿಗದಿಯಾದ ಸುಮಾರು 222 ದಿನಗಳ ಮಾನವ ದಿನವೂ ಸಹ ಲೆಕ್ಕ ಪರಿಶೋಧನೆಗೆ ಸಾಲುತ್ತಿಲ್ಲವಾದ್ದರಿಂದ ಶತಪ್ರತಿಶತ ಆರ್ಥಿಕ/ ಆಡಳಿತಾತ್ಮಕ ವ್ಯವಹಾರಗಳ ಪರಿಶೀಲನೆ ಅಸಾಧ್ಯವಾಗಿದೆ. ಕಾರಣ ಇನ್ನೂ ಹೆಚ್ಚಿನ ಮಾನವ ದಿನ ನೀಡುವುದು ಅಗತ್ಯವೆನಿಸುತ್ತದೆ. ಇದೂ ಅಲ್ಲದೇ ಒಟ್ಟಾರೆ ವಿತಾವಿವಿಗೆ ಲೆಕ್ಕ ಪರಿಶೋಧನಾ ಕಾರ್ಯವನ್ನು ವಹಿಸುವುದಕ್ಕಿಂತ ವಿತಾವಿವಿಯ ಪ್ರತ್ಯೇಕ ಘಟಕಗಳ ಲೆಕ್ಕ ಪರಿಶೋಧನೆಗೆ ಪ್ರತ್ಯೇಕವಾಗಿ ವಹಿಸುವದರಿಂದ ಲೆಕ್ಕ ಪರಿಶೋಧನಾ ಕಾರ್ಯ ಇನ್ನೂ ಸ್ಪಷ್ಟ/ನಿಖರ ಮತ್ತು ಸ್ಫುಟವಾಗಿ ಪರಿಶೀಲಿಸಿ ಲೆಕ್ಕಪರಿಶೋಧನಾ ವರದಿಯು ಸಮರ್ಪಕವಾಗಿ ಹೊರಬರಲು ಸಹಾಯಕವಾಗುತ್ತದೆ.

-: ಭಾಗ-2 :-

1) ಹಿಂದಿನ ಲೆಕ್ಕ ಪರಿಶೋಧನಾ ವರದಿಗಳ ಆಕ್ಷೇಪಣೆ ಪ್ಯಾರಾಗಳಿಗೆ ತೆಗೆದುಕೊಂಡ ಕ್ರಮದ ಬಗ್ಗೆ :-

2014-15 ನೇ ಸಾಲಿನ ವರೆಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕಾರ್ಯವ್ಯಾಪ್ತಿಗೆ ಬರುವ ವಿವಿಧ ವಿಭಾಗಗಳು ಮತ್ತು ಕಛೇರಿಯಲ್ಲಿ ನಡೆಯಲಾದ ವಹಿವಾಟಗಳ ಲೆಕ್ಕಪರಿಶೋಧನೆಯನ್ನು ಕೈಕೊಂಡು ವರದಿಯನ್ನು ಜಾರಿಮಾಡಲಾಗಿರುತ್ತದೆ. ಲೆಕ್ಕ ಪರಿಶೋಧನಾ ವರದಿಗಳಲ್ಲಿ ತಿಳಿಸಿರುವ ಆಕ್ಷೇಪಣೆಗಳು ಮತ್ತು ವಸೂಲಾತಿ ಪ್ರಕರಣಗಳ ಇತ್ಯರ್ಥದ ಬಗ್ಗೆ ವಿಶ್ವವಿದ್ಯಾಲಯದವರು ವಿಳಂಬ ನೀತಿಯನ್ನು ತೋರಿಸುತ್ತಿರುವ ಕಾರಣ 1998-99 ರಿಂದ 2013-14ರ ಸಾಲಿನ ವರೆಗಿನ ಆಕ್ಷೇಪಾರ್ಹ ಪ್ಯಾರಾಗಳ ಮೊತ್ತ ಮತ್ತು ವಸೂಲಾತಿ ಪ್ರಕರಣಗಳ ಮೊತ್ತಗಳು ಇತ್ಯರ್ಥವಾಗದೇ ಮುಂದುವರೆಯುತ್ತವೆ. ಹೀಗೆ ಮುಂದುವರೆದಲ್ಲಿ ಸೂಕ್ತ ಕ್ರಮಕೈಕೊಳ್ಳದಿದ್ದರೆ ಪ್ಯಾರಾಗಳು ಇತ್ಯರ್ಥವಾಗದ ಹಂತ ತಲುಪಿ ವಿಶ್ವವಿದ್ಯಾಲಯಕ್ಕೆ ನಷ್ಟ ಉಂಟಾಗುವ ಸಂಭವವು ಉಂಟಾಗಲು ಕಾರಣವಾಗಬಹುದು. ಆದ್ದರಿಂದ ಆಡಳಿತಾತ್ಮಕ ಕ್ರಮಕೈಕೊಳ್ಳುವಲ್ಲಿ ವಿಳಂಬ ಉಂಟಾದಲ್ಲಿ ವಿಶ್ವವಿದ್ಯಾಲಯದ ಹಣಕಾಸಿನ ಮೇಲಿನ ನಿಯಂತ್ರಣ ಮತ್ತಷ್ಟು ದುರ್ಬಲವಾಗಿ ಹಣಕಾಸಿನ ನಷ್ಟದ ಪ್ರಕರಣಗಳು ಉಂಟಾಗಲು ಅವಕಾಶ ನೀಡಿದಂತಾಗುವುದು. ಆದ್ದರಿಂದ ವರದಿಗಳಲ್ಲಿ ಸೂಚಿಸಿರುವ ಆಕ್ಷೇಪಣೆ ಮತ್ತು ವಸೂಲಾತಿ ಪ್ರಕರಣಗಳು ಇದೆ ರೀತಿ ಪ್ರತಿ ವರ್ಷಗಳಲ್ಲಿ ಪುನರಾವರ್ತನೆಗೊಳ್ಳುತ್ತಿವೆ, ಅನುಪಾಲನಾ ವರದಿ ಸಲ್ಲಿಸುವಲ್ಲಿ ತೋರುವ ವಿಳಂಬವು ಲೆಕ್ಕ ಪರಿಶೀಲನೆಯ ಉದ್ದೇಶ ವಿಫಲವಾದಂತಾಗುತ್ತದೆ. ಆದ್ದರಿಂದ ತೀರುವಳಿಗಳಿಗೆ ಕ್ರೀಯಾ ಯೋಜನೆಯನ್ನು ಸಿದ್ಧಪಡಿಸಿಕೊಂಡು ಕಾಲ ಮಿತಿಯಲ್ಲಿ ಅನುಪಾಲನಾ ವರದಿಗಳನ್ನು ಸಲ್ಲಿಸುವುದು ಅವಶ್ಯಕ ಎಂದು ಅಭಿಪ್ರಾಯ ಪಡೆಯಲಾಗಿದೆ. ಆದ್ದರಿಂದ ವಿಳಂಬ ನೀತಿಗೆ ಅವಕಾಶ ನೀಡದೆ ಬಾಕಿ ಇರುವ ಹಾಗೂ ಸದರ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿನ ಸೂಚಿಸಿರುವ ಎಲ್ಲ ಆಕ್ಷೇಪಣೆಗಳ ಮತ್ತು ವಸೂಲಾತಿ, ಪ್ಯಾರಾಗಳ ಇತ್ಯರ್ಥಕ್ಕೆ ಅಂತಿಮ ಸ್ವರೂಪದ ಅನುಸರಣೆಗಳನ್ನು ಸಲ್ಲಿಸಿ ಇತ್ಯರ್ಥಕ್ಕೆ ಕ್ರಮಕೈಕೊಳ್ಳುವಂತೆ ಸೂಚಿಸಲಾಗಿದೆ. ಹಾಗೂ ದಿನಾಂಕ: 31-3-2015ರ ಅಂತ್ಯಕ್ಕೆ ಇತ್ಯರ್ಥಕ್ಕೆ ಬಾಕಿ ಉಳಿದಿರುವ ಆಕ್ಷೇಪಣೆ ಮತ್ತು ವಸೂಲಾತಿ ಪ್ಯಾರಾವಾರು ಮೊತ್ತಗಳ ವಿವರಗಳನ್ನು **ಅನುಬಂಧ-01**ರಲ್ಲಿ ನೀಡಿ ವರದಿಗೆ ಲಗತ್ತಿಸಲಾಗಿದೆ.

2) ಮೌಲಿಕ ಶಿಲ್ಕುಗಳ ಪರಿಶೀಲನೆ ಬಗ್ಗೆ:-

2014-15ರ ಸಾಲಿನ ಲೆಕ್ಕಪರಿಶೋಧನೆ ಪ್ರಾರಂಭದ ದಿನಾಂಕ: 01-10-2010 ರಂದು ಮೌಲಿಕ ಶಿಲ್ಕುಗಳನ್ನು ಪರಿಶೀಲಿಸಲಾಗಿದ್ದು ವಿವರ ಈ ಕೆಳಗಿನಂತಿದೆ.

1	ಕೈಶಿಲ್ಕು	----ಇರುವುದಿಲ್ಲ------
2	ಅಂಚೆ ಚೀಟಿ	----ಇರುವುದಿಲ್ಲ------ ವಿಶ್ವವಿದ್ಯಾಲಯದ ಎಲ್ಲ ವಿಭಾಗಗಳ ಪತ್ರಗಳ ರವಾನೆಯನ್ನು ತ್ವರಿತ ಅಂಚೆ ಮೂಲಕ ರವಾನಿಸಲಾಗುತ್ತಿದೆ ಇದರಿಂದಾಗಿ ಅಂಚೆ ಚೀಟಿಗಳ ಬಳಕೆ ಇರುವುದಿಲ್ಲ ಶಿಲ್ಕು ಇರುವುದಿಲ್ಲ.
3	ಸಾಮಾನ್ಯ ರಶೀದಿ ಪುಸ್ತಕ	ವಿಶ್ವವಿದ್ಯಾಲಯದಲ್ಲಿ ಮೊತ್ತವನ್ನು ಸ್ವೀಕರಿಸುವುದನ್ನು ಆನ್‌ಲೈನ್ ಮೂಲಕ ರಶೀದಿಯನ್ನು ನೀಡಲಾಗುತ್ತಿರುವದರಿಂದ ರಶೀದಿ ಪುಸ್ತಕಗಳನ್ನು ಬಳಿಸಲಾಗಿಲ್ಲ. ಆದಾಗ್ಯೂ ಹಿಂದೆ ಖರೀದಿಸಲಾಗಿರುವ ರಶೀದಿ ಪುಸ್ತಕಗಳು 08 ಶಿಲ್ಕು ಉಳಿದಿರುವುದು.
4	ಅಳತೆ ಪುಸ್ತಕಗಳು	-------ನಿರ್ವಹಿಸಿರುವದಿಲ್ಲ.-----

3) ದಾಸ್ತಾನು :

ರಶೀದಿ ಪುಸ್ತಕಗಳ ದಾಸ್ತಾನು ರಜಿಸ್ಟರ್ ಬಗ್ಗೆ :-

2014-15ನೇ ಸಾಲಿನಲ್ಲಿ ಆನ್‌ಲೈನ್ ಮೂಲಕ ವಿಶ್ವವಿದ್ಯಾಲಯದವರು ರಶೀದಿ ನೀಡುತ್ತಿರುವದರಿಂದ ಸಾಮಾನ್ಯ ರಶೀದಿಗಳು ಪ್ರಸಕ್ತ ಸಾಲಿನಲ್ಲಿ ಉಪಯೋಗಿಸಿರುವುದಿಲ್ಲ. ಹಿಂದಿನ ಸಾಲಿನಲ್ಲಿ ಶಿಲ್ಕು ಉಳಿದಿರುವ 09 ರಶೀದಿ ಪುಸ್ತಕಗಳಲ್ಲಿ ಪುಸ್ತಕ ಸಂಖ್ಯೆ:409 40801 ದಿನಾಂಕ:16-07-2010 ರಿಂದ 40884 ದಿ:20-09-2010ರ ವರೆಗೆ ಮಾತ್ರ ಎಂಬತ್ತನಾಲ್ಕು ರಶೀದಿಗಳು ಬಳಸಿದ್ದು ಇನ್ನು ಉಳಿದ 40885 ರಿಂದ 40900 ವರೆಗೆ 16 ರಶೀದಿಗಳು ಉಪಯೋಗಿಸದೇ ಶಿಲ್ಕು ಇರುವುದು. ಆದ್ದರಿಂದ ಸದರ ಪುಸ್ತಕವು ಬಳಕೆಯಾಗಿರುವುದೆಂದು ಪರಿಗಣಿಸಲಾಗಿರುವುದು. ಇದರಿಂದಾಗಿ ಹಿಂದೆ ಶಿಲ್ಕು ಇರುವುದನ್ನು ಸದರ ಲೆಕ್ಕಪರಿಶೋಧನೆಯಲ್ಲಿ ಪರಿಷ್ಕರಿಸಿ ದಾಸ್ತಾನು 08 ರಶೀದಿ ಪುಸ್ತಕಗಳನ್ನು ಶಿಲ್ಕು ಇರುವುದನ್ನು ಕೆಳಗಿನಂತೆ ನೀಡಲಾಗಿದೆ.

1	ದಿ:01-04-2014ರ ಪ್ರಾರಂಭಿಕ ಶಿಲ್ಕು	09
2	2014-15ರಲ್ಲಿ ಖರೀದಿ	---ಖರೀದಿ ಇಲ್ಲ--
3	ಒಟ್ಟು	09
4	2014-15ರಲ್ಲಿ ಉಪಯೋಗ	01 (04 ರಶೀದಿಗಳು ಮಾತ್ರ ಮೇಲೆ ವಿವರಿಸಿದಂತೆ ಉಪಯೋಗಿಸಲಾಗಿದೆ.)
5	ದಿ:31-03-2015ಕ್ಕೆ ಕೊನೆಯ ಶಿಲ್ಕು	08

ಶಿಲ್ಕು ಇರುವ ದಾಸ್ತಾನು ವಿವರ ಕೆಳಗಿನಂತಿದೆ.

ಕ್ರಸಂ	ಪುಸ್ತಕ ಸಂಖ್ಯೆ	ಇಂದ		ವರೆಗೆ	
1					
2	410	40801	16-2-2010	40804	24-09-2010
3	411	40901	-	-	-
4	306	41001	-	41100	-
5	307	30501	-	30600	-
6	308	30601	-	30700	-
7	308	30701	-	30800	-
8	310	30801	-	30900	-

ಅಳತೆ ಪುಸ್ತಕ ದಾಸ್ತಾನು ವಹಿ ಬಗ್ಗೆ :-

ಪ್ರಸಕ್ತ ಸಾಲಿನ ಅಳತೆ ಪುಸ್ತಕ ದಾಸ್ತಾನು ವಹಿಯನ್ನು ನಿರ್ವಹಿಸಲಾಗಿದೆ. ಖರೀದಿ ಮತ್ತು ಉಪಯೋಗದ ವಿವರಗಳು ಕೆಳಗಿನಂತಿರುವುದು.

1	ದಿ:01-04-2014ರ ಪ್ರಾರಂಭಿಕ ಶಿಲ್ಕು	05 ಪುಸ್ತಕಗಳು
2	2014-15ರಲ್ಲಿ ಖರೀದಿ	50 (2222 ರಿಂದ 2271)
3	ಒಟ್ಟು	55
4	2014-15ರಲ್ಲಿ ಉಪಯೋಗ	04
5	ದಿ:31-03-2015ಕ್ಕೆ ಕೊನೆಯ ಶಿಲ್ಕು	51 (10373, 2222 ರಿಂದ 2271)

4) ಆರ್ಥಿಕ ಪರಿಸ್ಥಿತಿ :-

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯ 2014-15ನೇ ಸಾಲಿನ ಆರ್ಥಿಕ ಪರಿಸ್ಥಿತಿಯ ವಿವರಣೆ ಕೆಳಗಿನಂತಿರುವುದು.

ಅ ಸ	ವಿವರ	ಬ್ಯಾಂಕಿನ ಖಾತೆ ಸಂಖ್ಯೆ	ಆರಂಭ ಶಿಲ್ಕು	ಜಮೆ ನಗದು ಪುಸ್ತಕ ಪ್ರಕಾರ	ಒಟ್ಟು	ವೆಚ್ಚ	ಅಂತಿಮ ಶಿಲ್ಕು	ಬ್ಯಾಂಕ ಪಾಸ್ ಬುಕ್ ಪ್ರಕಾರ ಶಿಲ್ಕು /ಎಫ್.ಡಿ	ವ್ಯತ್ಯಾಸ
1	ಸಾಮಾನ್ಯ ನಿಧಿ								
1	SBI commercial bank Belagavi	10258482054							
2	SBI Govt Estt Div Belagavi	10988608964							
3	canra bank belakudi Belagavi	26090							
4	SBM VTU regular a/c	54003362309							
5	-do- FDD A/c	64066459199							
6	-do- SBM UBDTE Davangere DST Ale	64089350819	2785652122	4259667893	7045320015	6426670923	618649092	470135100	148213992
7	SBM VTU MHRD a/c	64098415711							
8	SBM VTU VGST CESEM	64122887702							
9	-do- consortium ale	6414004452							
10	SBM VTU Biotech ale	64146359911							
11	SBM VTU CESD Dandeli	64168319906							

ವ್ಯತ್ಯಾಸದ ವಿವರಗಳನ್ನು ₹.148213992/- ವಿವರಗಳನ್ನು ಹಾಗೂ ಅಂತಿಮ ಶಿಲ್ಕು ಹಾಗೂ ಬ್ಯಾಂಕಿನ ಶಿಲ್ಕು ಇರುವ ಪಾಸ್ ಪ್ರಕಾರದ ವ್ಯತ್ಯಾಸದ ಮೊತ್ತದ ವಿವರಗಳನ್ನು **ಅನುಬಂಧ-02ರಲ್ಲಿ** ನೀಡಿ ಲಗತ್ತಿಸಲಾಗಿದೆ.

5) ಆಯವ್ಯಯ :-

ಪ್ರಸಕ್ತ ಸಾಲಿನ ಆಯವ್ಯಯವನ್ನು ವಿಶ್ವವಿದ್ಯಾಲಯದ ಹಣಕಾಸು ಸಮೀತಿ 52ನೇ ಸಭೆಯ ದಿ:28-3-2014ರಂದು ಮಂಡಿಸಿ ಅನುಮೋದನೆಯನ್ನು ಪಡೆಯಲಾಗಿದೆ. ಅನುಮೋದನೆ ಪಡೆದುಕೊಂಡ ಬಗ್ಗೆ ಅಂದಾಜು ಪತ್ರವನ್ನು ಮಾನ್ಯ ಕಾರ್ಯದರ್ಶಿಗಳು ಕರ್ನಾಟಕ ರಾಜ್ಯ ಸರಕಾರದ ಉನ್ನತ ಶಿಕ್ಷಣ ಹಾಗೂ ಹಣಕಾಸು ಇಲಾಖೆ ಬೆಂಗಳೂರು ಇವರಿಗೆ ವಿಶ್ವವಿದ್ಯಾಲಯದ ಪತ್ರ ಸಂಖ್ಯೆ:ವಿಟಿಯು/ಎಫ್‌ಓ/ಎಫ್‌ಸಿ/ ದಿನಾಂಕ: ಪತ್ರದಡಿಯಲ್ಲಿ ಸರ್ಕಾರಕ್ಕಾಗಿ ಸಲ್ಲಿಸಲಾಗಿದೆ. ಹಾಗೂ ಪ್ರಸಕ್ತ ಸಾಲಿನ ಅಂದಾಜು ಪತ್ರಿಕೆಯ ನಿರೀಕ್ಷಿತ ಜಮೆ ನಿರೀಕ್ಷಿತ ವೆಚ್ಚಗಳ ಮೊತ್ತದ ವಿವರವು ಕೆಳಗಿನಂತೆ ಇರುವುದು.

1	2014-15ರ ಸಾಲಿನ ನಿರೀಕ್ಷಿತ ಜಮೆ	186.95.25.000
2	2014-15ರ ಸಾಲಿನ ನಿರೀಕ್ಷಿತ ಖರ್ಚು	262.57.00.000
3	2014-15ರ ಸಾಲಿನ ಅಂದಾಜು ನಿರೀಕ್ಷಿತ ಕೊರತೆ	75.61.75.000

ಮೇಲಿನ ನಿರೀಕ್ಷಿತ ಜಮೆ ಮತ್ತು ವೆಚ್ಚಗಳ ಮೊತ್ತವನ್ನು ಅವಲೋಕಿಸಿದಾಗ ಪ್ರಸಕ್ತ ಸಾಲಿನ ಅಂದಾಜು ಪತ್ರಿಕೆಯು ₹.75.61.75.000/- ಕೊರತೆಯ ಆಯವ್ಯಯವಾಗಿದ್ದು, ಸದರ ಕೊರತೆಯ ಹೊಂದಾಣಿಕೆಯನ್ನು ಸರಿದೂಗಿಸುವ ಬಗ್ಗೆ ವಿಶ್ವವಿದ್ಯಾಲಯವು ಲಭ್ಯದಾಖಲೆಯನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವದಿಲ್ಲ. ವಿವರಗಳನ್ನು **ಅನುಬಂಧ-03ರಲ್ಲಿ** ತೋರಿಸಿದೆ.

6) ವಾರ್ಷಿಕ ಲೆಕ್ಕಪತ್ರಗಳ ಬಗ್ಗೆ :-

ಪ್ರಸಕ್ತ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ವಿಶ್ವವಿದ್ಯಾಲಯದ ಹಣಕಾಸು ಸಮಿತಿಯ 56ನೇಯ ಸಭೆಯ ಗೊತ್ತುವಳಿ ಅಡಿಯಲ್ಲಿ ಅನುಮೋದನೆಗೊಂಡು. ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿ ಸಭೆ ದಿನಾಂಕ: 08-06-2015 ರಂದು ಗೊತ್ತುವಳಿ ಸಂಖ್ಯೆ 1.1ರ ಪ್ರಕಾರ 120ನೇ ಕಾರ್ಯಕಾರಿ ಪರಿ ಷತ್ತಿನ ಸಭೆಯಲ್ಲಿ ಯಥಾವತ್ತಾಗಿ ಅನುಮೋದನೆಗೊಂಡಿದೆ ಎಂಬುದಾಗಿ ನಡುವಳಿಯನ್ನು ನೀಡಲಾಗಿದೆ. ಆದರೆ ಸದರ ವಾರ್ಷಿಕ ಲೆಕ್ಕಪತ್ರವನ್ನು ಸರಕಾರಕ್ಕೆ ಸಲ್ಲಿಸಿರುವ ಬಗ್ಗೆ ಯಾವುದೇ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಒದಗಿಸಲಿಲ್ಲ.

ಮುಂದುವರೆದು ನಡುವಳಿಯ ವಿವರಗಳ ಪ್ರಕಾರ ಲೆಕ್ಕ ಪರಿಶೋಧನೆಗೊಳ್ಪದ ₹.201,44,19,464/- ಸ್ವೀಕೃತಿಗೆ ಮತ್ತು ₹.1,68,00,22,996/- ವೆಚ್ಚಗಳಿಗೆ ₹.33,43,96,468/- ಗಳ ಉಳಿತಾಯ ವಾರ್ಷಿಕ ಲೆಕ್ಕಪತ್ರಕ್ಕೆ ಅನುಮೋದನೆಯನ್ನು ಪಡೆದುಕೊಂಡಿದ್ದಾರೆ.

ವಾರ್ಷಿಕ ಲೆಕ್ಕಪತ್ರಗಳ ವಿವರಗಳನ್ನು **ಅನುಬಂಧ-04(ಅ,ಬ,ಕ)**ರಲ್ಲಿ ನೀಡಲಾಗಿದೆ. ವಾರ್ಷಿಕ ಲೆಕ್ಕಗಳೆಂದರೆ Receipt & Payment, Income & Expenditure ಮತ್ತು Balance sheet ಈ 3 ನ್ನು ಸರ್ಕಾರಕ್ಕೆ ಮತ್ತು ಲೆಕ್ಕ ಪರಿಶೋಧನೆಗೆ ನಿಗದಿತ ಅವಧಿಯಲ್ಲಿ ಕಳಸಲು ಸೂಚಿಸಿದೆ.

7) ವರ್ಗೀಕರಣ ರಜಿಸ್ಟರ್ :-

ಪ್ರಸುತ್ತ 2014-15ನೇ ಸಾಲಿನ ನಿವ್ವಳ ಜಮೆ ಮತ್ತು ವೆಚ್ಚಗಳ ವಿವರಗಳನ್ನು ಉಪ ಶೀರ್ಷಿಕೆವಾರು ಗಣಕಯಂತ್ರದಡಿ ನಿರ್ವಹಿಸಲಾಗಿದೆ. ಇದಕ್ಕಾಗಿ ಪ್ರತ್ಯೇಕವಾದ ರಜಿಸ್ಟರ್‌ಗಳನ್ನು ನಿರ್ವಹಿಸಿರುವುದಿಲ್ಲ. ಆದ್ದರಿಂದ ಜಮೆ ಮತ್ತು ವೆಚ್ಚಗಳ ಉಪ ಶೀರ್ಷಿಕೆವಾರು ವಿವರಗಳನ್ನು ದಿನಂಪ್ರತಿ ನಮೂದಿಸಿ. ವರ್ಗೀಕೃತ ಜಮೆ ಮತ್ತು ಖರ್ಚುಗಳ ವಿವರದ ವಹಿಯನ್ನು ಇನ್ನುಮುಂದೆ ನಿರ್ವಹಿಸಲು ಸೂಚಿಸಲಾಗಿದೆ.

8) ಇ.ಎಂ.ಡಿ ಮತ್ತು ಠೇವಣಿ :-

ಪ್ರಸಕ್ತ ಸಾಲಿನಲ್ಲಿ ವಿಶ್ವವಿದ್ಯಾಲಯಕ್ಕೆ ಜಮೆಗೊಳ್ಳುವ ಠೇವು ಮತ್ತು ಇ.ಎಂ.ಡಿ ಮೊತ್ತಗಳ ರಜಿಸ್ಟರ್‌ನ್ನು ನಿರ್ವಹಿಸಲಾಗಿದೆ. ಸದರಿ ರಜಿಸ್ಟರ್‌ನ್ನು ಪರಿಶೀಲಿಸಿದಾಗ ಪ್ರಸಕ್ತ ಸಾಲಿನ ಠೇವು ಮತ್ತು ಇ.ಎಂ.ಡಿಗಳ ಜಮೆ ಮತ್ತು ಮರುಪಾವತಿಗಳ ವಿವರ ಕೆಳಗಿನಂತಿರುವುದು.

ವಿವರ	ಇ.ಎಂ.ಡಿ	ಠೇವು
ದಿ:01-04-2014ರ ಪ್ರಾರಂಭಿಕ ಶಿಲ್ಕು	10942489	59942933
2014-15ರಡಿ ಜಮೆ	470900	126105745
ಒಟ್ಟು	11413389	162249432
2014-15ರಡಿ ಮರು ಪಾವತಿ	380000	102306499
ದಿ:31-03-2015ರ ಕೊನೆಯ ಶಿಲ್ಕು	11033389	83742179

ಸದರಿ ವಹಿಯನ್ನು ಪರಿಶೀಲಿಸಿದಾಗ ಕೆಲವೊಂದು ಠೇವುಗಳು 3 ವರ್ಷ ಅವಧಿ ಮುಕ್ತಾಯಗೊಂಡು ಇಂತಹ ಠೇವುಗಳ ಮೊತ್ತಗಳನ್ನು ವಿಶ್ವವಿದ್ಯಾಲಯಕ್ಕೆ ಜಮೆ ಮಾಡಿಕೊಂಡಿರುವುದಿಲ್ಲ. ಆದ್ದರಿಂದ 3 ವರ್ಷ ಸಂದಾಯವಾದ ಠೇವುಗಳನ್ನು ಕೂಡಲೇ ವಿಶ್ವವಿದ್ಯಾಲಯ ಸಾಮಾನ್ಯ ನಿಧಿ ಜಮೆ ಮಾಡಿಕೊಳ್ಳತಕ್ಕದ್ದು ಜಮೆ ಮಾಡಿಕೊಂಡು ಠೇವುಗಳ ವಹಿಯಲ್ಲಿ ಕಡಿಮೆ ಮಾಡಿಕೊಳ್ಳಲು ಈ ಮೂಲಕ ಸೂಚಿಸಲಾಗಿದೆ. ಹಾಗೂ 2014-15ನೇ ಸಾಲಿನ ಠೇವು ಮತ್ತು ಇ.ಎಂ.ಡಿ ಗಳ ವಿವರಗಳನ್ನು **ಅನುಬಂಧ-05 ಮತ್ತು 06**ರಲ್ಲಿ ನೀಡಲಾಗಿದೆ.

9) **ಹೂಡಿಕೆಗಳು:**

ವಿಶ್ವವಿದ್ಯಾಲಯದ 2014-15ನೇ ಸಾಲಿನ ಹೂಡಿಕೆಗಳ ಕುರಿತಾದ ಯಾವುದೇ ದಾಖಲೆಗಳನ್ನು/ಎಫ್.ಡಿ.ಆರ್ ಗಳನ್ನು ಲೆಕ್ಕ ಪರಿಶೋಧನೆಗೆ ಪರಿಶೀಲನೆಗಾಗಿ ಹಾಜರುಪಡಿಸಲಿಲ್ಲ. ಈ ಕುರಿತ ತಃಖ್ತೆಗಳನ್ನು ಮಾತ್ರ ಲೆಕ್ಕಪರಿಶೋಧನೆಯ ಅಂತ್ಯಕ್ಕೆ ನೀಡಿದ್ದರಿಂದ ಸದರ ಹೂಡಿಕೆಗಳ ವಾಸ್ತವಿಕತೆಯನ್ನು ಸರಿ ಎಂದು ಲೆಕ್ಕ ಪರಿಶೋಧನೆಯಲ್ಲಿ ಒಪ್ಪಲಾಗುವುದಿಲ್ಲ. ವಿವಿಯಿಂದ ನೀಡಿದ ಸಂಬಂಧಿತ ಹೂಡಿಕೆಗಳ ವಿವರಗಳನ್ನು **ಅನುಬಂಧ-07 (ಅ) ಮತ್ತು (ಬ)**ದಲ್ಲಿ ವಿವರಿಸಲಾಗಿದೆ

ಬ್ಯಾಂಕ್ ಆಫ್ ಇಂಡಿಯಾ ಬೆಳಗಾವಿಯಲ್ಲಿ ರೂ. 11749500/- ಹಣವನ್ನು ನಿಯಮ ಬಾಹಿರವಾಗಿ ತೊಡಗಿಸಿರುವ ಕುರಿತು. ಸನ್ 2009-10ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಕಂಡಿಕೆ ಸಂಖ್ಯೆ: 12 (ಅ) ನ್ನು ಮುಂದುವರೆಸುತ್ತಾ ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಎಲ್ಲ ಬ್ಯಾಂಕುಗಳ ಠೇವಣಿಗಳು ಹಾಗೂ ಬಂಗಾರದ ಪದಕದ ಠೇವಣಿಯನ್ನು ಪರಿಶೀಲಿಸಲಾಗಿ ದಿನಾಂಕ: 31-03-2014ಕ್ಕೆ ಕೊನೆಗೆ ಒಟ್ಟು ₹. 271,25,91,301/- ಹೂಡಿಕೆ ಹಾಗೂ ಬಂಗಾರದ ಪದಕಗಳ ಠೇವಣಿ ₹. 3733770/- ಇರುವುದು ಕಂಡು ಬಂದಿರುತ್ತದೆ.

ಬ್ಯಾಂಕ್ ಠೇವಣಿ ಪತ್ರ ಸಂಖ್ಯೆ: 8276724 ದಿನಾಂಕ: 1-2-2009ರ ಪ್ರಕಾರ ₹. 1,17,49,500/- ಗಳನ್ನು ಬ್ಯಾಂಕ್ ಆಫ್ ಇಂಡಿಯಾ ಹಲಗಾ ಬೆಳಗಾವಿ ಶಾಖೆಗೆ ಸಂಬಂಧಿಸಿದ್ದು, ಸದರಿ ಠೇವಣಿ ಪತ್ರದ ಕುರಿತು ಬ್ಯಾಂಕಿನಿಂದ ದೃಢೀಕರಣ ಪತ್ರ ಪಡೆದುಕೊಂಡಿರುವ ಬಗ್ಗೆ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಹಾಜರಪಡಿಸಿರುವುದಿಲ್ಲ. ಸದರ ಠೇವಣಿಯ ಅವಧಿಯು ದಿನಾಂಕ: 31-1-2011 ರಂದು ಮುಕ್ತಾಯಗೊಳ್ಳುವ ಅವಧಿಗೆ ₹.2500/-ಗಳನ್ನು ಮೊತ್ತ ಬರಬೇಕಾಗಿತ್ತು. ಅದಾಗ್ಯೂ ಕೂಡ ಪ್ರಸ್ತುತ ಸಾಲಿನ 31-08-2014ರ ವರೆಗೆ ವಿಶ್ವವಿದ್ಯಾಲಯದ ಖಾತೆಗೆ ಜಮೆಯಾಗಿರುವುದಿಲ್ಲ. ಆದುದ್ದರಿಂದ ದಿನಾಂಕ: 01-02-2009 ರಿಂದ 31-08-2014ರ ಅವಧಿಗೆ ಕನಿಷ್ಠ ಶೇ.9.00 ರಷ್ಟು ಬಡ್ಡಿ ಲೆಕ್ಕಾಚಾರ ಮಾಡಲಾಗಿ, ಠೇವಣಿ ಮೊತ್ತ ₹.18154001/- ಗಳಾಗುತ್ತದೆ. ಇದರಿಂದ ಮೂಲ ಠೇವಣಿ ಹಣ ₹.117495/-ಗಳಿಗೆ, ಬಡ್ಡಿ ₹.6404501/- ಮೊತ್ತ ಬರಬೇಕಾಗುತ್ತದೆ.

ಈ ಮೇಲಿನಂತೆ ಸದರ ಠೇವಣಿಯ ಬಗ್ಗೆ ಧೃಢೀಕರಣ ಪತ್ರ ಲಭ್ಯವಿಲ್ಲವೆಂದು ತಿಳಿಸಿದ್ದು ಸದರಿ ವಿಷಯ ಕುರಿತು ಪೋಲೀಸ ಠಾಣೆ (ಗ್ರಾಮೀಣ) ಬೆಳಗಾವಿಯಲ್ಲಿ ದಿ:28-8-2009 ರಂದು ದೂರು ದಾಖಲಿಸಿದ್ದರಿಂದ ಎಫ್.ಐ.ಆರ್. ಸಂಖ್ಯೆ:194/209 ಅಡಿಯಲ್ಲಿ ನ್ಯಾಯಾಲಯದಲ್ಲಿ ಮೊಕದ್ದಮೆ ಜಾರಿಯಲ್ಲಿರುತ್ತದೆ ಎಂದು ಕಾರ್ಯದರ್ಶಿಗಳು ಹಣಕಾಸು ಇಲಾಖೆ ಇವರ ಪತ್ರ ಸಂ ಆ ಇ 258 ರಾಲೆಪ 2008 ದಿ:2-6-2011 ರನ್ವಯ ಸದರ ವಿಷಯದಲ್ಲಿ ತಪ್ಪಿಸ್ಥರ ವಿರುದ್ಧ ಇಲಾಖಾ ವಿಚಾರಣಾ ಕೈಕೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ.

10) ಮುಂಗಡಗಳು :-

ಪ್ರಸಕ್ತ ಸಾಲಿನ ಮುಂಗಡದ ರಜಿಸ್ಟರ್‌ನ್ನು ಪರಿಶೀಲಿಸಲಾಗಿ ವಿವರವು ಇಂತಿದೆ.

ಅ.ನಂ	ವಿವರ	ಮುಂಗಡಗಳು
1	ದಿ:01-04-2014ರ ಪ್ರಾರಂಭಿಕ ಶಿಲ್ಕು	495121556.00
2	2014-15ರಡಿ ಜಮೆ	506452784.00
3	ಒಟ್ಟು	1001574340.00
4	2014-15ರಡಿ ಮರು ಪಾವತಿ	697893302.00
5	ದಿ:31-03-2015ರ ಕೊನೆಯ ಶಿಲ್ಕು	303681038.00

ಮೇಲೆ ವಿವರಿಸಿದ ಅಂಕಿ ಸಂಖ್ಯೆಗಳ ಪ್ರಕಾರ ಸದರ ಸಾಲಿನ ಅಂತ್ಯಕ್ಕೆ ಇನ್ನು ಒಟ್ಟು ₹ 30,36,81,038/- ಗಳು ಮರು ಹೊಂದಾಣಿಕೆಗೆ ಶಿಲ್ಕು ಉಳಿದಿರುವುದು. ಮುಂಗಡ ನೀಡಿದ ಮೇಲೆ ಕೆ.ಎಫ್.ಸಿ ಆರ್ಟಿಕಲ್ 206 ರಿಂದ 246 ಮತ್ತು ಅಕೌಂಟ್ಸ್ ಕೋಡ್ ಪ್ಯಾರಾಗಳ 87ರ ಪ್ರಕಾರ ಮರು ಹೊಂದಾಣಿಕೆಗೆ ತ್ವರಿತ ಕ್ರಮ ಜರುಗಿಸತಕ್ಕದ್ದು. ಈಗಲಾದರೂ ಸದರಿ ಮೊತ್ತದ ಮರು ಹೊಂದಾಣಿಕೆಗೆ ತ್ವರಿತ ಕ್ರಮಕೈಕೊಳ್ಳಲು ಸೂಚಿಸಲಾಗಿದೆ. ದಿ: 31-03-2015ರ ಅಂತ್ಯಕ್ಕೆ ಶಿಲ್ಕು ಉಳಿದಿರುವ ಮುಂಗಡಗಳ ಮೊತ್ತಗಳ ವಿವರಗಳನ್ನು **ಅನುಬಂಧ-೦8ರಲ್ಲಿ** ನೀಡಿ ವರದಿಗೆ ಲಗತ್ತಿಸಲಾಗಿದೆ.

ಮುಂಗಡಗಳ ಮೇಲೆ ಟಿಪ್ಪಣಿ:

ಅ.ನಂ.	ಹೆಸರು	ಮೊತ್ತ (ಲಕ್ಷಗಳಲ್ಲಿ)	ವಿವರ
1	ಅರವಿಂದ ಕುಬಸದ .ಸಿ.ಎ.	301.30	ಸಿ.ಎ. ಸೇವಾ ಸಂಭಾವನೆಗೆ ಸಂಬಂಧಿಸಿದಂತೆ ಇಷ್ಟು ಬೃಹತ್ ಮೊತ್ತವನ್ನು ಸಿ.ಎ. ರವರಿಗೆ ನೀಡಿದ ಕುರಿತಂತೆ ಆರ್ಥಿಕ ಪ್ರತ್ಯಾಯೋಜನೆಯ ಹಾಗೂ ಔಚಿತ್ಯವನ್ನು ತಿಳಿಸುವುದು.
2	ಐ.ಎಸ್.ಆರ್. ಇನಫ್ರಾಟೆಕ್ ಇಂಡಿಯಾ ಲಿಮಿಟೆಡ್	573.50 (-) 342.47 231.03	ಇಷ್ಟು ಬೃಹತ್ ಮೊತ್ತವನ್ನು ಯಾವ ಪ್ರಾಧಿಕಾರದ ಮಂಜೂರಾತಿ ಪಡೆದು ಮುಂಗಡ ನೀಡಲಾಗಿದೆ ಎನ್ನುವುದು ಔಚಿತ್ಯವನ್ನು ತಿಳಿಸುವುದು. ಕರಾರು ಒಪ್ಪಂದಗಳಿಗೆ ವೈಯಕ್ತಿಕವಾಗಿ ಮುಂಗಡ ನೀಡಲಾಗಿದೆ.
3	ಇ.ಪಿ.ಆಯ್.ಎಲ್. ಚೆನ್ನೈ	160.20	ಈ ಬೃಹತ್ ಮೊತ್ತವು ಹಿಂದಿನ ಸಾಲಿನಲ್ಲಿ ಮುಂಗಡ ನೀಡಿದ್ದು ಇದುವರೆಗೆ ಹೊಂದಾಣಿಕೆ ಆಗದೇ ಇರುವುದರ ಕುರಿತು ವಿವರ ಪೂರೈಸಿಲ್ಲ.
4	ಆರ್.ಆಯ್.ಟಿ.ಇ.	1800.40 (+) 2400.00 4200.40	ಟೆಂಡರ ಕರೆಯದೇ ನಿಯಮಗಳನ್ನು ಪಾಲಿಸದೇ ಬೃಹತ್ ಮೊತ್ತದ ಮುಂಗಡಗಳನ್ನು ನೀಡಲಾಗಿದೆ.
5	ಎಸ್.ಡಿ.ಗುರವ	238.00	ಖಾಸಗಿ ವ್ಯಕ್ತಿಗೆ ಯಾವುದೇ ಭದ್ರತೆಯಿಲ್ಲದೆ ಮುಂಗಡ ನೀಡಿರುವುದು.
6	ಸ್ಟಾರ್ ಬಿಲ್ಡರ್ಸ್ ಮತ್ತು ಡೇವಲಪರ್ಸ್	377.87 (-) 182.43 195.44	ಈ ಮೊತ್ತವನ್ನು ಹಿಂದಿನ ಸಾಲಿನಲ್ಲಿ ನೀಡಿದ್ದನ್ನು ಇದುವರೆಗೆ ಹೊಂದಾಣಿಕೆ ಮಾಡದೇ ಬಾಕಿ ಉಳಿಸಿಕೊಂಡಿರುವುದರ ಔಚಿತ್ಯವನ್ನು ತಿಳಿಸುವುದು
7	ಟಿಕೇಸ್ ಇಂಟೀರಿಯರ್ ಸೋಲುಷನ್ಸ	226.99 (-) 14.99 212.00	ಈ ಮೊತ್ತವನ್ನು ಹಿಂದಿನ ಸಾಲಿನಲ್ಲಿ ನೀಡಿದ್ದನ್ನು ಇದುವರೆಗೆ ಹೊಂದಾಣಿಕೆ ಮಾಡದೇ ಬಾಕಿ ಉಳಿಸಿಕೊಂಡಿರುವುದರ ಔಚಿತ್ಯವನ್ನು ತಿಳಿಸುವುದು
8	ಇ.ಇ., ಕೆ.ಯು.ಡಬ್ಲು.ಎಸ್. ಮತ್ತು ಡಿ.ಬಿ. ಡಿವೀಜನ್ ಬೆಳಗಾವಿ	381.94	ಈ ಬೃಹತ್ ಮೊತ್ತವು ಹಿಂದಿನ ಸಾಲಿನಲ್ಲಿ ಮುಂಗಡ ನೀಡಿದ್ದು ಇದುವರೆಗೆ ಹೊಂದಾಣಿಕೆ ಆಗದೇ ಇರುವುದರ ಕುರಿತು ವಿವರ ಪೂರೈಸಿಲ್ಲ
9	ಬೇರೆ ಕಾಲೇಜುಗಳು	505.36	ಈ ಬೃಹತ್ ಮೊತ್ತವು ಹಿಂದಿನ ಸಾಲಿನಲ್ಲಿ ಮುಂಗಡ ನೀಡಿದ್ದು ಇದುವರೆಗೆ ಹೊಂದಾಣಿಕೆ ಆಗದೇ ಇರುವುದರ ಕುರಿತು ವಿವರ ಪೂರೈಸಿಲ್ಲ

ಸೂಕ್ತ ಭದ್ರತೆ ಇಲ್ಲದೇ ಸಕ್ಷಮ ಪ್ರಾಧಿಕಾರದ ಮಂಜೂರಾತಿ ಇಲ್ಲದೇ ಬೃಹತ ಮೊತ್ತದ ಮುಂಗಡಗಳನ್ನು ನೀಡುವಿಕೆಯಲ್ಲಿ ಆರ್ಥಿಕ ಔಚಿತ್ಯದ ಸೂತ್ರಗಳನ್ನು ಪಾಲಿಸದೇ ಮುಂಗಡಗಳನ್ನು ನೀಡಲಾಗಿದೆ.

11) ಅನುದಾನ ರಜಿಸ್ಟರ್ ಬಗ್ಗೆ :-

ಪ್ರಸಕ್ತ ಸಾಲಿನ ಅನುದಾನ ಜಮೆ ವಿವರದ ಅನುದಾನ ರಜಿಸ್ಟರ್‌ನ್ನು ನಿರ್ವಹಿಸಿದ್ದಾರೆ. ಸದರ ರಜಿಸ್ಟರ್‌ನಲ್ಲಿ ಜಮೆ ಬರೆದಿರುವ ಅನುದಾನಗಳ ಮೊತ್ತಗಳನ್ನು ಮಾತ್ರ ನಮೂದಿಸಿ ನಿರ್ವಹಿಸಿರುವುದು. ಸಂಬಂಧಿಸಿದ ಅನುದಾನವು ವೆಚ್ಚ ಮಾಡಿರುವ ಪ್ರಕಾರ ಧನಾದೇಶ ಸಂಖ್ಯೆವಾರು ಮೊತ್ತಗಳನ್ನು ನಮೂದಿಸಿರುವುದಿಲ್ಲ. ಇದರಿಂದಾಗಿ ಜಮೆ ಅನುದಾನದಲ್ಲಿ ಎಷ್ಟು ಮೊತ್ತ ಉಪಯೋಗವಾಯಿತು ಉಪಯೋಗಿಸಿದ ಬಗ್ಗೆ ವಿವರಗಳನ್ನು ದಾಖಲಿಸಿರುವುದಿಲ್ಲ. ಇದರಿಂದಾಗಿ ಜಮೆ ಬಂದ ಅನುದಾನ ಮೊತ್ತಗಳ ವೆಚ್ಚವು ಪ್ರತಿ ಆರ್ಥಿಕ ವರ್ಷದ ಅಂತ್ಯಕ್ಕೆ ಅನುದಾನ ಬಿಡುಗಡೆಮಾಡಿದ ಸಂಬಂಧಿತ ಇಲಾಖೆಗೆ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾಗುವುದು. ಆದ್ದರಿಂದ ಬಳಕೆಯ ಪ್ರಕಾರ ಅನುದಾನವನ್ನು ಯಾರಿಗೆ ನೀಡಲಾಯಿತು ಯಾವ ಉದ್ದೇಶಕ್ಕಾಗಿ ನೀಡಲಾಯಿತು ಎಂಬುದನ್ನು ಅನುದಾನ ವಹಿಯಲ್ಲಿ ಸ್ಪಷ್ಟವಾಗಿ ದಾಖಲಿಸಿ ಕಾಲಕಾಲಕ್ಕೆ ಹಣ ಬಳಕೆ ಪ್ರಮಾಣ ಪತ್ರಗಳನ್ನು ಅನುದಾನ ಬಿಡುಗಡೆಗೊಳಿಸಿದ ಇಲಾಖೆಗಳಿಗೆ ಸಲ್ಲಿಸಲು ಸೂಚಿಸಲಾಗಿದೆ.

12) ಆಸ್ತಿ ಮತ್ತು ಹೊಣೆಗಾರಿಕೆಗಳ ಬಗ್ಗೆ :-

1) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಕುರಿತಾಗಿ ಯಾವುದೇ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲಿಲ್ಲ. ಈ ಕುರಿತು ಪಿ.ಡಬ್ಲ್ಯು.ಡಿ ಇಲಾಖೆ ಸಂಹಿತೆಯ ನಮೂನೆ-80ರಲ್ಲಿ ಈ ವಿವರಗಳನ್ನು ತಯಾರಿಸಿ ಲೆಕ್ಕ ಪರಿಶೋಧನೆಗೆ ಒದಗಿಸಲು ಸೂಚಿಸಿದೆ. ಇವುಗಳ ಅನುಪಸ್ಥಿತಿಯಲ್ಲಿ ವಿಶ್ವವಿದ್ಯಾಲಯದ ಆಸ್ತಿಗಳ ನಿಖರ ಮೊತ್ತಗಳನ್ನು ವಾರ್ಷಿಕ ಲೆಕ್ಕದಲ್ಲಿ ಅಳವಡಿಸಿದ್ದು ಸರಿ ಎಂದು ದೃಢೀಕರಿಸಲು ಸಾಧ್ಯವಾಗುವುದಿಲ್ಲ.
2) ಇನ್ನೂ ವಿಶ್ವವಿದ್ಯಾಲಯದ ಅಧೀನ ಕಾಲೇಜು ಎಂದು ವರ್ಗಾಯಿಸಲಾದ ಯು.ಬಿ.ಡಿ.ಟಿ ಇಂಜಿನೀಯರಿಂಗ್ ಕಾಲೇಜ ದಾವಣಗೇರಿಯ ಆಸ್ತಿ ಮತ್ತು ಹೊಣೆಗಾರಿಕೆಗಳ ಕುರಿತು ವಿಚಾರಿಸಿದಾಗ ಆ ಕುರಿತಾದ ಯಾವುದೇ ವಿವರಗಳನ್ನು ಸಹ ವಿಶ್ವವಿದ್ಯಾಲಯದಿಂದ ನೀಡಲ್ಪಡಲಿಲ್ಲ. ಇದರಿಂದಾಗಿ ಸದರ ಕಾಲೇಜಿನ ಯಾವತ್ತು ಆರ್ಥಿಕ ವಹಿವಾಟುಗಳ ಮತ್ತು ಆಸ್ತಿಗಳ ನಿಖರ ಮೊತ್ತಗಳನ್ನು ವಾರ್ಷಿಕ ಲೆಕ್ಕಗಳಲ್ಲಿ ಅಳವಡಿಸಲಾಗಿದೆ ಎಂಬುದನ್ನು ದೃಢೀಕರಿಸಲಾಗುವದಿಲ್ಲ.

ಕಾರಣ ಈ ವಿವರಗಳನ್ನು ಪಡೆದು ವಾರ್ಷಿಕ ಲೆಕ್ಕಗಳಲ್ಲಿ ಅಳವಡಿಸುವುದು ಮತ್ತು ಅವುಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸಲು ಸೂಚಿಸಲಾಗಿದೆ. ವಿವರಗಳನ್ನು **ಅನುಬಂಧ-04ರ**ಲ್ಲಿ ತೋರಿಸಿದ ಅಡಾವೆ ಪತ್ರಿಕೆಯ ಐಟಂಗಳಿಗೆ ಸೂಕ್ತ ಪೂರಕ ದಾಖಲೆಗಳಿಲ್ಲ. ವಾರ್ಷಿಕ ಲೆಕ್ಕ ಪತ್ರಗಳ ಆಸ್ತಿಗಳ ಕುರಿತಾಗಿ ವಿವರಗಳನ್ನು ಪರಿಶೀಲಸಿಲಾಗಿ ಅದರಲ್ಲಿ ಹಣಕಾಸಿನ ವ್ಯವಹಾರಗಳ ವಿವರಗಳು ಮೊತ್ತ ಇದೆ. ಆದರೆ ಪ್ರತಿಯೊಂದು ವ್ಯವಹಾರಕ್ಕೆ ಸಂಬಂಧಿಸಿದಂತೆ ವೋಚರ್‌ನಲ್ಲಿ ಅಡಕವಾದ ಸಾಮಗ್ರಿಗಳ ವಿವರ, ಸಾಮಗ್ರಿಗಳ ಲೆಕ್ಕಗಳನ್ನು ನಿರ್ವಹಿಸಲು ಪಿ.ಡಬ್ಲ್ಯು.ಡಿ. ನಿಗದಿತ ನಮೂನೆಗಳಿರುತ್ತವೆ. ಅಲ್ಲದೇ ವಾರ್ಷಿಕ ಭೌತಿಕ ಪರಿಶೀಲನೆ ಕೈಕೊಂಡಿರುವ ಬಗ್ಗೆ ಯಾವುದೇ ವಿವರಗಳು ಲಭ್ಯವಾಗಲಿಲ್ಲ.

13) ವಸತಿ ಗೃಹ ಬಾಡಿಗೆ :-

ವಿಶ್ವವಿದ್ಯಾಲಯ ತಾಂತ್ರಿಕ ವಿಶ್ವವಿದ್ಯಾಲಯವು ಬೆಳಗಾವಿ ತನ್ನ ಅಧಿಕಾರಿ/ಸಿಬ್ಬಂದಿಗಳ ಸಲುವಾಗಿ ಒಟ್ಟು 68 ವಸತಿ ಗೃಹಗಳನ್ನು ಹಾಗೂ 8 ವ್ಯಾಪಾರಿ ಮಳಿಗೆಗಳನ್ನು ಮತ್ತು ಒಂದು ಬ್ಯಾಂಕಗಾಗಿ ಕಟ್ಟಡ ಮತ್ತು ನಿರ್ಮಿಸಿ ಬಾಡಿಗೆ ಮೇಲೆ ನೀಡಲಾಗಿರುತ್ತದೆ.

ವಸತಿ ಗೃಹಗಳು-11 ಮತ್ತು ವ್ಯಾಪಾರ ಮಳಿಗೆಗಳು-2 ಖಾಲಿ ಇರುತ್ತವೆ ಮತ್ತು ಅಂಚೆ ಕಛೇರಿಗೆ ಯಾವುದೇ ಬಾಡಿಗೆ ಇರುವದಿಲ್ಲ ಎಂಬುದಾಗಿ ವಿತಾವಿವಿಯಿಂದ ತಿಳಿಸಲಾಯಿತು.

ಈ ಬಗ್ಗೆ ಪರಿಶೀಲಿಸಲಾಗಿ ಅಧಿಕಾರಿ/ಸಿಬ್ಬಂದಿ ವರ್ಗದವರ ಬಾಕಿ ಇರುವ

1) ವಸತಿ ಗೃಹ ಬಾಡಿಗೆ (31-3-2015 ರಂದಿನಂತೆ) ಒಟ್ಟು ₹.148333/- ಬಾಕಿ ಇದ್ದು ಪ್ರತಿ **ಅನುಬಂಧ-09(ಅ,ಬ,ಕ)ರಲ್ಲಿ** ವಿವರಿಸಿದೆ.

ಆ ಪೈಕಿ ಎ1-01 ವಸತಿಗೃಹದಲ್ಲಿದು ಡಾ||ಎಸ್.ಎ.ಕೋರಿ ಹಿಂದಿನ ರಜಿಸ್ಟ್ರಾರ್ ಇವರ ಹೆಸರಿನಲ್ಲಿ ₹.146033/- ಗಳು(ಎಪ್ರಿಲ್-2013 ರಿಂದ ಫೆಬ್ರವರಿ-2014ರ ಅವಧಿ) 2013-14 ರಿಂದ ಬಾಕಿ ಇದ್ದು ಇದುವರೆಗೂ ಯಾವುದೇ ಬಾಡಿಗೆ ವಸೂಲಿಗೆ ಸೂಕ್ತ ಕ್ರಮ ಕೈಕೊಂಡಿರುವುದಿಲ್ಲ. ಇದರಿಂದಾಗಿ ಈ ದೀರ್ಘಕಾಲದ ಅವಧಿ ವಿವಿಗೆ ಬರಬೇಕಾದ ಆದಾಯ ತಪ್ಪಿದಂತಾಗಿದೆ. ಕಾರಣ ಈ ಕುರಿತು ಕೆ.ಸಿ.ಎಸ್.ಆರ್ ಅಫೆಡೆಕ್ಸ್- IV ನಿಯಮ 26ರಲ್ಲಿ ತಿಳಿಸಿದ ಕ್ರಮವಹಿಸಿ ಬಾಡಿಗೆ ವಸೂಲಿಗೆ ಕ್ರಮ ವಹಿಸಲು ಸೂಚಿಸಿದೆ.

ಹಾಗೆಯೇ ವಿಟಿಯು ಪ್ರಾದೇಶಿಕ ಕಛೇರಿ ಕಲಬುರಗಿ ವಸತಿಗೃಹಗಳಲ್ಲಿ ಸಹ ಶ್ರೀಮತಿ. ರಂಜನ್ ನಾಡಗೌಡರ ಸಹಾಯಕ ಪ್ರಾದ್ಯಾಪಕರ ಹೆಸರಿನಲ್ಲಿ ವಸತಿ ಗೃಹಗಳ(ಬಿ2-05) ₹.14154/- ಬಾಕಿ ಇರುವ ಬಗ್ಗೆ ಅನುಬಂಧದಲ್ಲಿ ಸೂಚಿಸಲಾಗಿದ್ದು, ಯಾವುದೇ ಬಾಡಿಗೆಯನ್ನು ಸದರ ಭೋಧಕರ ಸಿಬ್ಬಂದಿ ನೀಡದೇ ಇದ್ದದ್ದು ಕಂಡು ಬರುತ್ತದೆ. ಕಾರಣ ಕೂಡಲೇ ಅವರ ಹೆಸರಿಗೆ ಬಾಕಿ ಇದ್ದ ಮೊತ್ತ₹.14154/-ಗಳನ್ನು ವಸೂಲಿ ಮಾಡಲು ಕ್ರಮಕೈಕೊಳ್ಳುವುದು.

ಕಾರಣ ಕೂಡಲೇ ಬಾಕಿ ಬಾಡಿಗೆ ಮೊತ್ತದ ವಸೂಲಿಗೆ ಸೂಚಿಸಿದೆ. ಆ ಕುರಿತು ಕೈಕೊಂಡ ಕ್ರಮಕ್ಕೆ ವರದಿ ಸಲ್ಲಿಸಲು ಒಟ್ಟು ₹.160187/-ಗಳನ್ನು ವಸೂಲಿಗೆ ಸೂಚಿಸಿದೆ.

2) ಬ್ಯಾಂಕ ಕಟ್ಟಡ, ಅಂಚೆ ಕಛೇರಿ ಮತ್ತು ಉಳಿದ ವ್ಯಾಪಾರಿ ಮಳಿಗೆಗಳ ಬಗ್ಗೆ ಪರಿಶೀಲಿಸಲಾಗಿ ಒಟ್ಟು ₹.388872/-ಗಳ ಬಾಡಿಗೆ, ₹.43487/-ಗಳ ವಿದ್ಯುಚ್ಛಕ್ತಿ ಬಿಲ್ಲು ಮತ್ತು ₹.30500/-ಗಳ ನೀರಿನ ಬಾಕಿ ಇರುವುದನ್ನು ಗಮನಿಸಲಾಗಿದೆ. (ಅನುಬಂಧ ಪ್ರತಿ ಲಗತ್ತಿಸಿದೆ.)

ಈ ಬಗ್ಗೆ ಪರಿಶೀಲಿಸಲಾಗಿ 30-6-2010ರಿಂದಲೂ ಮೆ||ನಾವಿಕ ಕೇಟರ್ಸ್ ಮುಂಬಯಿ ಇವರ ಹೆಸರಿನಲ್ಲಿ ಕ್ಯಾಂಟೀನ ಕಟ್ಟಡದ ಬಾಡಿಗೆ ₹.246987/- ಬಾಕಿ ಇದ್ದು ಅದರ ವಸೂಲಿಗೆ ಸಾದ್ಯಕ್ರಮಗಳನ್ನು ಕೈಕೊಳ್ಳುವುದು ಅವಶ್ಯ.

ಹಾಗೆಯೇ ಅನುಬಂಧದಲ್ಲಿ ತಿಳಿಸಿದ ಇನ್ನೂಳಿದ ಬಾಡಿಗೆದಾರರಿಂದ ಬಾಡಿಗೆ ವಸೂಲಿಗೆ ಸೂಕ್ತ ಸಕಾಲಿಕ ಕ್ರಮ ಕೈಕೊಂಡು ವಿವಿಗೆ ಬರಬೇಕಾದ ಬಾಡಿಗೆ ವಿದ್ಯುಚ್ಛಕ್ತಿ ಮತ್ತು ನೀರಿನ ದರಗಳನ್ನು ವಸೂಲಿ ಮಾಡುವುದು ವಸೂಲಿಗೆ ಕ್ರಮಕೈಕೊಳ್ಳುವುದು. ಅದುವರೆಗೆ ₹.388872 + 43487 +30500 =462859/-ಗಳನ್ನು ವಸೂಲಿಗೆ ಸೂಚಿಸಿದೆ.

ಅಂದರೆ ಒಟ್ಟಾರೆ ವಸತಿಗೃಹಗಳ ಬಾಕಿ ಬಾಡಿಗೆ ₹.160187/- ಮತ್ತು ವಾಣಿಜ್ಯ ಮಳಿಗೆಗಳ ಬಾಕಿಗಳ ಮೊತ್ತ ₹. 462859/-ಗಳನ್ನು ವಸೂಲಿಗೆ ಸೂಚಿಸಿದೆ.

14) ನಗದು ಅಥವಾ ಬ್ಯಾಂಕ ಪುಸ್ತಕವನ್ನು ನಿರ್ವಹಿಸುವಾಗ ವೋಚರ ನಂ.ನ್ನು ಹಾಕದೇ ಇರುವ ಬಗ್ಗೆ ಮತ್ತು TDS ಕಟಾವಣೆ ಒಟ್ಟು ಮೊತ್ತವನ್ನು ದಾಖಲಿಸದಿರುವ ಬಗ್ಗೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯಲ್ಲಿ ನಗದು ಪುಸ್ತಕ ಅಥವಾ ಬ್ಯಾಂಕಪುಸ್ತಕವನ್ನು Bank Activity Report ಎನ್ನುವ ಹೆಸರಿನಲ್ಲಿ ನಿರ್ವಹಿಸಲಾಗಿದೆ. ಆದರೆ ಈ Bank Activity Report ಇದು ನಗದು ಪುಸ್ತಕ ಎಂದು ಗ್ರಹಿಸಿದಲ್ಲಿ ಅದು ಖಾಯಂದಾಖಲೆ ಎಂದು ವರ್ಗೀಕರಿಸಲ್ಪಡುವ ದಾಖಲೆಯಾಗುತ್ತದೆ. ಈ Bank Activity Report ನ್ನು ಪುಸ್ತಕ ರೂಪದಲ್ಲಿ ನಿರ್ವಹಿಸದೇ ಕೇವಲ Computer ನಿಂದ Print ಮಾಡಿದ ಒಂದು Statement ತರಹ ಲೆಕ್ಕಪರಿಶೋಧನೆಗೆ ನೀಡಲಾಗುತ್ತಿದೆ. ಇದರಿಂದಾಗಿ Cash Book/Bank Book ನ ಸಮಗ್ರ ವಿವರಗಳು ಈ Statement ನಲ್ಲಿ ಇವೆ ಎಂಬುದಾಗಿ ಮತ್ತು ಎಲ್ಲ ವ್ಯವಹಾರಗಳು ಈ ತ:ಖ್ತೆ/ವರದಿಯಲ್ಲಿ ಅಡಕವಾಗಿದೆ ಎಂಬ ಬಗ್ಗೆ ಧೃಡೀಕರಿಸಲಾಗುವುದಿಲ್ಲ ಸದರ ಬ್ಯಾಂಕ ಚಟುವಟಿಕೆ ವರದಿ (BAR) ಯನ್ನು ಪರಿಶೀಲಿಸಲಾಗಿ ಈ ಕೆಳಗಿನ ನ್ಯೂನತೆಗಳು ಕಂಡು ಬರುತ್ತವೆ.

1) ಸದರ ವರದಿಯನ್ನು ಬ್ಯಾಂಕ ಖಾತೆವಾರು ತಯಾರಿಸದೇ ಕ್ರೋಢೀಕೃತವಾಗಿ ತಯಾರಿಸಿದ ವರದಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಲಾಗಿದೆ, ಇದರಿಂದಾಗಿ ಪ್ರತಿ ಬ್ಯಾಂಕ ಖಾತೆ ಕುರಿತು ಆರ್ಥಿಕ ವ್ಯವಹಾರಗಳನ್ನು ಬೇರೆಬೇರೆಯಾಗಿ ಸರಾಗವಾಗಿ ಪರಿಶೀಲಿಸಿ ಪ್ರತಿ ಖಾತೆಯ ಪ್ರಾರಂಭಿಕ/ಅಂತಿಮ ಶಿಲ್ಕುಗಳನ್ನು & ಆಯಾ ಖಾತೆಯ ಎಲ್ಲ ವ್ಯವಹಾರಗಳನ್ನು ಪರಿಶೀಲಿಸಲು ಸಾಧ್ಯವಾಗುವದಿಲ್ಲ. ಕಾರಣ ಬೇರೆಬೇರೆ ಬ್ಯಾಂಕ ಖಾತೆಗಳಿಗೆ ಪ್ರತ್ಯೇಕ ನಗದು ಪುಸ್ತಕ ನಿರ್ವಹಿಸದಿರುವುದಕ್ಕೆ ಕಾರಣಗಳನ್ನು ಸಮರ್ಪಕ ನಿಯಮಗಳನ್ನಾಧರಿಸಿ ಲೆಕ್ಕಪರಿಶೋಧನೆಗೆ ಒದಗಿಸಲು ಕೋರಿದೆ.

2) ಇನ್ನು ಸದರ Bank Activity Report ನ್ನು ಪರಿಶೀಲಿಸಲಾಗಿ, ವಾರ್ಷಿಕ ಬಜೆಟ್‌ನಲ್ಲಿ ಒದಗಿಸಿದ ಲೆಕ್ಕ ಶೀರ್ಷಿಕೆಗಳನ್ನು ಸ್ವೀಕೃತಿ & ವೆಚ್ಚದ ವಿವರಗಳಡಿ ನಮೂದಿಸಿರುವುದಿಲ್ಲ. ಇದರಿಂದಾಗಿ ಲೆಕ್ಕಶೀರ್ಷಿಕೆಗಳ ವರ್ಗೀಕರಣದಲ್ಲಿ ಲೋಪ/ದೋಷಗಳುಂಟಾಗುವ ಸಂಭವಗಳನ್ನು ನಿವಾರಿಸಲು ಸಾಧ್ಯವಾಗುವುದಿಲ್ಲ. (Article 331 of KFC)

3) ಅದೇ ಪ್ರಕಾರ KFC Article 343 (ii) ಪ್ರಕಾರ ಪ್ರತಿ ತಿಂಗಳ ಅಂತ್ಯಕ್ಕೆ ಸ್ವೀಕೃತಿಗಳ ಘೋಷ್ವಾರೆಯನ್ನು ದಾಖಲಿಸುವದು ಅವಶ್ಯವಿರುತ್ತದೆ, ಅಂತಹ ಯಾವುದೆ ವಿವರಗಳು ಈ (BAR) ನಲ್ಲಿ ದಾಖಲಿಸಿರುವುದಿಲ್ಲ.

4) ಇನ್ನು ಬಿಲ್ಲಿನಲ್ಲಿ ಕಟಾಯಿಸಲ್ಪಡುವ (TDS) (ಶಾಸನಬದ್ಧ ಕಟಾವಣೆ) ಗಳನ್ನು ಸದರ (BAR) ನಲ್ಲಿ ಪರಿಶೀಲಿಸಿದಾಗ ಒಂದೇ ಚೆಕ್ಕ ನಂಬರನ್ನು ಉದ್ಧರಿಸಿ (ನಮೂದಿಸಿ)4-5 ಕಡೆ ಪ್ರತಿ ವೋಚರದ ಮೊತ್ತಗಳನ್ನು ದಾಖಲಿಸಲಾಗಿರುತ್ತದೆ. ಇದರಿಂದಾಗಿ ಆ ಚೆಕ್ಕಿನ ಒಟ್ಟು ಮೊತ್ತ ಎಷ್ಟು ಎಂಬುದನ್ನು ಪರಿಶೀಲಿಸಲು ಸಾಧ್ಯವಾಗುವುದಿಲ್ಲ. ಇದಲ್ಲದೇ ಯಾವುದೇ ಬಿಲ್ಲಿನ TDS ನ್ನು ಲೆಕ್ಕಕ್ಕೆ ಪರಿಗಣಿಸದೇ ಬಿಟ್ಟು ಹೊಗುವ ಸಂಭವಗಳನ್ನು ಅಲ್ಲಗಳೆಯಲಾಗುವುದಿಲ್ಲ.

ಉದಾ: M/s Wisdom Security Services ರವರ 1/14 ಕ್ಕೆ ಸಂಬಂಧಿಸಿದ ಚೆಕ್ ನಂ.219331/10-4-14 ₹. 9,30,648/- ನ ನಿವ್ವಳ ಮೊತ್ತ (Net Amount)ನ್ನು ಪಾವತಿಸಲಾಗಿದ್ದು. ಅದಕ್ಕೆ ಸಂಬಂಧಿಸಿದ TDS (IT) ಯನ್ನು ಚೆಕ್ ನಂ.219328/10-4-2014 ರಲ್ಲಿ ಅಳವಡಿಸಿ ಪಾವತಿಸಲಾಗಿದೆ ಎಂದು ವೋಚರನಲ್ಲಿ (TDS Vr) ದಾಖಲಿಸಿದೆ ಆದರೆ ಚೆಕ್ ನಂ.219328/10-11-2014 ₹.62,630/- ನ್ನು ಪರಿಶೀಲಿಸಲಾಗಿದೆ. ಈ ಕೆಳಗಿನ TDS ಗಳು ಮಾತ್ರ ಅಳವಡಿಸಿದ ವೋಚರ ಇದಾಗಿದೆ.

1) M/s Kateel Canteen – 4550/-
2) M/s Shoba Enterprises – 51820/-
3) M/s Friends Car Rentals - 62630

ಇದರಿಂದಾಗಿ M/s Wisdom Security Services ರವರ ಬಿಲ್ಲಿನಲ್ಲಿ ಕಟಾಯಿಸಿದ & ಚೆಕ್ಕ ನಂ.219328/10-4-2014 ರಲ್ಲಿ ಅಳವಡಿಸಲಾಗಿದೆ ಎಂದು ಹೇಳಿದ ಮೊತ್ತ ಈ ಚೆಕ್‌ನಲ್ಲಿ ಅಳವಡಿಸದೆ ಉಳಿದುಕೊಂಡಿದೆ. ಹೀಗಾಗಿ ಸದರ ಕಟಾವಣೆಯನ್ನು ನಿರ್ವಹಿಸ್ಸಿದ ನಂತರ IncomeTax ಇಲಾಖೆಗೆ ಭರಿಸಿದ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವದು ಇಲ್ಲವೇ ಕೂಡಲೇ ₹.19,000/- ಗಳನ್ನು IncomeTax ಇಲಾಖೆಗೆ ಭರಿಸುವದಕ್ಕೆ ಕೋರಿದೆ ಹೀಗಾಗಿ ಸದರ Bank Activity Report ನ ನಿರ್ವಹಣೆ ಸಮರ್ಪಕ ಎಂದು ಧೃಡಿಕರಿಸಲಾಗುವುದಿಲ್ಲ.

5) ಇನ್ನು (Bank Activity Report) ನಲ್ಲಿ ತಿಳಿಸಿದ ಚೆಕ್ ನಂ.219279/7-4-2014ಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ನ್ಯೂನತೆ ಉಂಟಾಗಿದೆ

	ಚೆಕ್ ನಂಬರ್ / ದಿನಾಂಕ	Bank Activity Report ನಲ್ಲಿ ತಿಳಿಸಿದ ಮೊತ್ತ	ವೋಚರನಲ್ಲಿ ತಿಳಿಸಿದ ಮೊತ್ತ	ವ್ಯತ್ಯಾಸ	ಷರಾ
1)		ರೂ.4320/-	ರೂ.4310/-	(+)10/-	
2)	ಚೆಕ್ ನಂ.219358/16-4-2014 (Appanna.M.Bastwadkar Newspaper Agent	ರೂ.2293/-	ರೂ.1593/-	+ 700/-	ವೋಚರ ಮೇಲೆ ದಾಖಲಿಸಿದ ಬಿಲ್ಲು ಮೊತ್ತ 1201+392=1593/-

ಇದರಿಂದಾಗಿ ಉದಾಹರಣೆಗೆ ತೋರಿಸಿದ ಮೇಲಿನ ಪ್ರಕರಣಗಳಲ್ಲಿ ₹.710/- ಗಳ ಹೆಚ್ಚಿನ (ಪಾವತಿ) ಸಂದಾಯಗಳನ್ನು ಮಾಡಲಾಗಿದೆ. ಕಾರಣ ಈ ಮೊತ್ತಗಳನ್ನು ಸಂಬಂಧಿಸಿದವರಿಂದ ವಸೂಲಿ ಮಾಡಲು ಸೂಚಿಸಿದೆ.

ಇದರಿಂದಾಗಿ ಮೇಲಿನ ಅಂಶಗಳನ್ನು ಅನುಂಕ್ಷಿಸಿ Bank Activity Report (ನಗದು ಪುಸ್ತಕ)ಗಳನ್ನು ಸಮರ್ಪಕವಾಗಿ ನಿರ್ವಹಿಸಲಾಗಿದೆ ಎಂದು ಧೃಡಿಕರಿಸಲಾಗುವುದಿಲ್ಲ.

ಕಾರಣ ಈ ಕುರಿತು ಸೂಕ್ತ ಅನುಸರಣೆ ಒದಗಿಸುವದು & ₹.19,000/-ಗಳನ್ನು ಸಂಬಂಧಿಸಿದ ಇಲಾಖೆಗೆ ಭರಿಸಲು & ₹.710/-ಗಳನ್ನು ಸಂಬಂಧಿತರಿಂದ ವಸೂಲಿಮಾಡಿ ವಿಟಿಯು ನಿಧಿಗೆ ಭರಿಸುದಕ್ಕೆ ಕ್ರಮಕೈಕೊಳ್ಳಲು ಕೋರಿದೆ. ಕಾರಣ ₹.19,000/-ಗಳನ್ನು ಆಕ್ಷೇಪಣೆಯಡಿ ಮತ್ತು ₹.710/-ಗಳನ್ನು ವಸೂಲಿಗೆ ಸೂಚಿಸಲಾಗಿದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :27 ದಿನಾಂಕ: 18-01-2016ನ್ನು ನೀಡಲಾಗಿತ್ತು. ಅದರನ್ವಯ ಈ ಕುರಿತು ವಿತಾವಿವಿಯಿಂದ ಅನುಸರಣೆ ನೀಡಲ್ಪಟ್ಟಿದ್ದು ಅದನ್ನು ಪರಿಶೀಲಿಸಲಾಗಿ ಕಂಡಿಕೆ ಅಂಶಗಳಿಗೆ ಪ್ರತಿಯಾದ ಸಮರ್ಪಕವಾದ ಅನುಸರಣೆಯನ್ನು ನೀಡಿರುವುದಿಲ್ಲ.

15) ವಿ.ತಾ.ವಿ. ಬೆಳಗಾವಿಯ ಬ್ಯಾಂಕ ಖಾತೆಗಳಗೆ 2014-15ನೇ ಸಾಲಿನ 2ನೇ ಕಂತಿನ ಬಡ್ಡಿ ಆಕರಣೆ ಆಗದಿರುವ ಕುರಿತು.

ವಿ.ತಾ.ವಿ.ವಿ ಬೆಳಗಾವಿ ಆರ್ಥಿಕ ವ್ಯವಹಾರಗಳನ್ನು ನಿರ್ವಹಿಸಲು ಒಟ್ಟು 11 ಬ್ಯಾಂಕ ಖಾತೆಗಳನ್ನು ತೆರೆಯಲಾಗಿದೆ, ಸದರ ಬ್ಯಾಂಕ ಖಾತೆಗಳಡಿಯ 2014-15 ನೇ ಸಾಲಿನ ವ್ಯವಹರಗಳನ್ನು ಪರಿಶೀಲಿಸಲಾಗಿ ಕೆಲವು ಬ್ಯಾಂಕ ಖಾತೆಗೆಗಳಲ್ಲಿನ ಶಿಲ್ಕಿಗೆ ಡಿಸೆಂಬರ್ 2014ರ ಅಖ್ಯೆರಿಗೆ ಬಡ್ಡಿಯನ್ನು ಆಕರಿಸಿ ಬ್ಯಾಂಕ ಖಾತೆಗೆ ಜಮಾ ಮಾಡಿದ ಬಗ್ಗೆ ವಿವರಗಳಿಲ್ಲ. ವಿವರ ಈ ಕೆಳಗಿನಂತಿದೆ. (A/C ವಿವರ ಪ್ರತಿ ಲಗತ್ತಿಸಿದೆ)

ಕ್ರ .ಸಂ	ಬ್ಯಾಂಕ ಹೆಸರು	ಬ್ಯಾಂಕ ಖಾತೆ ಸಂಖ್ಯೆ	ಡಿಸೆಂಬರ2014ಕ್ಕೆ ಇದ್ದ ಶಿಲ್ಕು	ನೀಡಬೇಕಾಗಿದ ಬಡ್ಡಿ ಮೊತ್ತ
1	SBI Commercial Branch	10258482054	81476/-	1222-47
2	SBI Govt. Est. Branch	10988608964	4/-	--
3	Canara Bank, Tilakwadi	26090	300899/-	4513-48
4	SBM VTU Campus Regular A/c	54003362309	39515294/-	--
5	SBM VTU FDP A/c	64066459199	1405779/-	--
6	SBM DBDTE-DST A/c	64089350819	2621485/-	39222-27
7	SBM VTU MHRD A/C	64098415711	4219694/-	63295-41
8	SBM VGST-CESEM	64122887702	1808894/-	27133-41
9	SBM VTU Consortium A/c	64140044452	21918275/	---
10	SBM VTU Bio-Tech A/c	64146359911	47200/-	708-00
11	SBM VTU CESD Dandeli A/c	64168319906	---	--
		TOTAL		**136095-57**

ಇನ್ನು ಕೇಲವು ಬ್ಯಾಂಕ ಖಾತೆಗಳ ಸಲುವಾಗಿ ಬ್ಯಾಂಕನಿಂದ ನೀಡಬೆಕಾದ (6/2014ರ ಅಖ್ಯೆರಿನ ಶಿಲ್ಕಿಗೆ) ಬಡ್ಡಿ ಮೊತ್ತವನ್ನು ಜಮಾ ಮಾಡಿರುವುದಿಲ್ಲ ವಿವರ ಈ ಕೆಳಗಿನಂತಿದೆ.

1	SBI Commercial Br	10258482054	81476-00	1222-14
2	Canara Bank, Tilakwadi Br.	26090	315743-00	4736-14
		TOTAL		**5958-28**

ಕಾರಣ ಸದರ ಬ್ಯಾಂಕಗಳಿಂದ ಜೂನ-14 ರ ಅಖ್ಯೆರಿಗೆ ಬರಬೇಕಾದ ಬಡ್ಡಿ ಮೊತ್ತ & ಡಿಸೆಂಬರ 14ರ ಅಖ್ಯೆರಿಗೆ, ವಿ.ತಾ.ವಿ ನಿಧಿಗೆ ಬರಬೇಕಾದ ಬಡ್ಡಿ ಹಣ ₹.5958-28 & ₹.136095-57 ಒಟ್ಟು ರೂ.142053/- (ಕನಿಷ್ಠ) ಗಳನ್ನು ಆಯಾ ಬ್ಯಾಂಕ ಖಾತೆಗಳಿಗೆ ಜಮಾ ಮಾಡಿಸುವ ಬಗ್ಗೆ ಸೂಕ್ತ ಕ್ರಮಕೈಕೊಳ್ಳಲು ಕೋರಲಾಗಿತ್ತು.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ : 40 ದಿನಾಂಕ: 04-01-2016 ನ್ನು ನೀಡಲಾಗಿತ್ತು. ಆದರೆ ಯಾವುದೇ ಅನುಸರಣೆಯನ್ನು ನೀಡಿರುವುದಿಲ್ಲ. ಆದಕಾರಣ ₹.1,42,053/- ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ.

16) Development of Tree Plantation and Maintenance around phase I buildings at VIAT muddenhalli chikkaballapur district ಇವರಿಗೆ ₹.4,99,738-00ಗಳ ಬಿಲ್ಲಿನಲ್ಲಿ ₹. 82,800-00 ಗಳನ್ನು ಹೆಚ್ಚುವರಿಯಾಗಿ ಪಾವತಿಸಿರುವ ಕುರಿತು.

ಮೇಲಿನ ವಿಷಯದಲ್ಲಿ ನಮೂದಿಸಿದ ಕಾಮಗಾರಿಯ ಬಿಲ್ಲು ಪರಿಶೀಲಿಸಲಾಗಿ ಈ ಕೆಳಗಿನ ಆಕ್ಷೇಪಣೆಗಳು ಕಂಡುಬಂದಿರುತ್ತವೆ. ಚೆಕ್ಕನ್ನು ದಿ ನರ್ಸರಿಮೆನ್ ಕೋ-ಆಪ್ ಸೊಸಾಯಿಟಿ ಲಿ. ಬೆಂಗಳೂರು ಇವರಿಗೆ1. **ಚೆಕ್** ಸಂ: 232722 ದಿ: 21-8-2014 ₹.489738/ 2. **ಚೆಕ್** ಸಂ: 232723 ದಿ: 21-8-2014 ₹.10,000/- ಒಟ್ಟು ₹499738/-

ಪಾವತಿಯಾಗಿದ್ದು ಇರುತ್ತದೆ.

1) RA ಬಿಲ್ಲು ನಮೂನೆ ಉಪಯೋಗಿಸಿ ಲೆಟರ್ ಹೆಡನಲ್ಲಿ ತಯಾರಿಸಿರುವ ಕ್ಲೇಮನ್ನು ಬಟವಡೆಗೆ ಒಪ್ಪಿರುವದು ಸರಿಯಾದ ಕ್ರಮವಲ್ಲ.(3,58,538+58,400).

2) ಈ ಕಾಮಗಾರಿಗೆ ಅಂದಾಜು ಪತ್ರಿಕೆಯನ್ನು ತಯಾರಿಸಿರುವದಿಲ್ಲ. ಅಂದಾಜು ಪತ್ರಿಕೆ ತಯಾರಿಸಿ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಅವಶ್ಯವಾಗಿಬೇಕಾಗುತ್ತದೆ. ಅಂದಾಜು ಪತ್ರಿಕೆಯ ಅನುಪಸ್ಥಿತಿಯಲ್ಲಿ ಬಿಲ್ಲು ಪಾವತಿಸಿರುವದು ಸರಕಾರದ ನಿಯಮಾವಳಿಗಳಿಗೆ ವ್ಯತಿರಿಕ್ತ ಕ್ರಮವಾಗಿರುತ್ತದೆ.

3) ಕೆ.ಟಿ.ಪಿ.ಪಿ ನಿಯಮಗಳನ್ನು ಪಾಲಿಸದೇ ಬಿಲ್ಲು ಪಾವತಿಗೆ ಕ್ರಮವಹಿಸಲಾಗಿದೆ.

4) ಖರೀದಿ ಮಂಜೂರಾತಿ ಆದೇಶದ ಪ್ರತಿ ಕಡತದಲ್ಲಿ ಲಭ್ಯವಾಗಲಿಲ್ಲ.

5) ಬಿಲ್ಲಿನಲ್ಲಿ (R A ಬಿಲ್ಲು) ಏಜೆನ್ಸಿಯವರ ರುಜುವನ್ನು ಪಡೆದಿರುವದಿಲ್ಲ.

6) ವಿ.ತಾ.ವಿ.ವಿ ಯಿಂದ ಪಡೆದ ಚೆಕಗೆ ಸ್ವೀಕೃತಿ ರಸೀದಿಯನ್ನು ಸಂಬಂಧಿಸಿದವರಿಂದ ಪಡೆದುಕೊಂಡಿರುವ ಬಗ್ಗೆ ಕಡತದಲ್ಲಿ ದಾಖಲೆ ಲಭ್ಯವಾಗಲಿಲ್ಲ.

7) ಬಿಲ್ಲು ₹.4,16,938/-ಗಳಿಗೆ ತಯಾರಿಸಲಾಗಿದೆ. ಕರಾರು ಒಪ್ಪಂದವನ್ನು ರೂ.4,99,738/-ಗಳಿಗೆ ಮಾಡಿಕೊಳ್ಳಲಾಗಿದೆ ಬಿಲ್ಲಿನಲ್ಲಿ ಪಾವತಿಯನ್ನು ₹.4,16,938/-ಗಳಿಗೆ ಅಧಿಕೃತಗೊಳಿಸಲಾಗಿದ್ದು ಅದನ್ನು ಪರಿಗಣಿಸದೇ ಕರಾರು ಒಪ್ಪಂದದ ಮೊತ್ತ ₹.4,99,738/-ವನ್ನೇ ಪರಿಗಣಿಸಿ ಬಟವಡೆಗೆ ಒಪ್ಪಿರುವದರಿಂದ ₹.82,800/-ಗಳನ್ನು ದಿ ನರ್ಸರಿಮೆನ್ ಕೋ-ಆಪ್ ಸೊಸಾಯಿಟಿ ಲಿ. ಬೆಂಗಳೂರು ಇವರಿಗೆ, ಹೆಚ್ಚುವರಿ ಮೊತ್ತವನ್ನು ಪಾವತಿಸಿರುವದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಇದನ್ನು ಸಂಬಂಧಿಸಿದವರಿಂದ ಮೊತ್ತವನ್ನು ಮರಳಿ ವಿ.ತಾ.ವಿ.ವಿಗೆ ನಿಧಿಗೆ ಜಮೆ ನೀಡಲು ತಿಳಿಸಿದೆ.

ಆದ್ದರಿಂದ ಮೇಲಿನ ಆಕ್ಷೇಪಣೆಗಳಿಗೆ ಅಂಶವಾರು ಅನುಸರಣೆಯನ್ನು ನೀಡುವದು. ಅಲ್ಲದೆ ₹.82,800/-ಗಳನ್ನು ವಸೂಲಾತಿಗೆ ಕ್ರಮ ತೆಗೆದುಕೊಳ್ಳಲು ತಿಳಿಸಿದೆ. & ₹.4,16,938/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :74 ದಿನಾಂಕ: 17-02-2016 ನ್ನು ನೀಡಲಾಗಿತ್ತು. ನೀಡಿದ ಅನುಸರಣೆ ಸಮರ್ಪಕವಾಗಿರುವದಿಲ್ಲ. ಹೆಚ್ಚುವರಿ ಪಾವತಿಸಿದ ಮೊತ್ತದ ಮರು ವಸೂಲಿಗೆ ಇನ್ನು ಕ್ರಮ ಕೈಕೊಳ್ಳದಿರುವುದು ಮತ್ತು ಕೆಟಿಪಿಪಿ ನಿಯಮಗಳಿಂದ ಈ ಸಹಕಾರಿ ಸಂಘ ವಿನಾಯಿತಿ ಹೊಂದಿದ ಬಗ್ಗೆ ಸರಕಾರದ ಆದೇಶವನ್ನು ಲೆಕ್ಕ ಪರಿಶೋಧನೆಗೆ ನೀಡುವುದು ಅವಶ್ಯವಿರುತ್ತದೆ.

17) 2014-15ರ ವಿ.ತಾ.ವಿ.ವಿ ಬೆಳಗಾವಿಯ ಪರಿಷ್ಕೃತ ಬಜೆಟ್ ಅಂದಾಜು ಮತ್ತು 2015-16ನೇ ಸಾಲಿನ ಬಜೆಟ್ ಮೂಲ ಅಂದಾಜು ತಯಾರಿಕೆ.

ವಿ.ತಾ.ವಿ.ವಿ ಬೆಳಗಾವಿಯ ದಿನಾಂಕ:08-06-2015ರ ಹಣಕಾಸು ಸಮಿತಿ ಸಭೆ ನಡುವಳಿ ಸಂಖ್ಯೆ 4 ಮತ್ತು ದಿನಾಂಕ:08-06-2015ರ 120ನೇ ವಿಶೇಷ ಕಾರ್ಯಕಾರಿ ಪರಿಷತ್ ಸಭೆ ನಡುವಳಿ ಸಂಖ್ಯೆ-6ರ ಸಭೆಗಳನ್ವಯ 2014-15ನೇ ಸಾಲಿನ ಬಜೆಟ್ ಪರಿಷ್ಕೃತ ಅಂದಾಜು ಹಾಗೂ 2015-16ನೇ ಸಾಲಿನ ಮೂಲ ಬಜೆಟ್ ಅಂದಾಜನ್ನು ಈ ಕೆಳಗಿನಂತೆ ಅನುಮೋದಿಸಲಾಗಿದೆ.(ಪ್ರತಿ ಲಗತ್ತಿಸಿದೆ).

ಸ್ವೀಕೃತಿ-(ಕೋಟಿ ರೂಗಳಲ್ಲಿ)			ಪಾವತಿ-(ವೆಚ್ಚ) -(ಕೋಟಿ ರೂಗಳಲ್ಲಿ)		
2014-15 ಬಜೆಟ್ ಅಂದಾಜು	2014-15ರ ಪರಿಷ್ಕೃತ ಅಂದಾಜು	2015-16ನೇ ಸಾಲಿನ ಬಜೆಟ್ ಅಂದಾಜು	2014-15ನೇ ಬಜೆಟ್ ಅಂದಾಜು	2014-15ರ ಪರಿಷ್ಕೃತ ಅಂದಾಜು	2015-16ನೇ ಸಾಲಿನ ಬಜೆಟ್ ಅಂದಾಜು
185.05	170.13	233.78	262.55	314.21	274.90
--	--	--	ಆದಾಯದ ಮೇಲೆ ಹೆಚ್ಚುವರಿ ವೆಚ್ಚ (-)77.50	170.08	41.12
ಒಟ್ಟು = 185.05	170.13	233.78	185.05	170.13	233.78

ಮೇಲೆ ವಿವರಿಸಿದ ಬಜೆಟ್‌ನ ಸ್ವೀಕೃತಿ ವೆಚ್ಚಗಳನ್ನು ಪರಿಶೀಲಿಸಿದಾಗ 2014-15ನೆ ಸಾಲಿನ ವೆಚ್ಚದ ಬಜೆಟ್ ಸ್ವೀಕೃತಿಗಿಂತ 77.50ಕೋಟಿಗಳಷ್ಟು ಹೆಚ್ಚಿಗೆ ಆಗಿದ್ದರೆ. ಅದೇ ಸಾಲಿನ ಪರಿಷ್ಕೃತ ಬಜೆಟ್ ವೆಚ್ಚದ ಬಜೆಟ್ 314.21ಕೋಟಿಗಳಾಗಿದ್ದು ಅದು ಪರಿಷ್ಕೃತ ಸ್ವೀಕೃತಿಗಿಂತ-170.08ಕೋಟಿಗಳಷ್ಟು ಹೆಚ್ಚಾಗಿರುತ್ತದೆ.

ಅಂದರೆ ಬಜೆಟನಲ್ಲಿ ವಿ.ತಾ.ವಿ.ವಿಯ ಆದಾಯದ ಮೂಲಗಳನ್ನು ಅಭಿವೃದ್ಧಿಗೊಳಿಸುವಲ್ಲಿ & ವೆಚ್ಚದ ಮೇಲೆ ನಿಯಂತ್ರಣ ಸಾಧಿಸುವಲ್ಲಿ ಸಂಪೂರ್ಣ ವಿಫಲವಾಗಿದೆ. ಆದಾಯ ಮೂಲ ಅಂದಾಜಿನಲ್ಲಿ 185.05ಕೋಟಿಗಳಿದ್ದರೆ ಪರಿಷ್ಕೃತ ಅಂದಾಜಿನಲ್ಲಿ 170.13ಕೋಟಿಗೆ ಇಳಿದು ಆದಾಯ ಮೂಲಗಳನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ಸೂಕ್ತ ಕ್ರಮ ಕೈಕೊಂಡಿರುವುದಿಲ್ಲ. ಅದೇ ವೆಚ್ಚಮಾತ್ರ ಮೂಲ ಅಂದಾಜಿನ 262.55ಕೋಟಿ ದಿಂದ 314.21ಕೋಟಿಗಳಿಗೆ ಹೆಚ್ಚಾಗಿರುತ್ತದೆ, ಇದರಿಂದಾಗಿ ಉಂಟಾದ ರೂ.170.08ಕೋಟಿಗಳ ಕೊರತೆಯನ್ನು ನೀಗಿಸಲು ಆದಾಯದ ವ್ಯವಸ್ಥೆ ಮಾಡುವ ಬಗ್ಗೆ ಯಾವ ಕ್ರಮ ಕೈಕೊಳ್ಳಲಾಗಿದೆ ಎಂಬುದನ್ನು ಲೆಕ್ಕಪರಿಶೋಧನೆಗೆ ಅನುಸರಣೆ ಒದಗಿಸಲು ಕೋರಲಾಗಿತ್ತು.

ಇಂಥ ಅನಿಯಮಿತ ಬಜೆಟ್ ತಯಾರಿಕೆಯಿಂದಾಗಿ ವೆಚ್ಚದ ನಿಯಂತ್ರಣವಿಲ್ಲದಿರುವಿಕೆ ವಿ.ತಾ.ವಿ.ವಿಯ ಆರ್ಥಿಕ ಸಮತೋಲನ ತಪ್ಪಿಹೋಗುವ ಸಂಭವವನ್ನು ಎತ್ತಿ ತೋರಿಸುತ್ತದೆ ಇದಕ್ಕೆ ಪ್ರಮುಖ ಕಾರಣಗಳೆಂದರೆ.

1) ವಿ.ತಾ.ವಿ.ವಿಯ ಅಕ್ಯಾಡಮಿ ಮತ್ತು ಪರೀಕ್ಷಾ ವಿಭಾಗಗಳಲ್ಲಿ ಸರಕಾರದಿಂದ ಬರಬೇಕಾದ CET,&SC/ST/CAT-I & ಇತರೇ ವಿದ್ಯಾರ್ಥಿಗಳ ವಿವಿಧ ಫೀ ವಿನಾಯತಿಯ ಮರುಪಾವತಿ ಮೊತ್ತಗಳ ಕುರಿತಾಗಿ ಸಮರ್ಪಕ ಲೆಕ್ಕ ಸಮನ್ವಯ ಮಾಡದಿರುವುದು ಹಾಗೂ ಕಾಲೇಜ್‌ಗಳಿಂದ ಬರಬೇಕಾದ ಇಂತಹ ಫೀ ಸಂಗ್ರಹಣೆಯಲ್ಲಿ ಸಮರ್ಪಕ ಲಕ್ಷ್ಯ ವಹಿಸದಿರುವದು ಸಮರ್ಪಕ ಡಿಸಿಬಿ ನಿರ್ವಹಿಸದೇ ಇರುವಿಕೆ.

2) ವಿ.ತಾ.ವಿ.ವಿ.ಯಿಂದ ಹಿಂದಿನ ವರ್ಷಗಳಲ್ಲಿ/ಪ್ರಸಕ್ತ ವರ್ಷದಲ್ಲಿ ನೀಡಿದ ಮುಂಗಡಗಳನ್ನು ಸಕಾಲದಲ್ಲಿ ಹೊಂದಾಣಿಕೆ ಮಾಡಿಕೊಳ್ಳದಿರುವಿಕೆ.

3) ವಿ.ತಾ.ವಿ.ವಿ.ಯಲ್ಲಿ ಬಜೆಟ್‌ನಲ್ಲಿ ತಿಳಿಸಿದ ಲೆಕ್ಕಶೀರ್ಷಿಕೆವಾರು ಸ್ವೀಕೃತಿ & ವೆಚ್ಚದ ಲೆಕ್ಕಪತ್ರಗಳನ್ನು ಅಳವಡಿಸದೇ ಇರುವದು & ಇದರಿಂದಾಗಿ ಲೆಕ್ಕಶೀರ್ಷಿಕೆವಾರು ಬಜೆಟ್ ಅವಕಾಶಗಳೊಂದಿಗೆ ಸ್ವೀಕೃತಿ/ವೆಚ್ಚದ ನಿಯಂತ್ರಣ ರಜಿಸ್ಟರುಗಳನ್ನು ನಿರ್ವಹಿಸದೇ ಇರುವದು.

4) ವಿ.ತಾ.ವಿ.ವಿ.ಯ ಆಸ್ತಿಗಳು & ಅವುಗಳಿಂದ ಬರಬಹುದಾದ ಆದಾಯಗಳನ್ನು ಕಟ್ಟುನಿಟ್ಟಾಗಿ ಕಾಲಕಾಲಕ್ಕೆ ಪರಿವೀಕ್ಷಿಸಿ ಆದಾಯ ಸೋರಿ ಹೋಗದಂತೆ ನೋಡಿಕೊಳ್ಳುವದು.

5) ಕಾಮಗಾರಿಗಳ ಕುರಿತಾಗಿ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸದೇ ಕಾಮಗಾರಿಗಳ ವೆಚ್ಚದ ಕುರಿತಾದ ಯಾವುದೇ ನಿಯಂತ್ರಣವಿಲ್ಲದಿರುವಿಕೆ & ಖರೀದಿ & ಪಾರದರ್ಶಕ ಕಾಯ್ದೆ (ಕೆ.ಟಿ.ಪಿ.ಪಿ ನಿಯಮಗಳು)ಗಳನ್ನು ಅನುಸರಿಸದಿರುವಿಕೆ.

6) ವಿ.ತಾ.ವಿ.ವಿ. ಸಿಬ್ಬಂದಿ ವೆಚ್ಚವನ್ನು ಆದಾಯದ 40%ಕ್ಕಿಂತ ಹೆಚ್ಚಿಗೆ ನೀಡುತ್ತಿರುವುದರಿಂದ & ಪ್ರವಾಸ ಭತ್ಯ ಬಿಲ್ಲುಗಳ ಮೇಲೆ ಸಮರ್ಪಕ ನಿಯಂತ್ರಣ ಮಾಡದಿರುವುದು.

ಇನ್ನು ಪರಿಷ್ಕೃತ ಅಂದಾಜನ್ನು 2014-15ನೇ ಸಾಲಿಗಾಗಿ ತಯಾರಿಸಲಾಗಿದ್ದು ಅದರಲ್ಲಿ ಈ ಕೆಳಗಿನ ಅಂಶಗಳು ಕಂಡುಬರುತ್ತವೆ.

1) ಪರಿಷ್ಕೃತ ಅಂದಾಜನ್ನು ಬಜೆಟ್ ಮ್ಯಾನುಅಲ್ ಪ್ಯಾರಸಂಖ್ಯೆ179 ರನ್ವಯ ಹಿಂದಿನ ಆರ್ಥಿಕವರ್ಷದ ವಾಸ್ತವಿಕ ಸ್ವೀಕೃತಿ/ವೆಚ್ಚ, ಪ್ರಸಕ್ತ ವರ್ಷದ ಮೂಲ ಅಂದಾಜು, ಪ್ರಸಕ್ತವರ್ಷದ ಮೊದಲ 8 ಅಥವಾ 9ತಿಂಗಳ ವಾಸ್ತವಿಕ ವೆಚ್ಚ, ನಂತರದ 3ತಿಂಗಳ ಸಂಭವನೀಯ ಸ್ವೀಕೃತಿ ವೆಚ್ಚ ಈ ಎರಡೂ ಸ್ವೀಕೃತಿ ವೆಚ್ಚಗಳ ಒಟ್ಟು ಮೊತ್ತ ಅಂದರೆ ಆ ಪ್ರಸಕ್ತವರ್ಷದ ಪರಿಷ್ಕೃತ ಅಂದಾಜು, ಈ ಅಂದಾಜಿನ ಮೇಲೆ ಮುಂದಿನ ವರ್ಷದ ಬಜೆಟ್ ಅಂದಾಜನ್ನು ತಯಾರಿಸುವದು ನಿಯಮಬದ್ಧ.

ಆದರೆ ಕೇವಲ 9ತಿಂಗಳ ವಾಸ್ತವಿಕ ಅಂದಾಜನ್ನು ಮಾತ್ರ ದಾಖಲಿಸಿ ಪರಿಷ್ಕೃತ ಅಂದಾಜಿನ ಬಜೆಟ್ ಅವಕಾಶಗಳನ್ನು ದಾಖಲಿಸುವದು ಸಮರ್ಪಕವಲ್ಲ.

ಇದರಿಂದಾಗಿ ಕೆಲವೊಂದು ಬಜೆಟ್ ಶೀರ್ಷಿಕೆಗಳಡಿ ಮೂಲ ಬಜೆಟ್‌ಗಿಂತ ಹೆಚ್ಚಿನ ವೆಚ್ಚ ಈ 9ತಿಂಗಳ ಅವಧಿಯಲ್ಲಿ ದಾಖಲಿಸಲಾಗಿದ್ದು, ಪರಿಷ್ಕೃತ ವೆಚ್ಚ ವಾಸ್ತವಿಕ ವೆಚ್ಚಕ್ಕಿಂತ ಹೆಚ್ಚಿಗೆ ಆಗದೇ ಕಡಿಮೆ ತೋರಿಸಿದಾಗ ಪರಿಷ್ಕೃತ ವೆಚ್ಚ ಅಂದಾಜು ಎಂದು ತಿಳಿಸಿದ್ದು ಸಮರ್ಪಕ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಉದಾ: (ಲಕ್ಷ ರೂ.ಗಳಲ್ಲಿ)

			ಮೂಲ ಬಜೆಟ್	ವಾಸ್ತವಿಕ-upto-31-12-14	Revised budjet-2014-15(in Lacks)
ಲೆ-ಶಿ	2001-101-17	Notification & Advertisement	50.00	10.0931	50.00
ಲೆ-ಶಿ	2001-101-24	Purchase of New Vehicle Academic	30.00	37.50	10.00
ಲೆ-ಶಿ	2001-401-04	TA/DA other members of Committee-EDC	00.25	00.7968	0.25
ಲೆ-ಶಿ	2001-201-19	Purchase of Software & Peripherals	20.00	64.44	20.00

ಈ ಪ್ರಕರಣಗಳು ಉದಾಹರಣೆ ಮಾತ್ರವಾಗಿದ್ದು ಇನ್ನು ಕೆಲವು ಇಂತಹ ಲೆಕ್ಕ ಶೀರ್ಷಿಕೆಗಳಡಿ ಪರಿಷ್ಕೃತ ಅಂದಾಜು ಮೊತ್ತವನ್ನು ಅಸಮರ್ಪಕವಾಗಿ ದಾಖಲಿಸಲಾಗಿದೆ.

ಕಾರಣ ಇಂತಹ ನ್ಯೂನತೆಗಳಿಂದ ಕೂಡಿದ ಬಜೆಟ್ ತಯಾರಿಕೆಯು ಬಜೆಟ್ ತಯಾರಿಕೆ ಉದ್ದೇಶವನ್ನೇ ವ್ಯರ್ಥಗೊಳಿಸುತ್ತದೆ.

ಕಾರಣ ಆದಾಯಕ್ಕಿಂತ ₹.170.08 ಲಕ್ಷಗಳ ಹೆಚ್ಚುವರಿ ಕೊರತೆ ಉಂಟಾಗಿರುವ ಬಜೆಟ್‌ನ್ನು ಹೇಗೆ ಅನುಮೋದಿಸಲಾಯಿತು? ಮತ್ತು ಈ ಹೆಚ್ಚಿನ ಕೊರತೆಯನ್ನು ಯಾವ ಮೂಲಗಳಿಂದ ಭರಿಸಲಾಯಿತು? ಎಂಬ ಬಗ್ಗೆ ಸೂಕ್ತ ಅನುಸರಣೆಯನ್ನು ನೀಡುವುದಲ್ಲದೇ. ಆರ್ಥಿಕ ಬದ್ಧತೆಯನ್ನು ಕಾಪಾಡಲು ವಿ.ತಾ.ವಿ.ವಿಯಲ್ಲಿ ಯಾವ ಮಾರ್ಗೋಪಾಯಗಳನ್ನು ಕಂಡುಕೊಳ್ಳಲಾಗಿದೆ ಎಂಬ ಬಗ್ಗೆ ವಿವರಣೆಯನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಕೋರಿದೆ.

ಇನ್ನು ಬಜೆಟ್ ಮ್ಯಾನುವಲ್ 178ನೇ ಪ್ಯಾರದನ್ವಯ ಬಜೆಟ್‌ನಲ್ಲಿ ಪ್ರಸ್ತಾಪಿಸದೇ ಇರುವ ಯಾವುದೇ ಬಾಬುಗಳಿಗೆ ಪರಿಷ್ಕೃತ ಅಂದಾಜಿನಲ್ಲಿ ಅವಕಾಶ ಕಲ್ಪಿಸುವುದು ಸಮರ್ಪಕವಲ್ಲ, ಅಥವಾ ಇಂತಹ ಬಾಬುಗಳಿಗೆ ಯಾವುದೇ ಅವಕಾಶಗಳಿಲ್ಲದೇ ವೆಚ್ಚ ನಿರ್ವಹಿಸಿ ಅದಕ್ಕೆ ಪರಿಷ್ಕೃತ ಬಜೆಟ್‌ನ್ನು ಒದಗಿಸುವದು ಅನಿಯಮಿತ ಕ್ರಮವಾಗಿರುತ್ತದೆ.

ಆದರೆ ವಿ.ತಾ.ವಿ.ವಿಯಲ್ಲಿ ಈ ಕೆಳಗಿನ ಲೆಕ್ಕ ಶೀರ್ಷಿಕೆಗಳಿಗೆ ಮೂಲ ಬಜೆಟ್‌ನಲ್ಲಿ ಅವಕಾಶಗಳಿಲ್ಲದಿದ್ದರೂ ಈ ಕೆಳಗಿನ ಲೇ.ಶಿಗಳಿಗೆ ಪರಿಷ್ಕೃತ ಅಂದಾಜನ್ನು ಕಲ್ಪಿಸಲಾಗಿದೆ.

(ಲಕ್ಷ ರೂ.ಗಳಲ್ಲಿ)

ಕ್ರ.ಸಂ	ಲೆಕ್ಕ ಶಿರ್ಷಿಕೆ	2014-15ರ ಅಂದಾಜು	31-12-14ರ ವಾಸ್ತವಿಕ ವೆಚ್ಚ	2014-15ರ ಪರಿಷ್ಕೃತ ಅಂದಾಜು	2015-16ರ ಬಜೆಟ್ ಅಂದಾಜು (ಲಕ್ಷರೂಗಳಲ್ಲಿ)
1	5001-101-706 Purchase of Equip. for Belagavi	00.00	13.916	25.00	10.00
2	5001-101-706 Purchase of Equip. for Bengaluru	00.00	0	30.00	10.00
3	5001-101-706 Purchase of Equip. for Mysore.	00.00	0	25.00	10.00
4	5001-101-706 Purchase of Equip. for Kalaburagi	00.00	2.77	25.00	10.00

ಕಾರಣ ಈ ನ್ಯೂನತೆಗಳಿಗೆ ಸೂಕ್ತ ಅನುಸರಣೆಯನ್ನು ಒದಗಿಸುವದು ಅದುವರೆಗೂ. ಬಜೆಟ್ ಅವಕಾಶ ಇಲ್ಲದೇ ಖರ್ಚುಮಾಡಿದ ₹.16.686 ಲಕ್ಷಗಳನ್ನು ಆಕ್ಷೇಪಣೆಯಲ್ಲಿ ಇರಿಸಲಾಗಿದೆ. ಕಾರಣ ಮೇಲಿನ ಎಲ್ಲ ಅಂಶಗಳಿಗೆ ಸಮರ್ಪಕ ಅನುಸರಣೆ ನೀಡಲು ಕೋರಲಾಗಿತ್ತು. ಈ ಕುರಿತು ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :56 ದಿನಾಂಕ: 04-02-2016 ನ್ನು ನೀಡಲಾಗಿತ್ತು. ಆದರೆ ನೀಡಿದ ಅನುಸರಣೆಯು ಅಪೂರ್ಣವಾಗಿರುತ್ತದೆ.

18) ವಿ.ಟಿ.ಯು.ನಿಂದ ನೀಡಲ್ಪಡುವ ಪಾವತಿಗಳನ್ನು ಹಣ ಸಂದಾಯ ಮಾಡಿದವರಿಗೆ ನೀಡದೇ ಸಂಬಂಧಿತ ವಿ.ಟಿ.ಯುದ ವಿಭಾಗಗಳಿಗೆ ನೀಡುತ್ತಿರುವ ಬಗ್ಗೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ 2014-15ನೇ ಸಾಲಿನಲ್ಲಿ ವಿವಿಧ ಬಾಬತ್ತುಗಳಿಗಾಗಿ, ವಿದ್ಯಾರ್ಥಿಗಳಿಂದ, ಸಂಲಗ್ನ (affiliated) ಕಾಲೇಜುಗಳಿಂದ, ವಿವಿಧ ಸಂಸ್ಥೆಗಳಿಂದ ಪಡೆದ ಹಣ (ಸ್ವೀಕೃತಿ)ಗಳ ಕುರಿತು ಪರಿಶೀಲಿಸಲಾಗಿ ಈ ಕೆಳಗಿನ ಅಂಶಗಳು ಕಂಡು ಬರುತ್ತವೆ.

1) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವಿತ್ತಾಧಿಕಾರಿಗಳಿಂದ, ಕ್ರೋಢಿಕೃತ ಅಂಕಪಟ್ಟಿ, ತಾತ್ಕಾಲಿಕ ಪ್ರಮಾಣಪತ್ರ (provisional), convocationfee, ಘಟಕೋತ್ಸವ ಶುಲ್ಕ ಅಂಕಪಟ್ಟಿ ಧೃಡೀಕರಣ ಇತ್ಯಾದಿಗಳಿಗಾಗಿ ಸಂಬಂಧಿತ ವಿದ್ಯಾರ್ಥಿ ಹೆಸರಿನಲ್ಲಿ ರಸೀದಿಗಳನ್ನು ಹೊರಡಿಸುತ್ತಾರೆ. ಮತ್ತು

ಸಂಲಗ್ನ/ಅಧೀನ ಕಾಲೇಜುಗಳಿಂದ ನೀಡಲ್ಪಟ್ಟ, ಪಿಂಚಣಿ ವಂತಿಕೆ ಮತ್ತು ರಜಾ ವಂತಿಕೆ, ಶುಲ್ಕ (Mysore Bosch Rexorth), ಚಿಲ್ಲರೆ-ಎಸಿಎ, ಟ್ಯೂಶನ್ ಫೀ, ಸಂಲಗ್ನ ಶುಲ್ಕ, ದಂಡ ಶುಲ್ಕ (Afficiation), ನೋಂದಣಿ ಶುಲ್ಕ ಇತ್ಯಾದಿಗಳಿಗಾಗಿ ಆಯಾ ಕಾಲೇಜುಗಳ ಹೆಸರಿನಲ್ಲಿ ರಸೀದಿ ಹೊರಡಿಸಲಾಗುತ್ತದೆ.

ಉದಾ:

1) ರಸೀದಿ ಸಂಖ್ಯೆ 61544/01-04-2014 ರಿಂದ 61568/01-04-2014 (ವಿದ್ಯಾರ್ಥಿಗಳ ಹೆಸರಿಗೆ ನೀಡಿದ ರಸೀದಿಗಳು)

2) ರಸೀದಿ ಸಂಖ್ಯೆ 61569/02-04-2014 ರಿಂದ 61582/02-04-2014 (ವಿವಿಧ ಕಾಲೇಜುಗಳ ಹೆಸರಿಗೆ ನೀಡಿದ

ರಸೀದಿಗಳು)

ಸದರ ರಸೀದಿಗಳಿಗೆ ವಿತ್ತಾಧಿಕಾರಿಗಳ ರುಜು ಇರುವುದಿಲ್ಲ. ಈ ಬಗ್ಗೆ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ : 05 ದಿನಾಂಕ: 02-11-2015 ನೀಡಲಾಗಿತ್ತು. ವಿಶ್ವವಿದ್ಯಾಲಯದ ಪರಿಶೀಲನೆಗಳಿಗೆ ಅನುಸರಣೆ ನೀಡಿರುತ್ತಾರೆ. ಇನ್ನು ಮುಂದೆ ಹಣ ಸಂದಾಯ ಮಾಡಿದವರಿಗೆ ಅಧಿಕೃತ ಪಾವತಿ ನೀಡುವಂತೆ ತಿಳಿಸಲಾಯಿತು.

19) ವಿತಾವಿವಿಯ ವಿದ್ಯಾಮಂಡಳ ವಿಭಾಗದಲ್ಲಿ 2014-15ನೇ ಸಾಲಿನಲ್ಲಿ ಬಾಕಿ ಉಳಿದಿರುವ ವಿವಿಧ ಫೀಗಳ ಕುರಿತು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯ ವಿದ್ಯಾಮಂಡಳಿ ವಿಭಾಗದಲ್ಲಿ ವಿವಿಗೆ ಸಂಬಂಧಿಸಿದ ವಿವಿಧ ಫೀಗಳ ಸ್ವೀಕೃತಿ ಕುರಿತು ಕಾರ್ಯನಿರ್ವಹಣೆ ಆಗುತ್ತಿದೆ. ಈ ಬಗ್ಗೆ ಪರಿಶೀಲಿಸಲಾಗಿ ಈ ಕೆಳಗಿನ ಕೆಲವು ಅಂಶಗಳು ಕಂಡುಬರುತ್ತವೆ.

I) 1. 2014-15ನೇ ಸಾಲಿನಲ್ಲಿ ವಿತಾವಿವಿಗೆ ಬರಬೇಕಾದ ಬಾಕಿ ಉಳಿದ ಫೀಗಳ ಕುರಿತು ಪರಿಶೀಲಿಸಲಾಗಿ ರಜಿಸ್ಟ್ರೇಶನ್ ಫೀ ₹.15118000/- ಮತ್ತು ರಜಿಸ್ಟ್ರೇಶನ್ ಫೀ ಲ್ಯಾಟರಲ್ ₹.4388000/-ಗಳು ಪದವಿಪೂರ್ವ(ಯುಜಿ) ಕೋರ್ಸಗಳಿಂದ ಬರುವುದು ಬಾಕಿ ಇದ್ದರೆ ಸ್ನಾತಕೋತ್ತರ ಕೋರ್ಸಗಳಿಗಾಗಿ ಸ್ವೀಕರಿಸಬೇಕಿದ್ದ ರಜಿಸ್ಟ್ರೇಶನ್ ಫೀ(ಪಿಜಿಸಿಇಟಿ) ₹.6783406/- ಬಾಕಿ ಇರುತ್ತವೆ. ಈ ಮೊತ್ತಗಳು ಸಿಇಟಿಯಿಂದ ಬರುವ ಮೊತ್ತಗಳಾಗಿರುತ್ತವೆ ಈ ಕುರಿತು ಸಕಾಲದಲ್ಲಿಯೇ ಈ ಬಾಕಿ ಮೊತ್ತಗಳನ್ನು ಸಿಇಟಿಯಿಂದ ಪಡೆಯುವ ಕುರಿತು ಕ್ರಮಕೈಕೊಳ್ಳುವುದು ಅವಶ್ಯವಿರುತ್ತದೆ.

ಹಾಗೆಯೇ ಹಿಂದಿನ ವರ್ಷಗಳಲ್ಲಿ ಬಾಕಿ ಉಳಿದಿರುವ ಮೊತ್ತಗಳ ಕುರಿತು ವಿವಿಯ ದಾಖಲೆ/ರಜಿಸ್ಟರುಗಳಲ್ಲಿ ನಮೂದುಗಳು ಇಲ್ಲದಿರುವದನ್ನು ಗಮನಿಸಲಾಗಿದೆ. ಕಾರಣ ಹಿಂದಿನ ಸಾಲುಗಳಲ್ಲಿ ಬಾಕಿ ಉಳಿದಿರಬಹುದಾದ ಎಲ್ಲ ಮೊತ್ತಗಳನ್ನು ರಜಿಸ್ಟರಿನಲ್ಲಿ ದಾಖಲಿಸಿ ಆ ಮೊತ್ತಗಳನ್ನು ಸಿಇಟಿಯಿಂದ ಪಡೆಯಲು ಸೂಕ್ತ ಕ್ರಮ ಕೈಕೊಳ್ಳುವುದು ಅವಶ್ಯ.

2. ಹಾಗೆಯೇ ಎಲ್‌ಜಿಬ್ಲಿಟಿ ಫೀ ₹.189000/-ಗಳನ್ನು ಯುಜಿ ಕೋರ್ಸಗಳಿಗೆ ಬಾಕಿ ಇರುವುದು ಹಾಗೂ ಪಿಜಿ ಕೋರ್ಸಗಳಿಗೆ ₹.264360/-ಗಳು ಬಾಕಿ ಇರುತ್ತವೆ. ಕಾರಣ ಸದರ ಬಾಕಿ ಮೊತ್ತವನ್ನು ಕೂಡಲೇ ಸಂಬಂಧಿತರಿಂದ (ಕಾಲೇಜುಗಳಿಂದ) ವಸೂಲಿ ಮಾಡಲು ಸೂಚಿಸಿದೆ.

3. ಇನ್ನು 2014-15ನೇ ಸಾಲಿನಲ್ಲಿ ಎಸ್.ಸಿ/ಎಸ್.ಟಿ/ಕ್ಯಾಟ-1 ವರ್ಗದ ವಿದ್ಯಾರ್ಥಿಗಳಿಗೆ ರಜಿಸ್ಟ್ರೇಶನ್ ಫೀಗಳು (ವಿವಿಯ ನಾಲ್ಕು ಪ್ರಾದೇಶಿಕ ಕೇಂದ್ರಗಳಿಗೆ ಸಂಬಂಧಿಸಿದ್ದು) ಸಿಇಟಿ ಸೆಲ್‌ನಿಂದ ಬರುವುದು ಬಾಕಿ ಇದ್ದು, ಅದು ಯುಜಿ 1 ಮತ್ತು3ನೇ ಸೇಮಿಸ್ಟರುಗಳ ಕುರಿತಾದ ಮೊತ್ತ ₹.9480043/-ಗಳಾಗಿದ್ದರೆ ಪಿಜಿ1/ಸೇಮಿಸ್ಟರ್ ಕುರಿತು ₹.2217500/-ಗಳ ಬಾಕಿ ಇರುತ್ತವೆ. ಸದರ ಮೊತ್ತಗಳನ್ನು ಸಹ ಸಿಇಟಿ ಇಂದ ಪಡೆಯಲು ಸಮರ್ಪಕ ಪ್ರಯತ್ನಗಳನ್ನು ಮಾಡಿ ಸಕಾಲಿಕ ಕ್ರಮಕ್ಕೈಕೊಳ್ಳುವುದು ಅವಶ್ಯ.

	ಯುಜಿ	ಪಿಜಿ	ಒಟ್ಟು
ಅಂದರೆ ಒಟ್ಟು ರೂ. 1.	15556800	6783406	22340206
2.	189000	264360	453360
3.	9480043	2217500	11697543
ಒಟ್ಟು	25225843	9265266	34491109

₹. 34491109/-ಗಳ ಪೈಕಿ ₹. 34037749/-ಗಳನ್ನು ಸಿಇಟಿಯಿಂದ ಕೂಡಲೇ ಪಡೆಯಲು ಕ್ರಮ ಕೈಕೊಳ್ಳಲು ಸೂಚಿಸಿದೆ. ಮತ್ತು ₹. 453360/- ಗಳ ಎಲ್‌ಜಿಬ್ಲಿಟಿ ಫೀ ಮೊತ್ತವನ್ನು ಸಂಬಂಧಿತ ಕಾಲೇಜುಗಳಿಂದ ಪಡೆಯಲು ಸೂಚಿಸಿದೆ.

II) ಇನ್ನು ಎಸ್.ಸಿ/ಎಸ್.ಟಿ/ಕ್ಯಾಟ್-1 ವರ್ಗ ಹಾಗೂ ಇತರೆ ಬಿ.ಸಿ.ಎಂ. ವಿದ್ಯಾರ್ಥಿಗಳಿಗೆ ಫೀ ವಿನಾಯಿತಿಯಿಂದಾಗಿ ಈ ಫೀ ಮೊತ್ತಗಳನ್ನು ಸಂಬಂಧಿತ ಇಲಾಖೆಗಳಿಂದ ಪಡೆಯುವ ಕುರಿತಾಗಿ ಪರಿಶೀಲಿಸಲಾಗಿ ಈ ಕೆಳಗಿನ ಫೀಗಳು 2014-15ನೇ ಸಾಲಿಗೆ ಸಂಬಂಧಿಸಿದ್ದು ಬಾಕಿ ಇರುವುದು ಗಮನಿಸಲಾಗಿದೆ.

1. ಸದರ ಬಾಕಿಗಳ ನಿಖರ ಮೊತ್ತಗಳ ಬಗ್ಗೆ ವಿವರಗಳು ಲಭ್ಯವಾಗಲಿಲ್ಲ. ಏಕೆಂದರೆ ಸ್ನಾತಕೋತ್ತರ ಕೇಂದ್ರವಾರು ಒಟ್ಟು ಬಾಕಿ ಮೊತ್ತಗಳನ್ನು ಲೆಕ್ಕ ಹಾಕಲಾಗಿದೆ. ಆದರೆ ಪ್ರತಿ ಮೀಸಲು ವರ್ಗಕ್ಕೆ (ಎಸ್.ಸಿ/ಎಸ್.ಟಿ/ಕ್ಯಾಟ್-1/2ಬ/2ಸಿ ಮತ್ತು3ಬಿ/3ಸಿ) ಎಷ್ಟು ಮೊತ್ತದ ಶುಲ್ಕ ವಿನಾಯಿತಿ ನೀಡಲಾಗಿದ್ದು, ಪ್ರತಿಯಾಗಿ ಸ್ವೀಕೃತಿ ಶುಲ್ಕ ಮತ್ತು ಬಾಕಿ ಶುಲ್ಕದ ವಿವರಗಳು ಲಭ್ಯವಿರುವದಿಲ್ಲ ಮತ್ತು ಅದಕ್ಕಾಗಿ ಕೈಕೊಂಡ ಕ್ರಮಗಳ ಬಗ್ಗೆ ಸಹ ವಿವರಗಳು ಅವಶ್ಯವಿರುತ್ತವೆ.

ಸ್ನಾತಕ ಕೇಂದ್ರವಾರು ವಿವರ ಈ ಕೆಳಗಿನಂತಿದೆ.

1. ವಿಟಿಯು ಪಿಜಿ ಸೆಂಟರ್ ಮೈಸೂರು- 1008430/-
2. --------ಸದರ------ ಕಲಬುರ್ಗಿ- 1770950/-
3. --------ಸದರ---- ಬೆಂಗಳೂರು- 536025/-
4. ---------ಸದರ------ ಬೆಳಗಾವಿ- ---

ಒಟ್ಟು 3315405/-

ಈ ವಿವರಗಳಲ್ಲಿ ಹಿಂದಿನ ವರ್ಷಗಳ ಬಾಕಿ ಉಳಿದ ಶುಲ್ಕಗಳ ಮರುಪಾವತಿ ಸರಕಾರ ಇಲಾಖೆಗಳಿಂದ ಬರಬೇಕಾದ ಕುರಿತ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವುದು ಅವಶ್ಯವಿದೆ.

ಡಿಸಿಬಿಯನ್ನು ಪ್ರತಿ ಫೀ(ಶುಲ್ಕ)ದ ಕುರಿತು ನಿರ್ವಹಿಸಿರುವದಿಲ್ಲವಾದ್ದರಿಂದ ವಿವರವಾದ ಶುಲ್ಕವಾರು ಡಿಸಿಬಿ ನಿರ್ವಹಿಸಲು ಸೂಚಿಸಿದೆ.

III) ಪ್ರತಿ ಕಾಲೇಜಿನ ಪ್ರವೇಶ ಸಾಮರ್ಥ್ಯದ ಆಧಾರದ ಮೇಲೆ ಮತ್ತು ಆಯಾ ವರ್ಷದ ನಿಖರ ಪ್ರವೇಶಹೊಂದಿದ ಅಭ್ಯರ್ಥಿಗಳ ಆಧಾರದ ಮೇಲೆ ಮೀಸಲಾತಿಗೆ ಅರ್ಹ ಅಭ್ಯರ್ಥಿಗಳ ವಿವರಗಳನ್ನು ಪ್ರತಿ ವರ್ಗವಾರು/ಕಾಲೇಜುವಾರು/ಶುಲ್ಕವಾರು ನಿರ್ವಹಿಸಿ ನಿಖರವಾಗಿ ವಿನಾಯಿತಿ, ಶುಲ್ಕ ಮರು ಪಾವತಿ ಮತ್ತು ಬಾಕಿ ವಿವರಗಳನ್ನು ನಿರ್ವಹಿಸಿ ವಿವಿಯ ಎಲ್ಲ ಶುಲ್ಕಗಳು ಸಕಾಲದಲ್ಲಿ ಮರುಪಾವತಿ ಆಗುವಂತೆ ಎಲ್ಲ ಸಾಧ್ಯಕ್ರಮಗಳನ್ನು ನಿರ್ವಹಿಸಿ ವಿವಿ ನಿಧಿಗೆ ಬರಬೇಕಾದ ಶುಲ್ಕಗಳು ಸೋರಿ ಹೋಗದಂತೆ ಕ್ರಮವಹಿಸಿ ಕೈಕೊಂಡ ಕ್ರಮದ ಕುರಿತ ಲೆಕ್ಕಪರಿಶೋಧನೆಗೆ ಅನುಸರಣೆ ನೀಡಲು ಸೂಚಿಸಿದೆ. ಈ ಕ್ರಮ ಅನುಸರಿಸದೇ ಇರುವದರಿಂದ ವಿಟಿಯು ವಿಸ್ತರಣಾ ಕೇಂದ್ರಗಳಿಂದ ₹.5766430/-ಗಳು ಬಾಕಿ ಉಳಿದಿವೆ. ಕಾರಣ ಸದರ ಅನುಸರಣೆಗಳ ಸಲ್ಲಿಕೆ ವರೆಗೆ ಒಟ್ಟು ₹. 4491109/- ಮತ್ತು ₹.3315405/- ಮತ್ತು ₹.5766430/-ಗಳನ್ನು ಒಟ್ಟಾರೆ ರೂ. 43572944/- ಆಕ್ಷೇಪಣೆಯಲ್ಲಿರಿಸಲಾಗಿದೆ ವಿವರವನ್ನು **ಅನುಬಂಧ-10(ಅ,ಬ,ಕ)**ಗಳಲ್ಲಿ ತೋರಿಸಿದೆ. ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :92 ದಿನಾಂಕ: 27-02-2016 ನ್ನು ನೀಡಲಾಗಿತ್ತು ಆದರೆ ಯಾವುದೇ ಅನುಸರಣೆ ನೀಡಿರುವುದಿಲ್ಲ.

20) ಪರೀಕ್ಷಾ ಕಾರ್ಯಕ್ಕೆ ಪಡೆದುಕೊಂಡ ಮುಂಗಡಗಳಲ್ಲಿ ನಿಯಮಬಾಹಿರ ಸಂಭಾವನೆ (Remuneration to Examiners) ಪಾವತಿಸುವ ಕುರಿತು.

2014-15ನೇ ಸಾಲಿನಲ್ಲಿ ಪರೀಕ್ಷಾ ಕಾರ್ಯಕ್ಕೆ ನಿಯೋಜಿತ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ಈ ಕೆಳಗೆ ನಮೂದಿಸಿದ ಪ್ರಕಾರ ಸಂಭಾವನೆಗಳನ್ನು ಪಾವತಿಸಲಾಗಿದೆ, ಇದು ಸರ್ಕಾರದ ಸುತ್ತೋಲೆ ಸಂ.ಇಡಿ/383/ಯುಟಿವಿ/2002/ದಿ/16-12-2002ರ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಅಧಿನಿಯಮ 2000 ಪ್ರಕರಣ 73 ಮತ್ತು 74 ರಲ್ಲಿ ವಿವರಿಸಿದ ಅಂಶಗಳಿಗೆ ವ್ಯತಿರಿಕ್ತವಾಗಿರುತ್ತದೆ ಹೀಗಾಗಿ ಪರೀಕ್ಷಾ ಕಾರ್ಯಕ್ಕಾಗಿ ಯಾವುದೇ ರೀತಿಯ ಸಂಭಾವನೆ ಪಡೆಯಲು ಅವಕಾಶಗಳಿರುವದಿಲ್ಲ. ಈ ಬಗ್ಗೆ ಈಗಾಗಲೇ 2009-10ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡಿಕೆ 33ರಲ್ಲಿ ತಿಳಿಸಲಾಗಿದೆ ಆದಾಗ್ಯೂ ಸರ್ಕಾರದ ಆದೇಶಗಳನ್ನು ಗಣನೆಗೆ ತಾರದೇ ಪ್ರಸ್ತುತ ಸಾಲಿನಲ್ಲಿ ಸಹ ಪರೀಕ್ಷಾ ಕಾರ್ಯ ಸಿಬ್ಬಂದಿಗಳಿಗೆ ಹಣ ಪಾವತಿಸಲಾಗಿದೆ. ಇದು ಸರ್ಕಾರದ ಆದೇಶಗಳ ಉಲ್ಲಂಘನೆ ಎನಿಸುತ್ತದೆ. ಆದುದರಿಂದ ಸದರಿ ಪರೀಕ್ಷಾ ಕಾರ್ಯ ನಿಯೋಜಿತ ಸಿಬ್ಬಂದಿಗಳಿಗೆ ನೀಡಲಾದ ಸಂಭಾವನೆ ವೆಚ್ಚದ ತ:ಖ್ತೆ ಪ್ರಕಾರ ₹.21,59,53,380/-ಗಳನ್ನು ಪಾವತಿಸಿದ್ದು ಇದೆ ಅನಿಯಮಿತವಾಗಿ ಪಾವತಿಸಿ ಈ ಮೊತ್ತಗಳನ್ನು ಸಂಬಂಧಿಸಿದವರಿಂದ ವಸೂಲಿಸಲು ಕ್ರಮ ಜರುಗಿಸುವುದು. ವಿವರವನ್ನು **ಅನುಬಂಧ-04(ಅ)**ರಲ್ಲಿ ತೋರಿಸಲಾಗಿದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ : 08 ದಿನಾಂಕ: 09-11-2015 ನ್ನು ನೀಡಲಾಗಿತ್ತು ಆದರೆ ಯಾವುದೇ ಅನುಸರಣೆ ನೀಡಿರುವುದಿಲ್ಲ.

21) ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಪೂರೈಸಿದ ಸಂಸ್ಥೆ ಮೆ॥ಶೋಭಾ ಎಂಟರ್ ಪ್ರೈಜಿಸ್ ಬೆಂಗಳೂರು ಇವರಿಗೆ 03-2014ನೇ ತಿಂಗಳ ಅವಧಿಗೆ ಅನಿಯಮಿತವಾಗಿ ಪಾವತಿಸಿದ ಮಾನವ ಸಂಪನ್ಮೂಲ ಬಿಲ್ಲುಗಳ ಬಗ್ಗೆ.

ವಿಶ್ವೇಶ್ವರಯ್ಯಾ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯಲ್ಲಿ 2014-15ನೇ ಸಾಲಿನ ಆರ್ಥಿಕ ವರ್ಷದಲ್ಲಿ ಮಾನವ ಸಂಪನ್ಮೂಲ ಪೂರೈಸಿದ ಮೆ॥ಶೋಭಾ ಎಂಟರ್ ಪ್ರೈಜಿಸ್ ಬೆಂಗಳೂರು ಇವರ ಫೆಬ್ರವರಿ-2014 ಮತ್ತು ಮಾರ್ಚ-2014ನೇ ತಿಂಗಳಿನ ಮಾನವ ಸಂಪನ್ಮೂಲ ಪೂರೈಕೆ ಬಿಲ್ಲನ್ನು ವೋಚರ್ ಸಂಖ್ಯೆ (ಚಕ್ ಸಂಖ್ಯೆ): 219330 ದಿನಾಂಕ:10-04-2014 ₹.2,59,0557/-+50,000/-=2640557/-ಗಳನ್ನು ಪಾವತಿಸಲಾಗಿದೆ. ಸದರ ಪಾವತಿಯ ಕುರಿತು ಪರಿಶೀಲಿಸಿದಾಗ ಈ ಕೆಳಗಿನ ಅಂಶಗಳ ಕಂಡು ಬರುತ್ತವೆ.

1) ಸದರ ಬಿಲ್ಲಿಗೆ ಸಂಸ್ಥೆಯಿಂದ ಪ್ರತ್ಯಕ್ಷವಾಗಿ ಸಂಬಂಧಿತ ಹೊರಗುತ್ತಿಗೆ ಸಿಬ್ಬಂದಿಗೆ ಪಾವತಿಸಿದ ವೇತನ ಬಿಲ್ಲಿನ ಪ್ರಮಾಣಿತ ಪ್ರತಿ ಲಗತ್ತಿಸಿಲ್ಲ. ಇದರಿಂದಾಗಿ ಸಂಬಂಧಿತ ಸಂಸ್ಥೆಯ ತನ್ನ ಸಿಬ್ಬಂದಿಗೆ ಸಕಾಲಿಕವಾಗಿ ವೇತನ/ದಿನಗೂಲಿಯನ್ನು ಪಾವತಿಸಿದೆ ಎಂದು ಧೃಢೀಕರಿಸಲು ಸಾಧ್ಯವಾಗುವದಿಲ್ಲ. ಇದು ಕರ್ನಾಟಕ ರಾಜ್ಯ ಕಾರ್ಮಿಕ ನಿಯಮಾವಳಿಗಳಿಗೆ ವ್ಯತಿರಿಕ್ತವಾಗಿರುತ್ತದೆ ಮತ್ತು ಸಂಸ್ಥೆಯ ವಾಸ್ತವಿಕವಾಗಿ ತನ್ನ ಸಿಬ್ಬಂದಿಗೆ, ವಿತಾವಿವಿಯಿಂದ ಕ್ಲೇಮು ಮಾಡಿದ ಮೊತ್ತವನ್ನು ಪಾವತಿಸಿದೆ ಎಂದು ದೃಢೀಕರಿಸಲಾಗುವುದಿಲ್ಲ.

2) ಸದರ ಬಿಲ್ಲಿಗೆ ಸಂಸ್ಥೆಯ 02/2014 ನೇ ಸಾಲಿನ ESI/PF ಮೊತ್ತಗಳನ್ನು ಸಂಬಂಧಿತ ಸರಕಾರದ ಇಲಾಖೆಗೆ ಪಾವತಿಸಿದ e-ಚಲನುಗಳನ್ನು ಲಗತ್ತಿಸಿದೆ. ಆದರೆ ಸರ್ವಿಸ್ ಟಾಕ್ಸನ ಕುರಿತಾಗಿ ಪ್ರತಿ ಬಿಲ್ಲಿಗೆ ಸಂಬಂಧಿಸಿದ 2/2014ನೇ ತಿಂಗಳ e-ಚಲನನ್ನು ಲಗತ್ತಿಸದೇ ಜನೇವರಿ-2014 ರಿಂದ ಮಾರ್ಚ-2014ರ ಅವಧಿಯ ತನ್ನ ಎಲ್ಲ Client ಕಂಪನಿ/ ಸಂಸ್ಥೆಗಳಿಗೆ ಸಂಬಂಧಿಸಿದ 3/2014 ಮತ್ತು 4/2014ರ ಅವಧಿಯ e-ಚಲನಗಳನ್ನು ಲಗತ್ತಿಸಿದೆ.

1) ಚಲನ್ ಸಂಖ್ಯೆ: 30239/31-3-2014 ಒಟ್ಟು ಮೊತ್ತ 1174872/-

2) -- 2-4-2014 ಮೊತ್ತ 95717/-

ಅಂದರೆ ಮೇಲೆ ತಿಳಿಸಿದ ಮೊತ್ತವು ಜನೇವರಿ-2014 ರಿಂದ ಮಾರ್ಚ-2014ರ ಅವಧಿಗೆ ತನ್ನ ವಿವಿಧ Client ಗಳಿಂದ ಪಡೆದ Service Tax ಮೊತ್ತವನ್ನು ಪಾವತಿಸಿದೆ ಎಂದಾಗುತ್ತದೆ. ಇದರಿಂದ ಈ ಸಂಸ್ಥೆಯು ತಾನು ಪಡೆದ ಮೊತ್ತವನ್ನು ಸಕಾಲಿಕವಾಗಿ ಅಂದರೆ ಮುಂದಿನ ತಿಂಗಳ 7ನೇ ತಾರೀಖಿನೊಳಗಾಗಿ ಸರ್ಕಾರದ ಸಂಬಂಧಿತ ಇಲಾಖೆಗೆ ಪಾವತಿಸದೇ 2-3 ತಿಂಗಳವರೆಗೆ ಸರ್ಕಾರಕ್ಕೆ ಭರಿಸದೇ ತನ್ನ ಹತ್ತಿರ ಅನಿಯಮಿತವಾಗಿ ಇಟ್ಟುಕೊಂಡಿದೆ ಎಂಬುದು ಕಂಡುಬರುತ್ತದೆ. ಮತ್ತು ಈ ಕ್ರಮ ಆಕ್ಷೇಪಾರ್ಹವಾಗಿರುತ್ತದೆ.

ಈ ಬಗ್ಗೆ ವಿಟಿಯು ಸಹ Agreementನಲ್ಲಿ ಈ ಬಗ್ಗೆ ಯಾವುದೇ ಷರತ್ತುಗಳನ್ನು ವಿಧಿಸದೇ ಇರುವುದು ಈ ಸಂಸ್ಥೆಗೆ ಅನುಚಿತವಾದ/ಅನಿಯಮಿತ ಆರ್ಥಿಕ ಸೌಲಭ್ಯಗಳನ್ನು ಒದಗಿಸಲು ಕಾರಣವಾಗಿರುತ್ತದೆ ಎಂದು ಭಾವಿಸಲಾಗುತ್ತದೆ. ಅದೂ ಅಲ್ಲದೆ ಬಹುತೇಕ ಪ್ರತಿ ತಿಂಗಳ ಮಾನವ ಸಂಪನ್ಮೂಲ ಬಿಲ್ಲುಗಳಿಗೆ ಸೇವಾ ತೆರಿಗೆ ಚಲನಗಳನ್ನು ಲಗತ್ತಿಸಲ್ಪಟ್ಟಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

3) ಇನ್ನು ಸದರ ಬಿಲ್ಲಿಗೆ ಆಯಾ ಅವಧಿಯ ಪ್ರದೇಶದಲ್ಲಿ (VTU/RO/UBDT) ಕೆಲಸ ಮಾಡಿದ ಹೊರಗುತ್ತಿಗೆ ನೌಕರರ ಹಾಜರಾತಿ ಪತ್ರಗಳನ್ನು ಲಗತ್ತಿಸಲಾಗಿದೆ. ಆದರೆ ಈ ಸಿಬ್ಬಂದಿ ವಾಸ್ತವಿಕವಾಗಿ ಅಲ್ಲಿ ಕೆಲಸ ಮಾಡಿದ ಬಗ್ಗೆ ಮತ್ತು ಆ ಸಿಬ್ಬಂದಿಯಿಂದ ನಿರ್ವಹಿಸಿದ ಕರ್ತವ್ಯಗಳ (Duty) ಸಂಖ್ಯೆಗಳ ಬಗ್ಗೆ ವಿಟಿಯುನ ಅಧಿಕೃತ ಪರಿಶೀಲನಾಧಿಕಾರಿಯ ಪರಿಶೀಲನೆಗಳ ಬಗ್ಗೆ ಹಾಜರಾತಿ ದಾಖಲೆಯಲ್ಲಿ ಯಾವುದೇ ರುಜು/ಟಿಪ್ಪಣಿಗಳು ಇರುವುದಿಲ್ಲ. ಅಥವಾ ಅಂತಹ ಅಧಿಕಾರಿಗಳ ಪ್ರಮಾಣ ಪತ್ರಗಳು ಕ್ಲೇಮುಗಳ ಮೇಲೆ ಇರುವುದಿಲ್ಲ. ಈ ದಾಖಲೆಗಳ ಅನುಪಸ್ಥಿತಿಯಲ್ಲಿ ಹೊರಗುತ್ತಿಗೆ ಸಂಸ್ಥೆಯಿಂದ ಮಾಡಿದ ಕ್ಲೇಮುಗಳು ವಾಸ್ತವಿಕ ನಿಖರ ಮತ್ತು ಸಮರ್ಪಕವಾಗಿ ಪರಿಶೀಲಿಸಿದ ಕ್ಲೇಮುಗಳೆಂದು ಧೃಢೀಕರಿಸಲಾಗುವುದಿಲ್ಲ. ಮತ್ತು ಬಹುತೇಕ ಸಂದರ್ಭಗಳಲ್ಲಿ ಈ ಹಾಜರಾತಿಗಳಿಗೆ ಸಂಬಂಧಿತ ಸಂಸ್ಥೆಯು, ಜವಾಬ್ದಾರ ಪ್ರತಿನಿಧಿ/ಅಧಿಕಾರಿಯ ಸಹಿ ಸಹ ಇರುವದಿಲ್ಲ ಎಂಬುದನ್ನು ಗಮನಿಸಲಾಗಿದೆ.

4) ಇನ್ನು ಹೊರಗುತ್ತಿಗೆಗಾಗಿ ನಿರ್ವಹಿಸಿದ ಒಪ್ಪಂದದಲ್ಲಿ ಯಾವಯಾವ ಸ್ಥಳ/ವಿಭಾಗಗಳಿಗೆ ಎಷ್ಟು ಜನ ಹೊರಗುತ್ತಿಗೆ ಸಿಬ್ಬಂದಿಯನ್ನು ನಿಯೋಜಿಸಬೇಕು. ಅಲ್ಲಿ ಎಷ್ಟು ಶಿಫ್ಟಗಳಲ್ಲಿ ಅವರು ಕೆಲಸ ನಿರ್ವಹಿಸಬೇಕು ಒಟ್ಟಾರೆ ಕನಿಷ್ಟ ಎಷ್ಟು ಕರ್ತವ್ಯದ ಅವಧಿಗಳನ್ನು ಸಂಬಂಧಿತ ಸಂಸ್ಥೆಯ ಸಿಬ್ಬಂದಿಯಿಂದ ನಿರ್ವಹಿಸಲ್ಪಡಬೇಕು ಎಂಬ ಬಗ್ಗೆ ನಿಖರ ವಿವರಗಳು ದಾಖಲಿಸಿರುವದಿಲ್ಲ ಮತ್ತು ಈ ಕರ್ತವ್ಯದ ನಿರ್ವಹಣೆ ಸಂದರ್ಭದಲ್ಲಿ ಉಂಟಾದ ಹಾನಿ/ಕಳವು/ಇತ್ಯಾದಿಗಳಿಗಾಗಿ ಒಪ್ಪಂದ ಷರತ್ತು ಸಂಖ್ಯೆ:10ರಲ್ಲಿ ತಿಳಿಸಲಾಗಿದೆಯಾದರೂ ಅದಕ್ಕಾಗಿ ನಿಖರ ಮೊತ್ತಗಳನ್ನು ಮತ್ತು ಅದರಿಂದಾಗಿ ವಿಧಿಸಬಹುದಾದ ದಂಡಗಳ ಬಗ್ಗೆ ಯಾವುದೇ ಮಾನದಂಡಗಳನ್ನು ಅನುಸರಿಸಿರುವದಿಲ್ಲ.

ಹೀಗಾಗಿ ವಿತಾವಿವಿಯಿಂದ ಮತ್ತು ಸಂಬಂಧಿತ ಸಂಸ್ಥೆಯಿಂದ ಈ ಬಗ್ಗೆ ನಿರ್ವಹಿಸಿದ ಒಪ್ಪಂದವು ಸರ್ವತೋಪರಿ ಸಮರ್ಪಕ ಮತ್ತು ನ್ಯಾಯಬದ್ಧ ಒಪ್ಪಂದ ಎಂದು ತಿಳಿಯಲು ಸಾಧ್ಯವಾಗುವುದಿಲ್ಲ.

5) ಇನ್ನು ಮೇಲೆ ತಿಳಿಸಿದ ವೋಚರನಲ್ಲಿ ಪಾವತಿಸಿದ ವಿವಿಧ ಬಿಲ್ಲುಗಳನ್ನು ಪರಿಶೀಲಿಸಲಾಗಿ, ಈ ಕೆಳಗಿನ ಬಿಲ್ಲುಗಳ ಅವಧಿ ಮತ್ತು ಪಾವತಿಸಿದ ತಿಂಗಳುಗಳಲ್ಲಿ ವ್ಯತ್ಯಾಸವಿದ್ದು ಉಂಟಾದ ವಿಳಂಬಕ್ಕೆ ಮತ್ತು ಪಾವತಿಯ ನೈಜತೆಯು ಪ್ರಶ್ನಾರ್ಹವಾಗಿರುತ್ತದೆ. ವಿವರ ಇಂತಿದೆ.

ಅದಸದ ಅನು	ತಿಂಗಳ ಅವಧಿ	ಹೊರಗುತ್ತಿಗೆ ನೀಡಿದ ಸಂಸ್ಥೆ ಹೆಸರು	ಬಿಲ್ಲಿನಲ್ಲಿ ಅಡಕವಾದ ಸಿಬ್ಬಂದಿಯ ಪದನಾಮ	ಬಿಲ್ಲಿನ Invoice ಸಂಖ್ಯೆ	ಬಿಲ್ಲಿನ ದಿನಾಂಕ	ಮೊತ್ತ	ಬಿಲ್ಲು ಪಾವತಿ ಮಾಡಿದ ಚೆಕ್ ನಂಬರ ಮತ್ತು ದಿನಾಂಕ	ಷರಾ
1	3/14	ಮೆ॥ ಶೋಭಾ ಎಂಟರ್ ಪ್ರೈಜೆಸ್ ಬೆಂಗಳೂರು	Ele.Helper /Plumber /Housekeeping Ro Bangalore.	619/ SE /2013-14	03-04-2015	82155	219330 10-04-2014	ಸದರ ಬಿಲ್ಲು ಝರಾಕ್ಸ್ ಕಾಪಿ ಇದ್ದು ಅದರಲ್ಲಿ ಕೆಲವು ತಿದ್ದುಪಡೆಗಳಾಗಿವೆ(ರೂ.4011/- ಮೊತ್ತ ಪಾವತಿಗೆ ಪರಿಗಣಿಸಲಾಗಿದೆ Housekeeping Personnel 21 days without attestation).77491+4011=82155
2	3/14	ಮೆ॥ ಶೋಭಾ ಎಂಟರ್ ಪ್ರೈಜೆಸ್ ಬೆಂಗಳೂರು	Jr.Asst/Lab Asst/ Class 4th (---do---)	620/SE/ 2013-14	3-4-2013	75463	---do ---	ಸದರ ಬಿಲ್ಲು dupicate ಬಿಲ್ಲಾಗಿದೆ.
3	3/14	ಮೆ॥ ಶೋಭಾ ಎಂಟರ್ ಪ್ರೈಜೆಸ್ ಬೆಂಗಳೂರು	Housekeeping (----do----)	620/SE/ 2013-14	1-4-2013	42670	-do-	---ಸದರ----
4	3/14	ಮೆ॥ ಶೋಭಾ ಎಂಟರ್ ಪ್ರೈಜೆಸ್ ಬೆಂಗಳೂರು	Housekeeping (----do----) –	620/SE/ 2013-14	1-4-2013	48175	-do-	---ಸದರ----
5	3/14	ಮೆ॥ ಶೋಭಾ ಎಂಟರ್ ಪ್ರೈಜೆಸ್ ಬೆಂಗಳೂರು	class 4th ನೌಕರರು (RO Bangalore)	623/SE/ 2013-14	1-4-2013	6882	-do-	----ಸದರ----
6	7/1/14 ರಿಂದ 31-3-14	ಮೆ॥ ಶೋಭಾ ಎಂಟರ್ ಪ್ರೈಜೆಸ್ ಬೆಂಗಳೂರು	Lab Asst	624/SE /2013-14	1-4-2013	26110	-do-	ಸದರ ಪಾವತಿಯ ಕುರಿತು ಶ್ರೀ.ಎಂ.ಪ್ರಸನ್ನಕುಮಾರ ಇವರನ್ನು SystemAdminstrator ಎಂದು Out Source ಮೇಲೆ ಪರಿಗಣಿಸಲು UO Noteನ್ನು Regr VTUರವರು ಸಂಖ್ಯೆVTU/DPAR/VT-08/2013-14/1103 ದಿ:7-11-2014ರಂದು ನೀಡಿದ್ದು 7-1-2014ರಿಂದಲೇಪಾವತಿಗೆ ಪರಿಗಣಿಸಲಾಗಿದೆ ಮತ್ತು ಕ್ಲೇಮನ್ನು 1-4-2013 ರಿಂದ ಪರಿಗಣಿಸಲಾಗಿದೆ.
7	3/14	ಮೆ॥ ಶೋಭಾ ಎಂಟರ್ ಪ್ರೈಜೆಸ್ ಬೆಂಗಳೂರು	Comp Operator/Tech A & B/Ele Helper/Plumber&House keeping 98 duties (UBDTEngg College Davangere)	625/SE/ 2013-14	1-4-2013	735039	-do-	
8	3/14	ಮೆ॥ ಶೋಭಾ ಎಂಟರ್ ಪ್ರೈಜೆಸ್ ಬೆಂಗಳೂರು	Class 4th Ap Director Net Work Tech (6 duties)	626/SE/ 2013-14	1-4-2013	48957	-do-	
9	2/13	ಮೆ॥ ಶೋಭಾ ಎಂಟರ್ ಪ್ರೈಜೆಸ್ ಬೆಂಗಳೂರು	-	629/SE/ 2013-14	1-4-2014	178710	-do-	

ಅಂದರೆ ಮೇಲೆ ತಿಳಿಸಿದ 7/2014 ರಿಂದ 31/3/2014 ರ ಅವಧಿಯ (ಕ್ರ.ಸಂ 6) ಹಾಗೂ 3/2014 ತಿಂಗಳುಗಳ ಅವಧಿಗೆ ಸಂಬಂಧಿಸಿದ ಕ್ಲೇಮುಗಳನ್ನು 2013-14ನೇ Invoiceಗಳನ್ನು ಉಪಯೋಗಿಸಿ ಸುಮಾರು ಒಂದು ವರ್ಷ ಮುಂಚಿತವಾಗಿ ಹೇಗೆ ಕ್ಲೇಮುಮಾಡಲಾಗಿದೆ ಎಂಬ ಬಗ್ಗೆ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವುದು.

ಹಾಗೆಯೇ ಫೆಬ್ರವರಿ-2013ರ ಅವಧಿಗೆ ಸಂಬಂಧಿಸಿದ ದಿನಗೂಲಿ ಕ್ಲೇಮಗಳನ್ನು ಸುಮಾರು ಒಂದು ವರ್ಷ ಎರಡು ತಿಂಗಳ ನಂತರ ಕ್ಲೇಮ ಮಾಡಿದ್ದನ್ನು ಯಾವ ಆಧಾರದ ಮೇಲೆ ಪಾವತಿಗೆ ಅಂಗೀಕರಿಸಲಾಗಿದೆ ಎಂಬ ಬಗ್ಗೆ ಮತ್ತು ಈ ಕ್ಲೇಮುಗಳು ಹಿಂದಿನ ಯಾವ ಬಿಲ್ಲುಗಳಡಿಯೂ ಕ್ಲೇಮು ಆಗಿಲ್ಲ ಎಂಬುದನ್ನು ಪ್ರಮಾಣೀಕರಿಸದೇ ಪಾವತಿಗೆ ಪರಿಗಣಿಸಲಾಗಿದೆ ಎಂಬ ಬಗ್ಗೆ ಪರಿಶೀಲಿಸದೇ ಪಾವತಿಸಿದ್ದು ಆಕ್ಷೇಪಾರ್ಹ.

ಕಾರಣ ಈ ಕುರಿತು ಉಂಟಾದ ಅವಧಿ ಕುರಿತಾದ ನ್ಯೂನತೆಗಳ ಬಗ್ಗೆ ಸೂಕ್ತ ಅನುಸರಣೆ ನೀಡುವುದು ಅವಶ್ಯ.

6) ಸದರ ಬಿಲ್ಲುಗಳು ಆರ್.ಇ. ವಿಭಾಗದಿಂದ ಪಾವತಿಗಾಗಿ ಹಣಕಾಸು ವಿಭಾಗಕ್ಕೆ ಸಲ್ಲಿಸಲ್ಪಟ್ಟಿದ್ದು ಈ ಬಿಲ್ಲುಗಳನ್ನು ಹಣಕಾಸು ಶಾಖೆಯಲ್ಲಿ ಪರಿಶೀಲಿಸಲು ಕೈಕೊಂಡ ಕ್ರಮದ ಬಗ್ಗೆ ಯಾವುದೇ ಟಿಪ್ಪಣೆಗಳಿಲ್ಲದೇ "ಬಿಲ್ಲುಗಳು ಒಪ್ಪಂದದ ಷರತ್ತುಗಳನ್ವಯ ಪರಿಶೀಲನೆಗೆ ಒಳಪಟ್ಟು ಕ್ರ.ಸಂ 1 ರಿಂದ 13ರಲ್ಲಿರುವ ಬಿಲ್ಲುಗಳ ಪಾವತಿಸುವ ಕುರಿತು ಪ್ರಸ್ತಾಪಿಸಬಹುದಾಗಿದೆ" ಎಂದು ದಾಖಲಿಸಿದ್ದು ಬಿಲ್ಲುಗಳನ್ನು ಸೂಕ್ತ ಪರಿಶೀಲನೆ ಆಗಿದೆ ಎಂಬುದಾಗಿ ದೃಢೀಕರಿಸಲು ಅವಶ್ಯವಾಗಿರುತ್ತದೆ ಎಂಬುದನ್ನು ಗಮನಿಸಬಹುದಾಗಿದೆ.

7) ಇನ್ನು ಸದರ ಬಿಲ್ಲಿನಲ್ಲಿಯ ಟಿಪ್ಪಣಿಯಲ್ಲಿ ಅಡಕವಾಗಿರದೇ, ಯಾವುದೇ ಸೂಕ್ತ ವಿವರ /ಟಿಪ್ಪಣೆಗಳನ್ನು ನೀಡದೇ ಮೆ॥ಶೋಭಾ ಎಂಟರ್ ಪ್ರೈಜಿಸ್ಸ್ ರವರ ಝುರಾಕ್ಸ್ ಪ್ರತಿಯ ಪತ್ರದಡಿಯಲ್ಲಿ (ಪತ್ರ ದಿನಾಂಕ: 04-04-2014ರಡಿ) ಅಸ್ಪಷ್ಟವಾಗಿ ಕ್ಲೇಮು ಮಾಡಿದ ಟೆಲಿಫೋನ್ ವೆಚ್ಚಗಳು ₹.50,000/-ಗಳನ್ನು ಪಾವತಿ ಮಾಡಲಾಗಿದೆ. ಮೇಲೆ ತಿಳಿಸಿದ ಪತ್ರದಲ್ಲಿ ₹.50,000/- ಮತ್ತು ₹.4023/-ಗಳನ್ನು ದಾಖಲಿಸಲಾಗಿದ್ದು ಅದರಲ್ಲಿ ₹.4023/-ಗಳನ್ನು ಬಿಟ್ಟು ₹.50,000/-ಗಳನ್ನು ಪಾವತಿಗೆ ಹೇಗೆ ಪರಿಗಣಿಸಲಾಗಿದೆ? ಇಂಥಹ ಪಾವತಿಗಳನ್ನು ನೀಡಲು ಕರಾರು ಪತ್ರ ಯಾವ ಕಂಡಿಕೆಗಳಡಿ ಈ ಸಂದಾಯಗಳನ್ನು ಒಪ್ಪಿ ಪಾವತಿಸಲಾಗಿದೆ ಎಂಬ ಬಗ್ಗೆ ಸ್ಪಷ್ಟನೆ ಅವಶ್ಯವಿದೆ.

ಮಂಜೂರಾದ ಹುದ್ದೆಗೆ ಎದುರಾಗಿ ಎಷ್ಟು ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂದು ನಿರ್ಣಯಿಸಲು ಸಾದ್ಯವಾಗಲಿಲ್ಲ ಆದ್ದರಿಂದ ಹೆಚ್ಚುವರಿ ನೇಮಕಾತಿ ಆಗಿಲ್ಲವೆಂದು ನಿರ್ಣಯಿಸಲು ಸಾದ್ಯವಾಗಲಿಲ್ಲ. ಈ ಎಲ್ಲ ಅಂಶಗಳನ್ನು ಅನುಲಕ್ಷಿಸಿ ಮೆ॥ಶೋಭಾ ಎಂಟರ್ ಪ್ರೈಜಿಸ್ ಬೆಂಗಳೂರು ಇವರ 2014 ಮಾರ್ಚತಿಂಗಳ ಕ್ಲೇಮುಗಳನ್ನು ಪಾವತಿಸಿದ್ದು ಆಕ್ಷೇಪಾರ್ಹವಾಗಿರುತ್ತದೆ.ಕಾರಣ ಈ ಕಂಡಿಕೆಗಳ ಕುರಿತು ಸೂಕ್ತ ಅನುಸರಣೆ ನೀಡುವವರೆಗೆ ₹.25,90,557/-ಗಳನ್ನು ಆಕ್ಷೇಪಣೆ ಅಡಿ ಇರಿಸಿದೆ ಮತ್ತು ₹.50,000/-ಗಳನ್ನು ವಸೂಲಿಗೆ ಸೂಚಿಸಿದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :18 ದಿನಾಂಕ: 05-01-2016 ನ್ನು ನೀಡಲಾಗಿತ್ತು ಆದರೆ ಯಾವುದೇ ಅನುಸರಣೆ ನೀಡಿರುವುದಿಲ್ಲ.

22) ವಿತಾವಿವಿ ಬೆಳಗಾವಿ ಮತ್ತು ಪ್ರಾದೇಶಿಕ ಕೇಂದ್ರಗಳ ಭದ್ರತಾ ಸೇವೆ ಕುರಿತು ಮೆ॥ವಿಜಡಮ್ ಸೆಕ್ಯೂರಿಟಿ ಸರ್ವಿಸಸ್ ಬೆಂಗಳೂರು ಇವರಿಗೆ 2014-15ನೇ ಸಾಲಿನಲ್ಲಿ ವಿಟಿಯುನಿಂದ ಪಾವತಿಸಿದ ಭದ್ರತಾ ಸೇವಾ ಬಿಲ್ಲುಗಳ ಕುರಿತು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ ಹಾಗೂ ಅಧೀನ ಪ್ರಾದೇಶಿಕ ಕೇಂದ್ರಗಳು ಹಾಗೂ ಯುಬಿಡಿಟಿ ಇಂಜಿನೀಯರಿಂಗ್ ಕಾಲೇಜು ದಾವಣಗೇರಿಗಳ ಭದ್ರತಾ ಸೇವೆಗಾಗಿ ಮೆ॥ವಿಜಡಮ್ ಸೆಕ್ಯೂರಿಟಿ ಸರ್ವಿಸಸ್ ಬೆಂಗಳೂರು ಇವರಿಗೆ ಗುತ್ತಿಗೆ ನೀಡಲಾಗಿದ್ದು, ಅಪ್ಪೈಕಿ **ಚೆಕ್ ಸಂ: 949468 ದಿ:10-4-2014** (ವೋಚರ ನಂ) ಮುಖಾಂತರ ಜನೇವರಿ-2014ನೇ ತಿಂಗಳ ಭದ್ರತಾ ಸೇವಾ ಬಿಲ್ಲು ₹.930648/-(ನಿವ್ವಳ ಮೊತ್ತ) ಹಾಗೂ ₹.19000/-ಗಳನ್ನು ಚೆಕ್ ನಂ: 219828/10-04-2014 ರನ್ವಯ ಆದಾಯ ತೆರಿಗೆ ಮೊತ್ತ ಪಾವತಿಸಿದ್ದು ಒಟ್ಟಾರೆ ₹.949648/-ಗಳನ್ನು ಸಂಬಂಧಿತ ಸಂಸ್ಥೆಗೆ ಪಾವತಿಸಲಾಗಿದೆ. ಈ ಕುರಿತು ಪರಿಶೀಲಿಸಲಾಗಿ ಈ ಕೆಳಗಿನ ನ್ಯೂನತೆಗಳು ಕಂಡುಬರುತ್ತವೆ.

1) ಸದರ ಭದ್ರತಾ ಸೇವೆ ಕುರಿತು 2013-14ನೇ ಸಾಲಿಗಾಗಿ ಮಾಡಿಕೊಂಡ ಒಪ್ಪಂದದ (ಅಗ್ರಿಮೆಂಟ್) ದಾಖಲೆಗಳನ್ನು(ಮೂಲ ಪ್ರತಿ) ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವದಿಲ್ಲ. ಈಗ ನೀಡಿದ ಒಪ್ಪಂದ ಪತ್ರವು ಒಪ್ಪಂದ ಪತ್ರ ಸಂ: VTU/IRC No18/13-14 D : 28-12-2013 ಎಂದಿದ್ದು, ಒಪ್ಪಂದ ಮಾಡಿಕೊಂಡ ದಿನಾಂಕ:28-12-2013ನ್ನು ತಿದ್ದಿ ದಿನಾಂಕ:19-03-2014 ಎಂದು ತಿದ್ದಿ ಪರಿಷ್ಕರಿಸಲಾಗಿದೆ. ಹಾಗೆಯೇ ಗುತ್ತಿಗೆ ಜಾರಿಗೆ ಬರುವ ದಿನಾಂಕ ಮತ್ತು ಗುತ್ತಿಗೆ ಅವಧಿಗಳನ್ನು ತಿದ್ದಿ ಪರಿಷ್ಕರಿಸಲಾಗಿದೆ. ಹಾಗೆ ತಿದ್ದುಪಡೆ ಮಾಡಿದ್ದಕ್ಕೆ ತಿದ್ದುಪಡೆ ಹಸ್ತಾಕ್ಷರ (ಸಂಕ್ಷಿಪ್ತ) ಇದೆ ಆದರೂ ಅದಕ್ಕೆ ಮೊಹರು ಇರುವದಿಲ್ಲ ಮತ್ತು ಆ ಪುಟದ ಅಂತ್ಯದಲ್ಲಿ ತಿದ್ದುಪಡಿ ಮಾಡಿದ ಸಂಖ್ಯೆಗಳನ್ನು ನಮೂದಿಸಿರುವದಿಲ್ಲ. ಕಾರಣ 2013-14ನೇ ಸಾಲಿನ ಒಪ್ಪಂದ ಪತ್ರದ ದಾಖಲೆ ಒದಗಿಸುವುದು ಅವಶ್ಯ.

2) ಸದರ ಪಾವತಿಯು ಒಟ್ಟು ಆರು ಬಿಲ್ಲುಗಳನ್ನು ಒಳಗೊಂಡಿದ್ದು ಈ ಎಲ್ಲ ಬಿಲ್ಲುಗಳಿಗೆ No of duites ಕುರಿತು duty ಸಂಖ್ಯೆಗಳನ್ನು ದಾಖಲಿಸಲಾಗಿದೆ. ಆದರೆ ಈ ಕರ್ತವ್ಯಗಳು ಯಾವ ಯಾವ ಸ್ಥಾನಗಳಲ್ಲಿ ನಿಯೋಜಿಸಲಾಗಿತ್ತು ಅದು ಒಪ್ಪಂದದಲ್ಲಿ ತಿಳಿಸಿದ ಕರ್ತವ್ಯಗಳ ಸಂಖ್ಯೆಗಳಿಗೆ ಸಮರ್ಪಕವಾಗಿತ್ತೆ? (2014-15ರ ಒಪ್ಪಂದಕ್ಕೆ ಇಂತಹ ಯಾವ ವಿವರಗಳಿಲ್ಲ) ಮತ್ತು ಅದು ಸಂಬಂಧಿತ ವಿಟಿಯು ಪರಿಶೀಲನಾಧಿಕಾರಿಯ ದೃಢೀಕರಣದೊಂದಿಗೆ ನೀಡಿ ಕರ್ತವ್ಯದ ಸಂಖ್ಯೆಗಳೇ ಎಂಬ ಬಗ್ಗೆ ಬಿಲ್ಲಿನ ಮೇಲೆ ಯಾವುದೇ ವಿವರಗಳಿಲ್ಲ. ಮತ್ತು ಬಿಲ್ಲಿನ ಮೇಲೆ ದಾಖಲಿಸಿದ ದೃಢೀಕರಣವು ಅಂತಹ ವಿವರಗಳನ್ನೊಳಗೊಂಡಿಲ್ಲ. ಇದರಿಂದ ಸಂಸ್ಥೆಯು ಒದಗಿಸಿದ ಭದ್ರತಾ ಸೇವೆಯು ಸಮರ್ಪಕ ಎಂದು ದೃಢೀಕರಿಸಲಾಗುವುದಿಲ್ಲ,

3) ಇನ್ನು ಬಿಲ್ಲಿಗೆ ಲಗತ್ತಿಸಿದ ಭದ್ರತಾ ಸಂಸ್ಥೆಯ ನಿಯೋಜಿತ ಸಿಬ್ಬಂದಿಗೆ ನೀಡಿದ (ಸಂದಾಯ ಮಾಡಿದ) ಕೂಲಿ(wages) ವಿವರಗಳನ್ನು ಪರಿಶೀಲಿಸಿದಾಗ ತಿಳಿಸಿದ ಕರ್ತವ್ಯದ ಅವಧಿಗಳಿಗೆ ಅನುಗುಣವಾಗಿ ಪಾವತಿಸಿದ ಮೊತ್ತ ಮತ್ತು ವಾಸ್ತವಿಕವಾಗಿ ಬಿಲ್ಲಿನಲ್ಲಿ ಕ್ಲೇಮ ಮಾಡಿದ ಮೊತ್ತಗಳಲ್ಲಿ ವ್ಯತ್ಯಾಸವಿರುತ್ತದೆ.

ವಿವರ ಲಗತ್ತಿಸಿದ ಅನುಬಂಧದಲ್ಲಿರುತ್ತದೆ. ಸದರ ವಿವರಗಳಿಗೂ ಸಹ ಸಂಸ್ಥೆಯ ಜವಾಬ್ದಾರ ಅಧಿಕಾರಿಯ ರುಜು ಇರುವುದಿಲ್ಲ. ಇಂತಹ ಈ ವ್ಯತ್ಯಾಸ ₹.104986/-ಗಳಾಗಿರುತ್ತವೆ. ವಿವರ ಈ ಕೆಳಗಿನಂತಿದೆ.

ಅನಂ	ಭದ್ರತಾ ಸೇವೆ ಸಲ್ಲಿಸಿದ ಸಂಸ್ಥೆ ಹೆಸರು	ಬಿಲ್ಲಿನ ಅವಧಿ	ಬಿಲ್ಲು ಸಂಖ್ಯೆ & ದಿನಾಂಕ	ಬಿಲ್ಲಿನಲ್ಲಿ ತೋರಿಸಿದ ಡ್ಯೂಟಿ ಸಂಖ್ಯೆಗಳು	ವಿವಿಯಿಂದ ಪಾವತಿಸಿದ ಗ್ರಾಸ್ ಹಣ	ಡ್ಯೂಟಿ ಸಂಖ್ಯೆ	ಪ್ರತ್ಯಕ್ಷವಾಗಿ ಸಂಸ್ಥೆಯಿಂದ ಪಾವತಿಸಿದ ಮೊತ್ತದ ವಿವರ ಗ್ರಾಸ್ ಮೊತ್ತ	ವ್ಯತ್ಯಾಸ	
								ಡ್ಯೂಟಿ ಸಂಖ್ಯೆ	ಮೊತ್ತ
1	wisdom security service Bangalore	1/2014	wss/00930 1/2/2014	1488	329568	1488	278400	-	51168
2	-----do----	ಸದರ	946-1/2/2014	496	109856	493	92239	-	17617
3	-----do----	1/2/2014	wss 00939 1-2-2014	124	27646	124	23200	-	4446
4	-----do----	ಸದರ	wss 00938 1-2-2014	496	109856	496	92800	-	17056
5	-----do----	26/12/2013 ರಿಂದ 25/01/2014	wss 00882 27-1-2014	-	82392	434	81200	434	1192
6	-----do----	1/1/2014 ರಿಂದ 31/1/2014	wss 00937 1-2-2014	31	137320	649	123813	618	13507
				TOTAL	796638		691652		104986

4) ಬಿಲ್ಲಿಗೆ ಕೇವಲ ಇ.ಎಸ್.ಐ ಮತ್ತು ಪಿ.ಎಫ್ ವಂತಿಗೆಗಳ 12/2013ರ ಸಂದಾಯದ ಚಲನ ವಿವರಗಳಿದ್ದು, ಬಿಲ್ಲಿನಲ್ಲಿ ಕ್ಲೇಮ ಮಾಡಿ ಸಂದಾಯ ಪಡೆದ ಸೇವಾ ತೆರಿಗೆ ಮೊತ್ತದ ಚಲನ ವಿವರಗಳು ಲಗತ್ತಿಸಲ್ಪಟ್ಟಿಲ್ಲ. ಇದರಿಂದಾಗಿ ಸದರ ಸಂಸ್ಥೆಯು ಸಕಾಲಿಕವಾಗಿ ಸೇವಾ ತೆರಿಗೆ ಮೊತ್ತವನ್ನು ಸರಕಾರಕ್ಕೆ ಭರಿಸಿದೆ ಎಂದು ದೃಢಿಕರಿಸಲಾಗದು! ಕಾರಣ ಈ ನ್ಯೂನತೆಗೆ ಸೂಕ್ತ ಅನುಸರಣೆಯನ್ನು ನೀಡುವುದು ಅವಶ್ಯಕ.

5) ಸದರ ಸಂಸ್ಥೆಯ 2013-14ನೇ ಸಾಲಿನ ಭದ್ರತಾ ಸೇವಾ ಗುತ್ತಿಗೆ ಕುರಿತು ನಿಗದಿಯಾದ ಟೆಂಡರ ಮೊತ್ತಕ್ಕೆ 5% ಭದ್ರತಾ ಠೇವಣಿಯನ್ನು ಇರಿಸಿದ ಕುರಿತ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವುದು.

6) ಭದ್ರತಾ ಸಿಬ್ಬಂದಿಗೆ ಪಾವತಿಯಾದ ವೇತನವು ಸಂಬಂಧಿತ ಗಾರ್ಡಗಳ ಬ್ಯಾಂಕ ಖಾತೆಗೆ ಜಮೆಯಾದ ಬಗ್ಗೆ ಬ್ಯಾಂಕಿನ ದೃಢೀಕರಣ ಇರುವ ತಃಖ್ತೆಯು ಸಹ ಬಿಲ್ಲಿಗೆ ಲಗತ್ತಿಸಿಲ್ಲ. ಇದರಿಂದಾಗಿ ಭದ್ರತಾ ಸಿಬ್ಬಂದಿಯು ಸಮರ್ಪಕವಾಗಿ ವೇತನ ಪಾವತಿಯನ್ನು ಸಂಬಂಧಿತ ಸಂಸ್ಥೆ ಮಾಡಿದೆ ಎಂದು ದೃಢೀಕರಿಸಲು ಸಾಧ್ಯವಾಗುವುದಿಲ್ಲ. ಮತ್ತು ಇದು ಅತ್ಯಂತ ಆಕ್ಷೇಪಾರ್ಹ ವಿಷಯವಾಗಿದೆ. ಕಾರಣ ಮೇಲಿನ ಎಲ್ಲ ಅಂಶಗಳನ್ನು ಅನುಲಕ್ಷಿಸಿ ಭದ್ರತಾ ಸೇವೆ ಕುರಿತು ಸಂಬಂಧಿತ ಸಂಸ್ಥೆ ಮತ್ತು ವಿಟಿಯುನಿಂದ ಕೈಗೊಂಡ ಕ್ರಮ ಈ ಕುರಿತು ಅಳವಡಿಸಿದ ಪದ್ಧತಿಗಳು , ಸಮರ್ಪಕವೆನಿಸುವುದಿಲ್ಲ. ಈ ಕುರಿತು ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :20 ದಿನಾಂಕ: 07-01-2016 ನ್ನು ನೀಡಲಾಗಿತ್ತು, ಅಪೂರ್ಣ ಮತ್ತು ಅಸಮರ್ಪಕ

ಅನುಸರಣೆ ನೀಡಿದ್ದರಿಂದ ಅಂಗೀಕರಿಸಲಾಗಲಿಲ್ಲ. ಆದರಿಂದ ₹.949648/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಮತ್ತು ₹.104986/-ಗಳನ್ನು ವಸೂಲಿಗೆ ಸೂಚಿಸಲಾಗಿದೆ.

23) ವಿತಾವಿವಿಯ ವಿವಿಧ ಪರೀಕ್ಷಕ ಭೋಧಕ ಸಿಬ್ಬಂದಿಗೆ ಸಂಭಾವನೆ ಪ್ರಯಾಣ ಭತ್ಯೆಯನ್ನು ನೀಡಿರುವ ಬಗ್ಗೆ.

ವಿ.ತಾ.ವಿ.ವಿಯ ವಿವಿಧ ಪರೀಕ್ಷಾ ಕಾರ್ಯದ ನಿಮಿತ್ಯ ಕೆಲಸ ನಿರ್ವಹಿಸಿದ ಬೋಧಕ ಸಿಬ್ಬಂದಿಗೆ **ಚೆಕ್** ನಂ 219523 ದಿ: 30-4-2014 ₹.749756/-ಚೆಕ್ ರನ್ವಯ ₹.7,36,822/- (ನಿವ್ವಳ ಮೊತ್ತ) ಗಳನ್ನು ಪಾವತಿಸಿದ್ದು ಅದರಲ್ಲಿ ₹.12,934/-ಗಳ ಆದಾಯ ತೆರಿಗೆಯನ್ನು ಕಟಾವಣೆಮಾಡಿ ಈ ಮೊತ್ತಗಳನ್ನು ಪಾವತಿಸಲಾಗಿದೆ, ಆದ್ದರಿಂದ ಈ ವೋಚರನ ಒಟ್ಟು ಮೊತ್ತ (Gross Amt) ₹.7,49,756/- ಗಳಾಗಿರುತ್ತವೆ(ಪ್ರತಿ ಲಗತ್ತಿಸಿದೆ). ಈ ಬಗ್ಗೆ ಪರಿಶೀಲಿಸಲಾಗಿ ಈಕೆಳಗಿನ ಅಂಶಗಳು/ನ್ಯೂನತೆಗಳು ಕಂಡುಬರುತ್ತವೆ.

1) ಸದರ ವೋಚರಿನಲ್ಲಿ ಪಾವತಿಗೆ ಪ್ರಸ್ತಾಪಿಸಿದ ಸಿಬ್ಬಂದಿಗಳಿಗೆ ಕ್ರ.ಸಂ.ಯನ್ನು ಹಾಕಿರುವುದಿಲ್ಲ, ಮತ್ತು ಕ್ಲೇಮನ ಪ್ರಾರಂಭಿಕ ವಿವರಗಳು ವೋಚರದ ತಃಖ್ತೆ (Table)ಗೆ ಕಾಲಂನ ವಿವರಗಳು ಸಮರ್ಪಕವಿರುವದಿಲ್ಲ.(ಸಿಬ್ಬಂದಿಯ ಪದನಾಮ, ಸದರ ಕಾರ್ಯದ ಅವಧಿ, ಕಾಲೇಜಿನ ವಿವರ ಇತ್ಯಾದಿ)

2) ಸದರ ವೋಚರನ ಮೊತ್ತ ಯಾವ ಲೆಕ್ಕ ಶೀರ್ಷಿಕೆಗೆ ಸಂಬಂಧಿಸಿದ್ದು ಎಂಬ ಬಗ್ಗೆ ವಿವರಗಳಿಲ್ಲ. ಇದರಿಂದಾಗಿ ಯಾವ ಬಜೆಟ್ ಶೀರ್ಷಿಕೆ ಅಡಿ ಈ ವೆಚ್ಚಗಳನ್ನು ವರ್ಗೀಕರಿಸಲಾಗಿದೆ & ಇದಕ್ಕಾಗಿ ಬಜೆಟ್‌ನಲ್ಲಿಯ ಅವಕಾಶ (Provision) ಎಷ್ಟು? ಎಂಬ ವಿವರಗಳಿರುವುದಿಲ್ಲ.

3) ಇನ್ನು ಕಾರವಾರ & ಹಾವೇರಿಗೆ ಕ್ರಮವಾಗಿ A1 Suppliers Tours & Travels & Abhishek Tours & Travels ಸಂಸ್ಥೆಗೆ ₹.60270/- & ₹.8920/- ಗಳನ್ನು ಪಾವತಿಸಲಾಗಿದ್ದು, ಈ ಮೊತ್ತಗಳನ್ನು ಯಾವ ಸಿಬ್ಬಂದಿಗಾಗಿ ನೀಡಿದ ಮೊತ್ತ ಎಂಬ ಬಗ್ಗೆ ವಿವರಗಳಿಲ್ಲ. ಈ ಮೊತ್ತಗಳನ್ನು ಸಂಬಂಧಿತ ಟ್ರಾವೆಲ್ ಸಂಸ್ಥೆಯು ನೀಡಿದ ಬಿಲ್ಲಿನ ಆಧಾರದ ಮೇಲೆ ನೀಡದೇ ಈ ಬೋಧಕ ಸಿಬ್ಬಂದಿ ಸಂಭಾವನಾ ಬಿಲ್ಲಿನಡಿ ನೀಡಿದ್ದು ಸಮರ್ಪಕವಲ್ಲ & ಈ ಕುರಿತ ಸಂಬಂಧಿತ ಟ್ರಾವೆಲ್ ಸಂಸ್ಥೆ ಬಿಲ್ಲುಗಳನ್ನು ವೋಚರಗೆ ಲಗತ್ತಿಸಿಲ್ಲ.

4) ಇನ್ನು ಸದರ ತಃಖ್ತೆಯ ಟ್ರಾವೆಲ್ ಕಾಲಂ ಅಡಿಯ ಒಟ್ಟು ಮೊತ್ತ ₹.3,29,190/- ಎಂದು ಕ್ಲೇಮ ಮಾಡಲಾಗಿದ್ದು, ಆ ಕಾಲಂ ಅಡಿಯಲ್ಲಿ ₹.60,270/-& ₹.8920/-ಗಳನ್ನು ಮಾತ್ರ ಪಟ್ಟಿಯಲ್ಲಿದ್ದು ಒಟ್ಟು ಮೊತ್ತ ₹.69,190/- ಗಳಾಗಿರುತ್ತವೆ. ಇದರಿಂದಾಗಿ ₹.2,60,000/-ಗಳನ್ನು ಹೆಚ್ಚಿಗೆ ಕ್ಲೇಮ ಮಾಡಿದಂತಾಗಿದೆ ಈ ಅನಿಯಮಿತ ಹೆಚ್ಚುವರಿ ಪಾವತಿಗೆ ಕಾರಣಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಕೋರಿದೆ.

5) ಇನ್ನು ಸದರ ವೋಚರಿನಲ್ಲಿ ಕಟಾಯಿಸಿದ ₹.12,934/- ಆದಾಯ ತೆರಿಗೆ ಕಟಾವಣೆಯ ವಿವರಗಳನ್ನು ಲೆಕ್ಕಪರಿಶೋಧನೆಗೆ ಚಲನ್ ಸಹಿತ ಒದಗಿಸಲು ಕೋರಿದೆ.

6) ಈ ಕ್ಲೇಮಗಳ ಕುರಿತಾಗಿ ನೀಡಬೇಕಾದ ಪ್ರಮಾಣ ಪತ್ರಗಳನ್ನು ಬಿಲ್ಲಿನ ಮೇಲೆ ದಾಖಲಿಸಿರುವುದಿಲ್ಲ.

ಕಾರಣ ಸದರ ಬಿಲ್ಲಿನಡಿಯ ವೆಚ್ಚವನ್ನು ನಿಯಮಬದ್ಧವಾಗಿ ಪಾವತಿಸಲಾಗಿದೆ ಎಂದು ಧೃಢೀಕರಿಸಲಾಗದು.

ಕಾರಣ ಈ ಬಗ್ಗೆ ಸೂಕ್ತ ಅನುಸರಣೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವದು, ಅದುವರೆಗೂ ₹.4,89,756/-ಗಳನ್ನು ಆಕ್ಷೇಪಣೆ ಅಡಿ & ₹.2,60,000/-ಗಳನ್ನು ವಸೂಲಿಗೆ ಸೂಚಿಸಿ ಇರಿಸಲಾಗಿದೆ. ವಿವರವನ್ನು **ಅನುಬಂಧ-11ರಲ್ಲಿ** ತೋರಿಸಲಾಗಿದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :50 ದಿನಾಂಕ: 02-02-2016ನ್ನು ನೀಡಲಾಗಿತ್ತು ನೀಡಿದ ಅನುಸರಣೆಯು ಸಮರ್ಪಕವಾಗಿರುವುದಿಲ್ಲ.

24) ವಿತಾವಿವಿಯಿಂದ ಸ್ನಾತಕೋತ್ತರ ಕೋರ್ಸಗಳಿಗೆ QIP ಅಡಿಯಲ್ಲಿ ಬೋಧಕ ಮತ್ತು ಬೊಧಕೇತರ ಸಿಬ್ಬಂದಿಯ ಸಂಭಾವನೆಯನ್ನು (Project work remuneration) ಆಯಾ ಕಾಲೇಜುಗಳ ಮೂಲಕ ಪಾವತಿಸಿದ ಬಗ್ಗೆ.

ವಿ.ತಾ.ವಿ.ವಿ ಬೆಳಗಾವಿಯಲ್ಲಿ 2014-15ನೇ ಸಾಲದಲ್ಲಿ QIP ಯೋಜನೆ ಅಡಿಯಲ್ಲಿ Project work Remuneration ಎಂದು ವಿವಿಧ ಕಾಲೇಜುಗಳು ಬೋಧಕ & ಬೋಧಕೇತರ ಸಿಬ್ಬಂದಿಗೆ ಸಂಭಾವನೆ ನೀಡಲಾಗಿದೆ.

ವಿವರ ಈ ಕೆಳಗಿನಂತಿದೆ.

ಕ್ರ.ಸಂ	ಕಾಲೇಜು ಸಂಖ್ಯೆ	ಕೋರ್ಸ ಹೆಸರು & ಸೆಮಿಸ್ಟರ ಸಂಖ್ಯೆ	ವರ್ಷ	ನೀಡಿದ ಮೊತ್ತ	ಚೆಕ್ ಸಂಖ್ಯೆ & ದಿನಾಂಕ
1	Principal SJCIT ಚಿಕ್ಕಬಳ್ಳಾಪುರ	M.Tech VI Sem	2013-14	62,100=00	238502 25-3-2015
2	Principal BEC ಬಾಗಲಕೋಟೆ	M.Tech VI Sem	2013-14	78,300=00	238503 25-3-2015
3	Principal RVCE	M.Tech VI Sem	2013-14	52,200=00	238504 25-3-2015
4	Principal BMSCE ಬೆಂಗಳೂರು	M.Tech VI Sem	2013-14	57,060=00	238505 25-3-2015
5	Principal NMAMIT Nitte	M.Tech VI Sem	2013-14	51,750=00	238506 25-3-2015
6	ಮೇಲಿನ ಕಾಲೇಜುಗಳ ಸಂಭಾವನೆಗೆ ಪ್ರತಿಯಾದ TDS	M.Tech VI Sem	2013-14	33,490=00	238507 25-3-2015
			TDS	3,34,900=00	

ಸದರ ಸಂಭಾವನೆಗಳ ಪೈಕಿ ಕ್ರ.ಸಂ.1, 3, 4 & 5 ರ ಸಂದಾಯವನ್ನು VTU ನ U.O. Note ಗಳ ಮೇಲೆ ನಿರ್ವಹಿಸಲಾಗಿದೆ. ಅಂದರೆ ಸಂಬಂಧಿತ ಕಾಲೇಜುಗಳಿಂದ ಸಲ್ಲಿಸಿದ ಬಿಲ್ಲು/ಪ್ರಸ್ತಾವನೆಗಳ ಮೇಲೆ (ಕ್ರ.ಸಂ ಪ್ರಸ್ತಾವನೆಯೂ ಇಲ್ಲ) ಸಂಭಾವನೆಗಾಗಿ ಚೆಕ್‌ಗಳನ್ನು ಡ್ರಾ ಮಾಡಿದ್ದು ಆಕ್ಷೇಪಾರ್ಹ.

ಇನ್ನು ಈ QIP ಯೋಜನೆ ಕುರಿತು ಪ್ರಸ್ತಾವನೆ (ವಿ.ತಾ.ವಿ.ವಿ ಯಿಂದ ಪ್ರೊಜೆಕ್ಟ ಕೆಲಸಗಳ ಕುರಿತು ಬೋಧಕ & ಬೋಧಕೇತರ ಸಿಬ್ಬಂದಿಗೆ ಸಂಭಾವನೆ ಪಾವತಿ ಕುರಿತು) ವಿ.ತಾ.ವಿ.ವಿ ಯಿಂದ ಕೈಕೊಂಡ ವಿವಿಧ ಸಭೆಗಳಲ್ಲಿನ ಚರ್ಚೆ & ಅದರ ಆಧಾರದ ಮೇಲಿನ ನಡುವಳಿಗಳು & ಮಾನ್ಯ ಕುಲಾಧಿಪತಿಗಳ ಅನುಶಾಸನಗಳ ವಿವರವನ್ನು ಅನುಸರಣೆ ಮೂಲಕ ಲೆಕ್ಕಪರಿಶೋಧನೆಗೆ ಒದಗಿಸಲು ಕೋರಿದೆ.

ಈ ವಿಧಗಳ ಅನುಪಸ್ಥಿತಿಯಲ್ಲಿ QIP ಕುರಿತು ವಿ.ತಾ.ವಿ.ವಿಯಿಂದ ವಹಿಸಿದ ಕ್ರಮ ಊರ್ಜಿತವೆನಿಸುವುದಿಲ್ಲ. ಕಾರಣ ಈ ಕುರಿತು ಸೂಕ್ತ ಅನುಸರಣೆ ನೀಡಲು ಕೋರಿದೆ. ಅದುವರೆಗೆ ₹.3,34,900/-ಗಳನ್ನು ಆಕ್ಷೇಪಣೆಯಲ್ಲಿ ಇರಿಸಲಾಗಿದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :71 ದಿನಾಂಕ: 19-02-2016 ನ್ನು ನೀಡಲಾಗಿತ್ತು, ಆದರೆ ಯಾವುದೇ ಅನುಸರಣೆ ನೀಡಿರುವುದಿಲ್ಲ.

25) ವಿತಾವಿವಿಯ 15ನೇ ಉತ್ಸವ ದಿನಾಂಕ:28-3-2015 ರಿಂದ 31-3-2015ರವರೆಗೆ ಗೌರವಧನ ಪಾವತಿಸಿರುವ ಕುರಿತು.

ವಿತಾವಿವಿಯ 15ನೇ ಉತ್ಸವ ಚೆಕ್ ಸಂ: 238613 ರಿಂದ 238649 ದಿನಾಂಕ:28-3-2015 ರಿಂದ 31-3-2015ರ ವರೆಗೆ ನಡೆದಿದ್ದು ಅದರಲ್ಲಿ ಭಾಗವಹಿಸಿದ ಅತಿಥಿ ನ್ಯಾಯಾಧೀಶರುಗಳಿಗೆ ಹಾಗೂ ಸಿಬ್ಬಂದಿಗಳಿಗೆ ಗೌರವಧನವನ್ನು ಪಾವತಿಸಲಾಗಿದೆ. ಪಾವತಿಸಿದ ವೋಚರ್‌ನ್ನು ಪರಿಶೀಲಿಸಲಾಗಿ ಈ ಕೆಳಗಿನ ಅಂಶಗಳು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತವೆ.

1) ಇವೆಂಟ್ ದಿನಾಂಕದ ಪ್ರಕಾರ ಚೆಕ್‌ಗಳನ್ನು ಬರೆದು ವಿತರಿಸದೇ ಒಂದೇ ದಿನದಲ್ಲಿ ಅಂದರೆ ದಿ:28-3-2015 ರಂದೇ ಎಲ್ಲಾ ಚೆಕ್‌ಗಳನ್ನು ಬರೆದು ನೀಡಲಾಗಿದೆ. ಇದರಿಂದಾಗಿ ದಿ:29-3-2015 ರಿಂದ 31-3-2015ರ ವರೆಗೆ ನಡೆದ ಕಾರ್ಯಕ್ರಮಗಳಿಗೆ ಸಂಬಂಧಿತ ಗೌರವಧನವನ್ನು ಅಂದಿನ ದಿನದಂದೇ ಚೆಕ್‌ಗಳನ್ನು ಬರೆದು ವಿತರಿಸಿರುವದಿಲ್ಲ. ಇದರಿಂದಾಗಿ ಅವಧಿ ಪೂರ್ವ ಕಾರ್ಯಕ್ರಮಗಳಿಗೆ ಮುಂಚಿತವಾಗಿ ಚೆಕ್‌ಗಳನ್ನು ನೀಡಿರುವ ಔಚಿತ್ಯವನ್ನು ಲೆಕ್ಕಪರಿಶೋಧನೆಗೆ ತಿಳಿಸುವುದು.(ಝುರಾಕ್ಸ್ ಪ್ರತಿ ಲಗತ್ತಿಸಿದೆ.)
2) ಮೊತ್ತಗಳನ್ನು ಸ್ವೀಕರಿಸಿದ ಸ್ವೀಕೃತಿ ರಸೀದಿಗಳು ಹಾಗೂ ಚೆಕ್‌ನ್ನು ಸ್ವೀಕರಿಸಿದ ಕುರಿತು ಸ್ವೀಕೃತಿ ಪತ್ರಗಳು ಇತ್ಯಾದಿ ಕಡತದಲ್ಲಿ ಲಭ್ಯವಿರುವದಿಲ್ಲ. ಇದರಿಂದಾಗಿ ಸದರಿ ಪಾವತಿಗಳನ್ನು ಅಧಿಕೃತ ಪಾವತಿಗಳೆಂದು ದೃಢೀಕರಿಸಲು ಸಾಧ್ಯವಾಗಿರುವದಿಲ್ಲ.
3) ಸದರಿ ಪಾವತಿಗೆ ಮಂಜೂರಾತಿ ಆದೇಶದ ಪ್ರತಿ, ಸಭಾ ನಡುವಳಿಗಳು ಇತ್ಯಾದಿ ಇವು ಯಾವುವು ದಾಖಲೆಗಳು ಲಭ್ಯವಾಗಲಿಲ್ಲ.

ಆದ್ದರಿಂದ ಮೇಲಿನ ಅಂಶಗಳಿಗೆ ಕಂಡಿಕೆವಾರು ಅನುಸರಣೆಯನ್ನು ಲೆಕ್ಕಪರಿಶೋಧನೆಗೆ ನೀಡುವುದು. ಅಲ್ಲಿಯವರೆಗೂ ಪಾವತಿಸಿದ ಒಟ್ಟು ಮೊತ್ತ ₹.332800/-ಗಳನ್ನು ಆಕ್ಷೇಪಣೆಯಲ್ಲಿರಿಸಲಾಗಿದೆ ಈ ವಿಚಾರಣೆ ಪತ್ರದಲ್ಲಿ ತಿಳಿಸಿರುವ ವಿವರಗಳು ಕೇವಲ ಉದಾಹರಣೆಯಾಗಿದ್ದು 2014-15ರಲ್ಲಿ ಪಾವತಿಸಿದ ಇತರೆ ಇಂತಹ

ಪ್ರಕರಣಗಳಿಗೂ ಇದು ಅನ್ವಯವಾಗುತ್ತಿದ್ದು ಅವುಗಳನ್ನು ಸಹ ಪರಿಶೀಲಿಸಿ ಕ್ರಮ ಬದ್ಧಗೊಳಿಸಿಕೊಳ್ಳಲು ತಿಳಿಸಲಾಗಿದೆ. ವಿವರವನ್ನು **ಅನುಬಂಧ-12**ರಲ್ಲಿ ತೋರಿಸಲಾಗಿದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :91 ದಿನಾಂಕ: 27-02-2016 ನ್ನು ನೀಡಲಾಗಿತ್ತು ಆದರೆ ಯಾವುದೇ ಅನುಸರಣೆ ನೀಡಿರುವುದಿಲ್ಲ.

26) ಜಿನೇಶ ಉಪಾಧ್ಯ ಆರ್.ಆರ್. ಟೂರ್ಸ್ ಮತ್ತು ಟ್ರಾವೆಲ್ಸ್ ಬೆಳಗಾವಿ ಇವರಿಗೆ ₹.60,219/-ಗಳನ್ನು ಪಾವತಿಸಿದ ಕುರಿತು.

ಮೇಲಿನ ವಿಷಯದನ್ವಯ ಡಾ.ಡಿ.ಎಚ್.ರಾವ್, ಆರ್.ಎಮ್.ವಸಗಮ, ಎಲ್.ವಾಸುದೇವಮೂರ್ತಿ ಹಾಗೂ ಆರ್.ಶಿವಕುಮಾರ ಇವರುಗಳಿಗೆ ಎಲ್.ಆಯ್.ಸಿ.ಭೇಟಿ ಬೋರ್ಡ ಆಫ್ ಸ್ಟಡೀಸ್, ಇತರೆ ಸಭೆಗಳು ಮತ್ತು 113ನೇ ಕಾರ್ಯಕಾರಿ ಪರಿಷತ್ತಗೆ ಹಾಜರಾಗುವ ಕುರಿತಾಗಿ ವಿಮಾನ, ರೇಲ್ವೆ ಟಿಕೇಟ್ ಬುಕ್ಕಿಂಗ್‌ಗಾಗಿ ₹.60,219/-ಗಳನ್ನು ಜಿನೇಶ ಉಪಾದ್ಯೆ ಆರ್ ಆರ್ ಟೂರ್ಸ & ಟ್ರಾವೆಲ್ಸ್ ಬೆಳಗಾವಿ ಇವರಿಗೆ **ಚೆಕ್ ನಂ: 220056** ಪಾವತಿಸಿದೆ. ವಿವರ ಈ ಕೆಳಗಿನಂತೆ ಇರುತ್ತದೆ.

1	ಬಿಲ್ಲ.ನಂ 0065 ದಿ.4-6-14	9,109/-	2-5-14& 5-5-14	ಡಾ.ಡಿ.ಎಚ್.ರಾವ್ ಎಲ್.ಆಯ್.ಸಿ. ಬೋರ್ಡ ಆಫ್ ಸ್ಟಡೀಸ್, & ಇತರೆ ಸಭೆಗಳಿಗಾಗಿ	U.O.Note VTU/PS/14-15/2096/Date-13-6-14.
2	ಬಿಲ್ಲ.ನಂ 0075 ದಿ.4-6-14	16,191/-	3-6-14& 4-6-14	ಡಾ.ಡಿ.ಎಚ್.ರಾವ್ ಎಲ್.ಆಯ್.ಸಿ. ಬೋರ್ಡ ಆಫ್ ಸ್ಟಡೀಸ್, & ಇತರೆ ಸಭೆಗಳಿಗಾಗಿ	U.O.Note VTU/PS/14-15/2096/Date-13-6-14.
3	ಬಿಲ್ಲ.ನಂ 0070 ದಿ.4-6-14	13,490/-	19-5-14& 20-5-14	ಆರ್.ಎಮ್.ವಸಗಮ	U.O.Note VTU/PS/14-15/2091/Date-13-6-14
4	ಬಿಲ್ಲ.ನಂ 0071 ದಿ.4-6-14	13,490/-	19-5-14& 20-5-14	ಎಲ್.ವಾಸುದೇವಮೂರ್ತಿ	U.O.Note VTU/PS/14-15/2091/Date-13-6-14.
5	ಬಿಲ್ಲ.ನಂ 0078 ದಿ.4-6-14	7,939/-	20-5-14	ಆರ್.ಶಿವಕುಮಾರ	U.O.Note VTU/PS/14-15/2091/Date-13-6-14.
	ಒಟ್ಟು	**60,219/-**			

ಈ ಮೇಲಿನ ವಿವರಿಸಿದ ಐದೂ ಬಿಲ್ಲುಗಳನ್ನು ಪರಿಶೀಲಿಸಲಾಗಿ ಬಿಲ್ಲುಗಳಿಗೆ ನಿಯಮಾನುಸಾರ ಪ್ರಮಾಣ ಪತ್ರಗಳನ್ನು ನಮೂದಿಸಿ ಸಂಬಂಧಿಸಿದ ಪ್ರಾಧಿಕಾರದಿಂದ ರುಜು ಸಹಿತ ದೃಢೀಕರಿಸಿರುವದಿಲ್ಲ. ಇದು ಅವಶ್ಯವಿರುತ್ತದೆ. ಸದರಿ ಬಿಲ್ಲುಗಳ ಪಾವತಿಗೆ ಅಂಗೀಕರಿಸುವ ಪೂರ್ವದಲ್ಲಿ ಪರಿಶೀಲಿಸಿ ಅಂಗೀಕರಿಸಿರುವದಿಲ್ಲ. ಆದ್ದರಿಂದ ಪಾವತಿಸಿದ ಮೊತ್ತ ₹.60,219/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :52 ದಿನಾಂಕ: 03-02-2016 ನ್ನು ನೀಡಲಾಗಿತ್ತು ಆದರೆ ಯಾವುದೇ ಅನುಸರಣೆ ನೀಡಿರುವುದಿಲ್ಲ.

27) ಪರೀಕ್ಷಾ ಕಾರ್ಯಗಳಿಗೆ ನಿಯೋಜಿಸಿದ ಭೋದಕ ಸಿಬ್ಬಂದಿಗಳಿಗೆ ಅನಿಯಮಿತವಾಗಿ ಪ್ರಯಾಣ ಭತ್ಯೆ ಬಿಲ್ಲುಗಳನ್ನು ಪಾವತಿಸಿದ ಬಗ್ಗೆ.

ವಿ.ತಾ.ವಿ.ವಿ ಬೆಳಗಾವಿಯಲ್ಲಿ 2014-15ರಲ್ಲಿ ಪರೀಕ್ಷಾ ಕಾರ್ಯಗಳಿಗಾಗಿ ಭೋಧಕ ಸಿಬ್ಬಂದಿಯನ್ನು ನಿಯೋಜಿಸಿದ್ದು ಅವರು ಕ್ಲೇಮು ಮಾಡಿದ & ಮೇ 2014ರಲ್ಲಿ ಸಂದಾಯ ಮಾಡಿದ ಪ್ರವಾಸ ಭತ್ಯೆ ಬಿಲ್ಲು ಲೆಕ್ಕಪರಿಶೋಧನೆಯಲ್ಲಿ ಪರಶಿಲಿಸಲಾಗಿದ್ದು ಅವುಗಳಲ್ಲಿ ಕೆಲವನ್ನು ಉದಾಹರಣೆಗಾಗಿ ತೆಗೆದುಕೊಳ್ಳಲಾಗಿದೆ. ಇಂತಹ ಪ್ರವಾಸ ಭತ್ಯೆ ಬಿಲ್ಲುಗಳ ಒಟ್ಟು ಮೊತ್ತ ₹.65,828-00ಗಳಾಗಿರುತ್ತವೆ.

ಇವುಗಳ ಪರಿಶೀಲನೆಯಲ್ಲಿ ಈ ಕೆಳಗಿನ ನ್ಯೂನತೆಗಳು ಕಂಡು ಬಂದಿವೆ.

1) ಪ್ರಯಾಣ ಭತ್ಯೆ ಬಿಲ್ಲುಗಳಿಗೆ ಲೆಕ್ಕಶೀರ್ಷಿಕೆಗಳನ್ನು ದಾಖಲಿಸಿರುವದಿಲ್ಲ. ಇದರಿಂದಾಗಿ ನಿಖರವಾಗಿ ವೆಚ್ಚಗಳ ವರ್ಗೀಕರಣ ನಿರ್ವಹಿಸಲು ಸಾದ್ಯವಾಗುವದಿಲ್ಲ.

2) ಬಹುತೇಕ ಬಿಲ್ಲುಗಳಲ್ಲಿ ಕ್ಲೇಮುಗಳ ಹಂತವಾರು ಪರಿಶೀಲನೆ ಮಾಡಿದ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರಗಳ ಅಂದರೆ ವಿಷಯ ನಿರ್ವಾಹಕರು, ಅಧೀಕ್ಷಕರು, ಇನ್ನಿತರ ಡಿ.ಪಿ.ಎ.ಆರ್ ಶಾಖೆಯ ಅಧಿಕಾರಿ/ಸಿಬ್ಬಂದಿಗಳ ರುಜು ಇರುವದಿಲ್ಲ. ಮತ್ತು ಹಣಕಾಸು ಶಾಖೆಯ ಪ್ರಾಧಿಕಾರಿಗಳ ರುಜು ಇರುವದಿಲ್ಲ.

3) ಇನ್ನು ಬಿಲ್ಲುಗಳನ್ನು ಪರಿಶೀಲಿಸಲಾಗಿ ಅನುಬಂಧದಲ್ಲಿ ತಿಳಿಸಿರುವಂತಹ ಪ್ರಕರಣಗಳಲ್ಲಿ ನಮೂದಿಸಿದ ಪ್ರಯಾಣದ ವಿವರಗಳನ್ನು ಪರಿಶೀಲಿಸಿದಾಗ ಅವು ವಾಸ್ತವಿಕವಾಗಿ ಪ್ರಯಾಣ ಮಾಡಿದ ಬಿಲ್ಲುಗಳೆಂದು ದೃಡೀಕರಿಸಲು ಸಾದ್ಯವಾಗುವದಿಲ್ಲ. ಏಕೆಂದರೆ ನಿರ್ವಹಿಸಿದ ಪ್ರಯಾಣವು ರೈಲು ಮಾರ್ಗದ ಮುಖಾಂತರ ಪ್ರಯಾಣಿಸಿದೆ ಎಂದು ತಿಳಿಸಿ ರೈಲು ನಿಲ್ದಾಣ ಇಲ್ಲದ ಊರಿಗೆ ಹೋದದ್ದಾಗಿ ದಾಖಲಿಸಲಾಗಿದೆ ಮತ್ತು ರೈಲಿನ ದರಗಳನ್ನು ಕ್ಲೇಮು ಮಾಡಿ ಸಲ್ಲಿಸಿದ್ದಾಗಿರುತ್ತವೆ. ಹೀಗಾಗಿ ಈ ಪ್ರಯಾಣಗಳು ಅಧಿಕೃತ ಪ್ರಯಾಣಗಳೆಂದೆನಿಸುವದಿಲ್ಲ. ಆದ್ದರಿಂದ ಸಮರ್ಪಕವಾದ ವಿವಿಧ ಹಂತಗಳಲ್ಲಿ ಈ ಬಿಲ್ಲುಗಳನ್ನು ಪರಿಶೀಲನೆ ಮಾಡದೇ ಪಾವತಿಸಿದ ಬಿಲ್ಲುಗಳಾಗಿವೆ ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಈ ಪ್ರಯಾಣ ಭತ್ಯೆ ಬಿಲ್ಲುಗಳ ಪಾವತಿ ಮೊತ್ತಗಳನ್ನು ವಸೂಲಿ ಮಾಡುವದು ಸಮರ್ಪಕವೆನಿಸುವದು.

ಈ ಪ್ರಕರಣಗಳನ್ನು ಉದಾಹರಣೆಗಾಗಿ ಮಾತ್ರ ತೆಗೆದುಕೊಂಡಿದ್ದು ಅಂತಹ ಉಳಿದೆಲ್ಲ ಪ್ರಕರಣಗಳಿಗೂ ಈ ಅಂಶಗಳು ಅನ್ವಯವಾಗುತ್ತವೆ ಎಂದು ಈ ಮೂಲಕ ತಿಳಿಸಲಾಗಿದೆ.

ಕಾರಣ ಮೇಲೆ ತಿಳಿಸಿದ ಪ್ರಕರಣಗಳಲ್ಲಿ ಕ್ಲೇಮು ಮಾಡಿದ ಪ್ರವಾಸ ಭತ್ಯೆ ಬಿಲ್ಲುಗಳನ್ನು ಸಮರ್ಪಕವಾಗಿ ಪರಿಶೀಲಿಸಲಿಲ್ಲವೇಕೆ? ಎಂಬ ಕುರಿತು ಸೂಕ್ತ ಅನುಸರಣೆಯನ್ನು ಲೆಕ್ಕಪರಿಶೋಧನೆಗೆ ನೀಡುವದು ಅದುವರೆಗೆ ₹.65,828/-ಗಳನ್ನು ವಸೂಲಿಗೆ ಸೂಚಿಸಲಾಗಿದೆ. ವಿವರವನ್ನು **ಅನುಬಂಧ-13ರಲ್ಲಿ** ತೋರಿಸಲಾಗಿದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :57 ದಿನಾಂಕ: 04-02-2016 ನ್ನು ನೀಡಲಾಗಿತ್ತು ಆದರೆ ಯಾವುದೇ ಅನುಸರಣೆ ನೀಡಿರುವುದಿಲ್ಲ.

28) ವಿತಾವಿ ಬೆಳಗಾವಿಯಲ್ಲಿ ವಿಮಾನ ಯಾನ ಟಿಕೇಟ್ ರದ್ಧತಿ ಕುರಿತು ಅನಿಯಮಿತವಾಗಿ ಹಣ ಸಂದಾಯ ಮಾಡಿದ ಬಗ್ಗೆ.

ವಿ.ತಾ.ವಿ.ವಿಯ ಬೆಳಗಾವಿಯಲ್ಲಿ ಈ ಕೆಳಗೆ ತಿಳಿಸಿದ ಚೆಕ್‌ಗಳ ಪ್ರಕಾರ ವಿವಿಧ ಅಧಿಕಾರಿಗಳ ವಿಮಾನ ಯಾನ ಟಿಕೆಟ್ ರದ್ದತಿ ಕುರಿತ ಶುಲ್ಕಗಳನ್ನು ವಿವಿಧ ಟ್ರಾವಲ್ ಏಜೆನ್ಸಿಗಳಿಗೆ ಪಾವತಿಸಿದ ಬಗ್ಗೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ವಿವರ ಈ ಕೆಳಗಿನಂತಿದೆ.

1) Cheque No.219485/29-4-2014-Rs.3660/- Dr.A.N.N.Murthy ರವರಿಗೆ ಸಂಬಧಿಸಿದ ಏರ್ ಟಿಕೇಟ ರದ್ದತಿ ಕುರಿತು–M/s. Classic Tower & Avels Bengaluru.

2) Cheque No. 219492/29-4-2014-Rs.46824/- i) Dr. D.H.Rao Dean. ii) Dr. K.E. Prakash Registrar-M/s.J.P.Travel Junction. ಸದರ ಕ್ಲೇಮುಗಳನ್ನು ಪರಿಶೀಲಿಸಿದಾಗ ಈ ಕೆಳಗಿನ ನ್ಯೂನತೆಗಳು ಕಂಡುಬರುತ್ತವೆ.

1) ಮೇಲಿನ ತಿಳಿಸಿದ ಕ್ಲೇಮುಗಳ ಪೈಕಿ ಕ್ರ.ಸಂ 1ರ ಕ್ಲೇಮುಗೆ ಕೇವಲ ಮೇ//ಕ್ಲಾಸಿಕ್ ಟೂರ್ಸ್ & ಟ್ರಾವಲ್ ಬೆಂಗಳೂರು ಇವರ ಬಿಲ್ಲನ್ನು ಮಾತ್ರ ಲಗತ್ತಿಸಲಾಗಿದ್ದು, ವಿಮಾನ ಯಾನ ಟಿಕೇಟ & ವಿಮಾನ ಯಾನ ಟಿಕೇಟ ರದ್ದತಿಯ ವಿಮಾನ ಯಾನ ಸಂಸ್ಥೆಯ ಟಿಕೇಟ್ ಲಗತ್ತಿಸಿರುದಿಲ್ಲ ಇದರಿಂದಾಗಿ ಟಿಕೇಟ ಮೊತ್ತ & ರದ್ದತಿಯಿಂದಾಗಿ ಟಿಕೇಟನಲ್ಲಿ ಕಡಿತವಾದ ಮೊತ್ತಗಳ ಬಗ್ಗೆ ತಿಳಿದುಬರುವುದಿಲ್ಲ.

2) ಕ್ರ.ಸ.2 ರ ಕ್ಲೇಮುಗೆ, ಟಿಕೇಟ ರದ್ದತಿಯ ವಿಮಾನ ಯಾನ ಸಂಸ್ಥೆ ಟಿಕೇಟ ರದ್ದತಿ ದಾಖಲೆಯು ಲಗತ್ತಿಸಲಾಗಿದೆ ಆದರೆ ಮೂಲ ಏರ್ ಟಿಕೇಟ ಲಗತ್ತಿಸಿಲ್ಲ.

ಅದೂ ಅಲ್ಲದೇ ಪ್ರಮುಖವಾದ ಅಂಶವೆಂದರೆ ವಿಮಾನ ಯಾನ ಟಿಕೇಟ ರದ್ದತಿಯಿಂದಾಗಿ ವಿಮಾನ ಯಾನ ಸಂಸ್ಥೆ ಟಿಕೆಟಿನಲ್ಲಿ ಕಟಾವಣೆ ಮಾಡಿದ ನಂತರ ವಾಪಸ್ ಮರುಪವತಿಸಿದ ಮೊತ್ತ ಎಷ್ಟು? ಅದನ್ನು ವಿ.ತಾ.ವಿ.ವಿ ನಿಧಿಗೆ ಭರಿಸಲಾಗಿದೆಯೇ? ಎಂಬ ವಿವರಗಳು ವೋಚರನೊಂದಿಗೆ ಲಭ್ಯವಿರುವುದಿಲ್ಲ. ಒಂದು ವೇಳೆ ನೀಡಿಲ್ಲವೊಂದಾದಲ್ಲಿ ಮರುಪಾವತಿಸಿದ ಹಣ। ಜಮೆ ಆಗದೇ ಟ್ರಾವಲ್ ಏಜನ್ಸಿಯ ವಿಮಾನ ಯಾನ ಟಿಕೇಟ ರದ್ದತಿಯ. ಕ್ಲೇಮುಗಳ ಪಾವತಿಗೆ, ಹೇಗೆ ಅನುಮೋದಿಸಲಾಯಿತು? ಎಂಬ ಬಗ್ಗೆ ಸೂಕ್ತ ಅನುಸರಣೆ ಅವಶ್ಯವಿದೆ.

ಕಾರಣ ಮೇಲಿನ ಅಂಶಗಳ ಬಗ್ಗೆ ಪರಿಶೀಲಿಸಿ ಸೂಕ್ತ ಅನುಸರಣೆಯನ್ನು ಲೆಕ್ಕಪರಿಶೋಧನೆಗೆ ಒದಗಿಸುವದು ಅದುವರೆಗೆ ₹3660/– + ₹.46824/– = 50484/–ಗಳನ್ನು ಆಕ್ಷೇಪಣೆಯಲ್ಲಿರಿಸಲಾಗಿದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :43 ದಿನಾಂಕ: 23–01–2016 ನ್ನು ನೀಡಲಾಗಿತ್ತು ಆದರೆ ಯಾವುದೇ ಅನುಸರಣೆ ನೀಡಿರುವುದಿಲ್ಲ.

29) ಪ್ರೊ. ಡಿ.ಪಿ. ಅಗರವಾಲ್ ಗೌರವಾನ್ವಿತ ಅಧ್ಯಕ್ಷರು ಯು.ಪಿ.ಎಸ್.ಸಿ ನವದೆಹಲಿ ಇವರಿಗೆ ಪಾವತಿಸಿದ ಪ್ರವಾಸ ಭತ್ಯೇ ಕುರಿತು.

ಮೇಲಿನ ವಿಷಯದನ್ವಯ ಪ್ರೋ.ಡಿ.ಪಿ.ಅಗರವಾಲ ಗೌರವಾನ್ವಿತ ಅಧ್ಯಕ್ಷರು ಯು.ಪಿ.ಎಸ್.ಸಿ ನವದೆಹಲಿ ಇವರಿಗೆ ದಿನಾಂಕ 20-6-2014ರಂದು ವಿ.ತಾ.ವಿ.ವಿ ಬೆಳಗಾವಿಗೆ ಮಾನ್ಯ ಉಪಕುಲಪತಿಗಳ ಆಯ್ಕೆಯ ಸಲುವಾಗಿ ಆಯ್ಕೆ ಕಮೀಟಿ ಸಭೆಗೆ ಹಾಜರಾಗಲು ಪ್ರವಾಸ ಭತ್ಯೆಯನ್ನು **ಚೆಕ್ ನಂ 232007 ದಿ: 26-6-2014** ₹.79,427/- ಗಳನ್ನು ಪಾವತಿಸಲಾಗಿದೆ ಪರಿಶೀಲಿಸಲಾಗಿ ಈ ಕೆಳಗಿನ ಅಂಶಗಳು ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದಿರುತ್ತವೆ ವಿವರ ಈ ಕೆಳಗಿನಂತಿದೆ.

1) ಪ್ರವಾಸ ಭತ್ಯೆ ಬಿಲ್ಲಿಗೆ ಸದ್ರಿಯವರ ರುಜುವನ್ನು ಪಡೆದಿರುವದಿಲ್ಲ.

2) ಚೆಕ್/ಡಿಡಿ ತಲುಪಿದ್ದಕ್ಕೆ ಸ್ವೀಕೃತಿಯನ್ನು ಪಡೆದಿರುವದಿಲ್ಲ.

3) ಸಕ್ಷಮ ಪ್ರಾಧಿಕಾರದಿಂದ ಸದರ ಪ್ರವಾಸ ವೆಚ್ಚ ನಿರ್ವಹಿಸಲು ಮಂಜೂರಾತಿಯನ್ನು ಪಡೆದಿರುವದಿಲ್ಲ. ಇದು ಅವಶ್ಯವಿರುತ್ತದೆ.

ಮೇಲಿನ ಅಂಶಗಳಿಗೆ ಅನುಸರಣಾ ವರದಿಯನ್ನು ಲೆಕ್ಕ ಪರಿಶೋಧನೆಗೆ ನೀಡುವದು. ಅಲ್ಲಿಯವರೆಗೆ ಪಾವತಿಸಿದ ಮೊತ್ತ ₹.79,427/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :67 ದಿನಾಂಕ: 10-02-2016ನ್ನು ನೀಡಲಾಗಿತ್ತು ಆದರೆ ಯಾವುದೇ ಅನುಸರಣೆ ನೀಡಿರುವುದಿಲ್ಲ.

30) Shri. C. Kalaivanan Chinnaswamy ಇವರಿಗೆ ₹. 8613/-ಗಳನ್ನು ಪ್ರಯಾಣ ಬಿಲ್ಲಿನಲ್ಲಿ ಹೆಚ್ಚುವರಿಯಾಗಿ ಪಾವತಿಸಿರುವದು.

ಮೇಲ್ಕಾಣಿಸಿದ ವಿಷಯದನ್ವಯ ಕುರಿತಂತೆ Shri G Kalaivanan Chinnaswamy ಇವರು ದಿನಾಂಕ 19 may ರಂದು ಬೆಂಗಳೂರಿನಿಂದ ಬೆಳಗಾವಿಗೆ ಆಗಮಿಸಿ ಹಾಗೂ ದಿನಾಂಕ 21 may 2014 ರಂದು ಬೆಳಗಾವಿಯಿಂದ ಬೆಂಗಳೂರಿಗೆ ನಿರ್ಗಮಿಸಿರುವರು. ಸದರಿಯವರು Spicejet ವಿಮಾನಯಾನದ ಮೂಲಕ ಆಗಮನ ಹಾಗೂ ನಿರ್ಗಮನ Confirmation Number Q55Gss ಟಿಕೇಟ್‌ಗಾಗಿ ರೂ.8693 ಗಳನ್ನು ನೀಡಿರುವರು. ಹಾಗೂ ದಿನಾಂಕ 19 ಮತ್ತು 2 may 2014 ಎರಡು ದಿನಗಳ ಭತ್ಯೆ ₹.1500*2=₹.3000/- ಹೀಗೆ ಸದರಿ ಅವರಿಗೆ ಒಟ್ಟು ₹.11693/- ಗಳನ್ನು ವಿಮಾನಯಾನ ಹಾಗೂ 2 ದಿನಗಳ ಭತ್ಯೆ ಸೇರಿ ಪಾವತಿಸಬೇಕಾಗಿತ್ತು ಆದರೆ VTU ಧನಾದೇಶ ಸಂ: 232067 ದಿನಾಂಕ 1/7/2014 ರಂದು ₹. 20386/- ಗಳನ್ನು ಸಂದಾಯ ಮಾಡಿರುವರು. ಇದರಿಂದಾಗಿ Shri Kalaivanan Chinnaswamy ಇವರಿಗೆ ₹.8693/- ಗಳು ಹೆಚ್ಚುವರಿಯಾಗಿ ಪಾವತಿಸಲಾಗಿದೆ. ಆದರಿಂದ ಹೆಚ್ಚುವರಿ ಪಾವತಿಸಿರುವ ₹.8693/-ಗಳನ್ನು Shri Kalaivanan Chinnaswamy ಇವರಿಂದ ತ್ವರಿತವಾಗಿ ವಸೂಲಾತಿ ಮಾಡಿ VTU ನಿಧಿಗೆ ₹.8693/- ಗಳು ಜಮೆ ಆಗಿರುವ

ಬಗ್ಗೆ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರ ಪಡಿಸುವ ಅವಧಿವರೆಗೆ ಸದರಿ ಮೊತ್ತವನ್ನು ವಸೂಲಾತಿಗೆ ಇಡಲಾಗಿದೆ ಎಂದು ತಮ್ಮ ಗಮನಕ್ಕೆ ಈ ಮೂಲಕ ತರಬಯಸಲಾಗಿದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :72 ದಿನಾಂಕ: 17-02-2016 ನ್ನು ನೀಡಲಾಗಿತ್ತು ಆದರೆ ಯಾವುದೇ ಅನುಸರಣೆ ನೀಡಿರುವುದಿಲ್ಲ.

31) ಮೆ॥ ಫ್ರೆಂಡ್ಸ್ ಕಾರ್ ರೆಂಟಲ್ಸ್ ಬೆಂಗಳೂರು ಇವರಿಗೆ ವಾಹನಗಳನ್ನು ವಿತಾವಿವಿಯ ಕಾರ್ಯಗಳಗಾಗಿ ಉಪಯೋಗಿಸಿದ್ದಕ್ಕೆ ಪಾವತಿಸಿರುವ ಕುರಿತು.

ವಿ.ತಾ.ವಿ.ವಿಯ ಸಭೆ /ತರಬೇತಿ, ಪರೀಕ್ಷೆಯ ವಿಚಕ್ಷಣಾದಳದ ಅಧಿಕಾರಿಗಳಿಗಾಗಿ ವಿವಿಧ ಮಾರ್ಗಗಳಲ್ಲಿ ಹೋಗುವ ಕುರಿತಾಗಿ ನಿಯೋಜಿಸಿದ್ದಕ್ಕೆ **1. ಚೆಕ್ ಸಂ: 232705 ದಿ: 20-8-2014 ₹.640815/- 2. ಚೆಕ್ ಸಂ: 232706 ದಿ: 20-8-2014 ₹.13080/-**₹.6,53,895/-ಗಳನ್ನು ಪಾವತಿಸಲಾಗಿದೆ. ಸದರಿ ಬಿಲ್ಲು ಪರಿಶೀಲಿಸಲಾಗಿ ಈ ಕೆಳಗಿನ ಅಂಶಗಳು ಕಂಡುಬಂದಿರುತ್ತವೆ.

1) ಇಂತಹ ಪೂರ್ವ ನಿರ್ಧಾರಿತ ಕಾರ್ಯಕ್ರಮಗಳಿಗಾಗಿ ವಾಹನಗಳು ಅವಶ್ಯವಿರುವದನ್ನು ತಿಳಿದುಕೊಂಡಿರುವಾಗ ಈ ಕಾರ್ಯದ ಅನುಷ್ಠಾನಕ್ಕಾಗಿ ಕೆ.ಟಿ.ಪಿ.ಪಿ ನಿಯಮಗಳನ್ವಯ ಟೆಂಡರ್ ಕರೆಯದೇ ನೇರವಾಗಿ ಈ ಸಂದಾಯಗಳನ್ನು ಮಾಡಿದ್ದು ಆಕ್ಷೇಪಾರ್ಹವಾಗಿರುತ್ತದೆ.

2) ಇದಲ್ಲದೇ ಈ ಪ್ರಕ್ರಿಯೆಗಳು ವಿ.ವಿಯಲ್ಲಿ ನಿರಂತರವಾಗಿ ನಡೆಯುತ್ತಿರುವದರಿಂದ ವಾರ್ಷಿಕವಾಗಿ ಈ ವೆಚ್ಚಗಳ ಬಾಬತ್ತು ಟೆಂಡರ್ ಕರೆದು ದರಗಳನ್ನು ಇಡೀ ವರ್ಷದ ಅವಧಿಗೆ ನಿಗದೀಕರಿಸಿದ್ದಲ್ಲಿ ಪ್ರತಿ ಸಲ ವಾಹನ ಸಂಸ್ಥೆಯೊಂದಿಗೆ ದರಗಳ ನಿಗದೀಕರಣಕ್ಕೆ ಕ್ರಮ ವಹಿಸುವದನ್ನು ನಿವಾರಿಸಬಹುದಿತ್ತು. ಆದರೆ ಅಂತಹ ಕ್ರಮ ಕೈಗೊಳ್ಳದೇ ಇರುವದರಿಂದ ಕೆ.ಟಿ.ಪಿ.ಪಿ ನಿಯಮಗಳ ಉಲ್ಲಂಘನೆಯಾಗುತ್ತಿದೆ.

3) ಸದರ ವಾಹನಗಳನ್ನು ಬಾಡಿಗೆಯ ಮೇಲೆ ತೆಗೆದುಕೊಳ್ಳುವಾಗ ಸಂಬಂಧಿತ ಸಂಸ್ಥೆಗೆ ಕಾರ್ಯಾದೇಶ ನೀಡದೇ ದರಗಳ ನೀಷ್ಕರ್ಷೆ ಆಗದೇ ವಾಹನಗಳನ್ನು ವಿ.ವಿ. ಸಂಸ್ಥೆಗೆ ತೆಗೆದುಕೊಳ್ಳುವ ಕ್ರಮ ನ್ಯೂನಾತ್ಮಕವಾಗುತ್ತದೆ. ಮತ್ತು ಸದರ ವೆಚ್ಚಗಳು ಸೇವಾ ವಲಯಗಳಿಗೆ ಸೇರಿರುವದರಿಂದ ಈ ಬಾಬತ್ತು ಕ್ಲೇಮು ಮಾಡಿದ ಮೊತ್ತಕ್ಕೆ ಸೇವಾ ತೆರಿಗೆಯನ್ನು ಆಕರಿಸದೇ ಹಣ ಪಾವತಿಸಿದ್ದು ಅನಿಯಮಿತ ಕ್ರಮವಾಗಿರುತ್ತದೆ. ಮತ್ತು ಆಕ್ಷೇಪಾರ್ಹವಾಗುತ್ತದೆ.ಸದರ ಸೇವಾ ತೆರಿಗೆ ಮೊತ್ತ ₹.80,821/-ಗಳಾಗುತ್ತಿದ್ದು ಅವುಗಳನ್ನು ಸಂಬಂಧಿತರಿಂದ ಪಡೆದು ಸೇವಾತೆರಿಗೆ ಇಲಾಖೆಗೆ ಇರಸಾಲು ಮಾಡಲು ಸೂಚಿಸಿದೆ. ಕಾರಣ ಈ ಬಗ್ಗೆ ಸೂಕ್ತ ಅನುಸರಣೆ ನೀಡಲು ಸೂಚಿಸಲಾಗಿತ್ತು.

ವಾಹನ ಪೂರೈಕೆದಾರರು ಸೇವಾ ತೆರಿಗೆಯನ್ನು ಸರಕಾರಕ್ಕೆ ಭರಿಸಿದ ಬಗ್ಗೆ ವಿವರಗಳು ಲೆಕ್ಕಪರಿಶೋಧನೆಗೆ ನೀಡುವುದು ಮತ್ತು ಸೇವಾ ತೆರಿಗೆಯನ್ನು ಸೇವೆ ಒದಗಿಸುವವರೆಗೆ ಸರಕಾರಕ್ಕೆ ಭರಿಸಬೇಕೆಂಬ ಕುರಿತು ನಿಯಮಗಳಲ್ಲಿ ಅಧಿಕಾರ ಇದೆ ಎಂಬ ಬಗ್ಗೆ ತಿಳಿಸುವುದು. ಅಲ್ಲಿಯವರೆಗೆ ₹.80,821/-ಗಳನ್ನು ವಸೂಲಾತಿಗೆ ಸೂಚಿಸಿದೆ ಹಾಗೂ ₹.5,73,074/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :79 ದಿನಾಂಕ: 18-02-2016 ನ್ನು ನೀಡಲಾಗಿತ್ತು ಆದರೆ ಯಾವುದೇ ಅನುಸರಣೆ ನೀಡಿರುವುದಿಲ್ಲ.

32) ಸ್ಕ್ಯಾನಿಂಗ್ ಸೆಂಟರಗೆ ಮೇ/ಜೂನ್/ಜುಲೈ-2014ರ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಸಾಗಿಸಿದ ವಿವಿಧ ತಾಂತ್ರಿಕ ಮಹಾವಿದ್ಯಾಲಯಗಳ ವಾಹನದ ಹಾಗೂ ಸ್ಥಳೀಯ ಭತ್ಯೆ ಖರ್ಚಿನ ವಿವರದ ಬಿಲ್ಲುಗಳನ್ನು ಪಾವತಿ ಮಾಡಿರುವ ಕುರಿತು.

ಮೇಲಿನ ವಿಷಯದನ್ವಯ ವಾಹನಗಳ ಇಂಧನ ಹಾಗೂ ಸ್ಥಳೀಯ ಭತ್ತೆ ಖರ್ಚಿನ ವಿವರದ ಬಿಲ್ಲುಗಳನ್ನು ಲೆಕ್ಕ ಪರಿಶೋಧನೆಯಲ್ಲಿ ಪರಿಶೀಲಿಸಲಾಗಿದೆ. ಈ ಕೆಳಗಿನ ಅಂಶಗಳು ಕಂಡು ಬಂದಿದ್ದು ಈ ಕೆಳಗಿನಂತೆ ಇವೆ.

1. ಒಟ್ಟು 11 ಕಾಲೇಜುಗಳ ಪರೀಕ್ಷಾ ವಿಭಾಗಕ್ಕೆ ಸ್ಥಳೀಯ ಭತ್ತೆ ₹.66,910 ಹಾಗೂ ಇಂಧನ ಬಾಬತ್ತು ₹.1,06,656 ಒಟ್ಟು 1,73,566ಗಳನ್ನು RTGS ಮೂಲಕ ವಿ.ತಾ.ವಿ.ವಿ ಯಿಂದ ಬ್ಯಾಂಕ ಮೂಲಕ ವರ್ಗಾವಣೆ ಮಾಡಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಬಿಲ್ಲುಗಳು ಹಾಗೂ ಆಯಾ ಸಂಬಂಧಿತ ಕಾಲೇಜುಗಳಿಂದ ಹಣ ಸ್ವೀಕರಿಸಿದ ಬಗ್ಗೆ ಸ್ವೀಕೃತಿ ಪತ್ರ ಇತ್ಯಾದಿ ದಾಖಲೆಗಳು ಕಡತದಲ್ಲಿ ಲಭ್ಯವಾಗಲಿಲ್ಲ. ಇವು ಅವಶ್ಯವಾಗಿ ಬೇಕಾಗುತ್ತದೆ.
2. ಆದಾಯ ತೆರಿಗೆ ಮೊತ್ತ ₹.20,033/- ಗಳನ್ನು ಬಿಲ್ಲಿನ ಹಣ ಸಂದಾಯ ಮಾಡುವ ನಮೂನೆಯಲ್ಲಿ ಕಾಣಿಸಲಾಗಿದೆ. ಆದರೆ ಪೂರ್ಣ ಮೊತ್ತ ₹.1,73,566/-ಗಳಿಗೆ ಚೆಕ್ ಡ್ರಾ ಮಾಡಿ ಹಣವನ್ನು ವರ್ಗಾಯಿಸಿರುವದರಿಂದ ಆದಾಯ ತೆರಿಗೆ ಮೊತ್ತವನ್ನು ಸಹ ಕಡಿತಗೋಳಿಸದೇ ಪೂರ್ಣ ಮೊತ್ತವನ್ನು ಸಂಬಂಧಿತ (11) ಕಾಲೇಜುಗಳಿಗೆ ಬಡಾವಣೆ ಮಾಡಿರುವದು ಸ್ಪಷ್ಟವಾಗಿರುತ್ತದೆ. ಕಾರಣ ಆದಾಯ ತೆರಿಗೆ ಮೊತ್ತವನ್ನು ₹.20,033/-ಗಳನ್ನು ಸಂಬಂಧಿತ ಕಾಲೇಜುಗಳಿಂದ ಹಿಂಪಡೆದು ಆದಾಯ ತೆರಿಗೆ ಲೆಕ್ಕ ಶಿರ್ಷಿಕೆಗೆ ಜಮೆ ಮಾಡಿ, ಜಮೆ ಮಾಡಿದ ಚಲನ್ ಪ್ರತಿಯನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವದು.

ಆದ್ದರಿಂದ ಮೇಲಿನ ಅಂಶಗಳಿಗೆ ಅನುಸರಣೆಯನ್ನು ಕಂಡಿಕೆವಾರು ನೀಡುವದು. ಅಲ್ಲಿಯವರೆಗೆ ₹.20,033/- (IT ಮೊತ್ತ) ವಸೂಲಾತಿಗೆ ಹಾಗೂ ₹.1,73,566/-ಗಳನ್ನು ಆಕ್ಷೇಪಣೆಯಲ್ಲಿರಿಸಲಾಗುವದು.

ಈ ಬಗ್ಗೆ ವಿವಿಯಿಂದ ನೀಡಿದ ಅನುಸರಣೆ ಪರಿಶೀಲಿಸಲಾಗಿ ಅನುಸರಣೆಯಲ್ಲಿ IT ತುಂಬಿದೆ ಎಂದು ತಿಳಿಸಿದ ಚಲನ್ ನಂ:01634 ದಿ:30-4-2015 ₹.380954/-ಗಳಡಿಯ ವಿವರ ಪರಿಶೀಲಿಸಲಾಗಿ, ಮೇಲಿನ 11 ಕಾಲೇಜುಗಳ ಎದುರಿಗೆ ತೋರಿಸಿದ ಮೊತ್ತ ₹.173566/-ಗಳ ಬದಲಿಗೆ ₹.170676/-ಗಳಾಗಿದ್ದು ₹.2890/- ವ್ಯತ್ಯಾಸ ವಿದೆ ಹಾಗೆಯೇ IT ಇರಸಾಲು ಮಾಡಿದ ವಿವರ ಪರಿಶೀಲಿಸಲಾಗಿ, ₹.20033/-ಗಳ ಬದಲಿಗೆ ₹.17068/- ಗಳ ಇರಸಾಲು ಮಾಡಲಾಗಿದೆ ಇದರಿಂದ ₹.2965/- ಕಡಿಮೆ ಇರಸಾಲು ಮಾಡಿದಂತಾಗಿದೆ.

ಮುಂದುವರೆದು, ಈ ಕಾಲೇಜುಗಳಿಂದ ಹಿಂಪಡೆದ ಬಗ್ಗೆ ವಿವರ ನೀಡದೇ ಕೇವಲ Remittance ವಿವರ ನೀಡಿದ್ದರಿಂದ ನೇರವಾಗಿ ವಿವಿನಿಧಿಯಿಂದ ಈ IT ಭರಿಸಿದರಿಂದ ಈಗಾಗಲೇ ಕಾಲೇಜುಗಳಿಗೆ ನೀಡಿದ IT ಮೊತ್ತ ₹.20033/- ಮತ್ತು IT ತುಂಬಿದ ಹಣ ₹.17068/- ಅಂದರೆ ಒಟ್ಟು ₹.37101/-ಗಳನ್ನು

ಸಂಬಂಧಿಸಿದವರಿಂದ ವಸೂಲಿಮಾಡಿ ವಿವಿನಿಧಿಗೆ ಭರಿಸುವದಲ್ಲದೇ ₹.2965/-ಗಳನ್ನು IT ಇಲಾಖೆಗೆ ಭರಿಸಲು ಸೂಚಿಸಿದೆ. ಅದುವರೆಗೆ ₹.37101/-ಗಳನ್ನು ವಸೂಲಿ ಅಡಿ ಇರಿಸಲಾಗಿದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :71 ದಿನಾಂಕ: 25-02-2016ನ್ನು ನೀಡಲಾಗಿತ್ತು ಆದರೆ ಯಾವುದೇ ಅನುಸರಣೆ ನೀಡಿರುವುದಿಲ್ಲ.

33)(1) ₹.37.00 ಕೋಟಿ ಮೊತ್ತದ ಕಾಮಗಾರಿಗಳನ್ನು ಅನುಮೋದಿತ ಟೆಂಡರ್ ಗುತ್ತಿಗೆದಾರರ ಗುತ್ತಿಗೆ ಮೊಟಕುಗೋಳಿಸದೇ ಬೇರೆ ಅನರ್ಹಗುತ್ತಿಗೆದಾರರ ಮುಖಾಂತರ ನಿರ್ವಹಿಸಿದ್ದು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯಲ್ಲಿ

(i) Construction of Classroom Compex at UBDT College of Engineering, Davangere

ಗುತ್ತಿಗೆ ಮೊತ್ತ ₹. 22.17 ಕೋಟಿ.

(ii) Construction of South End Block Administrative Building at VTU Belgaum

ಗುತ್ತಿಗೆ ಮೊತ್ತ ₹. 15.07 ಕೋಟಿ.

1) ಮೊತ್ತಗಳ ಎರಡು ಕಾಮಗಾರಿಗಳನ್ನು ಟೆಂಡರ್ ಕರೆದು ಮೆ॥ಬಿರ್ಲಾ ಎರ್‌ಕಾನ್ ಇನ್‌ಫ್ರಾಸ್ಟ್ರಕ್ಚರ್ ಪ್ರೈ.ಲಿ, ಮುಂಬಯಿ ಇವರಿಗೆ ವಹಿಸಿಕೊಡಲಾಗಿದ್ದು, ಸದರೀ ಗುತ್ತಿಗೆದಾರರಿಗೆ ಸದರಿ ಕಾಮಗಾರಿಗಳನ್ನು ನಿರ್ವಹಿಸಲು ಸಾದ್ಯವಿಲ್ಲವೆಂದು, ತಿಳಿಸಿದಾಗ ಅವರ ಗುತ್ತಿಗೆಯನ್ನು ಗುತ್ತಿಗೆ ರದ್ದುಗೊಳಿಸದೇ, ಅವರು ಪಾವರ ಆಪ್ ಅಟಾರ್ನಿ ನೀಡಿದ ಗುತ್ತಿಗೆದಾರರು ಎಂದು ಹೇಳಲಾಗುವ ಅನರ್ಹ ವ್ಯಕ್ತಿಯಾದ ಶ್ರೀ.ಸುನೀಲ.ಡಿ.ಗುರವ ಇವರ ಮುಖಾಂತರ ಕಾಮಗಾರಿ ನಿರ್ವಹಿಸಿಕೊಂಡು ಅಳತೆ ಪುಸ್ತಕಗಳಲ್ಲಿ ಅಳತೆಗಳಿಗೆ ಶ್ರೀ.ಎಸ್. ಡಿ ಗುರವ ರವರ ಸಹಿಪಡೆದು ₹.37.00 ಕೋಟಿ ಮೊತ್ತದಷ್ಟು (ಹೆಚ್ಚುವರಿ ಕಾಮಗಾರಿ ಸಹಿತ) ಬಿಲ್ಲು ಶ್ರೀ.ಎಸ್ ಡಿ ಗುರವ ರವರಿಗೆ ಪಾವತಿಸಿ, ಟಿ.ಡಿ.ಎಸ್ ಸರ್ಟಿಫಿಕೇಟ ಮೂಲಗುತ್ತಿಗೆದಾರ ಮೆ॥ ಬಿರ್ಲಾ ಎರ್‌ಕಾನ್ ಇನ್‌ಫ್ರಾಸ್ಟ್ರಕ್ಚರ್ ಪ್ರೈ. ಲಿ. ಮುಂಬಯಿ ಇವರ ಹೆಸರಿನಲ್ಲಿ ನೀಡಲಾಗಿದೆ.

2) ಕೆ.ಡಬ್ಲ್ಯು. 4ರ ನಮೂನೆಯಲ್ಲಿ ನಿಗದಿಪಡಿಸಿದ ಟೆಂಡರ್ ಕರಾರು ಪತ್ರದಲ್ಲಿ ಒಪ್ಪಂದ ಪತ್ರ ಮಾಡಿಕೊಳ್ಳಲಾಗಿದ್ದು, ಸದರೀ ಟೆಂಡರ್ ಕರಾರು ಪತ್ರದಲ್ಲಿ ಟೆಂಡರ್ ಕಾಮಗಾರಿಯನ್ನು ಸಬ್‌ಕಂಟ್ರಾಕ್ಟ ಮೇಲೆ ನೀಡಲು ಅವಕಾಶ ಇಲ್ಲದಿದ್ದರೂ ಸಹ ಸರಕಾರದ ಆದೇಶ ಸಂಖ್ಯೆ. ಎಫ್ ಡಿ 4 ಪಿ ಸಿ ಎಲ್ 2008 ದಿನಾಂಕ 14.10.2008ನ್ನು ಧಿಕ್ಕರಿಸಿ ಮೂಲಗುತ್ತಿಗೆದಾರರ ಗುತ್ತಿಗೆ ರದ್ದುಪಡಿಸದೇ, ಪುನರ್ ಟೆಂಡರ್ ಕರೆಯದೇ, ಸಬ್‌ಕಾಂಟ್ರಾಕ್ಟ ನೀಡಲ್ಪಟ್ಟ ಅನರ್ಹ ವ್ಯಕ್ತಿ ಶ್ರೀ.ಎಸ್ ಡಿ ಗುರವ ರವರಿಂದ ₹.38.00 ಕೋಟಿ ಮೊತ್ತದ ಕಾಮಗಾರಿ ನಿರ್ವಹಿಸಿಕೊಳ್ಳಲಾಗಿದೆ.

3) ಸದರ ಕಾಮಗಾರಿಗಳಲ್ಲಿ ಕೆ.ಟಿ.ಪಿ.ಪಿ ನಿಯಮಗಳ ಪ್ರಕಾರ ಟೆಂಡರ್ ತೆರೆದ ದಿನಾಂಕದಿಂದ ಅನ್ವಯಿಸದೇ ವ್ಯತಿರಿಕ್ತವಾಗಿ ದರ ಏರಿಕೆ ನಿಯಮ ಅನುಸರಿಸಲಾಗಿದೆ.

4) ವಿಟಿಯು ಪರವಾಗಿ ಕುಲಸಚಿವರು ಟೆಂಡರ್ ನಡುವಳಿಕೆ ಅನುಸರಿಸಿದ್ದು ಸರಕಾರದ ನಿಯಮಗಳನ್ನು ನಿರ್ಲಕ್ಷಿಸಿ ಹಾಗೂ ಕೆ.ಟಿ.ಪಿ.ಪಿ. ಕಾಯ್ದೆ 1999 ಮತ್ತು ಕೆ.ಟಿ.ಪಿ.ಪಿ. ನಿಯಮ 2000 ಗಳಿಗೆ ವ್ಯತಿರಿಕ್ತವಾಗಿ ಟೆಂಡರ್ ಕಾಮಗಾರಿಗಳನ್ನು ಸಬ್‌ಕಂಟ್ರಾಕ್ಟ ಮೇಲೆ ನೀಡಲು ಕ್ರಮ ಜರುಗಿಸಿದ್ದುದಕ್ಕೆ ಸಕಾರಣಗಳ ವಿವರ ಪೊರೈಸುವದು.

5) ಟೆಂಡರ್ ಪ್ರಿಮಿಯಂ ಕಡಿಮೆ ಇದ್ದು ವ್ಯತ್ಯಾಸದ ಮೊತ್ತದ ಹೆಚ್ಚುವರಿ ಸುರಕ್ಷಿತ ಠೇವಣಿ ಪಡೆಯಲಾಗಿಲ್ಲ.

6) ಟೆಂಡರ್ ಕಾಮಗಾರಿಗಳಲ್ಲಿ ಅಳವಡಿಸಿದ ಟೆಂಡರ್ ನಿಯಮಗಳಲ್ಲಿ ವಿಶದೀಕರಿಸಿದ "ಗುತ್ತಿಗೆದಾರ" ಶಬ್ದದ ವ್ಯಾಖ್ಯೆಯಲ್ಲಿ ಗುತ್ತಿಗೆ ಒಡಂಬಡಿಕೆ ಪತ್ರ ಮಾಡಿಕೊಂಡ ಅನುಮೋದಿತ ಗುತ್ತಿಗೆದಾರ ಎಂದು ನಮೂದಿಸಿದ್ದು ಇಲ್ಲಿ ಮೆ|| ಬಿರ್ಲಾ ಏರ್‌ಕಾನ್ ಇನ್‌ಫ್ರಾಸ್ಟ್ರಕ್ಚರ್ ಪ್ರೈ. ಲಿ. ಮುಂಬಯಿ ಇವರ ಮಾತ್ರ ಅನುಮೋದಿತ ಗುತ್ತಿಗೆದಾರರಾಗುತ್ತಾರೆ. ಇವರನ್ನು ಹೊರತುಪಡಿಸಿ ಓರ್ವ ವ್ಯಕ್ತಿ ಶ್ರೀ.ಎಸ್.ಡಿ.ಗುರವರನ್ನು ಗುತ್ತಿಗೆದಾರರೆಂದು ವ್ಯವಹರಿಸಿ ಬೃಹತ್ ಮೊತ್ತ ಪಾವತಿಸಿದ್ದು ಕಾನೂನಿಗೆ ತದ್ವಿರುದ್ಧ ಹಾಗೂ ಅಕ್ರಮ ಪಾವತಿ ಇರುತ್ತದೆ.

7) ಮೂಲ ಗುತ್ತಿಗೆದಾರರು ಗುತ್ತಿಗೆ ಒಪ್ಪಿಗೆ ಪತ್ರ ನೀಡಿದ ನಂತರ ನಿಗದಿತ ಅವಧಿಯೊಳಗೆ ಪರ್ಫಾರ್ಮನ್ಸ ಸೆಕ್ಯೂರಿಟಿ ನೀಡಿ ಗುತ್ತಿಗೆ ಕರಾರು ಪತ್ರ ಮಾಡಿಕೊಳ್ಳದಿದ್ದಾಗ ಗುತ್ತಿಗೆ ರದ್ದು ಪಡಿಸಿ, ಇ.ಎಂ.ಡಿ. ಮುಟ್ಟುಗೋಲು ಮಾಡಿಕೊಂಡು ಮರು ಟೆಂಡರ್ ಕರೆಯಬೇಕಿತ್ತು ಆದರೆ ಹಾಗೆ ಮಾಡದೆ ಅನಧಿಕೃತವಾಗಿ ಕಾಲಾವಕಾಶ ನೀಡಿ ವಿಳಂಬವಾದರೂ ಗುತ್ತಿಗೆ ಕರಾರು ಪತ್ರ ಮಾಡಿಕೋಳ್ಳಲಾಗಿದೆ. ಆದ್ದರಿಂದ ₹.37.00 ಕೋಟಿ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ವಿವಿಯಿಂದ ನೀಡಿದ ಅನುಸರಣೆಯು ಅಸಮರ್ಪಕವಾಗಿರುವದರಿಂದ ಅಂಗೀಕರಿಸಲಾಗಿಲ್ಲ.

(2) ಶ್ರೀ ಎಸ್.ಡಿ.ಗುರವ GPA holder M/s. Birla Aircon Infrastructure Pvt. Ltd. Bombay ಇವರ 2 ಕಾಮಗಾರಿಗಳಲ್ಲ 3ನೇ ಪಕ್ಷದವರ ಪರೀಕ್ಷಣಾ ವರದಿ ಆಧಾರದ ಮೇಲೆ ಬಾಕಿ ಉಳಸಿಕೊಂಡಿರುವ ಕಾಮಗಾರಿ ಬಿಲ್ಲಿನ ಹಣ ಪಾವತಿಸಿದ ಬಗ್ಗೆ.

ಮೆ||ಕಾಟಕಾನ್ Consultants ಬೆಳಗಾವಿ ಇವರ ಪತ್ರ ಸಂ:KATCOAN/VTU/3rd Party/2014-15/18 D:20-5-2014(Class room complex) ಯುಬಿಡಿಟಿ ದಾವಣಗೇರಿ D:09-05-2014(Class room complex) ಯುಬಿಡಿಟಿ ದಾವಣಗೇರಿಯ, ಶ್ರೀ ಎಸ್.ಡಿ.ಗುರವ GPA Holda of M/S Birla Aircon Infrastructure Pvt.Ltd. Bombay ಇವರು ಕೈಕೊಂಡ ಕಾಮಗಾರಿಯಾದ Construction of Class Room Complex of UBDT College of Engineering Davangereಯ RA bill II & III ರಲ್ಲಿ 3ನೇ ಪಕ್ಷದವರ ಪರಿವೀಕ್ಷಣಾ ವರದಿಯ ಸಲ್ಲಿಕೆ ಕುರಿತಾಗಿ ತಡೆಹಿಡಿದ ಮೊತ್ತ ಕ್ರಮವಾಗಿ ₹.6,62,814/- & ₹.18,75,916/-ಗಳನ್ನು ಸದರ ವರದಿ ಸಲ್ಲಿಸಿದ್ದರಿಂದ ಬಿಡುಗಡೆಗೊಳಿಸುವ ಕುರಿತು ಪರಿಶೀಲಿಸಿ, ತಡೆಹಿಡಿದ ಮೊತ್ತದ 50% ಮೊತ್ತವನ್ನು ಮಾತ್ರ ಬಿಡುಗಡೆಗೊಳಿಸಲು ಕ್ರಮಕೈಕೊಳ್ಳಲಾಗಿದೆ.

ಅಂದರೆ,

	ತಡೆಹಿಡಿದ ಮೊತ್ತ	ಬಿಡುಗಡೆಮಾಡಿದ ಮೊತ್ತ
RA-Bill-II	Rs. 6,62,814/-	3,31,390/-
RA-Bill-III	Rs.18,75,916/-	9,37,958/-
	TOTAL	12,69,348/-

ಈ ಬಗ್ಗೆ ಪರಿಶೀಲಿಸಲಾಗಿ,

ಮೆ॥ಕಾಟಕಾನ್ Consultants ಯುಬಿಡಿಟಿ ದಾವಣಗೇರಿ ಪತ್ರ ಸಂ KATCOAN/VTU/3rd Party/2014-15/15 –3rd Party Inspection ವರದಿಗಳಲ್ಲಿ ಬಹುತೇಕ ಐಟಂಗಳ ಎದುರಿಗೆ No Comments ಎಂಬ ಷರಾ ದಾಖಲಿಸಿ ನೀಡಿದ ವರದಿಗಳಾಗಿವೆ ಅಂದರೆ ನೀಡಿದ ವರದಿಯಲ್ಲಿ ಯಾವುದೇ ಐಟಂ ಕುರಿತು, ವಿಶಿಷ್ಟ ತಾಂತ್ರಿಕ ಟಿಪ್ಪಣಿಗಳಿಲ್ಲದೇ ಮತ್ತು ಈ ಐಟಂಗಳ ಬಗ್ಗೆ ತಮ್ಮ ಹಣ ಬಿಡುಗಡೆ ಶಿಫಾರಸ್ಸು ತಿಳಿಸುವ ಷರಾಗಳನ್ನು ದಾಖಲಿಸದೇ ಇರುವದರಿಂದ ಈ ವರದಿಯ ಅಪೂರ್ಣ ಎಂದು ಅಥವಾ ಸದರ ತಾಂತ್ರಿಕ ಪ್ರಾಧಿಕಾರಕ್ಕೆ ಬಿಲ್ಲ ಸಂದಾಯಕ್ಕೆ ಈ ಬಿಲ್ಲ ಅರ್ಹವಿಲ್ಲ ಎಂಬ ಅಭಿಪ್ರಾಯವಿರಲೂ ಬಹುದೆಂಬ ಭಾವನೆ ಬರುವದು ಸಹಜವಾಗಿದೆ. ಕೊನೆಪಕ್ಷ RA bill-II ರಲ್ಲಿಯ ಕ್ರ.ಸಂ, A-6,A-16,A-16D, A-23 ಗಳ ಕುರಿತಾದರೂ (ತಾಂತ್ರಿಕ ಐಟಂಗಳಾದ್ದರಿಂದ) ತಾಂತ್ರಿಕ ಪರಿಶೀಲಿನೆ ಮಾಡಿದ ನಂತರ ಅವುಗಳನ್ನು ಅಂಗೀಕರಿಸಿದ ಕುರಿತ ಷರಾ ಹಾಕುವದು ಅವಶ್ಯವಿತ್ತು.

ಇನ್ನು RA-III ರಲ್ಲಿಯ ಕ್ರ.ಸಂ, A-2,A-3,A-4,ನಿಂದ A-8ರ ವರೆಗಿನ ಐಟಂಗಳಿಗೆ ಸೂಕ್ತ ತಾಂತ್ರಿಕ ಪರಿಶೀಲನಾ ಷರಾ ಅವಶ್ಯವಿತ್ತು. ಮತ್ತು A-16, A-21, ಐಟಂಗಳಿಗೆ Aggregate Material Test, Mix Design, Cube Test Rests. Furnished Hence Acceptable ಎಂದು ತಿಳಿಸಿದ್ದಾರೆಯೆ(ಪ್ರತಿಲಗತ್ತಿಸಿದೆ) ವಿನಃ ಪ್ರಯೋಗ ಶಾಲೆಯ ತಾಂತ್ರಿಕ ಪರೀಕ್ಷೆ ಫಲಿತಾಂಶ ಬಿಟ್ಟು ಕಾಮಗಾರಿ ಸ್ಥಳದಲ್ಲಿ ನಡೆಸಿದ ಭೌತಿಕ ಪರೀಕ್ಷೆ ಕುರಿತ –ವಿವರಗಳನ್ನು ದಾಖಲಿಸುವದೂ ಅವಶ್ಯವಿತ್ತು, ಕಾರಣ ಈ ವಿಷಯಗಳ ಬಗ್ಗೆ ಸೂಕ್ತ ಪರಿವೀಕ್ಷಣಾ ವರದಿ ಕೇಳದೇ ಅಪೂರ್ಣ ವರದಿಗಳ ಆಧಾರದ ಮೇಲೆ ತಡೆಹಿಡಿದ ಹಣದ 50% ಮೊತ್ತ ಬಿಡುಗಡೆಮಾಡಿದ್ದು ಆಕ್ಷೇಪಣೇಯವೆನಿಸುತ್ತದೆ.

ಕಾರಣ ಈ ಬಗ್ಗೆ ಸೂಕ್ತ ಅನುಸರಣೆಯನ್ನು ನೀಡಲು ಕೋರಿದೆ. ಅದುವರೆಗೂ ಬಿಡುಗಡೆ ಮಾಡಿದ ₹.12,69,348/-ಗಳನ್ನು ಆಕ್ಷೇಪಣೆಯಲ್ಲಿ ಇರಿಸಲಾಗುವದು.

ಅನುಸರಣೆ ಕಂಡಿಕೆಯ ಅಂಶಗಳಿಗೆ ಅನುಗುಣವಾಗಿರುವದಿಲ್ಲ ಆದ್ದರಿಂದ ಮುಂದುವರೆದಿದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :06 ಮತ್ತು 63 ದಿನಾಂಕ:05–11–2015, ದಿನಾಂಕ: 09–02–2016 ನ್ನು ನೀಡಲಾಗಿತ್ತು ಆದರೆ ಯಾವುದೇ ಅನುಸರಣೆ ನೀಡಿರುವುದಿಲ್ಲ.

34) ವಿತಾವಿವಿಯ ವಿವಿಧ ಕಾಮಗಾರಿಗಳಡಿ EIRL ಐಟಂಗಳನ್ನು ಅಳವಡಿಸಿ ಸಂದಾಯ ಮಾಡಿದ ಬಗ್ಗೆ.

ವಿತಾವಿವಿ ಬೆಳಗಾವಿಯ 2014-15ನೇ ಸಾಲಿನ ಕರಾರು ಒಪ್ಪಂದ ರಜಿಸ್ಟರ್‌ನ್ನು ಪರಿಶೀಲಿಸಲಾಗಿ Agreement ರಜಿಸ್ಟರ್‌ನ ಈ ಕೆಳಗಿನ ಕಾಮಗಾರಿಗೆ ಪುರವಣಿ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ. ವಿವರ ಈ ಕೆಳಗಿನಂತಿದೆ.

ಐಟಂ ನಂ/ದಿನಾಂಕ	ಕಾಮಗಾರಿ ಹೆಸರು	ಗುತ್ತಿಗೆದಾರರ ಹೆಸರು	ಪುರವಣಿ ಅಂದಾಜಿನ ಮೊತ್ತ
5/25-7-2014	Construction of south end block at VTU Belagavi.	Sri: S.D.Gurava GPA holder of m\s Birla air con infrastructure LTD Mumbai.	3,26,97,600/-
6/31-7-2014	Construction of Annex to guest house building at VTU Belgavi.(Work slips & EIRL)	Sri: S.D.Gurava GPA holder m\s Suprada Contruction company Dharwad.	1,20,14,937/-
7/25-9-2014	Develepment of VTU institute of advanced technology campus at muddenhalli Dist: Chikkaballapur. Contruction of P.G. blocks / hostel & Dining building.	M\s BSR Infotech India LTD Bangalore.	25,19,18,580/-
8/25-9-2014	Construction of phase -II Building at VIAT muddenhalli Dist : Chikkaballapur.	m\s BSR Infotech India LTD Bangalore.	6,86,70,929/-
12/2-3-2015	Construction of south end Block at VTU Belgavi.	Sri: S.D.Gurava GPA holder of m\s Birla air con infrastructure LTD Mumbai.	1,31,98,320/-
14/30-3-2015	Construction of phase -II Building at VIAT muddenhalli Dist : Chikkaballapur.	m\s BSR Infotech India LTD Bangalore.	12,67,56,886/-
		TOTAL	50,52,57,252/-

1) ಈ ಬಗ್ಗೆ ಪರಿಶೀಲಿಸಲಾಗಿ ಕ್ರಮ ಸಂಖ್ಯೆ: 05, 06 ಮತ್ತು 13ಗಳಡಿಯಲ್ಲಿ ಪುರವಣಿ ಗುತ್ತಿಗೆಯ ಮೊತ್ತವನ್ನು ಕರಾರು ಒಪ್ಪಂದ (ಗುತ್ತಿಗೆ) ರಜಿಸ್ಟರ್‌ನಲ್ಲಿ ದಾಖಲಿಸಿರುವುದಿಲ್ಲ. ಇದರಿಂದಾಗಿ ಪುರವಣಿ ಒಪ್ಪಂದದ ಮೊತ್ತ ಎಷ್ಟು? ಎಂಬುದು ಗೊತ್ತಾಗುವುದಿಲ್ಲ.
2) ಮೇಲಿನ ಪುರವಣಿ ಕರಾರು ಒಪ್ಪಂದದ ಮೊತ್ತಗಳು ₹.1.31 ಕೋಟಿಯಿಂದ ₹.25.19 ಕೋಟಿ ವರೆಗಿನ ಮೊತ್ತಗಳಾಗಿದ್ದು, ಇಷ್ಟು ಬೃಹತ ಮೊತ್ತದ ಕರಾರು ಒಪ್ಪಂದವನ್ನು ಟೆಂಡರ್ ಪ್ರಕ್ರಿಯೆ ಮಾಡಿಕೊಳ್ಳದೇ ನಿರ್ವಹಿಸದ್ದಕ್ಕೆ ಸಮರ್ಥಕ ಅನುಸರಣೆಯನ್ನು ಲೆಕ್ಕ ಪರಿಶೋಧನೆಗೆ ಒದಗಿಸಲು ಕೋರಿದೆ.
3) ಕಾರಣ ಮೇಲಿನ ಎಲ್ಲ ಇಂತಹ ಪುರವಣಿ ಕರಾರು ಒಪ್ಪಂದಕ್ಕೆ ಸಂಬಂಧಿಸಿದ ಕಾಮಗಾರಿಗಳಡಿಯ ಈ EIRIL & WORK SLIP ಗಳನ್ನು ನಿರ್ವಹಿಸಲು ಉಂಟಾಗಿರುವ ಸನ್ನಿವೇಶಗಳೇನು? ಈ ಹೆಚ್ಚುವರಿ

ಕೆಲಸಗಳನ್ನು ನಿರ್ವಹಿಸಲು ಯಾವ ತಾಂತ್ರಿಕ ಆಡಳಿತಾತ್ಮಕ ಪ್ರಾಧಿಕಾರದ ನಿರ್ದೇಶನಗಳಡಿ ಈ ಕರಾರು ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ ಎಂಬ ಬಗ್ಗೆ ಲೆಕ್ಕ ಪರಿಶೋಧನೆಗೆ ವಿವರಗಳನ್ನು ಒದಗಿಸುವುದು.

4) ಇನ್ನು ಇಂತಹ ಕಾಮಗಾರಿಗಳ EIRL & WORK SLIP ಕುರಿತ ತಾಂತ್ರಿಕ ಮಂಜೂರಿ/ಆಡಳಿತಾತ್ಮಕ ಮಂಜೂರಿ ಕುರಿತು ವಿತಾವಿವಿಯಲ್ಲಿ ವಿವಿಧ ಪ್ರಾಧಿಕಾರಗಳಿಗೆ ಯಾವುದೇ ತಾಂತ್ರಿಕ ಅಧಿಕಾರಗಳನ್ನು ನೀಡಲು ಸರಕಾರದ ಅನುಶಾಸನಗಳನ್ನು ಪಡೆಯಲಾಗಿದೆಯೇ? ಅವುಗಳ ಅನುಪ ಸ್ಥಿತಿಯಲ್ಲಿ ನಿವಾಸಿ ಅಭಿಯಂತರರ ಸರಿಸಮಾನವಾದ ಸರಕಾರದ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಪ್ರದತ್ತ ತಾಂತ್ರಿಕ ಅಧಿಕಾರಕ್ಕೆ ಮಿಕ್ಕಿದ ಮೊತ್ತದ ಕಾಮಗಾರಿ ಅಂದಾಜು ಪತ್ರಿಕೆಗಳಿಗೆ ಅನುಮೋದನೆ ಪಡೆಯಲು ಯಾವ ಕ್ರಮ ಕೈಕೊಳ್ಳಲಾಗಿದೆ ಎಂಬ ಬಗ್ಗೆ ಮತ್ತು ಆಡಳಿತಾತ್ಮಕ ಮಂಜೂರಿಗೆ ವಿವಿಯ ಅತ್ಯುನ್ನತ ಪ್ರಾಧಿಕಾರಕ್ಕೆ ನೀಡಿದ ಪ್ರದತ್ತ ಆರ್ಥಿಕ ಅಧಿಕಾರದ ಕುರಿತಾದ ಅನುಶಾಸನದ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವುದು.

ಕಾರಣ ಈ ಅಂಶಗಳಿಗೆ ಸೂಕ್ತ ಅನುಸರಣೆಯನ್ನು ಒದಗಿಸಲು ಕೋರಿದೆ. ಅದುವರೆಗೆ ಮೇಲೆ ತಿಳಿಸಿದ ಕಾಮಗಾರಿಗಳ ಪುರವಣಿ ಕರಾರು ಒಪ್ಪಂದ ಮೊತ್ತ ₹. 50,52,57,252/-ಗಳನ್ನು ಆಕ್ಷೇಪಣೆಯಲ್ಲಿರಿಸಲಾಗಿದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :46 ದಿನಾಂಕ: 27-01-2016 ನ್ನು ನೀಡಲಾಗಿತ್ತು ಆದರೆ ಯಾವುದೇ ಅನುಸರಣೆ ನೀಡಿರುವುದಿಲ್ಲ.

೩೫) ವಿತಾವಿವಿಗೆ ವರ್ಗಾಯಿಸಿದ ರಾಯಚೂರು, ಹೂವಿಹಡಗಲಿ ಕಾರವಾರ ಮತ್ತು ಗಂಗಾವತಿಗಳಲ್ಲಿ ಇಂಜನೀಯರಿಂಗ್ ಕಾಲೇಜುಗಳ ನಿರ್ಮಾಣದ ಪಿ.ಎಂ.ಸಿಎಸ್ (ಯೋಜನೆಗಳ ವ್ಯವಸ್ಥಾಪನಾ ಸಲಹಾ ಸೇವೆಗಳು)ಗಳನ್ನು ರೈಟ್ಸ್ ಸಂಸ್ಥೆಗೆ ವಹಿಸಿಕೊಟ್ಟಿದ್ದರ ಬಗ್ಗೆ.

ಸರಕಾರವು ತನ್ನ ಆದೇಶ ಸಂ:ಇಡಿ/249/ಡಿಟಿಇ/2011 ದಿ:2-11-2011ರನ್ವಯ ರಾಯಚೂರು, ಹೂವಿನಹಡಗಲಿ, ಕಾರವಾರ ಮತ್ತು ಗಂಗಾವತಿಗಳಲ್ಲಿ ಸರಕಾರದಿಂದ ನಿರ್ಮಿಸಲು ಉದ್ದೇಶಿಸಿದ ಇಂಜನೀಯರಿಂಗ್ ಕಾಲೇಜುಗಳನ್ನು ವಿತಾವಿವಿ ಬೆಳಗಾವಿಗೆ ವರ್ಗಾಯಿಸಲು ಅನುಮತಿ ನೀಡಿದೆ ಮತ್ತು ವಿತಾವಿವಿಯು ಈ ಕಾಲೇಜುಗಳ ಕಟ್ಟಡಗಳನ್ನು ಕಟ್ಟುವುದು ಮತ್ತು ಮೂಲ ಸೌಕರ್ಯಗಳನ್ನು ಎ.ಐ.ಸಿ.ಟಿ.ಇ ನಿಯಮಾವಳಿ ಪ್ರಕಾರ ಅಭಿವೃದ್ಧಿಪಡಿಸಿ ತನ್ನ ಅಧೀನ ಕಾಲೇಜುಗಳಾಗಿ ನಡೆಸಿಕೊಂಡು ಹೋಗಲು ನಿರ್ದೇಶಿಸಿದೆ ಅದಕ್ಕಾಗಿ ಈ ಕೆಲಸಗಳು 2-3ವರ್ಷಗಳ ಅವಧಿಯಲ್ಲಿ ನಿಗದಿಪಡಿಸಿದೆ.

ಈ ದಿಶೆಯಲ್ಲಿ ವಿತಾವಿವಿಯು ಮೆ॥ರೈಟ್ಸ್ ಸಂಸ್ಥೆ ಬೆಂಗಳೂರು (ರೈಲು ಮಂತ್ರಾಲಯದ ಅಧೀನ ಸಂಸ್ಥೆ ಸಿಕಂದರಬಾದ ಮತ್ತು ಸೈಟ ಕಛೇರಿ ಬೆಂಗಳೂರು ಇವರಿಗೆ ಈ ಕಾಮಗಾರಿಗಳ ಮೊತ್ತದ 6% ದರದ ಮೇಲೆ ಪ್ರೋಜೆಕ್ಟ್ ಮಾನೇಜಮೆಂಟ್ ಕನ್ಸಲಟನ್ಸಿ ಸರ್ವಿಸ್ಸಗಾಗಿ ನಿರ್ವಹಿಸಲು ಲೇಟರ್ ಆಫ್ ಇನ್‌ಟೆಂಟ್(ಒಪ್ಪಿಗೆ ಪತ್ರ) ಪತ್ರ ಸಂಖ್ಯೆ:ವಿಟಿಯು/ಎಸಿಎ/ಆರ್.ಇ/2012-13/2465 ದಿ:28-6-2012 ರನ್ವಯ ನೀಡಿ ಈ ಕಾಲೇಜುಗಳ ಕಟ್ಟಡ ನಿರ್ಮಾಣದ ಅಂದಾಜನ್ನು (2009-10 ದರದ ಮೇಲೆ ತಯಾರಿಸಿದ 15.57 ಕೋಟಿ ಅಂದಾಜನ್ನು) 2011-12ನೇ ವರ್ಷದ ಸಿ.ಎಸ್.ಆರ್. ಆಧಾರದ ಮೇಲೆ ಪರಿಷ್ಕರಿಸಲು ತಿಳಿಸಿ ಪತ್ರ ಬರೆದಿರುತ್ತಾರೆ.

ಈ ಕುರಿತು ಪರಿಶೀಲಿಸಲಾಗಿ ಈ ಕೆಳಗಿನ ನ್ಯೂನತೆಗಳು ಕಂಡುಬರುತ್ತವೆ.

1) ಸರಕಾರವು ಈ ಉದ್ದೇಶಿತ ಕಾಲೇಜು ಕಟ್ಟಡಗಳ ನಿರ್ಮಾಣವನ್ನು ಎ.ಐ.ಸಿ.ಟಿ.ಇ ನಿಯಮಗಳನ್ವಯ ಅನುಷ್ಠಾನಗೊಳಿಸಿ ನಿರ್ಮಿಸಲು ಸೂಚಿಸಿ ತನ್ನ ಕಾರ್ಯವನ್ನು ಕ್ರಮವಾಗಿ ರೈಟ್ಸ್ ಸಂಸ್ಥೆ ಮತ್ತು ಕರ್ನಾಟಕ ಗೃಹ ಮಂಡಳಿಗಳಿಂದ ಹಿಂಪಡೆದು ನೀಡಿದೆ. ಈ ಕುರಿತು ಕ್ರಮವಾಗಿ ಸರಕಾರದ ಪತ್ರ ಸಂ:ಡಿಟಿಇ 10 ಬಿ.ಎಲ್.ಡಿ. 2009/5281 ದಿ:23/26-11/2011(ರೈಟ್ಸ್ ಸಂಸ್ಥೆಗೆ ಬರೆದದ್ದು.) ಮತ್ತು ಸರಕಾರದ ಪತ್ರ ಸಂ:ಬಿಟಿಇ 10 ಬಿಎಲ್‌ಡಿ 2009/5280 ದಿ:23/26 -11/2011 (ಕೆಎಚ್‌ಬಿಗೆ ಬರೆದದ್ದು)ಗಳನ್ವಯ ಅವರಿಗೆ ನೀಡಿದ ಕಾಲೇಜು ಕಟ್ಟಡಗಳ ನಿರ್ಮಾಣ ಕಾರ್ಯಗಳ ಕಾರ್ಯಗತಗೊಳಿಸಬಾರದೆಂದು ತಿಳಿಸಿದೆ. ಇದೂ ಅಲ್ಲದೇ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ ಬೆಂಗಳೂರು ತನ್ನ ಪತ್ರ ಸಂ:ಡಿಟಿಇ 05 ಎಬಿಎಲ್‌ಡಿ 2008/ ದಿ:27-10-2009 ರನ್ವಯ ಪತ್ರ ಬರೆದು ಜನೇವರಿ-2009ರಲ್ಲಿ ಸರಕಾರದ ಇಂಜಿನೀಯರಿಂಗ್ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳ ನಿರ್ಮಾಣದ ಕೆಲಸವನ್ನು ರೈಟ್ಸ್ ಸಂಸ್ಥೆಗೆ ನೀಡಿದ್ದು ಕೆಲಸವನ್ನು ತ್ವರಿತಗತಿಯಿಂದ ಪೂರ್ಣಗೊಳಿಸುವ ಉದ್ದೇಶದಿಂದ ನೀಡಿದ್ದು ಇದುವರೆಗೂ ಅಂದರೆ 10/2009ರ ನಂತರವು ಇನ್ನು ಈ ಕಾಮಗಾರಿಗಳ ಪ್ರಗತಿ ಹಂತ ಟೆಂಡರ್‌ಗಳನ್ನು ಕರೆಯುವ ಹಂತದಲ್ಲಿರುವದನ್ನು ಪ್ರಶ್ನಿಸಿ ತನ್ನ ತೀವ್ರ ಅಸಮಾದಾನವನ್ನು ವ್ಯಕ್ತಪಡಿಸಿತ್ತು.

ಅಂದರೆ ಒಟ್ಟಾರೆ ರೈಟ್ಸ್ ಸಂಸ್ಥೆಯ ಕೆಲಸದ ಪದ್ಧತಿಯು ಸರಕಾರಕ್ಕೆ ಅಸಮಾದಾನ ಯುಕ್ತವಾಗಿದ್ದಿತು. ಹೀಗಿದ್ದಾಗ್ಗೆ ಯಾವ ಆಧಾರದ ಮೇಲೆ ವಿತಾವಿವಿಯು ರೈಟ್ಸ್ ಸಂಸ್ಥೆಗೆ ಈ ಕೆಲಸಗಳ ಉಸ್ತುವಾರಿಯನ್ನು ಕಾಮಗಾರಿ ಮೊತ್ತದ 6% ಮೊತ್ತಕ್ಕೆ ವಹಿಸಿಕೊಟ್ಟಿದೆ ಎಂಬುದು ಆಕ್ಷೇಪಾರ್ಹವಾಗಿದೆ.

ಇಂತಹ ಪ್ರೋಜೆಕ್ಟ್ ಮಾನೇಜಮೆಂಟ್ ಕನ್ಸಲಟನ್ಸಿ ಸರ್ವಿಸ್‌ಗಳನ್ನು ಕೆಟಿಪಿಪಿ ನಿಯಮಗಳ ಆಧಾರದ ಮೇಲೆ ಟೆಂಡರು ಕರೆಯುವ ಮೂಲಕವೇ ವಹಿಸಿಕೊಡಬೇಕಿತ್ತೇ ವಿನಃ ನೇರವಾಗಿ ವಹಿಸಿಕೊಡುವದು ಸಮರ್ಪಕ ಕ್ರಮವಲ್ಲ. ಯಾಕೆಂದರೆ ಸರಕಾರವು ಸಹ ತನ್ನ ವಿಶೇಷ ಆದೇಶದ ಮೂಲಕ (ಇಡಿ 125 ಯೋಸಕ 2008 ದಿ:30-12-2008) ರೈಟ್ಸ್ ಸಂಸ್ಥೆಗೆ ರಾಯಚೂರು ಇಂಜಿನೀಯರಿಂಗ್ ಕಾಲೇಜು ಕಟ್ಟಡದ ನಿರ್ಮಾಣದ ಕೆಲಸಕ್ಕೆ (ರೂ.1750.00 ಲಕ್ಷಗಳ ಕಾಮಗಾರಿಗೆ) ಕೆಟಿಪಿಪಿ ನಿಯಮಗಳಿಂದ ವಿನಾಯಿತಿ ನೀಡಲಾಗಿತ್ತು. ಅಂದಾಗ ಈ ಕಾಮಗಾರಿ ವಿಟಿಯುಗೆ ಹಸ್ತಾಂತರಿಸಿದ ಮೇಲೆ ಇಂತಹ ವಿಶೇಷ ವಿನಾಯತಿಯನ್ನು ಪ್ರೋಜೆಕ್ಟ್ ಮಾನೇಜಮೆಂಟ್ ಕನ್ಸಲಟನ್ಸಿ ಸರ್ವಿಸ್ಸ ಕೆಲಸಕ್ಕಾಗಿ ಸರಕಾರದಿಂದ ಪಡೆಯದೇ ನೇರವಾಗಿ ರೈಟ್ಸ್ ಸಂಸ್ಥೆಗೆ ವಹಿಸಿಕೊಟ್ಟಿದ್ದು ಆಕ್ಷೇಪಾರ್ಹ ವಿಷಯವಾಗಿದೆ.

2) ಈ ಬಗ್ಗೆ ಮಾಡಿಕೊಂಡ ಕರಾರು ಒಪ್ಪಂದಕ್ಕೆ ರಜಿಸ್ಟ್ರಾರ್‌ರವರು ರುಜು ಮಾಡಲಾಗಿದೆಯೇ ವಿನಹ ಈ ಕರಾರು ಒಪ್ಪಂದ ವಿಟಿಯುನ ತಾಂತ್ರಿಕ ಶಾಖೆಯ ಪರಿಶೀಲನೆಗೆ ಒಳಪಟ್ಟ ಬಗ್ಗೆ ಮತ್ತು ಈ ಕರಾರು ಒಪ್ಪಂದಕ್ಕೆ ವಿಟಿಯು ಕರಾರು ಒಪ್ಪಂದ ಸಂಖ್ಯೆ ದಾಖಲಿಸಲ್ಪಟ್ಟ ಬಗ್ಗೆ ವಿವರಗಳಿರುವದಿಲ್ಲ. ಇದರಿಂದಾಗಿ ಈ ಕರಾರು ಒಪ್ಪಂದವು ವಿಟಿಯುನ ಹಿತಾಸಕ್ತಿಗೆ ಅನುಕೂಲವಾಗುವಂತೆ /ಸರಕಾರದ ನಿಯಮಾವಳಿಗಳಿಗೆ ಬದ್ಧವಾಗಿರುವಂತೆ ತಯಾರಿಸಿದ ಕರಾರು ಒಪ್ಪಂದವಾಗಿದೆ ಎಂದು ದೃಢೀಕರಿಸಲು ಸಾಧ್ಯವಾಗುವುದಿಲ್ಲ.

3) ಮುಂದುವರೆದು ಸದರ ಕಾರಾರು ಒಪ್ಪಂದದಲ್ಲಿ ನಿಗದಿ ಪಡಿಸಿದ ಅವಧಿ ಕರಾರು ಒಪ್ಪಂದರವರ ಸಹಿ ಆದ ದಿನಾಂಕದಿಂದ 24 ತಿಂಗಳು (ಮನ್‌ಸೂನ್ ಅವಧಿ ಸಹಿತ) ಆಗಿರುತ್ತದೆ. ಅಂದರೆ 30-08-2012 ರಿಂದ 30-8-2014 ಕ್ಕೆ ಈ ಅವಧಿ ಮುಕ್ತಾಯಗೊಳುತ್ತದೆ. ಆದರೆ ದಿನಾಂಕ:23-11-2015 ರ ಪ್ರಕಾರ

1)	ವಿತಾವಿವಿಯಿಂದ ನೀಡಿದ ಠೇವಣಿಗಳು	- 42.00 ಕೋಟಿ
2)	ಸದರ ಠೇವಣಿಗಳ ಮೇಲಿನ ಬಡ್ಡಿ ಮೊತ್ತ	- 00.5673 ಕೋಟಿ
3)	ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಿಂದ ನೀಡಿದ ಹೆಚ್ಚುವರಿ ಅನುದಾನ	- 15.00 ಕೋಟಿ
	ಒಟ್ಟು	- 57.5673 ಕೋಟಿ

ಈ ಮೊತ್ತಗಳು ದಿ: 30-3-2013 ರಿಂದ 31-3-2014ರ ಅಂತ್ಯದವರೆಗೆ ರೈಟ್ಸ್ ಸಂಸ್ಥೆಗೆ ನೀಡಿದವುಗಳಾಗಿರುತ್ತವೆ. ಈ ಮೊತ್ತಗಳನ್ನು ವಿಟಿಯುನಿಂದ ಪಡೆದು ಸುಮಾರು 1 ರಿಂದ 1.5 ವರ್ಷಗಳಾದರೂ ಈ ಕುರಿತು ಸೂಕ್ತ ಕಟ್ಟಡ ನಿರ್ಮಾಣ ಪ್ರಗತಿ ವಿವರಗಳೊಂದಿಗೆ ಮುಂಗಡ ಹೊಂದಾಣಿಕೆಯನ್ನು ರೈಟ್ಸ್‌ನಿಂದ ಮಾಡಿಕೊಳ್ಳದಿರುವುದು ಪ್ರಶ್ನಾರ್ಹವಾಗಿರುತ್ತದೆ. ಈ ಬಗ್ಗೆ ಕೈಕೊಂಡ ಕ್ರಮಕ್ಕೆ ಸೂಕ್ತ ಅನುಸರಣೆ ನೀಡಲು ಕೋರಿದೆ.

ಅದು ಅಲ್ಲದೇ ಸದರ ಕಾಮಗಾರಿಗಳ ಪ್ರಗತಿ ಕುರಿತು ಸರಕಾರಕ್ಕೆ ನೀಡಿದ ಈ ವರೆಗಿನ ಬೌತಿಕ ಆರ್ಥಿಕ ಪ್ರಗತಿ ವಿವರಗಳು ಲೆಕ್ಕಪರಿಶೋಧನೆಗೆ ಲಭ್ಯವಾಗಲಿಲ್ಲ. ಇದರಿಂದಾಗಿ ಕಾಲೇಜುಗಳ ವರ್ಗಾವಣಾ ಆದೇಶದಲ್ಲಿಯ ಸರಕಾರದ ಉದ್ದೇಶ(ಅಂದರೆ ವಿತಾವಿವಿಗೆ /ಅಂಗ ಸಂಸ್ಥೆಗಳಿಗೆ ಸಿಗಬೇಕಿರುವ ಯುಜಿಸಿಸಿ ಸೌಲಭ್ಯಗಳು ಸಕಾಲದಲ್ಲಿ ಒದಗದೇ ಇರುವುದು) ಈಡೇರದಂತಾಗಿದೆ.

ಕೆ.ಟಿ.ಪಿ.ಪಿ. ಕಾಯ್ದೆ 1999ರನ್ವಯ ಟೆಂಡರ ಕರೆಯದಿರುವುದರಿಂದ ಈ ಹಿನ್ನಲೆಯಲ್ಲಿ ಒಟ್ಟಾರೆ ತೊಡಗಿಸಿರುವ ಹಣ ₹.57.5673 ಕೋಟಿಗಳ ಮೊತ್ತ ಫಲಪ್ರದವೆನಿಸುವದಿಲ್ಲ. ಕಾರಣ ಸೂಕ್ತ ಅನುಸರಣೆ ಅವಶ್ಯ. ಅದುವರೆಗೆ ₹.57.5673 ಕೋಟಿಗಳು ಆಕ್ಷೇಪಣೆಯಲ್ಲಿರಿಸಲಾಗಿದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :84 ದಿನಾಂಕ: 25-02-2016 ನ್ನು ನೀಡಲಾಗಿತ್ತು ಆದರೆ ಅನುಸರಣೆ ಆಕ್ಷೇಪಣೆಯ ಕಂಡಿಕೆಗಳ ಅಂಶಗಳಿಗೆ ಅನುಗುಣವಾಗಿರುವದಿಲ್ಲ. ಕಾರಣ ವರದಿಯಲ್ಲಿ ಅಳವಡಿಸುವುದು.

36) ವಿತಾವಿವಿ ಬೆಳಗಾವಿಯಲ್ಲಿ ನಿರ್ವಹಿಸಿದ Interior works with modular furniture including A.C Electrical & UPS, Automation System Net working at VTU, Regional Centre Nagar Bhavi Bangalore.

ವಿತಾವಿವಿ ಬೆಳಗಾವಿಯಲ್ಲಿ ಮೇಲೆ ತಿಳಿಸಿದ ಕಾಮಗಾರಿಯನ್ನು ನಿರ್ವಹಿಸಲು ಟೆಂಡರ ಕರೆದು ಮೆ।।ಟೇಕೇ ಸೊಲ್ಯೂಷನ್ಸ್ ಬೆಂಗಳೂರು ಇವರಿಗೆ ಕರಾರು ಒಪ್ಪಂದ ಪತ್ರ ಸಂ:ವಿಟಿಯು/ಐ.ಆರ್.ಸಿ/ಣಂ 4/12-13 ದಿ:19-4-2012 for ₹.52833012/- i.e 5.34 ಕಡಿಮೆ ಗುತ್ತಿಗೆಯನ್ನು ವಹಿಸಿಕೊಡಲಾಗಿದೆ ವಿವರ ಈ ಕೆಳಗಿನಂತಿದೆ.

ಅಂದಾಜು ಮೊತ್ತ 63057850-00 ಪರಿಷ್ಕೃತ ಅಂದಾಜು ಮೊತ್ತ 58702765-00	ಅಂದಾಜಿನ ಅನುಮೋದಿತ ದಿನಾಂಕ 22-1-2010
ಟೆಂಡರು ತೆರೆದ ದಿನಾಂಕ	25-07-2011
ಟೆಂಡರ ಅಂಗೀಕಾರ ಪ್ರಾಧಿಕಾರದ ಅನುಮೋದನಾ ದಿನಾಂಕ	28-02-2012
ಕಾಮಗಾರಿ ಆದೇಶ ದಿನಾಂಕ	VTU/ACA/RE/11-12/1221 D:18-05-2012
ಟೆಂಡರ ಮೊತ್ತ	52833012/-(5.34% Below)
ಟೆಂಡರ ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿದ ದಿನಾಂಕ	18-10-2012(6 ತಿಂಗಳು ಮಾನ್ಸೂನ ಸೇರಿ)
ಗುಣನಿಯಂತ್ರಣ ವರದಿ ಪ್ರಮಾಣ ಪತ್ರ ನೀಡುವ ಪ್ರಾಧಿಕರದ ಹೆಸರು	IPRIT Bangalore
ವಾಸ್ತು ಶಿಲ್ಪ ಸಂಸ್ಥೆ ಹೆಸರು	ಮೆ॥ವಿಶ್ವನಾಥ ಅಸೋಸಿಯೇಟ್ಸ್ ಬೆಂಗಳೂರು
3ನೇ ಸಂಸ್ಥೆಯಿಂದ ಪರಿಶೀಲನೆ ಮಾಡುವ ಸಂಸ್ಥೆ ಹೆಸರು	ಮೆ॥ಕಾಟಿಕಾನ್ ಕನ್ಸಲ್ಟಂಟ ಬೆಳಗಾವಿ

ಈ ಬಗ್ಗೆ ಪರಿಶೀಲಿಸಲಾಗಿ ಸದರ ಕಾಮಗಾರಿಯ ₹.200.00 ಲಕ್ಷಗಳನ್ನು ಮೀರಿರುವುದರಿಂದ ಸರಕಾರದ ಆದೇಶ ಸಂಖ್ಯೆ: ಪಿಡಬ್ಲುಡಿ/671/ಎಫ.ಸಿ-1 2009 ದಿ:03-02-2010ರ ಸರಕಾರದ ಅನುಮೋದನೆ ಅವಶ್ಯ. ಕಾರಣ ಅನುಮೋದನೆ ಪಡೆದ ಬಗ್ಗೆ ವಿವರ ಒದಗಿಸುವುದು ಸದರ ಕಾಮಗಾರಿಯನ್ನು ಮೆ॥ ಟೀಕೇ ಸೋಲ್ಯೂಷನ್ಸ್ ಬೆಂಗಳೂರು ಇವರು ಪ್ರಾರಂಭಿಸಿದ ನಂತರ ನಿರ್ವಹಿಸಿದ ಕೆಲಸಕ್ಕೆ ಈ ಕೆಳಗಿನಂತೆ ಬಿಲ್ಲುಗಳನ್ನು ವಿಟಿಯುನಿಂದ ಪಡೆದಿರುತ್ತಾರೆ.

1	1ನೇ ಆರ್.ಎ. ಮತ್ತು ಫಾರ್ಟ ಬಿಲ್ಲು	₹.3285891	20-11-2012
2	2ನೇ ಆರ್.ಎ. ಮತ್ತು ಫಾರ್ಟ ಬಿಲ್ಲು	₹.6646165	26-2-2013
3	3ನೇ ಮತ್ತು ಅಂತಿಮ ಬಿಲ್ಲು	₹.5142650	20-3-2013
	ಒಟ್ಟು ₹.	15074706	

ಸದರ ಕಾಮಗಾರಿಯು ಸಂಬಂಧಿತ ಸಂಸ್ಥೆಯಿಂದ ಸಕಾಲದಲ್ಲಿ ನಿರ್ವಹಿಸದೇ ಕಾಮಗಾರಿ ಪ್ರಗತಿ ತುಂಬ ಕುಂಠಿತವಾಗಿರುವುದನ್ನು ಗಮನಿಸಿ ವಿಟಿಯು ನಿಂದ ಈ ಕೆಳಗಿನ ನೋಟಿಸುಗಳನ್ನು ಗುತ್ತಿಗೆದಾರ ಸಂಸ್ಥೆಗೆ ನೀಡಲಾಗಿರುತ್ತದೆ.

1) ನೋಟೀಸು ಸಂಖ್ಯೆ: VTU/ACA/RE/12-13/8672 D : 09-11-2012
2) ನೋಟೀಸು ಸಂಖ್ಯೆ: VTU/ACA/RE/12-13/8984 D : 20-11-2012
3) ನೋಟೀಸು ಸಂಖ್ಯೆ: VTU/ACA/RE/12-13/10555 D : 31-12-2012
4) ನೋಟೀಸು ಸಂಖ್ಯೆ: VTU/ACA/RE/12-13/11066 D : 15-1-2013
5) ನೋಟೀಸು ಸಂಖ್ಯೆ: VTU/ACA/RE/12-13/1290 D : 20-05-2013
6) ಅಂತಿಮ ನೋಟೀಸ ಸಂಖ್ಯೆ: VTU/ROB/SO(p)/13-14/39 D : 22-08-2013

ಸದರ ನೋಟೀಸುಗಳಿಗೆ ಸಮರ್ಪಕ ಪ್ರತಿಕ್ರಿಯೆ ನೀಡದ್ದರಿಂದ ಸಂಬಂಧಿತ ಕಾಮಗಾರಿಯ ಗುತ್ತಿಗೆಯನ್ನು ಮೊಟಕುಗೊಳಿಸಿ ಆದೇಶ ಸಂಖ್ಯೆ: VTU/ACA/RE/13-14/7121 D : 21-09-2013 ರನ್ವಯ Resinding ಆದೇಶವನ್ನು ನೀಡಲಾಯಿತು (ಟೆಂಡರ ಕಂಡಿಕೆ 49 ಮತ್ತು 50ರ ಪ್ರಕಾರ)

ಸದರ ಬೆಳವಣಿಗೆಯಿಂದಾಗಿ ಗುತ್ತಿಗೆದಾರ ಸಂಸ್ಥೆಯು ತನ್ನ ವಕೀಲರ ಮುಖಾಂತರ ದಿ:14-09-2013ರನ್ವಯ (ವಿತಾವಿವಿಯಲ್ಲಿ ಸ್ವೀಕರಿಸಿದ ದಿನಾಂಕ: 26-9-2013) ವಕೀಲ ನೋಟೀಸನ್ನು ನೀಡಿದೆ.

ತದನಂತರ ವಿತಾವಿವಿ ಬೆಳಗಾವಿಯಿಂದ ತನ್ನ ವಕೀಲರ ಮುಖಾಂತರ (ಶ್ರೀ.ಕೆ.ಎಸ್.ಭರತಕುಮಾರ ಬೆಂಗಳೂರು) ಸಮರ್ಪಕ ಉತ್ತರಗಳನ್ನು ದಿ:29-10-2013ರನ್ವಯ ನೀಡಿ ಅದರ ಪ್ರತಿಯನ್ನು ನಿವಾಸಿ ಇಂಜಿನಿಯರವರಿಗೆ ರಜಿಸ್ಟ್ರಾರ ಮೂಲಕ ಪತ್ರ ಸಂಖ್ಯೆ: VTU/RE/13-14/251 D : 30-10-2013 ಅದೇ ಪ್ರಕಾರ ವಾಸ್ತು ಶಿಲ್ಪಕಾರರಾದ ಮೆ॥ವಿಶ್ವನಾಥ ಅಸೋಸಿಯೇಟ್ಸ್ ಬೆಂಗಳೂರು ಇವರೂ ಸಹ ಗುತ್ತಿಗೆದಾರರ ನೋಟೀಸಿಗೆ ಉತ್ತರ ನೀಡುತ್ತಾ ನಕ್ಷೆ ಮತ್ತು ಅಂದಾಜುಗಳಿಗೆ ಅನುಮೋದನೆಯನ್ನು ಸಕಾಲದಲ್ಲಿ ನೀಡಿದ್ದಾಗಿದೆ ಎಂದು ತಿಳಿಸಿದ್ದಲ್ಲದೇ EIRL ITEM ಗಳಿಗೂ ಸಹ ಸಕಾಲದಲ್ಲಿ ಅನುಮೋದನೆ ನೀಡದ್ದಾಗಿ ತಿಳಿಸಿ ಪತ್ರ ಬರೆದಿದ್ದಾರೆ(21-10-2013).

ಈ ಎಲ್ಲ ಬೆಳವಣಿಗೆಗಳು ಆದಾಗ್ಯೂ ಸಹ ಗುತ್ತಿಗೆದಾರ ಸಂಸ್ಥೆಯು Principal City And Session judge ರವರ ನ್ಯಾಯಲಯ ಬೆಂಗಳೂರಿಗೆ ಮೊರೆ ಹೋಗಿ Case Regr No AA-755/13 ರನ್ವಯ Arbitrator ರನ್ನು ನೇಮಿಸಿ ಪರಿಹಾರ ದೊರಕಿಸಿಕೊಡಲು ದಾವೆ ಹೂಡಿದರು.

ಅದಕ್ಕೂ ಸಹ ಪತ್ರ ಸಂಖ್ಯೆ: VTU/ACA/RE/13-14/11335 D: 21-12-2013 ರನ್ವಯ ಸದರ Arbitration ದಾವೆಯ ನೋಟೀಸಿನ ಕಂಡಿಕೆಗಳಿಗೆ ಉತ್ತರ ತಯಾರಿಸಿ ವಿಟಿಯುನ ವಕೀಲರಿಗೆ ಮುಂದಿನ ಕ್ರಮಕ್ಕೆ ವಿಟಿಯುನಿಂದ ಸಲ್ಲಿಸಲಾಗಿದೆ.

ಇದಾದನಂತರ ಸಂಬಂಧಿತ ಕಡತದ ಕಂಡಿಕೆ ಸಂಖ್ಯೆ:56ರ ಪ್ರಕಾರ ಸದರ ಕಾಮಗಾರಿ ಕುರಿತ ನ್ಯಾಯಿಕ ದಾವಗೆ ಗುತ್ತಿಗೆದಾರರ ಪರವಾಗಿ ಸ್ಟೇ(ತಡೆಯಾಜ್ಞೆ)ಸಿಗುವ ಸಾಧ್ಯತೆ ಇದ್ದು ಇದರಿಂದಾಗಿ ಸಂಬಂಧಿತ ಕಾಮಗಾರಿಯ ಗುತ್ತಿಗೆದಾರರಿಗೆ ಬಾಕಿ ಇರುವ ಲೆಕ್ಕಗಳು ಒಪ್ಪಿತವಾಗುವವರೆಗೆ (Setteled) ಕಾಮಗಾರಿಯು ಸ್ತಂಭಿತವಾಗಿ ಕಾಮಗಾರಿಯ ಕೆಲಸ ಅನಿರ್ದಿಷ್ಟ ಅವಧಿವರೆಗೆ ನಿಂತುಬಿಡುವುದು. ಕಾರಣ ಈಗಿರುವ ಈ ದಾವೆಯನ್ನು ನ್ಯಾಯಾಲಯದ ಹೊರಗೆ ರಾಜಿ ಒಪ್ಪಂದದ ಮೂಲಕ ಬಗೆಹರಿಸಿಕೊಳ್ಳುವುದು ಉಚಿತವೆಂದು ವಕೀಲರು ಹೇಳಿರುವದಾಗಿ ನಿವಾಸಿ ಇಂಜಿನೀಯವರು ತಿಳಿಸಿದ್ದನ್ನು ಲೆಕ್ಕ ಪರಿಶೋಧನೆಯಲ್ಲಿ ಗಮನಿಸಲಾಗಿದೆ.

ಅಂದರೆ ವಿತಾವಿವಿಯು ಸರಿಯಾದ ಕ್ರಮದಲ್ಲಿ ಕಾಮಗಾರಿಯ ಅನುಷ್ಠಾನದಲ್ಲಿ ಮುಂದುವರೆದಿದ್ದು, ಗುತ್ತಿಗೆದಾರರ ಪರವಾಗಿ ಅಂತಹ ಯಾವುದೇ ದಾಖಲೆಗಳು ಪುಷ್ಠಿ ನೀಡುವಂತಿರಲಿಲ್ಲವಾದರು, ಇದರಿಂದಾಗಿ ಗುತ್ತಿಗೆದಾರರಿಗೆ ಈದಾವೆಯಲ್ಲಿ ಗೆಲ್ಲುವ ಅವಕಾಶಗಳು ಇರಲಿಲ್ಲವಾದರೂ ಯಾವ ನಿರ್ದಿಷ್ಟ ಕಾರಣದಿಂದಾಗಿ ದಾವೆಯಿಂದ ವಿಟಿಯು ಹಿಂತೆಗೆಯುವ ಕ್ರಮ ಕೈಕೊಂಡಿದೆ ಎಂಬುದು ಸ್ಪಷ್ಟವಾಗುವುದಿಲ್ಲ.

ಹೀಗಾಗಿ ಗುತ್ತಿಗೆ ಕರಾರಿನ ಕಂಡಿಕೆ 49 ಮತ್ತು 50ರ ಪ್ರಕಾರ ಗುತ್ತಿಗೆದಾರರಿಂದ ವಿಟಿಯುಗೆ ಬರಬೇಕಾದ ಪರಿಹಾರಗಳು ಸಿಕ್ಕದಂತಾಗಿದೆ.

ಏತನ್ಮಧ್ಯೆ ಗುತ್ತಿಗೆದಾರರು ನೀಡಿದ ಬ್ಯಾಂಕ ಗ್ಯಾರಂಟಿ ಸಂಖ್ಯೆ 0505312BG0001176 ದಿನಾಂಕ:17-04-2012 ₹.2642000/- ಇದು ದಿನಾಂಕ:16-10-2013ರ ವರೆಗೆ ಅಸ್ತಿತ್ವದಲ್ಲಿದ್ದು, ಅದನ್ನು ಸಕಾಲದಲ್ಲಿ ನವೀಕರಿಸದೇ ಇರುವದರಿಂದ ಬ್ಯಾಂಕಿನಿಂದ (ಎಸ್.ಬಿ.ಐ-TFCPC ಶಾಖೆ ಬೆಂಗಳೂರು) ಸದರ ಬ್ಯಾಂಕ ಗ್ಯಾರಂಟಿ ಅವಧಿ ತೀರ್ಣವಾಗಿರುವದರಿಂದ ಮತ್ತು ಅದನ್ನು ಸಕಾಲದಲ್ಲಿ ವಿಟಿಯುನಿಂದ ನವೀಕರಿಸದೇ ಇರುವುದರಿಂದ ಈ ಬ್ಯಾಂಕ ಖಾತೆ ಕುರಿತ ಯಾವುದೇ ಸಂದಾಯಗಳಿಗೆ ಬ್ಯಾಂಕು ಬಾಧ್ಯವಾಗುವದಿಲ್ಲ ಎಂದು ತಿಳಿಸಿದ್ದಾರೆ. ಇದರಿಂದಾಗಿ ಗುತ್ತಿಗೆದಾರರು ಠೇವಿಸಿದ್ದ **ಈ ಠೇವಣಿ ಮೊತ್ತ ವಿಟಿಯುನ ನಿರ್ಲಕ್ಷದಿಂದ ತಪ್ಪಿಹೋಗಿ ಗುತ್ತಿಗೆಯ ನಿರ್ವಹಣಾ ಅವಧಿಯು ಮುಗಿಯುವವರೆಗೆ ಗುತ್ತಿಗೆದಾರರ ಯಾವುದೇ ಠೇವಣಿಗಳು ವಿಟಿಯುಗೆ ದಕ್ಕದಂತಾಗಿರುತ್ತವೆ.** ಈ ಬಗ್ಗೆ ಕೈಕೊಂಡ ಕ್ರಮಕ್ಕೆ ವಿವರಗಳನ್ನು ನೀಡಲು ಕೋರಿದೆ.

ತದನಂತರ ವಿಟಿಯುನಿಂದ ಗುತ್ತಿಗೆದಾರರಿಗೆ 3ನೇ ಮತ್ತು ಅಂತಿಮ ಬಿಲ್ಲನ್ನು ಮೇಲೆ ತಿಳಿಸಿದ ಕಾರಣದಿಂದಾಗಿ (ರಾಜಿ ಮಾಡಿಕೊಂಡಿದ್ದರಿಂದ) ₹.51,42,650/-ಗಳಿಗೆ ಅಂತಿಮ ಬಿಲ್ಲನ್ನು ದಿನಾಂಕ:20-3-2013 ರಂದು ನೀಡಿತು.

ಆದರೆ ಸದರ ಕಾಮಗಾರಿಯು ಅರ್ಧಕ್ಕೆ ನಿಲ್ಲಿಸಿ ಅಂತಿಮಗೊಳಿಸಿದ್ದರಿಂದ ಮತ್ತು ಈ ಬಿಲ್ಲನ್ನು ನ್ಯಾಯಿಕ ದಾವೆಯಿಂದ ಹಿಂದೆ ಸರಿದು ರಾಜಿ ಮೂಲಕ ಸೆಟಲ್ ಮಾಡಿದ್ದರಿಂದ ಸಂಬಂಧಿತ ಬಿಲ್ಲಿನ ಮೇಲೆ ಎಲ್ಲ ಸಂದಾಯಗಳನ್ನು ಪರಿಶೀಲಿಸುವ ಕುರಿತು ಆ ಸಂಸ್ಥೆ ನಿರ್ವಹಿಸಿ ಅಳತೆಗಳ ಜಂಟಿ ಪರಿವೀಕ್ಷಣೆ/ತಪಾಸಣೆ ಕುರಿತು ಕ್ರಮಕೈಕೊಳ್ಳದೆ ಇದ್ದುದರಿಂದ ಬಾಕಿ ಉಳಿದ ಕಾಮಗಾರಿಯ ಐಟಂಗಳು, ಅವುಗಳ ಪ್ರಮಾಣ ಮತ್ತು ಒಟ್ಟು ಉಳಿದ ಕಾಮಗಾರಿಯ ಮೊತ್ತಗಳನ್ನು ವಿಟಿಯು ದೃಢೀಕರಿಸಲಾಗಲಿಲ್ಲ. ಮತ್ತು ಕಾಮಗಾರಿಯ ಕುರಿತು ಪೂರ್ಣ ಮತ್ತು ಅಂತಿಮವಾಗಿ ಒಪ್ಪಿತವಾಗಿರುವ ಬಗ್ಗೆ ಗುತ್ತಿಗೆದಾರರಿಂದ ದೃಢೀಕರಣ ಪಡೆದಿದ್ದರ ಬಗ್ಗೆ ದಾಖಲೆ ಇರುವದಿಲ್ಲ. ಕಾರಣ ಈ ಬಗ್ಗೆ ದಾಖಲೆಗಳನ್ನು ಅಳತೆ ಪುಸ್ತಕ ಮತ್ತು ಬಿಲ್ಲುಗಳಲ್ಲಿ ಪಡೆದ ಬಗ್ಗೆ ದಾಖಲೆ ಪಡೆದಿದ್ದಲ್ಲಿ ತಿಳಿಸುವುದು.

ಅದೂ ಅಲ್ಲದೇ ಬಾಕಿ ಉಳಿದ (ಬ್ಯಾಲನ್ಸ್ ವರ್ಕ) ₹.37758306/-ಗಳನ್ನು ಪುನಃ ಅನುಷ್ಠಾನಗೊಳಿಸಲು ವಿಟಿಯುಗೆ ಹೆಚ್ಚುವರಿಯಾಗಿ ಭರಿಸಬೇಕಾದ ಹೊರೆ ಎಷ್ಟು ಎಂಬ ಬಗ್ಗೆ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಸೂಚಿಸಿದೆ. ಮತ್ತು ಇತಂಹ ಅಸಮರ್ಪಕ ಕ್ರಮದಿಂದಾಗಿ ವಿವಿಗೆ ಉಂಟಾದ ಈ ನಷ್ಟದ ಕುರಿತು ಸಹ ಅನುಸರಣೆ ನೀಡಲು ಸೂಚಿಸಲಾಗಿತ್ತು.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :19 ದಿನಾಂಕ: 07-01-2016 ನ್ನು ನೀಡಲಾಗಿತ್ತು ಆದರೆ ಅದರಂತೆ ವಿವಿಯಿಂದ ನೀಡಿದ ಅನುಸರಣೆಯು ಅಸಮರ್ಪಕ ಅನುಸರಣೆ ಆಕ್ಷೇಪಣೆಯ ಅಂಶಗಳಿಗೆ ಅನುಸಾರವಾಗಿ ಅನುಸರಣೆ ಇರುವದಿಲ್ಲವಾದರಿಂದ ಅಂಗೀಕರಿಸಲಾಗಲಿಲ್ಲ. ಕಾರಣ ₹.37758306/-ಗಳನ್ನು ~~ಆಕ್ಷೇಪಣೆಯಲ್ಲಿರಿಸಲಾಗಿದೆ.~~ ಸದರಿ ಕಾಮಗಾರಿ ಪೂರ್ಣಗೊಳ್ಳದಿರುವ ಮೇಲೆ ಕೋರಿದ ಮೊತ್ತಕ್ಕಿಂತ ಹೆಚ್ಚಿನ ಪಾವತಿಯಾಗುವ ಮೊತ್ತವನ್ನು out of court settle ಮಾಡಿಕೊಳ್ಳಲು ಕಾರಣರಾದ ವ್ಯಕ್ತಿಗಳಿಂದ ವಸೂಲಾತಿಗೆ ಸೂಚಿಸಿದೆ.

37) ವಿತಾವಿವಿಯ ಬೆಳಗಾವಿಯ ಪ್ರಾದೇಶಿಕ ಕೇಂದ್ರ ನಾಗರಭಾವಿ ಬೆಂಗಳೂರಿನಲ್ಲಿ ಇಂಟೀರಿಯರ್ ಡ್ವಿಜನ್ 10000 ಪಿಡಿಸಿ ಮತ್ತು ಅಡಿಶನಲ್ ಇಂಟೀರಿಯರ್ ವರ್ಕ್ಸ್ ಆಡಿಟೋರಿಯಂ ಗೆಸ್ಟ್ ಹೌಸ್, ಆಡ್ಮಿನೆಸ್ಟ್ರೇಶನ್ & ವಿಟಿಯು ಪ್ರಾಂತೀಯ ಕಛೇರಿ ನಾಗರಭಾವಿ ಬೆಂಗಳೂರು ₹.2,46,00,000/- ಕಾಮಗಾರಿಯನ್ನು ನೇರವಾಗಿ ಸಿ.ಎಸ್.ಆರ್ 2013-14 ಮತ್ತು ಮಾರ್ಕೆಟ್ ದರಗಳ ಪ್ರಕಾರ ಟೆಂಡರ್ ಕರೆಯದೇ ಅನಿಯಮಿತವಾಗಿ ವಹಿಸಿಕೊಟ್ಟಿದ್ದು.

ವಿತಾವಿವಿಯ ಬೆಳಗಾವಿಯಲ್ಲಿ ಮೇಲೆ ವಿವರಿಸಿದ ಕಾಮಗಾರಿಯ ಕೆಲಸವನ್ನು ಕರಾರು ಒಪ್ಪಂದ ಸಂ:ವಿಟಿಯು/ಐ.ಆರ್.ಸಿ/ನಂ 24/2014-15 ದಿನಾಂಕ:9-6-2014ರ ಕರಾರು ಒಪ್ಪಂದದ ಪ್ರಕಾರ ಮೆ॥ಬಿ.ಎಸ್.ಆರ್ ಇನ್‌ಫೋಟೆಕ್ ಭಾರತ ಲಿಮಿಟೆಡ್ ಬೆಂಗಳೂರು ಇವರಿಗೆ ವಹಿಸಿಕೊಡಲಾಗಿದೆ. ಈ ಬಗ್ಗೆ ಪರಿಶೀಲಿಸಲಾಗಿ ಈ ಕೆಳಗಿನ ನ್ಯೂನತೆಗಳು/ಆಕ್ಷೇಪಣೆಗಳು ಕಂಡು ಬರುತ್ತವೆ. ವಿವರ ಈ ಕೆಳಗಿನಂತಿವೆ.

1) ಸದರ ಕಾಮಗಾರಿಯನ್ನು ವಿಟಿಯುದ 91ನೇಯ ಎಸ್ಟೇಟ್ ಬೋರ್ಡ ಮೀಟಿಂಗ್ ದಿನಾಂಕ:15-4-2014ರ ನಡುವಳಿಗಳು ಅಜೆಂಡಾ ಸಂಖ್ಯೆ 10ಎರ ಪ್ರಕಾರ ಮೆ॥ಬಿ.ಎಸ್.ಆರ್ ಇನ್‌ಫೋಟೆಕ್ ಭಾರತ ಲಿಮಿಟೆಡ್ ಬೆಂಗಳೂರು ಇವರಿಗೆ ಅಂದಾಜು ಪತ್ರದ ದರಗಳ ಪ್ರಕಾರ ನಿರ್ವಹಿಸಲು ತಿಳಿಸಿ ಸದರ ಸಂಸ್ಥೆಯೊಂದಿಗೆ ಪುರವಣಿ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ತಿಳಿಸಿ ನಿರ್ಣಯ ನೀಡಿದ್ದಾರೆ. ಸದರ ಕಾಮಗಾರಿಯ ಒಟ್ಟು ಮೊತ್ತ ₹.24600000/- ಗಳಾಗಿದ್ದು ಈ ಕಾಮಗಾರಿಯನ್ನು ಕೇವಲ ಎಸ್ಟೇಟ್ ಬೋರ್ಡ ಮೀಟಿಂಗ್‌ನ (15-4-2014) ನಡುವಳಿಗಳ ಮೂಲಕ ಅನುಮೋದನೆ ನೀಡಿ ಗುತ್ತಿಗೆದಾರರನ್ನು ಆಯ್ಕೆ ಮಾಡಿದ್ದರಿಂದ ಅದು ಸರಕಾರಿ ಆದೇಶ ಸಂ:**PWD/671/FC1/2009** ದಿನಾಂಕ:3-2-2010ರ ಪ್ರಕಾರ ₹.200.00 ಲಕ್ಷಗಳನ್ನು ಮೀರಿದ್ದರಿಂದ ಸರಕಾರದ ಅನುಮೋದನೆ ಪಡೆಯುವುದು ಅವಶ್ಯವಿತ್ತು. ಕಾರಣ ಈ ಬಗ್ಗೆ ಅಂತಹ ಅನುಮೋದನೆಗಳನ್ವಯ ಪಡೆದಿದ್ದಲ್ಲಿ ಲೆಕ್ಕಪರಿಶೋಧನೆಗೆ ದಾಖಲೆಗಳನ್ನು ಹಾಜರುಪಡಿಸುವುದು ಮತ್ತು ಕೆ.ಟಿ.ಪಿ.ಪಿ ನಿಯಮ 49 ಪ್ರಕಾರ ಕಾಮಗಾರಿ ಅನುಷ್ಠಾನಕ್ಕಾಗಿ ₹.5.00 ಲಕ್ಷ ಮತ್ತು ಸಾಮಗ್ರಿಗಳ ಸಂಗ್ರಹಣೆ ಅಥವಾ ಸೇವೆಗಾಗಿ ₹.1,00,000/-ಗಳ ಮಿತಿಯನ್ನು ದಾಟಿದ ಎಲ್ಲ ಕಾಮಗಾರಿಗಳಿಗೂ ಕಡ್ಡಾಯವಾಗಿ ಟೆಂಡರ್ ಮೂಲಕವೇ ಅನುಷ್ಠಾನಗೊಳಿಸಬೇಕೆಂದು ತಿಳಿಸಲಾಗಿದೆ. ಪ್ರಸಕ್ತ ಪ್ರಕರಣದಲ್ಲಿ ಕಾಮಗಾರಿಯ ಅನುಷ್ಠಾನಕ್ಕೆ ನಿಗದಿಪಡಿಸಿದ ಮೊತ್ತ ₹.2,46,00,000/-ಗಳಾಗಿದ್ದು ಇಷ್ಟು ದೊಡ್ಡ ಮೊತ್ತದ ಕಾಮಗಾರಿಯನ್ನು ಸರಕಾರದ ಅನುಮೋದನೆ ಪಡೆಯದೇ ಹಾಗೂ ಕೆ.ಟಿ.ಪಿ.ಪಿ ನಿಯಮಗಳನ್ವಯ ಟೆಂಡರ್ ಕರೆಯದೇ ಗುತ್ತಿಗೆ ನೀಡಿದ್ದು ಅತ್ಯಂತ ಆಕ್ಷೇಪಾರ್ಹ.

2) ಇನ್ನು ವಿಟಿಯುದ 91ನೇಯ ಎಸ್ಟೇಟ್ ಬೋರ್ಡ ಮೀಟಿಂಗ್ ದಿನಾಂಕ:15-4-2014ರ ನಡುವಳಿಗಳು ಅಜೆಂಡಾ ಸಂಖ್ಯೆ 10ಎರ ಪ್ರಕಾರ ಈ ಕೆಲಸವು ಗುತ್ತಿಗೆದಾರರಿಂದ ವಿಳಂಬದಿಂದ ನಿರ್ವಹಿಸಿ ತದನಂತರ ಕಾಮಗಾರಿಯನ್ನು ನಿಲ್ಲಿಸಿದ್ದರಿಂದ, ಇದರಿಂದಾಗಿ ಗುತ್ತಿಗೆಯನ್ನು ವಿಟಿಯುದಿಂದ ಮೊಟಕುಗೊಳಿಸಿದ್ದರಿಂದ, ಈ ಕಾರಣದಿಂದಾಗಿ ಗುತ್ತಿಗೆದಾರರು ಕೇಸ ನಂಬರ:ಎಎ/755/2013ರನ್ವಯ

ನ್ಯಾಯಾಲಯದ ಮೊರೆ ಹೋಗಿ ಆರ್ಬಿಟ್ರೇಟರ್‌ರನ್ನು ನಿಯಮಿಸುವ ಬಗ್ಗೆ ಮೊರೆ ಹೋಗಿರುವದರಿಂದ ಕಾಮಗಾರಿಯನ್ನು ಅನವಶ್ಯಕ ಕಾಯ್ದೆಗಳ ತೊಡಕು ಹಾಗೂ ವಿಳಂಬಗಳನ್ನು ನಿವಾರಿಸುವ ನಿಟ್ಟಿನಲ್ಲಿ ಪರಸ್ಪರವಾಗಿ ನ್ಯಾಯಾಲಯದ ಹೊರಗಡೆ ರಾಜಿ ಮಾಡಿಕೊಂಡು ಸಂಬಂಧಿತ ಗುತ್ತಿಗೆದಾರರ ಕ್ಲೇಮುಗಳನ್ನು ಪಾವತಿಸಲಾಗಿದೆ ಎಂಬ ವಿಷಯಗಳನ್ನು ಈ ನಡುವಳಿಯಲ್ಲಿ ಎಸ್ಟೇಟ್ ಬೋರ್ಡನಿಂದ ಅನುಸಮರ್ಥಿಸಲಾಗಿದೆ. ಇದಲ್ಲದೇ ಮೇಲೆ ತಿಳಿಸಿದ ಗುತ್ತಿಗೆದಾರರಿಗೆ ಬಾಕಿ ಉಳಿದ ಕೆಲಸ ಹಾಗೂ ಮೇಲೆ ತಿಳಿಸಿದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ನಿರ್ಣಯಿಸಲಾಗಿದೆ.

ಆದರೆ ಗುತ್ತಿಗೆದಾರರೊಂದಿಗೆ ಮಾಡಿಕೊಂಡ ಕರಾರು ಒಪ್ಪಂದದಲ್ಲಿ ಈ ಬಾಕಿ ಉಳಿದ ಕಾಮಗಾರಿಗಳ ಕುರಿತಂತೆ ಯಾವುದೇ ವಿವರಗಳನ್ನು ನೀಡದೇ ಮೇಲೆ ತಿಳಿಸಿದ ಕಾಮಗಾರಿ ವಿಷಯವನ್ನಷ್ಟೇ ತಿಳಿಸಿ ಕಾಮಗಾರಿ ಕರಾರು ಒಪ್ಪಂದವನ್ನು ಮಾಡಿಕೊಳ್ಳಲಾಗಿರುತ್ತದೆ. ಪ್ರತ್ಯೇಕ ಅಂದಾಜು/ಕರಾರು ಒಪ್ಪಂದ ಮಾಡಿಕೊಳ್ಳದೇ ಒಟ್ಟಾರೆ ಇದರಿಂದಾಗಿ ಅರ್ಧಕ್ಕೆ ನಿಂತ ಕಾಮಗಾರಿಯ ಬಗ್ಗೆ ಅಂದಾಜು ಪತ್ರಿಕೆ/ಕರಾರು ಒಪ್ಪಂದ ಮಾಡಿಕೊಂಡಿದ್ದರಿಂದ ಅರ್ಧಕ್ಕೆ ನಿಂತ ಈ ಕಾಮಗಾರಿಯಿಂದಾಗಿ ವಿಶಾವಿವಿಗೆ ಎಷ್ಟು ಮೊತ್ತದ ಹೆಚ್ಚಿನ ಹೊರೆ ಬಿದ್ದಂತಾಗಿದೆ ಎನ್ನುವುದು ತಿಳಿಯುವುದಿಲ್ಲ. ಹಾಗೆಯೇ ಇಂದಿನ ಟೆಂಡರ್ ಗುತ್ತಿಗೆಯ ಕರಾರು ಕಂಡಿಕೆ 49 & 50ರ ಪ್ರಕಾರ ವಿಫಲ ಗುತ್ತಿಗೆದಾರರು ನೀಡಬೇಕಾದ ಪರಿಹಾರಗಳ ಬಗ್ಗೆ ಸಹ ವಿವರಗಳು ದಾಖಲೆಯಲ್ಲಿ ಕಂಡುಬರುವದಿಲ್ಲ. ಕಾರಣ ಈ ಅಸಮರ್ಪಕ ಪದ್ಧತಿಯ ಗುತ್ತಿಗೆ ನೀಡುವಿಕೆಯ ಕ್ರಮಗಳು ಸಹ ಆಕ್ಷೇಪಾರ್ಹ.

3) ಇನ್ನು ಕರಾರು ಒಪ್ಪಂದಲ್ಲಿ ತಿಳಿಸಿದಂತೆ ಅಂದಾಜು ಪತ್ರಿಕೆಯ ದರಗಳ ಪ್ರಕಾರ ಹಾಗೂ ಸದರ ಕಾಮಗಾರಿಯ ಅನುಷ್ಠಾನದ ಕಡತದಲ್ಲಿನ ದಿನಾಂಕ:11-6-2014ರ ಕಛೇರಿ ಟಿಪ್ಪಣಿಯ ಕಂಡಿಕೆ(1)ರ ವಿವರಗಳ ಪ್ರಕಾರ ಕಾಮಗಾರಿಯ ದರಗಳು ಸಿ.ಎಸ್.ಆರ್2013-14 ಮತ್ತು ಮಾರ್ಕೆಟ್ ದರಗಳ ಪ್ರಕಾರ ಅನುಷ್ಠಾನಗೊಳಿಸಲು ವಹಿಸಿಕೊಡಲಾಗಿದೆ ಎಂದು ತಿಳಿಸಲಾಗಿದೆ. ಹೀಗಿದ್ದಾಗ ಮಾರ್ಕೆಟ್ ದರಗಳನ್ನು ಕಾಮಗಾರಿಯ ಯಾವ ಯಾವ ಕೆಲಸದ ಐಟಂಗಳಿಗೆ ಆಕರಿಸಿ ಅನುಷ್ಠಾನಗೊಳಿಸಿದೆ ಎಂಬ ಬಗ್ಗೆ ಮತ್ತು ಈ ದರಗಳನ್ನು ಕೊಟೇಶನ್ ಅಥವಾ ಇತರೆ ಖರೀದಿ ನಿಯಮಗಳನ್ನು ಅನುಸರಿಸಿ ಅನುಮೋದಿಸಲಾಗಿದೆ ಎಂಬ ಬಗ್ಗೆ ಲೆಕ್ಕ ಪರಿಶೋಧನೆಗೆ ವಿವರಗಳನ್ನು ಒದಗಿಸುವುದು. ಇಲ್ಲವಾದಲ್ಲಿ ಪಾವತಿಗೆ ಅನುಮತಿಸಿರುವ ದರಗಳು ಖರೀದಿ ನಿಯಮಗಳಿಗೆ ವ್ಯತಿರಿಕ್ತವಾಗಿ ಆಕರಿಸಿರುವ ದರಗಳೆಂದು ಭಾವಿಸಬೇಕಾಗುತ್ತದೆ. ಕಾರಣ ಇದು ಸಹ ಆಕ್ಷೇಪಾರ್ಹ ವಿಷಯವಾಗಿರುತ್ತದೆ.

4) ಇನ್ನು ಕಾಮಗಾರಿಯ ಅನುಷ್ಠಾನದಿಂದಾಗಿ ಗುತ್ತಿಗೆದಾರರಿಗೆ ಈ ಕೆಳಗಿನಂತೆ ಪಾವತಿಸಲಾಗಿದೆ. ವಿವರ ಈ ಕೆಳಗಿನಂತಿದೆ.

1) ಆರ್.ಎ ಬಿಲ್ 1. ಪಾವತಿ ದಿನಾಂಕ: 1-7-2014 ₹. 4255457-00
2) ಆರ್.ಎ ಬಿಲ್ 2. ಪಾವತಿ ದಿನಾಂಕ: 29-10-2014 ₹. 7781626-00
3) ಆರ್.ಎ ಬಿಲ್ 3. ಪಾವತಿ ದಿನಾಂಕ: 10-3-2015 ₹ 6189922-00
4) ಆರ್.ಎ ಬಿಲ್ 4. ಪಾವತಿ ದಿನಾಂಕ: 22-12-2015 ₹. 1292688-00
ಮತ್ತು ಅಂತಿಮ ಬಿಲ್ಲು ಒಟ್ಟು ₹. 19519693-00

ವರ್ಕ್ ಕಂಪ್ಲೀಶನ್‌ನಲ್ಲಿ ₹.19519939-00 ಎಂದು ನಮೂದಿತವಾಗಿದೆ. ಇದರಿಂದಾಗಿ ಅಂದಾಜು ಮೊತ್ತ ₹.24,60,000/-ಗಳಿಗೆ ಪ್ರತಿಯಾಗಿ ₹.5080061-00ಗಳ ಉಳಿತಾಯ(20.65%) ಆಗಿದ್ದು ನಮೂದಿತವಾಗಿದೆ.

ಅದು ಅಲ್ಲದೇ ₹.24600000/- ಗಳ ಕಾಮಗಾರಿಯಲ್ಲಿ ₹.19519693/-ಗಳ ಅನುಷ್ಠಾನದಿಂದಾಗಿ ₹.5080307-00ಗಳ ಕೆಲಸ ಬಾಕಿ ಉಳಿದಂತಾಗಿದ್ದು ಈ ಮೊತ್ತದ ಬಾಕಿ ಕೆಲಸ ಉಳಿದಿದ್ದರಿಂದಾಗಿ ಉದ್ದೇಶಿತ ಕಾಮಗಾರಿಯು ಪೂರ್ಣವಾಗಿದೆ ಎಂದು ಯಾವ ಆಧಾರದ ಮೇಲೆ ಪ್ರಮಾಣೀಕರಿಸಲಾಗಿದೆ ಎಂಬ ಬಗ್ಗೆ ಸೂಕ್ತ ಅನುಸರಣೆಯನ್ನು ನೀಡಲು ಕೋರಿದೆ.

5) ಇನ್ನು ಪಾವತಿಸಿದ ಆರ್.ಎ ಬಿಲ್ಲುಗಳನ್ನು ಪರಿಶೀಲಿಸಲಾಗಿ ಮೊದಲನೆಯ ಆರ್.ಎ. ಬಿಲ್ಲು ₹.4255457-00ಗಳ ಬಿಲ್ಲು ದಿನಾಂಕ:11-6-2014 ರಂದು ಪಾವತಿ ಕುರಿತಾಗಿ ನಿವಾಸಿ ಅಭಿಂಯತರರಿಂದ ಸಲ್ಲಿಸಲ್ಪಟ್ಟಿದೆ. ಸದರ ಕಾಮಗಾರಿಯ ಪ್ರಾರಂಭದ ಸಲುವಾಗಿ ಗುತ್ತಿಗೆದಾರರಿಗೆ ಕಾಮಗಾರಿ ಆದೇಶ ಸಂ:ವಿಟಿಯು/ಎ.ಸಿ.ಎ./ಆರ್.ಇ/2014-15/114ಎ ದಿನಾಂಕ:9-6-2014ರನ್ವಯ ದಿನಾಂಕ: 9-6-2014ರಂದು ನೀಡಲ್ಪಟ್ಟಾಗ ದಿನಾಂಕ:11-6-2014 ರಂದು ₹.42.55ಲಕ್ಷ ಕಾಮಗಾರಿಯ ಕೆಲಸ ನಿರ್ವಹಿಸದೆ ಎಂದು ಹೇಳಿದ್ದು ಮೇಲ್ನೋಟಕ್ಕೆ ಸಂಶಯಕ್ಕೆ ಎಡೆ ಮಾಡಿ ಕೊಡುತ್ತದೆ. ಅದು ಅಲ್ಲದೇ ಸದರ ಬಿಲ್ಲಿನಲ್ಲಿ ಅಡಕವಾದ ಕೆಲಸದ ಅನುಷ್ಠಾನವು ವಾಸ್ತು ಶಿಲ್ಪಿಕಾರರು ಮತ್ತು 3ನೇ ಪಕ್ಷದ ಪರಿವೀಕ್ಷಣಾ ಪ್ರಮಾಣ ಪತ್ರಗಳ ಅನುಪಸ್ಥಿತಿಯಿಂದಾಗಿ 90% ಪಾವತಿಗಳನ್ನು ಮಾತ್ರ ಪಾವತಿಸಲು ಶಿಫಾರಸ್ಸು ಮಾಡಿದ್ದು, ಸಹ ಮೇಲಿನ ಅಂಶಕ್ಕೆ ಪುಷ್ಟಿಯನ್ನು ನೀಡುತ್ತದೆ. ಕಾರಣ ಕಾಮಗಾರಿಯ ₹.42.55 ಲಕ್ಷಗಳನ್ನು ಕೇವಲ 2 ರಿಂದ 3 ದಿನಗಳಲ್ಲಿ ಹೇಗೆ ನಿರ್ವಹಿಸಲಾಗಿದೆ ಎಂಬ ಬಗ್ಗೆ ಸಮರ್ಥಿಸುವಂತೆ ಅನುಸರಣೆಯನ್ನು ನೀಡಲು ಸೂಚಿಸಲಾಗಿತ್ತು.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :21 ದಿನಾಂಕ: 08-01-2016 ನ್ನು ನೀಡಲಾಗಿತ್ತು ಆದರೆ ವಿವಿಯಿಂದ ನೀಡಿದ ಅನುಸರಣೆಯು ಅಸಮರ್ಪಕ ಅನುಸರಣೆ ಆಕ್ಷೇಪಣೆಯ ಅಂಶಗಳಿಗೆ ಅನುಸಾರವಾಗಿ ಅನುಸರಣೆ ಇರುವದಿಲ್ಲವಾದರಿಂದ ಅಂಗೀಕರಿಸಲಾಗಲಿಲ್ಲ. ಆದ್ದರಿಂದ ₹.19519693-00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

38) ಕ್ರೀಡಾ ವಿಭಾಗಕ್ಕೆ 2013-14ನೇ ಸಾಲಿಗೆ ಬೇಕಾಗುವ ಟ್ರಾಕ್ ಸೂಟಗಳು ಹಾಗೂ ಕೋ-ಆರ್ಡಿನೇಟುಗಳನ್ನು ಪೂರೈಸುವಲ್ಲಿ ಟೆಂಡರ ನಿಯಮ ಪಾಲಿಸದಿರುವ ಬಗ್ಗೆ.

2014-15ನೇ ಸಾಲಿನ ಲೆಕ್ಕಪರಿಶೋಧನಾ ಅವಧಿಯಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: ವಿತಾವಿ/ಎಸ್.ಎ.ಪಿ/ಎಸ್.ಎಲ್.-200/2013-14/6601/ ದಿ:11-9-203 ಕೆಲಸದ ಹೆಸರು ವಿತಾವಿವಿ ಬೆಳಗಾವಿ ಕ್ರೀಡಾ ವಿಭಾಗಕ್ಕೆ 2013-14ನೇ ಸಾಲಿಗೆ ಬೇಕಾಗುವ ಟ್ರಾಕ್ ಸೂಟಗಳು ಹಾಗೂ ಕೋ-ಆರ್ಡಿನೇಟುಗಳು ಪೂರೈಸುವ ಕುರಿತು.

1) ಕಡತ ಸಂಖ್ಯೆ: ಟಿ 200

2) ಟೆಂಡರಗಿಟ್ಟ ಅಂದಾಜು ಮೊತ್ತ : 615000/-

3) ಟೆಂಡರನಲ್ಲಿ ಭಾಗವಹಿಸಿದವರ ಸಂಖ್ಯೆ: 03

4) ಕಂಪೇರೆಟ್ಯೂವ್ ಸ್ಟೇಟಮೆಂಟ್ ಪ್ರಕಾರ

1) m/s Olympic Sporting company Bangalore- 1159350-3rd

2) m/s Jain sports and scientific shivmoga – 854627-2nd

3) m/s planet sports Bangalore - 574095-1st ಕಡಿಮೆ

ಕಡಿಮೆ ದರ ನಮೂದಿಸುವರಿಗೆ Purchase order ನೀಡಲಾಗಿಲ್ಲ. m/s Jain sports and scientific shivmoga ಇವರಿಗೆ vtu/sap/sports/T-200/2013-14/9711 D:21-11-2013 ರಂದು Purchase order ನೀಡಿರುತ್ತಾರೆ. ಇವರಿಗೆ ಪಾವತಿಸಿದ ವಿವರ ಈ ಕೆಳಗಿನಂತಿದೆ.

1) ಚೆಕ್ ನಂಬರ್: /ದಿನಾಂಕ: 233427 ದಿ:10-10-2014

2) ಚೆಕ್ ನೀಡಿದ ಮೊತ್ತ- 811837

3) ವೋಚರ್ ನಂಬರ್ – 2666

4) ಒಟ್ಟು ಬಿಲ್ಲಿನ ಮೊತ್ತ – 854627

5) Purchase order Amount – 854627 – ದಿ:21-11-2013

6) ಟೆಂಡರ್‌ಗಿಟ್ಟ ಅಂದಾಜು ಮೊತ್ತ-615000

7) ಹೆಚ್ಚಿಗೆ ಬಿಲ್ಲ ತಯಾರಿಸಿ ಸಂದಾಯ ಮಾಡಿದ್ದು – 239627

ಒಟ್ಟು – 854627

Comparative Statement ಪ್ರಕಾರ ಕಡಿಮೆ ನಮೂದಿಸಿದವರು m/s planet sports Bangalore ಆದರೆ m/s Jain sports and scientific shivmoga ಇವರು ₹.854627-00 ಹೆಚ್ಚಿಗೆ ದರ ನಮೂದಿಸಿದ್ದು ಇವರಿಗೆ ಪೂರೈಕೆ ಆದೇಶ ದಿನಾಂಕ:21-11-2013 ರಂದು ನೀಡಲಾಗಿದ್ದು ಇದೆ.

1) ಟೆಂಡರ್ ನಿಯಮಾನುಸಾರ ಕಡಿಮೆ ದರ ನಮೂದಿಸಿದವರಿಗೆ ಟೆಂಡರ್ ನೀಡಬೇಕಾಗಿತ್ತು. Techanical Bid ಸಮರ್ಪಕ ವಿಲ್ಲದಿದ್ದಲ್ಲಿ ಮತ್ತು ಸಮರ್ಪಕ ಸ್ಪರ್ಧೆ ಇಲ್ಲದಿದ್ದಾಗ ಮರು ಟೆಂಡರ್ ಕರೆಯಬೇಕಿತ್ತು. ಆದರೆ ಮರು ಟೆಂಡರ್ ಕರೆದ ದಾಖಲೆ ಹಾಜರುಪಡಿಸಿಲ್ಲ.

2) ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಿದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಇದರಿಂದಾಗಿ ಕೆ.ಟಿ.ಪಿ.ಪಿ ಕಾಯ್ದೆ-1999 ನಿಯಮ 2000 ಉಲ್ಲಂಘಿಸಿದಂತಾಗಿದೆ. ಟೆಂಡರ್ ನಿಯಮ ಪಾಲಿಸಿದ ಬಗ್ಗೆ ದಾಖಲೆಗಳೊಂದಿಗೆ ಲೆಕ್ಕಪರಿಶೋಧನೆ ಹಾಜರುಪಡಿಸುವವರೆಗೆ ಒಟ್ಟು ಬಿಲ್ಲಿನ ಮೊತ್ತ ₹.854565-00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :22 ದಿನಾಂಕ: 04-01-2016 ನ್ನು ನೀಡಲಾಗಿತ್ತು ಆದರೆ ವಿವಿಯಿಂದ ನೀಡಿದ ಅನುಸರಣೆಯು ಅಸಮರ್ಪಕ ಆಗಿದ್ದರಿಂದ ಅನುಸರಣೆ ಅಂಗೀಕರಿಸಲಾಗಲಿಲ್ಲ.

39) ಕ್ರೀಡಾ ವಿಭಾಗಕ್ಕೆ ಬೇಕಾಗುವ 2014-15ನೇ ಸಾಲಿನ ಕ್ರೀಡೆಗಳಿಗೆ Trophyಗಳನ್ನು ಪೂರೈಸುವಲ್ಲಿ ಟೆಂಡರ್ ನಿಯಮ ಪಾಲಿಸದೇ ಹೆಚ್ಚಿನ ದರ ನಮೂದಿಸಿದ (1st Highest) M/S Olympic Sporting Comp Bangalore ಇವರಿಗೆ ಪೂರೈಕೆ ಆದೇಶ ಬಗ್ಗೆ.

2014-15 ನೇ ಸಾಲಿನ ಲೆಕ್ಕಪರಿಶೋಧನಾ ಅವಧಿಯಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ/ವಿತಾವಿ/ಎಸ್ಎಪಿ/ಕ್ರೀಡೆ/ಟಿ-224/2013-14/12313 ದಿನಾಂಕ 27-1-2014.

ಕೆಲಸದ ಹೆಸರು: ವಿ.ತಾ.ವಿ.ವಿಯ ಕ್ರೀಡಾ ವಿಭಾಗಕ್ಕೆ ಬೇಕಾಗುವ 2014-15ನೇ ಸಾಲಿನ ಕ್ರೀಡೆಗಳಿಗೆ Trophy ಗಳನ್ನು ಪೂರೈಸುವ ಕುರಿತು.

1) ಕಡತ ಸಂಖ್ಯೆ- T-224.
2) ಟೆಂಡರ್‌ಗಿಟ್ಟ ಅಂದಾಜು ಮೊತ್ತ- 13,50,000/-
3) ಟೆಂಡರ್‌ನಲ್ಲಿ ಭಾಗವಹಿಸಿದವರ ಸಂಖ್ಯೆ- 03.
4) Comparative Statement – (Sports Technical Committee)
   i) M/s Jain Sports and Scientific Shimoga- Rs.13,48,975/-IInd Lowest
   ii) M/s Olympic Sporting Co- Bengaluru- Rs.17,06,352/-IIIrd Lowest
   iii) M/s Brindavan Silver Crafts.Bengaluru-Rs.12,59,885/-Ist Lowest

Comparative Statement ನಲ್ಲಿ M/s Brindavan Silver Crafts.Bengaluru-Rs.12,59,885/- ಕಡಿಮೆ ದರ ನಮೊದಿಸಿದ್ದರೆ ಅತೀ ಹೆಚ್ಚು ದರ ನಮೂದಿಸಿದ M/s Olympic Sporting Co- Bengaluru ಇವರಿಗೆ Ref-VTU/SAP/Trophies/T-224/2014-15/1781-Date-30-05-2014 ರನ್ವಯ - ₹.17,06,352/- ಗಳಿಗೆ Purchase Order ನೀಡಿದ್ದು ಇದೆ ಮತ್ತು ಇದಕ್ಕೆ ಸಂಬಂಧಿಸಿದಂತೆ ಪಾವತಿಸಿದ ಬಿಲ್ಲುಗಳ ವಿವರ ಈ ಕೆಳಗಿನಂತಿದೆ.

	ಅನಂ.	ಚೆಕ್‌ನಂಬರ	ದಿನಾಂಕ	ಪಾವತಿಸಿದ ಮೊತ್ತ
(ಬಿಲ್ಲ ನಂ 564/18-9-14 ಬಿಲ್ಲಿನ ದಿನಾಂಕ ತಿದ್ದಲಾಗಿದೆ)	1)	233515	16-10-2014	₹. 16,72,492/-
	2)	233516	16-10-2014	₹. 34,140/-
			Total	17,06,632/-

Purchase Order ನೀಡಿದ ₹.17,06,352/-

ಕಂಡುಬಂದ ವ್ಯತ್ಯಾಸ ₹.280/-

ಹೀಗಾಗಿ ಸದರ ಖರೀದಿ ಪ್ರಕರಣವು ಈ ಕೆಳಗಿನ ಆಕ್ಷೇಪಣೆಗಳಿಗೆ ಗುರಿಯಾಗುತ್ತದೆ.

1) ಸದರಿ ಹೆಚ್ಚಿನ ವ್ಯತ್ಯಾಸವನ್ನು (₹.280/-ಗಳನ್ನು) ಸಂಬಂಧಿಸಿದವರಿಂದ ವಸೂಲಿ ಮಾಡುವುದು.

2) ಟೆಂಡರ್‌ಕ್ಕಿಂತ ಮೊತ್ತಕ್ಕಿಂತ ಹೆಚ್ಚುವರಿ 26.41%ರಷ್ಟು ಹೆಚ್ಚಿಗೆ ಪಾವತಿಸಿದ್ದು ನಿಯಮ ಪಾಲಿಸಿರುವುದಿಲ್ಲ.

3) ಟೆಂಡರ್ ನಿಯಮಾನುಸಾರ ಕಡಿಮೆದರ ನಮೂದಿಸಿದವರಿಗೆ ಟೆಂಡರ್ ಆದೇಶ ನೀಡಿರುವದಿಲ್ಲ. ಈ ರೀತಿ ಹೆಚ್ಚಿನ ದರ ನೀಡಿದ ಸಂಸ್ಥೆಗೆ ಪೂರೈಕೆ ಆದೇಶವನ್ನು ಯಾವ ನಿಯಮಗಳಡಿ ವಹಿಸಿಕೊಡಲಾಗಿದೆ ಎಂಬ ಬಗ್ಗೆ ಅನುಸರಣೆ ನೀಡುವದು.

4) ಟೆಂಡರ್ ಬುಲೆಟಿನಲ್ಲಿ ಈ ಟೆಂಡರ್ ಅಧಿಸೂಚನೆ ಪ್ರಕಟಿಸಿದ ದಾಖಲೆ ಹಾಜರುಪಡಿಸಿರುವದಿಲ್ಲ.

5) ಇದರಿಂದಾಗಿ ಕೆ.ಟಿ.ಪಿ.ಪಿ ಕಾಯ್ದೆ1999ರ ನಿಯಮ 2000 ಉಲ್ಲಂಘಿಸಲಾಗಿದೆ, ಟೆಂಡರ್ ನಿಯಮ ಪಾಲಿಸದೇ ಇರುವ ಬಗ್ಗೆ ಸೂಕ್ತ ಕಾರಣಗಳನ್ನು ಸಂಬಂಧಿತ ದಾಖಲೆಗಳೊಂದಿಗೆ ಲೆಕ್ಕಪರಿಶೋಧನೆಗೆ ಹಾಜರುಪಡಿಸುವವರೆಗೆ ಒಟ್ಟು ಪಾವತಿಸಿದ ಮೊತ್ತ ₹.17,06,352/- ಗಳನ್ನು ಆಕ್ಷೇಪಣೆಯಲ್ಲಿರಿಸಲಾಗಿದೆ & ₹.280/- ಗಳನ್ನು ವಸೂಲಿಗೆ ಸೂಚಿಸಿದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :26 ದಿನಾಂಕ: 16-01-2016 ನ್ನು ನೀಡಲಾಗಿತ್ತು ಆದರೆ ಈ ಕುರಿತು ವಿತಾವಿವಿಯಿಂದ ಅನುಸರಣೆಗಳನ್ನು ಪರಿಶೀಲಿಸಿದಾಗ ಕಂಡಿಕೆಯ ಆಕ್ಷೇಪಕ ಅಂಶಗಳಿಗೆ ಅನುಗುಣವಾಗಿರುವದಿಲ್ಲ ಎಂಬುದನ್ನು ಗಮನಿಸಲಾಗಿದೆ.

40) ಟೆಂಡರ್ ಕರೆಯದೇ ಕ್ರೀಡೆಗೆ ಸಂಬಂಧಿಸಿದ ಸಾಮಗ್ರಿಗಳನ್ನು ಎರಡು ಭಾಗ (Split) ಮಾಡಿ ಕೋಟೆಶನ್ ಕರೆದು ಖರೀದಿಸಿದ ಕುರಿತು.

2014-15ನೇ ಸಾಲಿನ ಲೆಕ್ಕ ಪರಿಶೋಧನಾ ಅವಧಿಯಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯಲ್ಲಿ ದಾಸ್ತಾನು ವಿಭಾಗಕ್ಕೆ ಸಂಬಂಧಿಸಿದ ಕಡತಸಂಖ್ಯೆ E-610 & E-611/ 2014-15.

ಅ.ನಂ.	Purchase Order Date & Amount	Cheque No./Voucher No. Date	Details
1)	3-11-2014 Rs-82,000/-	-----	Renuka's Kwality Sports Bill No. 420 date-3-11-2014.
2)	3-11-2014 Rs-8 5,000/-	-----	Renuka's Kwality Sports Bill No. 421 date-3-11-2014.
	Total =1,67,000/-	235747/5032 11-12-2014	Kit Bags with Print/T-Shirts Superior with VTU loga Print

ಈ ಮೇಲಿನ ಅಂಶಗಳಿಗೆ ಸಂಬಂಧಿಸಿದಂತೆ ಕ್ರೀಡೆಗೆ ಸಂಬಂಧಿಸಿದ ಸಾಮಗ್ರಿಗಳನ್ನು ಎರಡು ಭಾಗಮಾಡಿ ಕೋಟೆಶನ್ ಕರೆದು ಟೆಂಡರ್ ಕರೆಯುವುದನ್ನು ತಪ್ಪಿಸಲಾಗಿದೆ.

ಕೆ.ಟಿ.ಪಿ.ಪಿ ಆಕ್ಟ 1999 ನಿಯಮ 2000 ರ ಸೆಕ್ಷನ್ 4(ಇ) ಮತ್ತು 4(ಇಇ) ರನುಸಾರ ಸರಕು ಸಾಮಗ್ರಿಗಳಿಗೆ ₹.1.00ಲಕ್ಷದವರೆಗೆ ಮಾತ್ರ ಕೋಟೆಶನ ಮೇಲೆ ತೆಗೆದುಕೊಳ್ಳಲು ಅವಕಾಶ ಇರುತ್ತದೆ, 1.00ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಸರಕು ಸಾಮಗ್ರಿಗಳನ್ನು ದರಪಟ್ಟಿ ಆಧಾರದ ಮೇಲೆ ಖರೀದಿಸಿದ್ದು ಸದರಿ ನಿಯಮಾವಳಿಗಳಿಗೆ ತದ್ವಿರುದ್ದವಾಗಿದ್ದು ಸದರ ನಿಯಮ ಉಲ್ಲಂಘನೆವಾಗುತ್ತದೆ. ಈ ಪ್ರಕರಣವನ್ನು ಉದಾಹರಣೆಗೆ ಮಾತ್ರ ನೀಡಲಾಗಿದ್ದು ಬಾಕಿ ಉಳಿದ ಇಂತಹ ಎಲ್ಲ ಪ್ರಕರಣಗಳಿಗೂ ಸಹ ಈ ಅಂಶಗಳು ಅನ್ವಯವಾಗುತ್ತದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :28 ದಿನಾಂಕ: 18-01-2016 ನ್ನು ನೀಡಲಾಗಿತ್ತು ಆದರೆ ಈ ಬಗ್ಗೆ ನೀಡಿದ ಅನುಸರಣೆಯನ್ನು ಪರಿಶೀಲಿಸಲಾಗಿ ಅದು ಸಮರ್ಪಕ ಅನುಸರಣೆಯಾಗಿರುವುದಿಲ್ಲ. ಕಾರಣ ಒಟ್ಟು ಪಾವತಿಗಳ ಮೊತ್ತ ₹.1,67,000/- ಗಳನ್ನು ಆಕ್ಷೇಪಣೆಯಲ್ಲಿರಿಸಲಾಗಿದೆ.

41) ವಿ.ತಾ.ವಿ. ಬೆಳಗಾವಿಯ ಪರೀಕ್ಷಾ ವಿಭಾಗ / ದಾಸ್ತಾನು ಖರೀದಿ (SAP) ವಿಭಾಗಕ್ಕಾಗಿ ಖರೀದಿಸಿದ Hologramಗಳ ನಿರ್ವಹಣೆ ಕುರಿತು.

ವಿ.ತಾ.ವಿ.ವಿ ಬೆಳಗಾವಿಯಲ್ಲಿ ಪರೀಕ್ಷಾ ವಿಭಾಗದ ಪ್ರಕಾರ್ಯಗಳಿಗೆ ಅವಶ್ಯವಿರುವ ಹೋಲೊಗ್ರಾಮಗಳನ್ನು ಈ ಕೆಳಗಿನಂತೆ

1.ವಿತಾವಿವಿಯ ದಾಸ್ತಾನು ಮತ್ತು ಖರೀಧಿ ವಿಭಾಗ ಖರೀದಿ ಆದೇಶ ಸಂ:12047 ದಿ:17-1-2014

2.ವಿತಾವಿವಿಯ ದಾಸ್ತಾನು ಮತ್ತು ಖರೀದಿ ವಿಭಾಗ ಖರೀದಿ ಆದೇಶ ಸಂ 288 ದಿ:27-6-2014 ಆದೇಶಗಳನ್ವಯ ಖರೀದಿಸಲಾಗಿದೆ.

ಅ.ಸಂ	ದಿನಾಂಕ	ಬೇಡಿಕೆ ವಿವರ ಪ್ರಮಾಣ	ಖರೀದಿ ಆದೇಶ ಸಂಖ್ಯೆ ದಿನಾಂಕ	ಹೋಲೊಗ್ರಾಮ ಪೂರೈಸಿದ ಸಂಸ್ಥೆ ಹೆಸರು	ಇನ್‌ವಾಯ್ಸ ನಂ. ದಿನಾಂಕ	ಪ್ರಮಾಣ	ಮೊತ್ತ	ಚೆಕ್ ನಂ ದಿನಾಂಕ
1	27-12-13	5ಲಕ್ಷ	12047/ 17-1-14	Holostick India Ltd.	2013/60/3832 ದಿ.29-1-14	5ಲಕ್ಷ	ರೂ.1,40,000/-	219285/ 7-4-2014
2	6-6-2014	5ಲಕ್ಷ	288/ 27-6-2014	Holostick India Ltd.	S1-1100-14-15-1083/ 12-7-2014	5ಲಕ್ಷ	ರೂ.1,40,000/-	232759/ 22-8-2014

ಈ ಕುರಿತು ಪರಿಶೀಲಿಸಲಾಗಿ, ಸದರ ಸರಕು ಖರೀದಿಯಲ್ಲಿ ಪ್ರತಿಬಾರಿಗೂ ಅಡಕವಾದ ಮೊತ್ತ ರೂ.1.00ಲಕ್ಷಗಳನ್ನು ಮೀರಿದ್ದರಿಂದ ಕೆ.ಟಿ.ಪಿ.ಪಿ ನಿಯಮ 4(ಇ)ಯ ಪ್ರಕಾರ ಟೆಂಡರ ಕ್ರಮ ಅನುಸರಿಸಿದ ಯಾವುದೇ ವಿವರಗಳು ಕಡತ/ವೋಚರ ನಡಿ ಕಂಡುಬರುತಿಲ್ಲ. ಕಾರಣ ಕೆ.ಟಿ.ಪಿ.ಪಿ ನಿಯಮಗಳನ್ನು ಅನುಸರಿಸದೇ ಇರುವ ಬಗ್ಗೆ ಸೂಕ್ತ ಕಾರಣಗಳನ್ನು ಒದಗಿಸಲು ಕೊರಲಾಗಿತ್ತು.

ಇನ್ನು ಸದರ ಹೋಲೊಗ್ರಾಮಗಳನ್ನು SAP ವಿಭಾಗದಿಂದ ಪರೀಕ್ಷಾ ಮೌಲ್ಯಮಾಪನ ವಿಭಾಗಕ್ಕೆ ವಿತರಿಸಲಾಗಿದ್ದು, ಈ ಕುರಿತು ಸದರ ವಿಭಾಗದಲ್ಲಿ ರಜಿಸ್ಟರ ನಿರ್ವಹಿಸಲಾಗಿದೆ. ಸದರ ರಜಿಸ್ಟರ ಪರಿಶೀಲಿಸಲಾಗಿ ಈ ಕೆಳಗಿನ ನ್ಯೂನತೆಗಳು ಕಂಡು ಬರುತ್ತವೆ.

1) ದಾಸ್ತಾನಿನ ಸ್ವೀಕೃತಿ ವಿವರಗಳನ್ನು ದಾಸ್ತಾನು ಪುಸ್ತಕದಲ್ಲಿ ದಾಖಲಿಸಿದ ನಂತರ ಅದಕ್ಕೆದುರಾಗಿ ವಿವಿಧ ಉಪ ಶಾಖೆಗಳಿಗೆ ಈ ಹೊಲೊಗ್ರಾಮಗಳನ್ನು ವಿತರಿಸಿದ ಕುರಿತ ಸಮರ್ಪಕ ದಾಖಲೆಗಳಿರುವದಿಲ್ಲ ಕೇವಲ ಒಬ್ಬ ಸಿಬ್ಬಂದಿ /ಅಧಿಕಾರಿಯ ಸಹಿ ಮಾತ್ರ ಪಡೆಯಲಾಗಿದೆ.ಆದರೆ ವಿತರಣೆಯ ದಿನಾಂಕ ಪ್ರಮಾಣ ಮೊತ್ತ & ಸಾಮಗ್ರಿ ಸ್ವೀಕರಿಸಿದವರ ಹೆಸರು & ರುಜು ಪಡೆಯದೇ ಕೇವಲ ರುಜುಮಾತ್ರ ಇರುವದನ್ನು ಗಮನಿಸಿದಾಗ ದಾಸ್ತಾನು ರಜಿಸ್ಟರನ್ನು ಸಮರ್ಪಕವಾಗಿ ನಿರ್ವಹಿಸಿರುವದಿಲ್ಲ ಎಂಬುದು ಕಂಡು ಬರುತ್ತದೆ.

ಉದಾ: ಪೂರೈಕೆ ಆದೇಶ ಸಂಖ್ಯೆ 1083/12-7-14 ರನ್ವಯ 5.00ಲಕ್ಷ ಹೊಲೊಗ್ರಾಮಗಳನ್ನು ಸ್ವೀಕರಿಸಿದ ಬಗ್ಗೆ ದಾಖಲಿಸಿದ್ದು, ಆ ಪೈಕಿ 2058 Hologramಗಳನ್ನು Academy ವಿಭಾಗಕ್ಕೆ ವಿತರಿಸಲಾಗಿದ್ದು, ವಿತರಿಸಿದ ದಿನಾಂಕ, ಸಾಮಗ್ರಿ ಪಡೆದವರ ಸಹಿ, ಪ್ರಮಾಣಗಳು ಇರುವುದಿಲ್ಲ. ಇದರಿಂದಾಗಿ ₹.497942/- Hologramಗಳ ದಾಸ್ತಾನಿನ ವಿವರಗಳು ದಾಖಲಿತವಾಗಿರುವದಿಲ್ಲ. ಹೀಗಾಗಿ ಸದರ ಅವಿನಿಯೋಗಿತ Hologramಗಳ ದಾಸ್ತಾನು ಪ್ರಶ್ನಾರ್ಹವೆನಿಸುತ್ತವೆ. ಹೀಗಾಗಿ ಸದರ ರಜಿಸ್ಟರ್‌ನ ನಿರ್ವಹಣೆ/ಮೇಲಾಧಿಕಾರಿಗಳ ಉಸ್ತುವಾರಿ ಸಮರ್ಪಕವೆನಿಸುವದಿಲ್ಲ.

1) ಮೇಲೆ ತಿಳಿಸಿದ ದಾಸ್ತಾನು ರಜಿಸ್ಟರು ಪರೀಕ್ಷಾ ವಿಭಾಗದ ಕೇಂದ್ರೀಯ ದಾಸ್ತಾನು ರಜಿಸ್ಟರು ಆಗಿದ್ದು, ಉಪ ಶಾಖೆವಾರು/ಕೋರ್ಸವಾರು/ Hologramಗಳನ್ನು ನೀಡಿದ ಕುರಿತ ದಾಸ್ತಾನು ರಜಿಸ್ಟರ್‌ನ ನಿರ್ವಹಣೆ ಆಗುತ್ತಿದೆಯೇ? ಅಥವಾ ದಿನನಿತ್ಯ ಪ್ರತಿ ವಿಷಯ ನಿರ್ವಾಹಕರಿಗೆ ನೀಡಿದ ಮತ್ತು ಅವರಿಂದ ವಿನಿಯೋಗಿಸಿದ ನಂತರ ಉಳಿದ Hologramಗಳನ್ನು ಮರಳಿ ಪಡೆದ ಕುರಿತು ದಾಸ್ತಾನು ರಜಿಸ್ಟರ್ ನಿರ್ವಹಿಸಿದ್ದರೆ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವುದು.
2) ಸದರ ಕೇಂದ್ರೀಯ ದಾಸ್ತಾನು ರಜಿಸ್ಟರ್‌ನ್ನು ಕಾಲ ಕಾಲಕ್ಕೆ ಪರಿಶೀಲಿಸಿ ಭೌತಿಕ ಶಿಲ್ಕಿನ ವಿವರಗಳನ್ನು ದಾಖಲಿಸಿದ ಬಗ್ಗೆ ಯಾವುದೇ ಸಂಬಂಧಿತ ಉಸ್ತುವಾರಿ ಅಧಿಕಾರಿಗಳ ತಪಾಸಣಾ ರುಜು ಇರುವುದಿಲ್ಲ.
3) ಇನ್ನು ಉಲ್ಲೇಖಿತ ಖರೀದಿ ಆದೇಶದ ಷರತ್ತು ಸಂಖ್ಯೆ 3ರಲ್ಲಿ ಈ Hologramಗಳ Sampleಗಳನ್ನು ಪೂರೈಕೆ ಮೊದಲು ಹಾಜರುಪಡಿಸಿ ಅನುಮೋದನೆಯನ್ನು ಸಕ್ಷಮ ಪ್ರಾಧಿಕಾರ ನೀಡಿದ ನಂತರ ಪೂರೈಸಬೇಕೆಂದು ಇದ್ದಾಗ್ಯೂ ಇಂತಹ Sampleಗಳ ಪರಿಶೀಲನೆ ಕ್ರಮ ಮತ್ತು ಅವುಗಳ ಅನುಮೋದನೆ ಕುರಿತು ವಿವರಗಳು ಲೆಕ್ಕಪರಿಶೋಧನೆ ಲಭ್ಯವಾಗಲಿಲ್ಲ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :30 ದಿನಾಂಕ: 20-01-2016 ನೀಡಲಾಗಿತ್ತು ಈ ಕುರಿತು ವಿಶ್ವವಿದ್ಯಾಲಯದಿಂದ ನೀಡಿದ ಅನುಸರಣೆಯು ಸಮರ್ಪಕವಾಗಿರುವದಿಲ್ಲ ಮತ್ತು ಕಂಡಿಕೆ ಅಂಶಗಳಿಗೆ ಅನುಗುಣವಾಗಿರುವದಿಲ್ಲ.

ಕಾರಣ ಮೇಲೆ ತಿಳಿಸಿದ ಕಂಡಿಕೆಗಳಡಿ ತಿಳಿಸಿದ ಆಕ್ಷೇಪಗಳಿಗೆ ಸೂಕ್ತ ಅನುಸರಣೆ ನೀಡುವವರೆಗೆ ₹.280000/-ಗಳನ್ನು ಆಕ್ಷೇಪಣೆಯಡಿ ಇರಿಸಲಾಗಿದೆ.

42) ವಿ.ತಾ.ವಿವಿಯಲ್ಲಿ Syscon Systems ಬೆಳಗಾವಿಯವರಿಂದ 1 ವರ್ಷ ಡಿಪಿಯು ಹಾರ್ಡವೇರ (05-CRT-02500 ING+01) ಹಾಗೂ 65CVS-PRC-2500 ING-03-3yr-Licence (IT Software) ನ್ನು ಒಟ್ಟು ₹.30,39,330/- ಗಳಿಗೆ ಖರೀದಿಸಿದ ಬಗ್ಗೆ.

ವಿ.ತಾ.ವಿವಿ ಬೆಳಗಾವಿಯಲ್ಲಿ CNC-Cyber Roam Hardware & Software ನ ಖರೀದಿ ಕುರಿತಾಗಿ ಖರೀದಿ ಆದೇಶದ ಪ್ರತ್ರ ಸಂ:ವಿಟಿಯು.ಎಸ್.ಎಪಿ/ಸಿಎನ್.ಸಿ/ Cyber Roam 2500 ING/DPD-93/2013-14/127-47 ದಿ: 10-2-2014 /, ಹಿಂದಿನ Hardware & Software ಗಳ ಮರು ಖರೀದಿ ಅಯ್ಕೆಯ ಮೇಲೆ 1 ವರ್ಷ ಅವಧಿಗೆ 05-CRT-02500 ING-01 ಹಾರ್ಡವೇರ & 65CVS-PRC-2500 ING-03-3yr-Licence (IT Software) ಗಳನ್ನು ಖರೀದಿಸಲಾಗಿದೆ. ಈ ಖರೀದಿಯಲ್ಲಿ ಅಡಕವಾದ ಮೌಲ್ಯ ₹.30,39,330/- ಗಳಾಗಿರುತ್ತವೆ.

ಈ ಕುರಿತು ಪರಿಶೀಲಿಸಲಾಗಿ, ಈ ಖರೀದಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮ 2000ಗಳನ್ನು ಪಾಲಿಸಿದ ಬಗ್ಗೆ ಅಂದರೆ ಸರಕು ಸಂಗ್ರಹಣೆಯ ಮೊತ್ತ ₹.1.00ಲಕ್ಷ ಮೀರುತ್ತಿದ್ದಲ್ಲಿ ಟೆಂಡರ್ ಕರೆದು ಖರೀದಿಸುವ (ನಿಯಮ 4(e)) ಪ್ರಕ್ರಿಯೆ ಅನುಸರಿಸಿದ ಬಗ್ಗೆ ಯಾವುದೆ ದಾಖಲೆಗಳು/ನಮೂದನೆಗಳು ಕಂಡು ಬರುವದಿಲ್ಲ.

1) ಕಾರಣ ಸದರ Net Working ಕುರಿತು ಸಂಬಂಧಿಸಿದ ಈ ಸರಕುಗಳ ಖರೀದಿಗೆ, 4(e) ಕುರಿತ ಪ್ರಕ್ರಿಯೆಗಳನ್ನು ಅನುಸರಿಸಿದ್ದಲ್ಲಿ ಅವುಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವದು.

2) ಅಥವಾ ಈ ಸರಕುಗಳ ಖರೀದಿಗೆ ಕೆ.ಟಿ.ಪಿ.ಪಿ ನಿಯಮ 4(g) ಅಡಿಯಲ್ಲಿ ವಿನಾಯಿತಿ ಪಡೆದಿದ್ದಲ್ಲಿ ಆ ಬಗ್ಗೆ ದಾಖಲೆ ಒದಗಿಸುವದು.

3) ಅಥವಾ ಈ ಸರಕನ್ನು ನಿಯಮ 4(b) ರನ್ವಯ ಅಂದರೆ ಈ ಸರಕು ಒಂದೇ ಮೂಲದಿಂದ (ಒಬ್ಬರೇ ತಯಾರಿಕರಿದ್ದಲ್ಲಿ) ಅಥವಾ ನಿರ್ದಿಷ್ಟ ಪೂರೈಕೆದಾರ ಅಥವಾ ಗುತ್ತಿಗೆದಾರರಿಂದಲೇ ಪಡೆಯ ಬೇಕಾದಲ್ಲಿ ಆ ಕುರಿತು ಬೇರೆ ಪರ್ಯಾಯಗಳಿಲ್ಲದಿದ್ದಲ್ಲಿ ಸದರ ನಿಯಮದಡಿಯ ಪರಂತುಕದಲ್ಲಿ ತಿಳಿಸಿದ ವಿಧಾನವನ್ನು ಅನುಸರಿಸಿ ಖರೀದಿಸಿದ್ದಲ್ಲಿ, ಆ ಕುರಿತ ಎಲ್ಲ ವಿವರಗಳನ್ನು ದಾಖಲೆಸಹಿತ ಲೆಕ್ಕಪರಿಶೋಧನೆಗೆ ಒದಗಿಸುವದು.

ಇಲ್ಲವೇ ಕೆ.ಟಿ.ಪಿ.ಪಿ ನಿಯಮಗಳನ್ನು ಪಾಲಿಸದೇ ಯಾವ ನಿಯಮಗಳ ಆಧಾರದ ಮೇಲೆ ಈ ಸರಕನ್ನು ಖರೀದಿಸಿದೆ ಎಂಬ ಬಗ್ಗೆ ಸೂಕ್ತ ಅನುಸರಣೆಯನ್ನು ಲೆಕ್ಕಪರಿಶೋಧನೆಗೆ ಒದಗಿಸಲು ವಿನಂತಿಸಿದೆ.

ಇಲ್ಲದಿದ್ದಲ್ಲಿ ಅನುಸರಣೆ ಒದಗಿಸುವ ವರೆಗೆ ₹.30,39,330/- ಗಳನ್ನು ಆಕ್ಷೇಪಣೆಯಲ್ಲಿ ಇರಿಸಲಾಗುವದು. ಈ ಕುರಿತು ವಿಶ್ವವಿದ್ಯಾಲಯದಿಂದ ನೀಡಿದ ಅನುಸರಣೆಯಲ್ಲಿ ಏಕ ಮಾತ್ರ ತಯಾರಕರೆಂಬ ಬಗ್ಗೆ ಪತ್ರವನ್ನು ಪಡೆದಿದೆ ಎಂದು ತಿಳಿಸಲಾಗಿದೆ ಆದರೆ ಈ ಕುರಿತು 4(ಬಿ)ಯಡಿಯ ಪರಂತುಕದಲ್ಲಿ ತಿಳಿಸಿದ ಕ್ರಮಗಳನ್ನು ಅನುಸರಿಸಿದ ಅಂದರೆ ಈ ಕುರಿತು ಪ್ರಮಾಣಿಕರಣಕ್ಕಾಗಿ ತಾಂತ್ರಿಕ ಸಮಿತಿ ಮತ್ತು ಅದರ ನಡುವಳಿಗಳ ಪ್ರತಿ ಹಾಜರುಪಡಿಸಿಲ್ಲ. ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :31 ದಿನಾಂಕ: 20-01-2016ನ್ನು ನೀಡಲಾಗಿತ್ತು. ಇವುಗಳ ಅನುಪಸ್ಥಿತಿಯಲ್ಲಿ ಅನುಸರಣೆ ಅಸಮರ್ಪಕ ಎನಿಸುತ್ತದೆ.

43) ಟೆಂಡರ ಕರೆಯದೇ catering servicesಗೆ ಸಂಬಂಧಿಸಿದಂತೆ ಕೋಟೇಶನ್ ಕರೆದು supply order ಮಾಡಿ ಪಾವತಿಸಿದ ಕುರಿತು.

2014–15ನೇ ಸಾಲಿನ ಲೆಕ್ಕಪರಿಶೋಧನಾ ಅವಧಿಯಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯಲ್ಲಿ ಕ್ರೀಡಾ ವಿಭಾಗಕ್ಕೆ ಸಂಬಂಧಿಸಿದಂತೆ Supply Order No.VTU/Sports/2014-15/825/Date/3-10-2014 ರ ಪ್ರಕಾರ Catering Services at the 17th VTU Athlentic Meet from 4th November - 2014 to 8th November – 2014 ವರೆಗೆ New Udaya Bhavan Belagavi ಇವರು ಪೂರೈಸಿರುತ್ತಾರೆ.

ಅ.ನಂ.	ಚೆಕ್ ನಂ./ದಿನಾಂಕ	ಪಾವತಿಸಿದ ಮೊತ್ತ
1	235873/20-12-2014	17,88,165/-
2	235874/20-12-2014	36,500/-
	TOTAL	18,24,665/-

ಹೀಗೆ ಒಟ್ಟು ಪಾವತಿಸಿದ ಮೊತ್ತ ₹.18,24,665/– ಇದೆ.

ಈ ಮೇಲಿನ ಅಂಶಗಳಿಗೆ ಸಂಬಂಧಿಸಿದಂತೆ ಕೋಟೇಶನ್ ಕರೆದು ಟೇಂಡರ ಕರೆಯುವುದನ್ನು ತಪ್ಪಿಸಲಾಗಿದೆ, ಕೆ.ಟಿ.ಪಿ.ಪಿ. ಆಕ್ಟ –1999ರ ನಿಯಮ–2000ರ ಸೆಕ್ಷನ್ 4(ಇ) ಮತ್ತು 4(ಇಇ)ರನುಸಾರ ₹.1.00ಲಕ್ಷ ದವರೆಗೆ ಮಾತ್ರ ಕೊಟೆಶನ್ ಮೇಲೆ ತೆಗೆದುಕೊಳ್ಳಲು ಅವಕಾಶ ಇರುತ್ತದೆ. 1.00ಲಕ್ಷ ಹೆಚ್ಚಿನ ಮೊತ್ತಗಳಿಗೆ ಸಾಮಗ್ರಿಗಳನ್ನು ಪೂರೈಸಲು ದರಪಟ್ಟಿ ಆಧಾರದ ಮೇಲೆ ಖರೀದಿಸಿದ್ದು ಸದರಿ ನಿಯಮಾವಳಿಗಳಿಗೆ ವ್ಯತಿರಿಕ್ತವಾಗಿದ್ದು ಸದರ ನಿಯಮ ಉಲ್ಲಂಘನೆಯಾಗುತ್ತದೆ. ಕಾರಣ ಒಟ್ಟು ಪಾವತಿಸಿದ ಮೊತ್ತ ₹.18,24,665/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಆದ್ದರಿಂದ ಇದಕ್ಕೆ ಸೂಕ್ತ ಅನುಸರಣೆ ನೀಡಲು ಕೋರಿದೆ. ಈ ಪ್ರಕರಣವನ್ನು ಉದಾಹರಣೆಗೆ ಮಾತ್ರ ನೀಡಲಾಗಿದ್ದು. ಇನ್ನುಳಿದ ಇಂತಹ ಎಲ್ಲ ಪ್ರಕರಣಗಳಿಗೂ ಈ ಅಂಶಗಳು ಅನ್ವಯವಾಗುತ್ತದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :35 ದಿನಾಂಕ: 20–01–2016ನ್ನು ನೀಡಲಾಗಿತ್ತು ಈ ಕುರಿತು ವಿವಿಯಿಂದ ನೀಡಿದ ಅನುಸರಣೆಯು ಕಂಡಿಕೆಯ ಅಂಶಗಳಿಗೆ ಅನುಗುಣವಾಗಿರುವದಿಲ್ಲ. ಮತ್ತು ಹೀಗಾಗಿ ಅಸಮರ್ಪಕವೆನಿಸುತ್ತದೆ.

44) ಸ್ಟೇಷನರಿ ಮತ್ತು ಮುದ್ರಣ ಸಾಮಗ್ರಿಗಳನ್ನು ಪೂರೈಸಲು ಒಂದೇ ಟೆಂಡರನ್ನು ವಿಭಜಿಸಿ ಒಬ್ಬರಕ್ಕಿಂತ ಹೆಚ್ಚಿನ ಗುತ್ತಿಗೆದಾರರಿಗೆ ಟೆಂಡರ ಅನುಮೋದಿಸಿ ಕೆ.ಟಿ.ಪಿ.ಪಿ ಕಾಯ್ದೆಗೆ ವ್ಯತಿರಿಕ್ತವಾಗಿ ರೂ. 189.90 ಲಕ್ಷ ವೆಚ್ಚ ಭರಿಸಿದ್ದು.

2014–15ನೇ ಸಾಲಿನಲ್ಲಿ ವಿವಿಧ ವಿಭಾಗಕ್ಕೆ ಬೇಕಾಗಿರುವ ಸ್ಟೇಶನರಿ ಸಾಮಗ್ರಿಗಳನ್ನು ಒಂದು ವರ್ಷದ ಅವಧಿಯ ದರಗಳ ಒಪ್ಪಂದದ ಮೇರೆಗೆ ಪೂರೈಸಲು ಮೊಹರಬಂದ ದರಖಾಸ್ತುಗಳನ್ನು ಅಧಿಕೃತ ವಿತರಕರು/ತಯಾರಕುಗಳ ಕರ್ನಾಟಕ ಸರ್ಕಾರ ಇ–ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು ಇದೆ.

ಒಂದೇ ಟೆಂಡರ್ ವಿಭಜಿಸಿ ಒಬ್ಬರಕ್ಕಿಂತ ಹೆಚ್ಚಿಗೆ ಗುತ್ತಿಗೆದಾರರಿಗೆ ಟೆಂಡರ್ ಅನುಮೋದನೆ ಮಾಡಿ ಪೂರೈಕೆ ಆದೇಶ ನೀಡಿದ್ದು ಹಾಗೂ ಟೆಂಡರ್‌ಗಿಟ್ಟ ಅಂದಾಜುಮೊತ್ತ ಹಾಗೊ ಐಟಂಗಳ ಪ್ರಕಾರ ದರ ಇತ್ಯಾದಿಗಳನ್ನು ವಿಭಜಿಸಿ ಒಬ್ಬರಕ್ಕಿಂತ ಹೆಚ್ಚಿನ ಗುತ್ತಿಗೆದಾರರಿಗೆ ಸ್ಟೇಶನರಿ ಸಾಮಗ್ರಿಗಳನ್ನು ಪೂರೈಸಲು ಮತ್ತು ಮುದ್ರಣ ಮಾಡಲು ಅನುಮತಿ ನೀಡಿ ರೂ.189.90 ಲಕ್ಷ ಮೊತ್ತ ವೆಚ್ಚ ಭರಿಸಲಾಗಿದೆ.

ಕೆ.ಟಿ.ಪಿ.ಪಿ, ಕಾಯ್ದೆ-1999 ಹಾಗೂ ನಿಯಮಗಳು 2000 ರಲ್ಲಿಯ ನಿಯಮಗಳಿಗೆ ವ್ಯತಿರಿಕ್ತವಾದ ಕ್ರಮ ಜರುಗಿಸಲಾಗಿದ್ದು. ಗುತ್ತಿಗೆದಾರರಿಗೆ ಅನಧಿಕೃತ ಸಹಾಯ ಮಾಡಿದಂತಾಗಿದೆ.

ಖರೀದಿಸಿದ ಸಾಮಗ್ರಿಗಳ ವಿವರಗಳನ್ನು ದಾಸ್ತಾನು ರಜಿಸ್ಟರದಲ್ಲಿ ದಾಖಲಿಸಿದ್ದು ಸದರ ಸಾಮಗ್ರಿಗಳನ್ನು ಯಾವ ವಿಭಾಗದವರಿಗೆ ಹಾಗೂ ಯಾರಿಗೆ ವಿತರಿಸಿದ್ದು ಎಂಬುದು ಹಾಗೂ ಸದರಿ ಸಾಮಗ್ರಿಗಳನ್ನು ವಿತರಣೆ ಸಂಬಂಧದಲ್ಲಿ ಆ ಸಾಮಗ್ರಿ ಪಡೆದವರ ರುಜು ದಿನಾಂಕ ಇತ್ಯಾದಿಗಳ ನಮೂದನೆಗಳು ಸ್ಪಷ್ಟವಾಗಿರುವುದಿಲ್ಲ ಇಂತಹ ಪ್ರಕರಣಗಳನ್ನು ಸರಿಪಡಿಸಿ ದಾಸ್ತಾನು ರಜಿಸ್ಟರಗಳನ್ನು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಪೂರೈಸುವುದು.

(1) ಮೆಸರ್ಸ ಯೂನಿವರ್ಸಲ್ ಪ್ರಿಂಟ ಸಿಸ್ಟಮ ಗುಂಟೂರ. (2) ಮೆಸರ್ಸ ಹೈಟೆಕ ಪ್ರಿಂಟ ಸಿಸ್ಟಮ ಲಿಮಿಟೆಡ್ ಬೆಂಗಳೂರು. (3) ಮೆಸರ್ಸ ವೆಂಕಟೇಶ್ವರ ಪೇಪರ ಪ್ರೊಡಕ್ಷನ ದಾವಣಗೆರೆ. (4) ಮೆಸರ್ಸ ಶಿವಾ ಆಫ್ಸೆಟ್ ಪ್ರಿಂಟರ್ಸ ಬೆಳಗಾವಿ. ಇವರುಗಳಿಂದ ಒಪ್ಪಂದದ ಪತ್ರ (Agreement) ಪಡೆದುಕೊಂಡಿದ್ದನ್ನು ಲೆಕ್ಕ ಪರಿಶೋಧನೆ ಪೂರೈಸುವುದು. ಟೆಂಡರ್‌ಗಿಟ್ಟ ಮೊತ್ತ ಪೂರೈಕೆ. ಆದೇಶ ಪ್ರಕಾರ ಚೆಕ್ಕ ಮೂಲಕ ಪಾವತಿಸಿದ ಮೊತ್ತ/ದಿನಾಂಕ ಇತ್ಯಾದಿ ವಿವರಗಳನ್ನು ದಾಖಲಿಸಿದ ವಾಚ್ ರಜಿಸ್ಟರ ನಿರ್ವಹಿಸಿದ್ದಕ್ಕೆ ಲೆಕ್ಕಪರಿಶೋಧನೆಗೆ ಪೂರೈಸುವುದು.

ಕೆ.ಟಿ.ಪಿ.ಪಿ. ಕಾಯ್ದೆಯ ಸೆಕ್ಷನ್-13ರ ಪ್ರಕಾರ L-1(Lowest-1) ಜೊತೆ ಮಾತ್ರ Negotition ಮಾಡಬಹುದಾಗಿದ್ದು, ಆದರೆ ಉದಾಹರಣೆಗೆ ಕಡತ ಸಂಖ್ಯೆ ಟಿ-198ರಲ್ಲಿ ಕಛೇರಿ ಟಿಪ್ಪಣಿ ಕಂಡಿಕೆ ಸಂಖ್ಯೆ -12ರಲ್ಲಿ ಮಾನ್ಯ ಕುಲಪತಿಗಳು Lowest-2 ಜೊತೆ ಸಂಧಾನ ನಡೆಸಲು ಆದೇಶಿಸಿದ್ದು. ಅದರನ್ವಯ ಕಂಡಿಕೆ 16,17,18.ಗಳ ವಿವರಗಳ ಪ್ರಕಾರ Lowest-2 ಜೊತೆ ಸಂಧಾನ ನಡೆಸಿ. ಅನುಮೋದನೆ ನೀಡಲಾಗಿದ್ದು ಇದೆ. ಇದು ಕೆ.ಟಿ.ಪಿ.ಪಿ ಕಾಯ್ದೆಯ ಮೇಲಿನ ಅವಕಾಶಗಳಿಗೆ ವ್ಯತಿರಿಕ್ತವಾದ ಕ್ರಮವಾಗಿದೆ ಕಾರಣ ₹.75,38,239/- ಗಳನ್ನು ಈ ಆಧಾರದ ವ್ಯವಹಾರದ ಕುರಿತು ಸರಕಾರದ ಅನುಮೋದನೆ ಪಡೆದುಕೊಳ್ಳುವುದು ಅವಶ್ಯವಾಗಿದೆ, ಇಂತಹ ಇನ್ನುಳಿದ ಪ್ರಕರಣಗಳಲ್ಲಿಯು ಸಹ ಈ ಅಂಶಗಳು ಅನ್ವಯವಾಗುತ್ತವೆ.

ಈ ಮೇಲಿನ ಎಲ್ಲ ವಿವರಗಳನ್ನು ಈ ಪತ್ರಕ್ಕೆ ಲಗತ್ತಿಸಿದ **ಅನುಬಂಧ-14** ರಲ್ಲಿದೆ ಆಕ್ಷೇಪಣೆಗಳ ಒಟ್ಟು ಮೊತ್ತ ₹.1,89,90,236/- ಗಳಿಗೆ ಸಂಬಂಧಿಸಿದ ದಾಖಲೆಗಳೊಂದಿಗೆ ಸಮರ್ಪಕ ಅನುಸರಣೆ ನೀಡಲು ಕೋರಲಾಗಿತ್ತು. ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :38 ದಿನಾಂಕ: 23-01-2016ನ್ನು ನೀಡಲಾಗಿತ್ತು. ಈ ಕುರಿತು ವಿವಿಯಿಂದ ನೀಡಿದ ಅನುಸರಣೆಯು ಸಮರ್ಪಕವೆನಿಸುವುದಿಲ್ಲ.

45) ಟಾಟಾಬಸ್‌ಗೆ ಹೊಸದಾಗಿ ಗ್ಲಾಸ್ ಮತ್ತು ಇನ್ನಿತರೆ ಕೆಲಸಗಳನ್ನು ನಿರ್ವಹಿಸುವುದಕ್ಕೆ ಟೆಂಡರ ಕರೆಯದೇ ಕೋಟೇಶನ್ ಕರೆದು ಕೆ.ಟಿ.ಪಿ.ಪಿ ಕಾಯ್ದೆಗೆ ವ್ಯತ್ತಿರಿಕ್ತವಾಗಿರುವ ಕುರಿತು.

2014-15ನೇ ಸಾಲಿನಲ್ಲಿ ವಿತಾವಿಯ ಟಾಟಾಬಸ್‌ಗೆ ಸಂಖ್ಯೆ:ಕೆ.ಎ-22/B/5571 ವಾಹನ್ ಬಸ್ ರಿಪೇರಿ ಹೊಸದಾಗಿ ಗ್ಲಾಸ್ ಮತ್ತು ಇನ್ನಿತರೇ ಕೆಲಸಗಳನ್ನು ನಿರ್ವಹಿಸಲಿಕ್ಕೆ ಕೆಲಸದ ಆದೇಶ ದಿನಾಂಕ:20-02-2016 ರಂದು ₹.3,60,000/-ಗಳನ್ನು ಮತ್ತು Additional work of replacement of flour work ನಿರ್ವಹಿಸಲಿಕ್ಕೆ ದಿನಾಂಕ:21-03-2014 ರಂದು ₹.76400/-ಗಳನ್ನು ಒಟ್ಟು ₹.436400/-ಗಳಳನ್ನು ಮೇ||ಕೃಷ್ಣಾ ಕೋಜ್ ಬಿಲ್ಡರ್ಸ್ ಶಿನ್ನೊಳ್ಳಿ ತಾ||ಚಂದಗಡ ಇವರಿಗೆ ಈ ಕೆಳಕಾಣಿಸಿದಂತೆ ಪಾವತಿಸಿದ್ದು ಇದೆ.

ಅನಂ	ಚೆಕ್ಕ ನಂಬರ/ದಿನಾಂಕ	ಪಾವತಿಸಿದ ಮೊತ್ತ
1	219501 / 06-05-2014	434460-00
2	219502 / 06-05-2014	1940-00
	ಒಟ್ಟು	436400-00

ಈ ಮೇಲಿನ ಅಂಶಗಳಿಗೆ ಸಂಬಂಧಿಸಿದಂತೆ ವಾಹನ ರಿಪೇರಿಗೆ ನೇರವಾಗಿ ಕೋಟೇಶನ್ ಕರೆದು ಟೆಂಡರ ಕರೆಯುವುದನ್ನು ತಪ್ಪಿಸಲಾಗಿದೆ. ಇದು ಕೆ.ಟಿ.ಪಿ.ಪಿ ಕಾಯ್ದೆ 2000ದ 4(e)ii ಮತ್ತು ಸರಕಾರದ ಆದೇಶ ಸಂಖ್ಯೆ:PWD513-111/2001 ದಿ:29-10-2001ಗಳ ಪ್ರಕಾರ ₹.1.00 ಲಕ್ಷದವರೆಗಿನ ಮೊತ್ತಕ್ಕೆ ಮಾತ್ರ ಕೋಟೇಶನ್ ಮೇಲೆ ತೆಗದುಕೊಳ್ಳಲು ಅವಕಾಶ ಇರುತ್ತದೆ. ಆದ್ದರಿಂದ ₹.1.00 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ದರಗಳಿಗೆ ಟೆಂಡರ್ ಕರೆಯುವುದು ಅವಶ್ಯ. ಆದರೆ ನಿಯಮ ಪಾಲಿಸದೇ ಇರುವದಕ್ಕೆ ಅನುಸರಣೆ ನೀಡುವುದು.

ಪ್ರಾದೇಶಿಕ ಸಾರಿಗೆ ಕಛೇರಿಯಿಂದ (RTO)ವಾಹನದ ದುರಸ್ತಿ ಕುರಿತ ಪರೀವಿಕ್ಷಣಾ ವರದಿ ಪಡೆದಿರುವುದಿಲ್ಲ ಹಾಗೂ ವಾಹನದ ಎಲ್ಲ ಕಲರ ಗ್ಲಾಸ್‌ಗಳನ್ನು ಕಿಟಕಿ ಗ್ಲಾಸ್‌ಗಳನ್ನು ತಿರುವಳಿಗೊಳಿಸಿ ಬಿಳಿಗ್ಲಾಸ್ ಕಿಟಕಿ ಗ್ಲಾಸ್‌ಗಳನ್ನು ಅಳವಡಿಸಿದ್ದು ಎಂದು ಕಛೇರಿ ಟಿಪ್ಪಣಿಯಲ್ಲಿ ನಮೂದಿಸಿದ್ದು. ಆದರೆ ವಾಹನದ ಎಲ್ಲ ಕಲರ ಗ್ಲಾಸ್‌ಗಳನ್ನು ಕಿಟಕಿ ಗ್ಲಾಸ್‌ಗಳನ್ನು ದಾಸ್ತಾನಿಗೆ ದಾಖಲಿಸಿದ್ದರ ಬಗ್ಗೆ ಮುಂದಿನ ಕ್ರಮ ತೆಗೆದುಕೊಂಡ ವಿವರ ಪೂರೈಸುವುದು. ಕಾರಣ ಈ ಅಂಶಗಳನ್ನು ಪಾಲಿಸದೇ ಇರುವುದು ಆಕ್ಷೇಪಾರ್ಹ.

ಕಾರಣ ಹೀಗೆ ಒಟ್ಟು ಪಾವತಿಸಿದ ಮೊತ್ತ ₹.4,36,400/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಆದ್ದರಿಂದ ಇದಕ್ಕೆ ಸೂಕ್ತ ಅನುಸರಣೆ ನೀಡಲು ಸೂಚಿಸಲಾಗಿತ್ತು.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :44 ದಿನಾಂಕ: 25-01-2016 ನ್ನು ನೀಡಲಾಗಿತ್ತು. ಆದರೆ ಯಾವುದೇ ಅನುಸರಣೆಯನ್ನು ನೀಡಿರುವುದಿಲ್ಲ.

46) ಆರೇಂಜ್-ದಿ ಡಿಸಾಯಿನ್ ಸ್ಟುಡಿಯೋ ಬೆಳಗಾವಿ ಇವರಿಗೆ ₹.210472/-ಗಳ ಪಾವತಿಸಿದ ಕುರಿತು.

ದಿನಾಂಕ 20-05-2014 ರಂದು 13ನೇ ವಾರ್ಷಿಕ ಘಟಿಕೋತ್ಸವವು ವಿ.ತಾ.ವಿ.ವಿ ಯಲ್ಲಿ ಜರುಗಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಹೋರ್ಡಿಂಗ್ ಡಿಜಿಟಲ್ ಮಲ್ಟಿಕಲರ್ 7ನಂ ಫ್ಲೆಕ್ಸಗಳನ್ನು ಮುಖ್ಯ ಸ್ಥಳಗಳಲ್ಲಿ ಪ್ರಚಾರಾರ್ಥವಾಗಿ ಸ್ಥಾಪಿಸಲಾಗಿದೆ. ಲೆಕ್ಕಪರಿಶೋಧನೆಯಲ್ಲಿ ಈ ಕೆಳಗಿನ ಆಕ್ಷೇಪಣೆಗಳು ಕಂಡು ಬಂದಿರುತ್ತದೆ.

1) ಅ) ಚೆಕ್ ನಂ: 219964 ದಿ: 03-06-2014 ₹. 206262/-

ಆ) ಚೆಕ್ ನಂ: 219965 ದಿ: 03-06-2014 ₹. 4210/-

ಇ) ಒಟ್ಟು ₹. 210472/-ಗಳ ಪಾವತಿಯನ್ನು ಅಂಗೀಕರಿಸುವ ಪೂರ್ವದಲ್ಲಿ ಕೆ.ಟಿ.ಪಿ.ಪಿ ನಿಯಮಗಳನ್ನು ಪಾಲಿಸದೇ ಪಾವತಿಸಿದೆ. ಈ ಕೆಲಸವನ್ನು ನೇರವಾಗಿ ಸಂಸ್ಥೆಯವರಿಗೆ ವಹಿಸಿಕೊಟ್ಟಿರುವದು ದಾಖಲೆಗಳನ್ನು ಪರಿಶೀಲಿಸಿದಾಗ ಕಂಡುಬಂದಿರುತ್ತದೆ.

2) ಈ ಸಂಸ್ಥೆಯನ್ನು ಈ ಕೆಲಸವನ್ನು ನಿರ್ವಹಿಸಲು ಯಾವ ಮಾನದಂಡದ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ ಎನ್ನುವದು ದಾಖಲೆಗಳಲ್ಲಿ ಕಂಡು ಬಂದಿರುವದಿಲ್ಲ.

3) ಬಿಲ್ಲಿಗೆ ಮಂಜೂರಾತಿ ಆದೇಶವನ್ನು ಲಗತ್ತಿಸಿರುವುದಿಲ್ಲ.

4) U.O ಟಿಪ್ಪಣೆಯನ್ನು ಮಂಜೂರಾತಿ ಆದೇಶವೆಂದು ಪರಿಗಣಿಸಲು ಬರುವದಿಲ್ಲ.

5) U.O ಟಿಪ್ಪಣಿಯ ಕ್ರ.ಸಂ (3)ರಲ್ಲಿ ಸದರಿ ಸಂಸ್ಥೆಯು ಅಧಿಕೃತ ಗುತ್ತಿದಾರ ಸಂಸ್ಥೆಯೆಂದು ಮಹಾನಗರ ಪಾಲಿಕೆ ಬೆಳಗಾವಿಯವರು ಪರಿಗಣಿಸಿದ ಬಗ್ಗೆ ಯಾವುದೇ ದಾಖಲೆಗಳು ಕಡತದಲ್ಲಿ ಕಂಡು ಬಂದಿರುವದಿಲ್ಲ. ಇದನ್ನು ಲೆಕ್ಕಪರಿಶೋಧನೆಯಲ್ಲಿ ಒಪ್ಪಲು ಬರುವದಿಲ್ಲ. U.O ಟಿಪ್ಪಣಿ(3)ರಲ್ಲಿ ತಿಳಿಸಿದಂತೆ ಸದರ ಸಂಸ್ಥೆಯಯ ಗುತ್ತಿಗೆದಾರ ಸಂಸ್ಥೇ ಎಂದು ಬೆಳಗಾವಿ ಮಹಾನಗರ ಪಾಲಿಕೆಯವರು ಪರಿಗಣಿಸಿದ್ದನ್ನು ವಿಟಿಯುನಲ್ಲಿ ಅನುಸಮರ್ಥಿಸಲು ಆಧಾರಗಳೇನು? ಅಧಿಕೃತ ಲೈಸನ್ಸ್ ಪ್ರಮಾಣ ಪತ್ರ (Contractors Licence registration) ಇಲ್ಲದೆಯೇ ಕಾಮಗಾರಿ ನಿರ್ವಹಿಸಲು ನೀಡಿದ್ದು ಅನಿಯಮಿತವಾಗಿರುತ್ತದೆ. ಆದ್ದರಿಂದ ಮೇಲಿನ ಆಕ್ಷೇಪಣೆಗಳಿಗೆ ಅನುಸರಣೆಯನ್ನು ನೀಡುವವರೆಗೆ ಪಾವತಿಸಿದ ಮೊತ್ತ ₹.2,10,472/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :48 ದಿನಾಂಕ: 01-02-2016 ನ್ನು ನೀಡಲಾಗಿತ್ತು. ಆದರೆ ಯಾವುದೇ ಅನುಸರಣೆಯನ್ನು ನೀಡಿರುವುದಿಲ್ಲ.

47) ವಿತಾವಿವಿ ಬೆಳಗಾವಿಯಲ್ಲಿ ಕಾಮಗಾರಿಗಳನ್ನು ವಿಭಾಗಿಸಿ ₹.5.00 ಲಕ್ಷದ ಮಿತಿಯೊಳಗೆ ತಂದು ಟೆಂಡರ್‌ನ್ನು ಅನಿಯಮಿತ್ತವಾಗಿ ತಪ್ಪಿಸಿ ಅನುಷ್ಠಾನಗೊಳಸಿ ಬಿಲ್ಲುಗಳನ್ನು ಸಂದಾಯ ಮಾಡಿದ ಬಗ್ಗೆ.

1) ವಿ.ತಾ.ವಿ.ವಿ ಬೆಳಗಾವಿಯಲ್ಲಿ 4/2014 ನೇ ತಿಂಗಳಿನಲ್ಲಿ ಶ್ರೀ.ಎಸ್.ಡಿ.ಗುರವ ಇವರಿಗೆ ಈ ಕೆಳಗಿನ ಕಾಮಗಾರಿಗಳ ಬಗ್ಗೆ (5ಕಾಮಗಾರಿಗಳು) 1) ಶ್ರೀ.ಎಸ್.ಡಿ.ಗುರವ ಗುತ್ತಿಗೆದಾರರು ಇವರಿಗೆ ಸಂದಾಯ ಮಾಡಿದ ಚೆಕ್ ನಂ: 219332 ದಿ: 10-4-2014 ₹ .2086891/- ಗಳನ್ನು ಪಾವತಿಸಲಾಗಿದೆ.

ವಿವರ ಈ ಕೆಳಗಿನಂತಿದೆ.

Sl.No.	Details	Est Cost	Agreement Amt	Premium	Agr No. & date
1	RCC Slab for master bed room & Children,s' room in Hon'ble V,C's Residence at VTU	Rs.4,85,257/-	4,55,000/-	6.22% Below	VTU/Aca/RE/13-14/ 12725 date-11-2-14
2	Prov Supplying & Installing monier tiles roof with M.S. Truss for Extended position of pooja & guest room of Hon'ble V.C's residence at VTU	Rs.4,79,451/-	4,98,525/-	3.97% Above	VTU/Aca/RE/13-14/ 14821/27-3-2014
3	Providing & fixing granite of flooring behind guest room of Hon'ble V.C's residence at VTU	Rs.4,67,820/-	4,99,215/-	6.71% Above	VTU/Aca/RE/13-14/ 14822/27-3-2014
4	Providing Supplying & Installing monier tiles room with M S Truss over pooja room of Hon'ble V.C's residence at VTU	Rs.4,71,156/-	4,99,272/-	5.96% Above	VTU/Aca/RE/13-14/ 14820/27-3-2014
5	Providing & fixing granite flooring back side of Hon'ble V.C's residence at VTU	Rs.4,88,160/-	4,98,960/-	2.21% Above	VTU/Aca/RE/13-14/ 14818/27-3-2014

ಈ ಬಗ್ಗೆ ಪರಿಶೀಲಿಸಲಾಗಿ, ಈ ಕೆಳಗಿನ ಅಂಶಗಳು/ನ್ಯೂನತೆಗಳು ಕಂಡುಬರುತ್ತವೆ.

1) ಮಾನ್ಯ ಕುಲಪತಿಗಳ (Hon'ble V.C) ವಸತಿಗೃಹದ ಕಾಮಗಾರಿಯ ಒಂದು ಪ್ರಧಾನ ಕಾಮಗಾರಿಯಗಿದ್ದು ಅದಕ್ಕೆ ಸಂಬಂಧಿಸಿದ ಮೇಲೆ ತಿಳಿಸಿದ ಕಾಮಗಾರಿಗಳನ್ನು ಅದೇ ಕಾಮಗಾರಿ ಅಡಿ ಕೈಕೊಳ್ಳದೇ ಕಾಮಗಾರಿ ಪ್ರಭಾಗಿಸಿ ನೇರವಾಗಿ (Direct Entrustment) ಅನುಷ್ಠಾನಕ್ಕೆ ವಹಿಸಿಕೊಟ್ಟಿದ್ದಕ್ಕೆ ಸೂಕ್ತ ಕಾರಣಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವದು.

2) ಇನ್ನು ಇವು ಪ್ರತ್ಯೇಕ ಕಾಮಗಾರಿಗಳಿವೆ ಎಂದಾದರೂ ಮೇಲೆ ತಿಳಿಸಿದ ಕಾಮಗಾರಿಗಳಲ್ಲಿ ಕ್ರ.ಸಂ. 2&4 ಹಾಗೂ 3&5 ರ ಕಾಮಗಾರಿಗಳ ವಿವರಣೆ ಒಂದೇ ಇದ್ದು ಅವುಗಳನ್ನು ಸಹ ಪ್ರಭಾಗಿಸಿದ್ದನ್ನು ಗಮನಿಸಲಾಗಿ ಕೇವಲ ಕೆ.ಟಿ.ಪಿ.ಪಿ ಆಕ್ಟ್‌ನ ನಿಯಮ 4(ಇ) ಅಡಿಯ ಅವಕಾಶಗಳಂತೆ ರೂ.5.00ಲಕ್ಷ ಮಿತಿ ಒಳಗಾಗಿ ಈ ಕಾಮಗಾರಿ ಮೊತ್ತವನ್ನು ಲೆಕ್ಕ ಹಾಕಿ ಪ್ರಭಾಗಿಸಿದ್ದರಿಂದ ಟೆಂಡರ್ ಕರೆಯುವ ಪ್ರಮೇಯ ಉದ್ಭವಿಸುವುದಿಲ್ಲ ಎಂಬುದನ್ನು ಗಮನಿಸಿ ಕೈಕೊಂಡ ಕ್ರಮವಾಗಿರುತ್ತದೆ ಎಂಬುದು ಸ್ಪಷ್ಟವೆನಿಸುತ್ತದೆ. ಆದ್ದರಿಂದ ಈ ಕ್ರಮ ಆಕ್ಷೇಪಾರ್ಹವೆನಿಸುತ್ತದೆ.

3) ಇನ್ನು ಮೇಲೆ ತಿಳಿಸಿದ ಕಾಮಗಾರಿಗಳು ನೇರವಾಗಿ ವಹಿಸಿದ (Direct Entrustment) ಕಾಮಗಾರಿಗಳಾಗಿದ್ದಲ್ಲಿ ಈ ಕಾಮಗಾರಿಗಳನ್ನು ಎಸ್‌ಆರ್ ದರಗಳ ಪ್ರಕಾರ ವಹಿಸಿದಲ್ಲಿ (Piece Work)ಕಿರುಕಾರ್ಯ ಒಪ್ಪಂದಡಿ ತೆಗೆದುಕೊಳ್ಳಲಾಗಿದೆ ಎಂದು ಭಾವಿಸಬಹುದಿತ್ತು, ಆದರೆ ಈ ಕಾಮಗಾರಿಗಳಿಗೆ ಕ್ರಮವಾಗಿ 6.22% Below, 3.97% Above, 6.71% Above, 5.96%Above, & 2.21% Above, ಹೀಗೆ ಟೆಂಡರ್ ಪ್ರಿಮಿಯಮಗಳನ್ನು ಯಾವ ನಿಯಮಗಳಡಿಯ ಅವಕಾಶಗಳಂತೆ ನೀಡಲಾಗಿದೆ ಎಂಬ ಬಗ್ಗೆ ಅನುಸರಣೆ ಒದಗಿಸುವದು.

4) ಇದಲ್ಲದೆ ಕ್ರ.ಸಂ.(1) ರಡಿಯ ಕಾಮಗಾರಿಗೆ 6.22% Below, ಎಂದು ದರಗಳನ್ನು ಒಪ್ಪಿದ್ದಲ್ಲಿ ಈ ಮೊತ್ತಕ್ಕೆ 30,183/-ಗಳ ಹೆಚ್ಚುವರಿ ಸುರಕ್ಷಾ ಠೇವಣಿಯನ್ನು ಪಡೆಯಲಾಗಿದೆಯೇ? ಎಂಬ ಬಗ್ಗೆ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವದು.

ಈ ಮೇಲಿನ ಅಂಶಗಳನ್ವಯ ಸದರ ಕಾಮಗಾರಿ ಕುರಿತು ಕೈಕೊಂಡಕ್ರಮಗಳು ಅನಿಯಮಿತ ಎನಿಸುತ್ತದೆ. ಕಾರಣ ₹.24,08,692/- ಗಳನ್ನು ಆಕ್ಷೇಪಣೆಯವೆನಿಸುತ್ತವೆ.

5) ಅದೂ ಅಲ್ಲದೇ ಚೆಕ್ ನಂ.220051/16-6-2014 ₹.4,27,992/-ಗಳನ್ನು "Providing & Laying Flooring Tiles South Side of PG Building VTU Regional Centre Kalaburagi ಕಾಮಗಾರಿ ನೀಡಿದ್ದು ಕಾಮಗಾರಿ ಅಂದಾಜು ಮೊತ್ತ ₹.4,87,103/-Agr Amt-4,99,421/-(2.52% above)Agr No-VTU/IRC-25/14-15/12-6-2014 ರನ್ವಯ ನೀಡಿದ್ದು ಈ ಕಾಮಗಾರಿಗೂ ಮೇಲಿನ ಅಂಶಗಳು ಅನ್ವಯವಾಗುತ್ತವೆ.

II) ಅದೇ ಪ್ರಕಾರ **ಶ್ರೀಮತಿ.ಎಸ್.ಭಾರತಿ. ಇವರಿಗೆ ಸಂದಾಯ ಮಾಡಿದ ಚೆಕ್ ನಂ: 219367 ದಿ: 16-4-2014 ₹ .2127824/-**ರ ಪ್ರಕಾರ ಶ್ರೀಮತಿ ಎಸ್. ಭಾರತಿ ಯವರಿಗೆ ಈ ಕೆಳಗಿನ 5 ಕಾಮಗಾರಿಗಳನ್ನು (Direct Entrustment) ನೇರವಾಗಿ ಅನುಷ್ಠಾನಕ್ಕೆ ವಹಿಸಿಕೊಡಲಾಗಿದೆ.

ಈ ಬಗ್ಗೆ ಪರಿಶೀಲಿಸಲಾಗಿ ಈ ಕೆಳಗಿನ ಅಂಶಗಳು ಕಂಡುಬರುತ್ತವೆ.

1) ಸದರ ಕಾಮಗಾರಿಗಳೂ ಸಹ ಮಾನ್ಯ ಕುಲಪತಿಗಳ ವಸತಿಗೃಹಕೆ ಕುರಿತಾದ ಕಾಮಗಾರಿಗಳಾಗಿದ್ದು ಇವುಗಳನ್ನು ಸಹ ನೇರವಾಗಿ ವಹಿಸಿಕೊಟ್ಟು ಟೆಂಡರ್ ಪ್ರಕ್ರಿಯೆಯನ್ನು ತಪ್ಪಿಸುವುದಕ್ಕಾಗಿ ರೂ.5.00ಲಕ್ಷ ಮೊತ್ತದ ಮಿತಿಯ ಒಳಗಾಗಿ ಕಾಮಗಾರಿಗಳನ್ನು ಭಾಗಿಸಿ ನೀಡಲಾಗಿದೆ ವಿವರ ಈ ಕೆಳಗಿನಂತಿವೆ.

Sl.No.	Name of work	Est Cost	Agreement Amt	Tender Premium	Agr No. & date
1	Providing Supplying & Inttalling monier tiles roof with M S truss over master bedroom of Hon'ble V.C's residence	Rs.4,85,534/-	Rs.4,99,582/-	2.89% above	VTU/IRC-No/02/14-15/4995/date1-4-14
2	Prov & fixing glass coated white Imported marble for Pooja room of Hon'ble V.C's residence at VTU	Rs.4,75,000/-	Rs.4,99,500/-	5.15% above	VTU/IRC-No/02/14-15/14302/date14-3-14
3	Prov & fixing granite flooring for drive way of Hon'ble V.C's residence of VTU	Rs.4,74,600/-	Rs.4,99,450/-	5.23% above	VTU/IRC-No/02/14-15/14306/date14-3-14
4	Prov & of fixing glass granite flooring inflow the Hon'ble V.C's residence of VTU	Rs.4,47,480/-	Rs.4,70,910/-	5.23% above	VTU/IRC-No/04/14-15/14303date14-3-14
5	Providing & Supplying & Installing monier tiles roof with M S truss over drawing Hall of Hon'ble V.C's residence	Rs.4,72,815/-	RS.4,86,495/-	2.89%	AgrVTU/IRC-No.01/04/14-15/date1-4-14w.o. VTU/Aca/RE/13-14/14304date14/3/14

ಮೇಲಿನ ಕಾಮಗಾರಿಗಳೂ ಸಹ ಕ್ರ.ಸಂ I ರ ಕಾಮಗಾರಿಗಳಂತಹವುಗಳೇ ಆಗಿರುವುದರಿಂದ ಕಂಡಿಕೆ I ರ ಉಪ ಕಂಡಿಕೆ 1&3 ಗಳು ಈ ಕಾಮಗಾರಿಗಳಿಗೂ ಸಹ ಅನ್ವಯವಾಗುತ್ತವೆ.

2) ಅದೇ ಪ್ರಕಾರ ಶ್ರೀಮತಿ. ಎಸ್.ಭಾರತಿ ಇವರು ಕಂಡಿಕೆ-01ರ ಕಾಮಗಾರಿಗಳ ಗುತ್ತಿಗೆದಾರರಾದ ಶ್ರೀಯುತ ಎಸ್.ಡಿ. ಗುರವ ಇವರ ಪತ್ನಿ ಎಂಬುದಾಗಿ ಅವರ ಪಾನ್‌ಕಾರ್ಡ(ಕಾರ್ಡಸಂಖ್ಯೆ ADUPG5120E) ನಿಂದ ತಿಳಿದು ಬರುತ್ತದೆ. ಅಂದರೆ ಶ್ರೀಯುತ ಎಸ್.ಡಿ. ಗುರವ ಅವರಿಗೆ ಈ ಎಲ್ಲ ಕಾಮಗಾರಿಗಳನ್ನು ವಹಿಸಿಕೊಡಬೇಕೆಂಬ ಉದ್ದೇಶದಿಂದ ನಿಯಮಗಳನ್ನು ಉಲ್ಲಂಘಿಸಿ ಸದರಿಯವರಿಗೆ ಕಾಮಗಾರಿಗಳನ್ನು ವಹಿಸಿಕೊಡಲಾಗಿದೆಯೇ? ಎಂಬ ಸಂಶಯ ಬರುವದು.

3) ಇನ್ನು ಶ್ರೀಮತಿ. ಎಸ್.ಭಾರತಿ ಇವರ ಗುತ್ತಿಗೆದಾರರ ನೋಂದಣಿ ಪ್ರಮಾಣ ಪತ್ರದ ವಿವರಗಳನ್ನು ಕೇಳಲಾಗಿ ಅವರ VAT Registration certificate (TIN-29900370251) Date-23-02-2007 ನ್ನು ಮಾತ್ರ ನೀಡಿದ್ದು ಗುತ್ತೇದಾರ ನೋಂದಣಿ ಪ್ರಮಾಣ ಪತ್ರ ಹಾಜರುಪಡಿಸಿರುವುದಿಲ್ಲ. ಕಾರಣ ಸದರಿಯವರ ಗುತ್ತೇದಾರ ನೋಂದಣಿ ಪ್ರಮಾಣ ಪತ್ರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವದು. ಇಲ್ಲದಿದ್ದಲ್ಲಿ ಈ ಗುತ್ತಿಗೆಗಳನ್ನು ಒಬ್ಬ ಅನರ್ಹ ವ್ಯಕ್ತಿಗೆ, ವಹಿಸಿಕೊಡಲಾಗಿದೆ ಎಂದು ಪರಿಗಣಿಸಿ ಒಟ್ಟಾರೆ ಗುತ್ತಿಗೆ ಮೊತ್ತವನ್ನು ಆಕ್ಷೇಪಣೆಯಲ್ಲಿ ಇಡಬೇಕಾಗುವುದು.

ಕಾರಣ ಈ ಕಾಮಗಾರಿಗಳನ್ನು (I&IIರ ಕಂಡಿಕೆಯ) ಟೆಂಡರ್‌ನ್ನು ತಪ್ಪಿಸುವ ಉದ್ದೇಶದಿಂದ Direct Entrustment ಮೇಲೆ ಕಾಮಗಾರಿಗಳನ್ನು ಅನುಷ್ಠಾನಕ್ಕೆ ವಹಿಸಿದ್ದು ಕೆ.ಟಿ.ಪಿ.ಪಿ ನಿಯಮ 4(ಇ)ಯ ಉಲ್ಲಂಘನೆಯಾಗುತ್ತದೆ ಎಂಬುದಕ್ಕೆ ಸೂಕ್ತ ಅನುಸರಣೆಯನ್ನು ನೀಡಲು ಕೋರಿದೆ ಅದುವರೆಗೆ, ಕ್ರಮವಾಗಿ ₹.24,08,692/-(Gross) ₹.4,99,421/- ಹಾಗೂ ₹.24,55,937/-ಗಳನ್ನು ಆಕ್ಷೇಪಣೆಯಲ್ಲಿ ಇರಿಸಲಾಗಿದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :51 ದಿನಾಂಕ: 02-02-2016 ನ್ನು ನೀಡಲಾಗಿತ್ತು. ಆದರೆ ಯಾವುದೇ ಅನುಸರಣೆಯನ್ನು ನೀಡಿರುವುದಿಲ್ಲ.

48) ವಿತಾವಿವಿಯಲ್ಲಿ 2014-15ರಲ್ಲಿ ಅನಿಯಮಿತವಾಗಿ ಕಾಮಗಾರಿ/ಪೂರೈಕೆಗಳನ್ನು ನೇರವಾಗಿ ವಹಿಸಿಕೊಟ್ಟ ಬಗ್ಗೆ.

ವಿತಾವಿವಿಯಲ್ಲಿ ಹಾಗೂ ಅಧೀನ ಪ್ರಾದೇಶಿಕ ಕೇಂದ್ರ ಹಣ ಯುಬಿಡಿಟಿ ಕಾಲೇಜು ದಾವಣಗೇರಿಯಲ್ಲಿ ಹಲವಾರು ಕಾಮಗಾರಿಗಳನ್ನು ಪೂರೈಕೆ ಆದೇಶಗಳನ್ನು ನೇರವಾಗಿ ನೀಡಿ ಅನುಷ್ಠಾನಗೊಳಿಸಿದ್ದು ಲೆಕ್ಕಪರಿಶೋಧನೆಯು ಗಮನಿಸಿದೆ. ಈ ಕುರಿತು ವಿತಾವಿವಿಯಿಂದ ವಿವರಗಳನ್ನು ಪರಿಶೀಲಿಸಲಾಗಿ ಈ ಕೆಳಗಿನಂತೆ ಇಂಥ ಕಾಮಗಾರಿ/ಪೂರೈಕೆ ಆದೇಶಗಳನ್ನು ನೀಡಿ ಅನುಷ್ಠಾನಗೋಳಿಸಲಾಗಿದೆ.(ಪ್ರತಿ ಲಗತ್ತಿಸಿದೆ)

ಅನಂ	ಪ್ರಾದೇಶಿಕ ಕೇಂದ್ರದ ಹೆಸರು	ಒಟ್ಟು ಕಾಮಗಾರಿ ಪೂರೈಕೆಗಳ ಸಂಖ್ಯೆ	ಅಂದಾಜಿನ ಮೊತ್ತ	ಅನುಷ್ಠಾನ ವಹಿಸಿದ ಮೊತ್ತ	ಅಂತರದ ಮೊತ್ತ
1	ಬೆಳಗಾವಿ	29	9754278	9797485	43207
2	ಬೆಂಗಳೂರು	6	2331235	2585425	254190
3	ಕಲಬುರ್ಗಿ	15	5727741	5819862	92121
4	ದಾವಣಗೇರಿ	32	14044165	14558828	514663
	ಒಟ್ಟು	82	31857419	32761600	904181

ಈ ಕುರಿತು ಪರಿಶೀಲಿಸಲಾಗಿ ಈ ಕೆಳಗಿನ ಅಂಶಗಳು ಕಂಡು ಬರುತ್ತವೆ.

1) ಈ ನೇರ ವಹಿಸುವಿಕೆಯ ಬಹುತೇಕ ಪ್ರಕರಣಗಳಲ್ಲಿ ಕಾಮಗಾರಿಯ ಕೆಲಸಗಳು ರೂ.5 ಲಕ್ಷದ ಮೀತಿಗೆ ಒಳಪಡಿಸುವ ಸಲುವಾಗಿ ತಯಾರಿಸಿದ ಅಂದಾಜುಗಳಾಗಿರುತ್ತವೆ ಎಂದು ಪರಿಗಣಿಸಬೇಕಾಗುತ್ತದೆ ಯಾಕೆಂದರೆ ಈ ಅಂದಾಜುಗಳು (ಉದಾ: ಕ್ರ.ಸಂ 1-6ರಲ್ಲಿಯ ಅಂದಾಜು ಮೊತ್ತ ₹.478800/- ರಿಂದ ₹.500000/- ಗಳಾಗಿರುತ್ತದೆ.)

ಇದರಿಂದಾಗಿ ಈ ವಹಿಸುವಿಕೆಯ ಕೆಟಿಪಿಪಿ ನಿಯಮಗಳು ನಿಯಮ 4(ಇ)ಯನ್ನು ಉಲ್ಲಂಘಿಸಿ ಟೆಂಡರ್ ಕರೆಯುವಿಕೆಯನ್ನು ತಪ್ಪಿಸಲು ಕೈಕೊಂಡ ಕ್ರಮವಾಗಿರುತ್ತದೆ ಎಂದು ಪರಿಗಣಿಸಬೇಕಾಗಿದೆ.

2) ಇನ್ನು ಪೂರೈಕೆಗಳು ಸಹ ₹.100000/-ಗಳನ್ನು ಮೀರಿರುವ ಪೂರೈಕೆಗಳಾಗಿರುತ್ತದೆ. ಇವು ಸಹ ಕೆಟಿಪಿಪಿ ನಿಯಮಗಳ ಉಲ್ಲಂಘನೆಯಾಗಿದೆ ಎಂದು ಪರಿಗಣಿಸಬೇಕಾಗುತ್ತದೆ.

3) ಇನ್ನು ಈ ಕಾಮಗಾರಿಗಳ ಅಂದಾಜುಗಳ ಮೊತ್ತಗಳಿಗೆ ನೇರವಾಗಿ ವಹಿಸದೇ ಈ ಅಂದಾಜುಗಳ ಮೇಲೆ ಹೆಚ್ಚಿನ ದರಗಳನ್ನು ಒಪ್ಪಿಕೊಂಡದ್ದನ್ನು ಗಮನಿಸಿದೆ. ಟೆಂಡರಗಳನ್ನು ಕರೆಯುವುದನ್ನು ತಪ್ಪಿಸಿದಲ್ಲಿ ಅಂದಾಜು ಮೊತ್ತಗಳಿಗೆ ಈ ಕಾಮಗಾರಿಗಳನ್ನು ವಹಿಸದೇ ಪ್ರೀಮಿಯಂ (ಹೆಚ್ಚಿನದರ) ಗಳ ನೀಡಿಕೆ ಮಾಡಿದ್ದು ಯಾವ ನಿಯಮಗಳ ಅವಕಾಶಗಳ ಪ್ರಕಾರ ಎಂಬುದಕ್ಕೆ ಲೆಕ್ಕಪರಿಶೋಧನೆಗೆ ಒದಗಿಸುವುದು.

4) ಈ ಕುರಿತು ಈಗಾಗಲೇ ಕೆಲವು ಕಾಮಗಾರಿಗಳ ಅನಿಯಮಿತ ಅನುಷ್ಠಾನ ಕುರಿತು ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂ:05 ದಿ:2-2-2016ನ್ನು ನೀಡಲಾಗಿದೆ. ಅದರಲ್ಲಿನ ಆಕ್ಷೇಪಣೆಗಳು ಪ್ರಸಕ್ತ ವಿಷಯದ ಪ್ರಕರಣಗಳಿಗೆ ಅನ್ವಯಿಸುತ್ತವೆ.

5) ಕೆಲವು ತೋಟಗಾರಿಕಾ ಕೆಲಸಗಳು / ಅಲಂಕಾರಿಕ ಗಿಡಗಳ ಪೂರೈಕೆ/ ಅಭಿವೃದ್ಧಿ ಕೆಲಸಗಳಾಗಿದ್ದು ಇವುಗಳನ್ನು ನಿರ್ವಹಿಸಲು, ಅಂದಾಜು ತಯಾರಿಸಲು ಸರಕಾರದ ತೋಟಗಾರಿಕೆ ಇಲಾಖೆ / ಸರಕಾರದ ಸ್ವಾಮಿತ್ವ ಹೊಂದಿದ ಹಾಫ್‌ಕಾಮ್ ನಿಗಮಗಳನ್ನು ಸಂಪರ್ಕಿಸಿದ ಬಗ್ಗೆ ಯಾವುದೇ ದಾಖಲೆಗಳು ಕಂಡುಬರುವದಿಲ್ಲ. ಇದರಿಂದಾಗಿ ಈ ಕಾಮಗಾರಿಗಳನ್ನು ಸಮರ್ಪಕವಾದ / ಮಿತವಯ್ಯಕಾರವಾದ ರೀತಿಯಲ್ಲಿ ಅನುಷ್ಠಾನಗೊಳಸಿದೆ ಎಂದು ದೃಢೀಕರಿಸಲಾಗದು.

6) ಅದೂ ಅಲ್ಲದೇ ಕೆಲವು ಸಾಮಗ್ರಿ ಪೂರೈಕೆ ಕೆಲಸಕ್ಕೆ ಸಂಬಂಧಿಸಿದ ಬಿಲ್ಲುಗಳು ಸಂಬಂಧಿಸಿದ ಪೂರೈಕೆ ಸಂಸ್ಥೆಗೆ ಸಂಬಂಧಿಸಿದ ಬಿಲ್ಲುಗಳಾಗಿರದೇ (ಮೆ|| ಆಶಾ ಇಂಡ್‌ಸ್ಟ್ರೀಜ್ ಫರ್ನಿಚರ್ಸ್ ಬೆಳಗಾವಿ) ಕಾಮಗಾರಿ ಆರ್.ಎ ಬಿಲ್ಲಿನ ನಮೂನೆಯಲ್ಲಿ ತಯಾರಿಸಿ ಕ್ಲೇಮ ಮಾಡಲಾಗಿದೆ. ಸದರ ಬಿಲ್ಲುಗಳ ವಿವರ ಈ ಕೆಳಗಿನಂತಿದೆ.

ಅ ನ	ಸಂಸ್ಥೆ ಹೆಸರು	ಪೂರೈಕೆ ಕೆಲಸದ ವಿವರಗಳು	ಪಿಜಿಆರ್ ನಂ	ಅಂದಾಜು ವೆಚ್ಚದ ಮೊತ್ತ	ವಹಿಸಿದ ಮೊತ್ತ	ಪ್ರೀಮಿಯಂ	ಬಿಲ್ಲಿನ ಮೊತ್ತ	ಚೆಕ್ ನಂ ಮತ್ತು ದಿನಾಂಕ	ಚೆಕ್ಕದ ಮೊತ್ತ
1	ಮೆ॥ ಆಶಾ ಇಂಡಸ್ಟ್ರೀಜ್ ಫರ್ನೀಚರ್ಸ್ ಬೆಳಗಾವಿ	Supplying of computer chairs for digital valuation centre at VTU regional centre Bengalore	ವಿಟಿಯು/ಪಿಸಿಪಿ/ಆರ್.ಇ/14-15 72ಎ 12-6-2014	385000	330000	14.28 % ಕಡಿಮೆ	330000	231854 21-6-2014	28591
2	--ಸದರ--	Supplying of 2 seater computers tables &chairs atVTU regional centre Bengalore	ವಿಟಿಯು/ಪಿಸಿಪಿ/ಆರ್.ಇ/14-15 73ಎ 12-6-2014	458440	444000	3.14% ಕಡಿಮೆ	444000	-ಸದರ-	384682
3	--ಸದರ--	----do----	ವಿಟಿಯು/ಪಿಸಿಪಿ/ಆರ್.ಇ/14-15 70ಎ 12-6-2014	47760	486000	1.74% ಕಡಿಮೆ	486000	-ಸದರ-	421076
4	--ಸದರ--	Supplying of computer chairs for digital valuation centre at VTU regional centre Bengalore	ವಿಟಿಯು/ಪಿಸಿಪಿ/ಆರ್.ಇ/14-15 72ಬಿ 12-6-2014	398050	405000	-ಸದರ-	405000	-ಸದರ-	350892
		ಒಟ್ಟು		1719150	1665000				

ಸದರಿ ಬಿಲ್ಲುಗಳನ್ನು ಪರಿಶೀಲಿಸಲಾಗಿ ಅಂದಾಜು ವೆಚ್ಚ ಮೊತ್ತಕ್ಕಿಂತ ₹.54150/-ಗಳಷ್ಟು ಕೆಳಗಿನ ದರಗಳನ್ನು ನಮೂದಿಸಿ, ಸಂಬಂಧಿತ ಸಂಸ್ಥೆಯು ತನ್ನ ಬಿಲ್ಲುಗಳ ಮೂಲಕ ಕ್ಲೇಮುಗಳನ್ನು ಸಲ್ಲಿಸದೇ ಆರ್.ಎ. ಬಿಲ್ಲುಗಳ ಮೂಲಕ ಈ ಕ್ಲೇಮುಗಳನ್ನು ಸಂದಾಯವನ್ನು ಪಡೆಯುವದರಿಂದ ಕ್ಲೇಮುಗಳ ಸಲ್ಲಿಕೆಯು ನಿಯಮ ಬದ್ಧವಾಗಿರುವದಿಲ್ಲ. ಮತ್ತು ಈ ಕ್ಲೇಮುಗಳಿಗೆ ಸಂಬಂಧಿಸಿದ ತೆರಿಗೆಗಳನ್ನು ಸರಕಾರಕ್ಕೆ ಸಲ್ಲಿಸಲಾಗಿದೆ ಎನ್ನುವುದನ್ನು ದೃಢೀಕರಿಸಲಾಗುವದಿಲ್ಲ.

ಮುಂದುವರೆದು ಕ್ರ.ಸಂ 01 ಮತ್ತು 4ರ, 2 ಮತ್ತು3ರ ಮೂಲಕ ಕೆಲಸಗಳು ಒಂದೇ ಸ್ವರೂಪವಾಗಿದ್ದು ಕರಾರು ಒಪ್ಪಂದವನ್ನು ಒಂದೇ ದಿನ ಮಾಡಿಕೊಂಡಿದ್ದರಿಂದ ಟೆಂಡರ್ ಪ್ರಕ್ರಿಯೆಯನ್ನು ತಪ್ಪಿಸುವದಕ್ಕಾಗಿ ಕೆಲಸದ ಪ್ರಮಾಣವನ್ನು ವಿಭಜಿಸಿ ಕರಾರು ಒಪ್ಪಂದವನ್ನು ಮಾಡಿಕೊಳ್ಳಲಾಗಿರುತ್ತದೆ. ಎನ್ನುವುದು ಸ್ಪಷ್ಟವಾಗಿರುತ್ತದೆ ಸದರ ಬಿಲ್ಲುಗಳ ಮೇಲೆ ಯಾವುದೇ ಪ್ರಮಾಣ ಪತ್ರಗಳನ್ನು ನೀಡದೇ ಇರುವದರಿಂದ ಪೂರೈಸಿದ ಸಾಮಗ್ರಿಗಳು ಸಮರ್ಪಕವಾಗಿ ನಿಗದಿತ ವಿನ್ಯಾಸದ ಪ್ರಕಾರ ಪೂರೈಸಲ್ಪಟ್ಟಿದ್ದು ದಾಸ್ತಾನಿಗೆ ಈ ಸಾಮಗ್ರಿಗಳನ್ನು ತೆಗೆದುಕೊಂಡ ಬಗ್ಗೆ ದೃಢೀಕರಿಸಲು ಸಾಧ್ಯವಿರುವದಿಲ್ಲ. ಹೀಗಾಗಿ ಈ ಖರೀದಿ ಪ್ರಕ್ರೀಯು ಅನಿಯಮಿತವೆನಿಸುತ್ತದೆ. ಈ ಪರಕರಣಗಳನ್ನು ಉದಾಹರಣೆಗಾಗಿ ನೀಡಲ್ಪಟ್ಟಿದ್ದು ಇವುಗಳಲ್ಲಿ ಅಡಕವಾದ ಮೇಲೆ ತಿಳಿಸಿದ ಆಕ್ಷೇಪಣೆಗಳು ಇಂತಹ ಉಳಿದೆಲ್ಲ ಪ್ರಕರಣಗಳಿಗೂ ಅನ್ವಯಿಸುತ್ತವೆ ಎಂಬುದನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಕೊಳ್ಳಲು ಮತ್ತು

ಆ ಬಗ್ಗೆ ಲೆಕ್ಕ ಪರಿಶೋಧನೆಗೆ ಅನುಸರಣೆ ನೀಡಲು ಈ ಮೂಲಕ ಸೂಚಿಸಲಾಗಿತ್ತು. ಈ ಕುರಿತು ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :89 ದಿನಾಂಕ: 25-02-2016 ನ್ನು ನೀಡಲಾಗಿತ್ತು. ಆದರೆ ವಿತಾವಿವಿಯವರು ನೀಡಿದ ಅನುಸರಣೆಯು ಆಕ್ಷೇಪಣೆ ಕಂಡಿಕೆ ಅನುಸಾರವಾಗಿ ನೀಡಿರುವದಿಲ್ಲ. ಕಂಡಿಕೆ ಅಂಶಗಳಿಗುಣವಾಗಿ ನೀಡಿರುವದಿಲ್ಲ ಆದ್ದರಿಂದ ಅನುಸರಣೆಗಳನ್ನು ಒಪ್ಪಲು ಸಾಧ್ಯವಾಗಲಿಲ್ಲ. ಅದುವರೆಗೂ ಇಂತಹ ಪ್ರಕರಣಗಳಲ್ಲಿ ಅಡಕವಾದ ವೆಚ್ಚದ ಮೊತ್ತ ₹.32761600/-ಗಳನ್ನು ಆಕ್ಷೇಪಣೆಯಲ್ಲಿರಸಲಾಗಿದೆ. ವಿವರವನ್ನು **ಅನುಬಂಧ-15ರಲ್ಲಿ** ತೋರಿಸಿದೆ.

49) ಇಂಟೆಲ್ L3 ಮತ್ತು L7 ಡೆಸ್ಕಟಾಪ್ ಗಣಕ ಯಂತ್ರಗಳನ್ನು ವಿತಾವಿ ಮೌಲ್ಯಮಾಪನ ಕೇಂದ್ರ ಗುಲ್ಬರ್ಗಾ, ಮೈಸೂರು, ದಾವಣಗೆರೆ ಮತ್ತು ಪರೀಕ್ಷಾ ವಿಭಾಗ ಬೆಳಗಾವಿಗೆ ಒಟ್ಟು 400 ಸಂಖ್ಯೆ ಗಣಕಯಂತ್ರಗಳನ್ನು ಖರೀದಿಸಿರುವ ಕುರಿತು.

ಮೇಲಿನ ವಿಷಯದನ್ವಯ 3 ಮೌಲ್ಯಮಾಪನ ಕೇಂದ್ರಗಳಿಗೆ ಹಾಗೂ 1ಪರೀಕ್ಷಾ ವಿಭಾಗಕ್ಕೆ ಒಟ್ಟು 400 ಸಂಖ್ಯೆಗಳ ಗಣಕಯಂತ್ರಗಳನ್ನು ಮೇ॥ಕ್ರಿಯೇಟಿವ್ ಇನ್‌ಫೋಟೆಕ್ಸ ಬೆಂಗಳೂರು ಇವರಿಗೆ ಖರೀದಿ ಆದೇಶ ಪತ್ರ ಸಂಖ್ಯೆ-VTU/SAP/Computers/DGS&D-52/2014-15/5312 ದಿನಾಂಕ 21-8-2014ರನ್ವಯ **ಚೆಕ್ ಸಂ: 234071 ದಿ: 21-10-2014 ₹.19273360/-** ನೀಡಿ ಖರೀದಿಸಿದ್ದು ಇರುತ್ತದೆ. ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಗಿನ ಅಂಶಗಳು ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದಿರುತ್ತವೆ.

1) ಕ್ರಿಯೇಟಿವ್ ಇನ್‌ಫೋಟೆಕ್ಸ ಬೆಂಗಳೂರು, ಈ ಫರ್ಮ ಸಂಸ್ಥೆಯು ಅರ್ಹ ಸಂಸ್ಥೆಯು ಆಗಿರುವದಿಲ್ಲ.ಏಕೆಂದರೆ DGS&D ದರಗಳ ಒಪ್ಪಂದದ ಸಮಾನಾಂತರ ದರಗಳ ಒಪ್ಪಂದದ ಯಾದಿಯ ಪ್ರಕಾರ ಏಸರ್ ಇಂಡಿಯಾ ಪ್ರೈಲಿ ಫರ್ಮಿನ ಯಾದಿಯ ಗುತ್ತಿಗೆಯ ದಾಖಲೆಯ ಶೆಡ್ಯೂಲ್-ಸಿ ಅಡಿ ಪಟ್ಟಿಯಲ್ಲಿ ಈ ಫರ್ಮು ಸೇರಿರುವದಿಲ್ಲ. ಅದು ಅಲ್ಲದೇ ಸದರ ಪೂರೈಕೆ ಆದೇಶವನ್ನು DGS&D ವೆಬ್‌ಸೈಟ್ ಮೂಲಕ ಆನ್‌ಲೈನ್ ಆರ್ಡರ ಪ್ಲೇಸ್ ಮಾಡಿದ ಬಗ್ಗೆ ವಿವರಗಳಿಲ್ಲ.

2) ಶಾಸನಬದ್ಧ ಕಡಿತಗಳನ್ನು ಬಿಲ್ಲಿನಲ್ಲಿ ಕಟಾಯಿಸಿರುವದಿಲ್ಲ. ಆದಾಯ ತೆರಿಗೆ ಮೊತ್ತವನ್ನು ಬಿಲ್ಲಿನಲ್ಲಿ ಕಡಿತಗೊಳಿಸದೇ ಬಿಲ್ಲಿನ ಪೂರ್ಣ ಮೊತ್ತಕ್ಕೆ ಸದರಿ ಫರ್ಮಿನ ಹೆಸರಿಗೆ ಚೆಕ್ಕನ್ನು ನೀಡಿರುವದಕ್ಕೆ ಸೂಕ್ತಸಕಾರಣಗಳನ್ನು ಲೆಕ್ಕಪರಿಶೋಧನೆಗೆ ನೀಡವದು.

3) ಬಿಲ್ಲಿನ ಹಣ ಸಂದಾಯ ಮಾಡುವ ಬಿಲ್ಲಿನ ನಮೂನೆಯಲ್ಲಿ ಎಲ್ಲ ಬಿಲ್ಲುಗಳ ಇನ್‌ವಾಯ್ಸ ಸಂಖ್ಯೆ & ದಿನಾಂಕ, ಮೊತ್ತಗಳನ್ನು ನಮೂದಿಸಿರುವದಿಲ್ಲ. ಬಿಲ್ಲಿಗೆ ಇನ್ವಾಯ್ಸಗಳನ್ನು ಲಗತ್ತಿಸಿದ್ದರೂ ಸಹ ಒಟ್ಟು ಮೊತ್ತ ಪಾವತಿಸಬೇಕಾದದ್ದು ಎಷ್ಟು? ಎನ್ನುವದು ಸ್ಪಷ್ಟವಾಗಿ ತಿಳಿದು ಬಂದಿರುವದಿಲ್ಲ.(Gross, Deduction & Net Amount) Schedule B ಯ ಅವಕಾಶಗಳನ್ವಯ 999 ಗಳಿಗೆ 1% ರಿಬೇಟ್‌ಗಳನ್ನು ಪಡೆದಿರುವುದಿಲ್ಲ.

4) ಬಿಲ್ಲಿನಲ್ಲಿ ನಮೂದಿಸಿದ ಪ್ರಮಾಣ ಪತ್ರಗಳನ್ನು ಪರಿಶೀಲಿಸಲಾಗಿ ವಿಶಿಷ್ಟ ಪೂರೈಕೆ ಮಾಡಿದ ಸರಕಿನ ವಿನ್ಯಾಸಗಳು (Specifications) ಕನಫಿಗರೇಶನ್ ಖರೀದಿ ಆದೇಶದಲ್ಲಿ ಕಾಣಿಸಿರುವ ಪ್ರಕರಣಗಳವಾರು ವಿನ್ಯಾಸ & Configuration ಗಳಿಗೆ ತಾಳೆ ಆಗಿರುವಬಗ್ಗೆ ಸಕ್ಷಮ ತಾಂತ್ರಿಕ ಪ್ರಾಧೀಕರಣದ ಸ್ಥಿರೀಕರಿಸಿರುವದಿಲ್ಲ. ಇದು ಅತ್ಯಂತ ಅವಶ್ಯವಾಗಿರುತ್ತದೆ.

5) 2014-15ನೇ ಸಾಲಿನಲ್ಲಿ ದೊಡ್ಡ ಪ್ರಮಾಣದಲ್ಲಿ ಅಂದರೆ 450+400 ಒಟ್ಟು 850 ಗಣಕಯಂತ್ರಗಳನ್ನು ಎರಡು ಪ್ರಕರಣಗಳಲ್ಲಿ ಖರೀದಿಸಿರುವದು ಲೆಕ್ಕಪತ್ರ ದಾಖಲೆಗಳನ್ನು ಪರಿಶೀಲಿಸಲಾಗಿ ಕಂಡುಬಂದಿರುತ್ತದೆ. ಕೇವಲ 4 ತಿಂಗಳುಗಳ ಅವಧಿಯ ಅಂತರದಲ್ಲಿ ದೊಡ್ಡ ಪ್ರಮಾಣದಲ್ಲಿ ಖರೀದಿಸಿರುವದು ಸಹ ದಾಖಲೆಗಳ ಪ್ರಕಾರ ಕಂಡುಬಂದಿರುತ್ತದೆ. ಆದ್ದರಿಂದ ಇದಕ್ಕೆ ಸಂಬಂಧಿಸಿದ ಬೇಡಿಕೆ ಪತ್ರಗಳು & ಈ ಸಾಮಗ್ರಿಗಳನ್ನು ಪೂರೈಕೆ ಆದೇಶದ ಪ್ರಕಾರ ಪೂರೈಸಿರುವುದನ್ನು ಖರೀದಿಸುವ ಮುಂಚೆ ಅವಶ್ಯಕತೆ ಇರುವ ಬಗ್ಗೆ ಸರಿಯಾಗಿ ಸಮೀಕ್ಷೆ ಮಾಡಿರುವ ಬಗ್ಗೆ ಮತ್ತು ಸಂಬಂಧಿತರಿಂದ ಬೇಡಿಕೆ ಪತ್ರ ಇತ್ಯಾದಿ ಯಾವುದೇ ದಾಖಲೆಗಳು ಕಡತದಲ್ಲಿ ಲಭ್ಯವಾಗಲಿಲ್ಲ. ಇದಕ್ಕಾಗಿ ಸಮರ್ಪಕ ಕ್ರಮಗಳನ್ನು ತೆಗೆದುಕೊಂಡು ಈಗಾಗಲೇ ಖರೀದಿಸಿದ ಸಾಮಗ್ರಿಗಳನ್ನು ಖಾತರಿ ಪಡಿಸಿಕೊಂಡ ಬಗ್ಗೆ ಲೆಕ್ಕಪರಿಶೋಧನೆಗೆಸೂಕ್ತ ಮಾಹಿತಿಯನ್ನು ದಾಖಲೆಗಳ ಸಮೇತ ನೀಡುವದ

6) ಸೆಕ್ಷನ್ ಆಫೀಸರ್ ವಿ.ಟಿ.ಯು ಪ್ರಾದೇಶಿಕ ಕೇಂದ್ರ ಕಲಬುರಗಿಗೆ ಒಟ್ಟು 50ಸಂಖ್ಯೆಗಳ ಗಣಕಯಂತ್ರಗಳಲ್ಲಿ 1ನಂ ಗಣಕಯಂತ್ರವು ಚಾಲ್ತಿ ಸ್ಥಿತಿಯಲ್ಲಿರುವದಿಲ್ಲ.CPUNOUXVISS1763E3623689 ಇದ್ದು ಪಾವತಿಯನ್ನು ಮಾತ್ರ ಬಿಲ್ಲಿನ ಪೂರ್ಣ ಮೊಬಲಗಿಗೆ ಮಾಡಲಾಗಿದೆ. ಒಂದು ಗಣಕಯಂತ್ರದ ಮೊತ್ತ ₹. 40,405=37 ಗಳನ್ನು ಕಡಿಮೆ ಮಾಡಿ ಬಿಲ್ಲನ್ನು ಬಟವಡೆಗೆ ಒಪ್ಪದೇ, ಪೂರ್ಣ ಪ್ರಮಾಣದಲ್ಲಿ ಬಿಲ್ಲಿನ ಪಾವತಿ ಮಾಡಿರುವದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಇದರಿಂದಾಗಿ ಚಾಲ್ತಿ ಸ್ಥಿತಿಯಲ್ಲಿರದ ಗಣಕಯಂತ್ರಕ್ಕೂ ಸಹ ಅನಿಯಮಿತವಾಗಿ ಪಾವತಿ ಮಾಡಲಾಗಿದೆ. ಕಾರಣ ₹. 40,405=37 ಗಳನ್ನು ಸಂಬಂಧಿತರಿಂದ ವಸೂಲಿಮಾಡಬೇಕಾದುದು ಅವಶ್ಯ ಇಲ್ಲವೇ ಈ ದೋಷಪೂರಿತ ಗಣಕಯಂತ್ರವನ್ನು ಬದಲಿಸಿ ಬೇರೆ ಗಣಕಯಂತ್ರ ಪೂರೈಸಿದ ಕುರಿತು ದಾಖಲೆ ಸಮೇತ ಅನುಸರಣೆ ನೀಡುವದು ಅವಶ್ಯ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :59 ದಿನಾಂಕ: 04-02-2016 ನ್ನು ನೀಡಲಾಗಿತ್ತು ಆದರೆ ಅನುಸರಣೆ ಆಕ್ಷೇಪಿತ ಕಂಡಿಕೆ ಅಂಶಗಳಿಗುಣವಾಗಿಲ್ಲ. ಆದ್ದರಿಂದ ರೂ. 40,405/-ಗಳನ್ನು ವಸೂಲಿಗೆ ಮತ್ತು1,92,32,955/-ಗಳನ್ನು ಆಕ್ಷೇಪಣೆಯಲ್ಲಿರಿಸಲಾಗಿದೆ.

50) ವಿತಾವಿ ಬೆಳಗಾವಿಯಲ್ಲಿ ವಿಪತ್ತು ನಿವಾರಕ ದತ್ತಾಂಶ ಕೇಂದ್ರ (Disaster Recovery Data Centre)ಯನ್ನು ವಿತಾವಿ ಪ್ರಾದೇಶಿಕ ಕೇಂದ್ರ ಮೈಸೂರಿನಲ್ಲಿ ಮೆ|| IBM India Pvt. Ltd. ಮತ್ತು ಇತರರ ಮೂಲಕ ಸ್ಥಾಪಿಸಲು ಅನಿಯಮಿತವಾಗಿ ಗುತ್ತಿಗೆ ನೀಡಿದ ಬಗ್ಗೆ.

ಐ.ಬಿ.ಎಂ ಪ್ರೈಲಿ ಇವರೊಂದಿಗೆ ಮಾಡಿಕೊಂಡ ಕರಾರು ಒಪ್ಪಂದ ಪತ್ರ ಸಂ:ವಿಟಿಯು/ಐ.ಆರ್.ಸಿ/49-ಎ/2010-11 ದಿ:20-12-2010ರ ಪ್ರಕಾರ, ವಿ.ತಾ.ವಿ.ವಿ ಪ್ರಾದೇಶಿಕ ಕೇಂದ್ರ ಮೈಸೂರಿನಲ್ಲಿ ವಿಪತ್ತು ನಿವಾರಕ ದತ್ತಾಂಶ ಕೇಂದ್ರ (Disaster Recovery Data Centre) ವನ್ನು ಸ್ಥಾಪಿಸಲು ಮೆ// ಐ.ಬಿ.ಎಮ್ ಇಂಡಿಯಾ ಪ್ರೈ.ಲಿ. ಬೆಂಗಳೂರು ಇವರಿಗೆ ₹.280.00ಲಕ್ಷದ ಕಾಮಗಾರಿಯನ್ನು ವಹಿಸಿಕೊಡಲಾಗಿದೆ.

ಈ ಕಾಮಗಾರಿಯನ್ನು ನಿರ್ವಹಿಸಲು ಸದರ ಸಂಸ್ಥೆಗೆ, ಕೇಲವು ಐಟಿ ತಂತ್ರಾಂಶದ ಮೂಲ ಸೌಕರ್ಯ ಒದಗಿಸುವ ಕೆಲಸಗಳನ್ನು ಬೇರೆ ಸಂಸ್ಥೆಗಳಿಗೆ (ಒಟ್ಟು ಕಾಮಗಾರಿಯ ಮೊತ್ತ ಮೀರದಂತೆ) ವಹಿಸಿಕೊಡಲು(Sublet ಮಾಡಲು) ಅನಮತಿಸಲಾಗಿದೆ. ವಿವರ ಈ ಕೆಳಗಿನಂತಿದೆ.

1	I.B.M India Pvt. Ltd-Bengaluru	Data Infrastructure Works etc	Rs. 73,61,320/-
2	I.B.M India Pvt. Ltd-Bengaluru	DrDrill/Continuty Manager/Replication Software /etc	RS. 45,60,862/-
3	Fortune Computer Technologies Pvt. Ltd- Bengaluru	Supplying & Installing of Hardware, Like P6 Servers,Storage, Tape Library etc.	Rs.1,46,22,248/-
4	Network Solutions Pvt.Ltd-Bengaluru	Supplying & Installing Data Calling & Data Racks etc.	Rs. 14,11,684/-
		TOTAL	Rs.2,80,00,000/-

ಈ ಗುತ್ತಿಗೆಯನ್ನು ಮೆ// I.B.M India Pvt. Ltd-Bengaluru ಇವರಿಗೆ ವಹಿಸಿಕೊಡಲು ವಿ.ತಾ.ವಿ.ವಿ ಯಲ್ಲಿ ಪರಿಣಿತರ ಕಮಿಟಿ ಮುಂದೆ ದಿ-25-8-2010ರಂದು ಇರಿಸಿ, ಸದರ ಕಂಪನಿಯವರು ನೀಡಿದ ₹.328.795ಲಕ್ಷಗಳ ಪ್ರಸ್ತಾವನೆಗೆ ಎದುರಾಗಿ ₹.78,79,516/-ಗಳ ಸೋಡಿ (ರಿಬೇಟ್) ನೀಡಲು ತಿಳಿಸಿ ಕೊನೆಗೆ ಸಂದಾಯದ ಮೂಲಕ ₹.280.00ಲಕ್ಷಗಳು ಪ್ರಸ್ತಾವನೆಗೆ (ಎಲ್ಲ ಕರಗಳು,ದರಗಳು,ಸುಂಕಗಳು,ಜಕಾತಿಗಳನ್ನು ಸೇರಿಸಿ) ಒಪ್ಪಿಗೆ ನೀಡಿ ವಿ.ತಾ.ವಿ.ವಿ ಪತ್ರ ಸಂಖ್ಯೆ VTU/REG/DRS/ELEC/2010-11/11584/DATE-10-12-2010 ರನ್ವಯ ಕಾರ್ಯಾದೇಶವನ್ನು ನೀಡಲಾಗಿದೆ ಮತ್ತು ಅದರನ್ವಯ ಐ.ಬಿ.ಎಂ ಪ್ರೈಲಿ ಇವರೊಂದಿಗೆ ಮಾಡಿಕೊಂಡ ಕರಾರು ಒಪ್ಪಂದ ಪತ್ರ ಸಂ:ವಿಟಿಯು/ಐ.ಆರ್.ಸಿ/49-ಎ/2010-11 ದಿ:20-12-2010ರ ಕರಾರು ಒಪ್ಪಂದದನ್ವಯ ಒಡಂಬಡಿಕೆಯನ್ನು ಮಾಡಿಕೊಳ್ಳಲಾಯಿತು.

ಅದರನ್ವಯ ಕಾಮಗಾರಿ ಪೂರ್ಣಗೊಳಿಸಲು1-3-2011ರ ವರೆಗಿನ ಅವಧಿ ನಿಗದಿಗೊಳಿಸಲಾಗಿತ್ತು.

1) ಈ ಬಗ್ಗೆ ಪರಿಶೀಲಿಸಲಾಗಿ ಸದರ ಕಾಮಗಾರಿ ಮೊತ್ತ ₹.280.00 ಲಕ್ಷಗಳಾಗಿದ್ದರಿಂದ ಸದರ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಾಂತ್ರಿಕ ಮಂಜೂರಿಗಾಗಿ ಹಾಗೂ ಆಡಳಿತಾತ್ಮಕ ಮಂಜೂರಿಗಾಗಿ, ಕರ್ನಾಟಕ ರಾಜ್ಯ ಕಂಪ್ಯೂಟರ ಸೆಲ್ ನ ಮೂಲಕ ಸರಕಾರ ಅನುಮತಿ ಪಡೆಯಲಾಗಿದೆಯೇ ಅಥವಾ ಇಂಥ ಕೆಲಸಗಳನ್ನು ನಿರ್ವಹಿಸಲು ನಿಯಮಾನುಸಾರ ಅನುಶಾಸನಗಳನ್ನು ರಚಿಸಲಾಗಿದೆಯೇ? ಎಂಬ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವದು.

2) ಸದರ ಕಾಮಗಾರಿಯ ಮೊತ್ತ ₹.280.00ಲಕ್ಷಗಳಾಗಿದ್ದರಿಂದ ಕೆ.ಟಿ.ಪಿ.ಪಿ ನಿಯಮ 4(ಇ) ಯನ್ವಯ ಟೆಂಡರ್ ಮೂಲಕ ಗುತ್ತಿಗೆಯನ್ನು ನಿಷ್ಕರ್ಷೆಮಾಡಿ ಯಶಸ್ವೀ ಬಿಡ್‌ದಾರರಿಗೆ ಈ ಕಾಮಗಾರಿ ವಹಿಸಬೇಕಿತ್ತು ಇಲ್ಲವೇ ಈ ಗುತ್ತಿಗೆಯ ಕೆಲಸವು Sole Propertier ಆಧಾರದ್ದಾಗಿದ್ದರೆ ಕೆ.ಟಿ.ಪಿ.ಪಿ ನಿಯಮ 4(b) ಪ್ರಕಾರ ಕ್ರಮ ಕೈಕೊಂಡು ಇದೊಂದೇ ಸಂಸ್ಥೆ ಮಾತ್ರ, ಈ ಕೆಲಸ ನಿರ್ವಹಿಸುತ್ತದೆ ಎಂಬುದಾಗಿ ಧೃಢೀಪಡಿಸಿದ ಬಗ್ಗೆ ದಾಖಲೆ ಸಮೇತ ವಿವರಗಳನ್ನು ಒದಗಿಸುವುದು.

ಈ ಹಿನ್ನಲೆಯಲ್ಲಿ ಮೇಲೆ ವಿವರಿಸಿದ ಅಂಶಗಳಿಗೆ ಸೂಕ್ತ ಅನುಸರಣೆ ನೀಡುವದು ಅವಶ್ಯವಿದೆ. ಇನ್ನು ಬಿಲ್ಲು ಪಾವತಿ ಕುರಿತು ಕೈಕೊಂಡ ಕ್ರಮಕ್ಕೆ ಪರಿಶೀಲಿಸಲಾಗಿ, RA-Bill-I ಕ್ಕೆ ಕುರಿತಾಗಿ ಸಂಸ್ಥೆಯಿಂದ ಕ್ಲೇಮ ಮಾಡಿದ 63,75,102/-ಗಳ ಬಿಲ್ಲಿಗೆ ಪ್ರತಿಯಾಗಿ ₹.50.00ಲಕ್ಷಗಳನ್ನು ಪಾವತಿಸಿದ್ದು, RA-Bill-IIರ ₹.59,35,964-58 ಕ್ಕೆ ಎದುರಾಗಿ, 3rd Party Inspection (Software ಭಾಗಕ್ಕಾಗಿ) ಕುರಿತು 10% ಕಡಿತಗೊಳಿಸಿ ₹.53,42,368/-ಗಳನ್ನು ಚೆಕ್ ನಂ.231694/17-6-2014ರನ್ವಯ ಪಾವತಿಸಲಾಗಿದೆ.

ಈ ಬಗ್ಗೆ ಪರಿಶೀಲಿಸಲಾಗಿ, ವಿ.ತಾ.ವಿ.ವಿಯ ತಾಂತ್ರಿಕ ಪ್ರಾಧಿಕಾರದ ಯಾವುದೇ ಪ್ರಮಾಣ ಪತ್ರಗಳು ಬಿಲ್ಲಿನ ಮೇಲೆ ಇರುವದಿಲ್ಲ, & 3rd Party Inspection ವರದಿ ಸಹ ಇಲ್ಲದೇ ಇರುವದರಿಂದ ಈಗ ಪಾವತಿಸಿದ ಮೊತ್ತವೂ ಸಹ ಪಾವತಿಗೆ ಅರ್ಹವಾಗಿತ್ತೆ ಎಂಬುದನ್ನು ಪರಿಶೀಲಿಸಲು ಸಾಧ್ಯವಾಗುವುದಿಲ್ಲ.

ಇದೂ ಅಲ್ಲದೇ ಈ ಕಾಮಗಾರಿಯ ವಿದ್ಯುತ್ ಕೆಲಸಗಳಿಗೆ ಸಂಬಂಧಪಟ್ಟಂತೆ ಹೆಸ್ಕಾಂ/ಸೆಸ್ಕಾಂ ನಿಂದ ವಿದ್ಯುತ್ ಕೆಲಸಗಳ ಸಮರ್ಪಕತೆಯ ಬಗ್ಗೆ ಸೂಕ್ತ ಪ್ರಮಾಣ ಪತ್ರಗಳನ್ನು ಪಡೆಯಲಾಗಿದೆಯೇ? ಎಂಬ ಕುರಿತು ವಿವರಗಳನ್ನು ಹಾಜರು ಪಡಿಸಿರುವದಿಲ್ಲ. ಕಾಮಗಾರಿಯ ಸುಮಾರು 3ವರ್ಷ ವಿಳಂಬವಾಗಿರುವುದರಿಂದ ಆ ಕುರಿತು ದಂಡ ಪ್ರಕ್ರಿಯೆ ಇತ್ಯಾದಿ ಕ್ರಮಗಳನ್ನು ಕೈಕೊಂಡ ಬಗ್ಗೆ ಸಹ ವಿವರ ನೀಡುವದು ಅವಶ್ಯ ಕಾರಣ ಐಟಿ ಕೆಲಸಗಳಿಗೆ ಸಂಬಂಧಿಸಿದಂತೆ. Electronic ವಿಷಯಗಳ ಪರಿಣಿತ ಸಕ್ಷಮ ಪ್ರಾಧಿಕಾರದಿಂದ ಕೆಲಸದ ಪ್ರಮಾಣೀಕರಣ ಸಹ ಅಗತ್ಯವಿತ್ತು, ಅಳತೆಗಳನ್ನು ದಾಖಲಿಸಿದ ಬಗ್ಗೆ ವಿವರಗಳು ಲೆಕ್ಕಪರಿಶೋಧನೆಗೆ ಲಭ್ಯವಾಗಲಿಲ್ಲ.

ಕಾರಣ ಸಂಬಂಧಿತ ಕಾಮಗಾರಿಯ ಮಹತ್ವ ವಿ.ತಾ.ವಿ.ವಿಯ ಮಹತ್ವದ ದಾಖಲೆಗಳ ಉಳಿವಿಗೆ ಸಂಬಂಧಿತವಾದ್ದರಿಂದ ಎಲ್ಲ ಪರಿಶೀಲನೆ/ಪರಿವೀಕ್ಷಣೆಗಳು ಕಟ್ಟುನಿಟ್ಟಾಗಿ/ಪಾರದರ್ಶಕವಾಗಿ ನಡೆಯಬೇಕಾದುದು ಅವಶ್ಯವಾದ್ದರಿಂದ ಅಂತಹ ಮಟ್ಟದ ಪರಿಶೀಲನೆಗಳನ್ನು ನಡೆಸಿದ ಬಗ್ಗೆ ದಾಖಲೆಸಹಿತ ಅನುಸರಣೆಯನ್ನು ನೀಡುವದು ಅವಶ್ಯವಿದೆ. ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :60 ದಿನಾಂಕ: 05-02-2016ನ್ನು ನೀಡಲಾಗಿತ್ತು ಆದರೆ ಆಕ್ಷೇಪಿತ ಅಂಶಗಳಿಗುಣವಾಗಿ ಅನುಸರಣೆ ಇರುವುದಿಲ್ಲ ಆದ್ದರಿಂದ ವರದಿ ಅವಧಿಯಲ್ಲಿ ಪಾವತಿಸಿದ ₹.53,42,368/- ಗಳನ್ನು ಆಕ್ಷೇಪಣೆಯಲ್ಲಿ ಇರಿಸಲಾಗಿದೆ.

51) ಮೆ||. ಕ್ರಿಯೇಟಿವ್ವ ಇನ್‌ಫೋಟೆಕ್ ಬೆಂಗಳೂರು ಇವರಿಂದ ವಿತಾವಿವಿಯ ಮೌಲ್ಯಮಾಪನ ಕೇಂದ್ರಗಳು ಬೆಳಗಾವಿ, ಬೆಂಗಳೂರು, ದಾವಣಗೇರಿ ಮತ್ತು ಗುಲ್ಬರ್ಗಾಗಳಿಗೆ ಇನಟೆಲ್ 13 ಡೆಸ್ಕಟಾಪ್ ಕಂಪ್ಯೂಟರ (450 ನಂ)ಗಳನ್ನು ಡಿ.ಜಿ.ಎಸ್.&ಡಿ ಆಧಾರದ ಮೇಲೆ ಖರೀದಿಸಿದ್ದರ ಬಗ್ಗೆ.

ವ್ಹಿಟಿಯು ಖರೀದಿ ಆದೇಶ ಸಂಖ್ಯೆ:ವ್ಹಿಟಿಯು/ಎಸ್.ಎ.ಪಿ/ಕಂಪ್ಯೂಟರ್ಸ್/ಡಿಜಿಎಸ್‌ಡಿ-51/2014-15 ದಿ:03-04-2014ರ ಖರೀದಿ ಆದೇಶದನ್ವಯ ಮೇ||ಕ್ರಿಯೇಟಿವ ಇನ್‌ಫೋಟೆಕ್ ಬೆಂಗಳೂರು ಇವರಿಂದ ವಿ.ತಾ.ವಿ.ವಿಯ ಮೌಲ್ಯಮಾಪನ ಕೇಂದ್ರಗಳಾದ ಬೆಳಗಾವಿ, ಬೆಂಗಳೂರು,ದಾವಣಗೇರಿ,ಕಲಬುರಗಿಗಳಿಗೆ, ಒಟ್ಟು450 ಕಂಪ್ಯೂಟರಗಳನ್ನು ಖರೀದಿಸಲಾಗಿದೆ. ಈ ಖರೀದಿಯನ್ನು ಡಿ.ಜಿ.ಎಸ್&ಡಿ ದರಗುತ್ತಿಗೆಯ ಸಂಖ್ಯೆ Computer/IT-1/RC-7109000/1014/81/01257/4292 Date-22-1-2014. ರನ್ವಯ ಖರೀದಿಸಲಾಗಿದೆ. ಈ ಖರೀದಿಯ ಸದರ ದರಗುತ್ತಿಗೆಯ Schedule A ದ ಪ್ರಕಾರ Acer India Pvt. Ltd. New Delhi. ಇವರ ಹೆಸರಿನಲ್ಲಿದ್ದು, ಸದರ Schedule ಐಟಂ ನಂ.19 ರ ಪ್ರಕಾರ Intel Corei 3,Operating System: Microsoft Window 8 ರ ವಿನ್ಯಾಸದ ಗಣಕಯಂತ್ರವಾಗಿದ್ದು ಇದರ ದರ ಒಂದಕ್ಕೆ ₹.40,000/-ಇದ್ದು, ಈ ದರವು ಅಬಕಾರಿ ಸುಂಕ(ED 12.36%) ಒಳಗೊಂಡಿದ್ದು VAT/CSTನ್ನು ಒಳಗೊಂಡಿಲ್ಲ ಇದಕ್ಕೆ ದರಗುತ್ತಿಗೆಯಲ್ಲಿ 5% ಪ್ರತಿಶತ ನಿಗದಿಯಾಗಿದೆ ಆದರೆ ಉಲ್ಲೇಖಿತ ಖರೀದಿ ಆದೇಶದಲ್ಲಿ 5.5%ನ ವ್ಯಾಟನ್ನು ಒಪ್ಪಿಕೊಳ್ಳಲಾಗಿದೆ. ಇದರಿಂದಾಗಿ ಪ್ರತಿ ಕಂಪ್ಯೂಟರಿಗೆ 0.50%ನ ಹೆಚ್ಚುವರಿ ವ್ಯಾಟ ಆಕರಿಸಿದಂತಾಗಿದೆ, ಇದರಿಂದಾಗಿ 40000X0.50%=200 X450=90,000/-ಗಳನ್ನು ಹೆಚ್ಚಿಗೆ ನೀಡಿದಂತಾಗಿದೆ.

2) ಇನ್ನು ದರಗುತ್ತಿಗೆಯ Acer India Pvt. Ltd. New Delhi. ಇವರ ಹೆಸರಿನಲ್ಲಿದ್ದು, ಮೇ|| ಕ್ರಿಯೇಟಿವ ಇನ್‌ಫೋಟೆಕ್ ಮಣಿಪಾಲಸೆಂಟರ ಡಿಕ್ಸನ್ ರೋಡ ಬೆಂಗಳೂರು ಇವರಿಗೆ ಈ ಖರೀದಿ ಗುತ್ತಿಗೆ ನೀಡಿದ್ದು ನಿಯಮಬದ್ಧವಲ್ಲ.ಅದೂ ಅಲ್ಲದೇ ಈ ಸಂಸ್ಥೆಯು ದರಗುತ್ತಿಗೆ ಸಂಸ್ಥೆಯ ಶೆಡ್ಯೂಲ್-ಸಿ (ದಾಸ್ತಾನು ಮಳಿಗೆದಾರರು/ಅಧಿಕೃತ ಪೂರೈಕೆದಾರರ) Parallel Rate Contract Firms ಅಡಿಯ ಸಂಸ್ಥೆಗಳ ಪಟ್ಟಿಯಲ್ಲಿ ಇರುವದಿಲ್ಲ. ಇದರಿಂದಾಗಿ ಈ ಸಂಸ್ಥೆಗೆ ಡಿ.ಜಿ.ಎಸ್&ಡಿ ದರಗುತ್ತಿಗೆಯ ದರಗಳನ್ವಯ & ಷರತ್ತುಗಳನ್ವಯ ಪೂರೈಸಲು ಅಧಿಕೃತ ಸಂಸ್ಥೆಯಾಗುವುದಿಲ್ಲ. ಆದ್ದರಿಂದ ಡಿ.ಜಿ.ಎಸ್&ಡಿ ದರ ಆಧಾರದ ಮೇಲೆ ಖರೀದಿಸಿದ ಈ ಮೊತ್ತ. ₹.1,26,60,000/- (300Computers ಗಳು ಪಾವತಿಸಿದ ದಿನಾಂಕ-ಚೆಕ್‌ನಂ.219802/1,23,46,800/-27-5-2014)& ₹. 63,30,000/-(150 ಕಂಪ್ಯೂಟರ ಚೆಕ್ ನಂ.220048/13-6-2014)ಗಳು ಆಕ್ಷೇಪಾರ್ಹವೆನಿಸುತ್ತದೆ.

3) ಇನ್ನು ಸದರ ಖರೀದಿಗೆ ಶೆಡ್ಯೂಲ 'ಬಿ' ಅನ್ವಯ ಇತರೇ ಮಾಹಿತಿ ಅಡಿಯ ಅನ್ವಯವಾಗುವ Discount Slab ಪ್ರಕಾರ 99 ಅಥವಾ ಅದಕ್ಕೂ ಹೆಚ್ಚಿನ ಪ್ರಮಾಣದ ಪೂರೈಕೆಗೆ 0.50% Discount ಅವಕಾಶ ಇರುತ್ತದೆ.

ಆದರೆ ಇಂತಹ ಯಾವುದೇ Discount ನ್ನು ಸದರ ಪೂರೈಕೆ ವಿಷಯದಲ್ಲಿ ಪಡೆದಿರುವುದಿಲ್ಲ. ಇದರಿಂದಾಗಿ 40,000*0.50%=200*450=90,000/-ಗಳ ಮೊತ್ತ ಹೆಚ್ಚುವರಿಯಾಗಿ ಪಾವತಿಸಿದಂತಾಗಿದೆ.

4) ಮುಂದುವರೆದು, 300ಕಂಪ್ಯೂಟರಗಳ ಪೂರೈಕೆ ಕುರಿತು ನೀಡಿದ 1ನೇ ಬಿಲ್ಲಿನಲ್ಲಿ ಚೆಕ್ ನಂ.219800/27-5-2014 ರ ಪ್ರಕಾರ ₹.2,53,200/-ಗಳ ಆದಾಯ ತೆರಿಗೆ ಕಟಾಯಿಸಲಾಗಿದೆ, ಆದರೆ ದಿ: 13-6-2014ರಂದು ಚೆಕ್ ನಂ.220048/ 13-6-2014 ₹.63,30,000/-ಗಳ 150 ಕಂಪ್ಯೂಟರ ಪೂರೈಕೆ ಬಿಲ್ಲಿನ ಸಂದಾಯದ ವೇಳೆ ಯಾವುದೇ ಟಿಡಿಎಸ್ ಆದಾಯ ತೆರಿಗೆ ಕಟಾವಣೆ ಮಾಡಿರುವದಿಲ್ಲ. ಕಾರಣ ಈ ತೆರಿಗೆ ಕಟಾವಣೆ ಮಾಡದೇ ಇರುವದಕ್ಕೆ ಸೂಕ್ತ ಕಾರಣಗಳನ್ನು ನೀಡಲು ಕೋರಿದೆ. ಇಲ್ಲವೇ ₹.1,26,600/-ಗಳನ್ನು ಸಂಬಂಧಿತರಿಂದ ವಸೂಲಿಮಾಡಿ ಸಂಬಂಧಿತ ಇಲಾಖೆಗೆ, ಜಮಾಮಾಡಿ ಆ ಬಗ್ಗೆ ದಾಖಲೆ ಸಹಿತ ವರದಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಸೂಚಿಸಿದೆ.

5) ಖರೀದಿ ಆದೇಶದಲ್ಲಾಗಲಿ/ಬಿಲ್ಲಿನ ಮೇಲಾಗಲಿ ಖರ್ಚನ್ನು ಭರಿಸಬೇಕಾದ ಲೆಕ್ಕಶೀರ್ಷಿಕೆಯ ವಿವರಗಳಿಲ್ಲ. ಇದರಿಂದಾಗಿ ಭರಿಸಿದ ವೆಚ್ಚದ ವರ್ಗೀಕರಣವು ಸಮರ್ಪಕವಾಗಿದೆ & ಬಜೆಟ್ ಅವಕಾಶಗಳ ಮಿತಿಯ ಒಳಗಿದೆ ಎಂದು ಧೃಢೀಕರಿಸಲಾಗದು, ಕಾರಣ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :54 ದಿನಾಂಕ: 03-02-2016 ನ್ನು ನೀಡಿ ಮೇಲಿನ ಅಂಶಗಳಿಗೆ ಸೂಕ್ತ ಅನುಸರಣೆಯನ್ನು ಒದಗಿಸಲು ಕೋರಲಾಗಿತ್ತು. ಅನುಸರಣೆಯು ಆಕ್ಷೇಪಣಾ ಕಂಡಿಕೆಗಳ ಅಂಶಗಳಿಗುಣವಾಗಿರುವದಿಲ್ಲ. ಆದ್ದರಿಂದ ಒಟ್ಟು ಮೊತ್ತ ₹.1,86,83,400/-ಗಳನ್ನು ಆಕ್ಷೇಪಣೆ ಅಡಿ ಹಾಗೂ ₹.1,80,000/- + ₹.1,26,600/-= ₹.3,06,600/- ಗಳನ್ನು ವಸೂಲಿಗೆ ಸೂಚಿಸಿ ಇರಿಸಲಾಗಿದೆ.

52) ವಿ.ತಾ.ವಿ.ವಿ ಬೆಳಗಾವಿಯ 2014-15ನೇ ಸಾಲಿನಲ್ಲಿ ಕಂಪ್ಯೂಟರಗಳ ಖರೀದಿ ಮತ್ತು ಗಣಕಜಾಲ ಕುರಿತು ವೆಚ್ಚಗಳ ಮೇಲೆ ನಿಯಂತ್ರಣ ಸಾಧಿಸದೇ ಇರುವ ಬಗ್ಗೆ.

ವಿ.ತಾ.ವಿ.ವಿ ಬೆಳಗಾವಿಯಲ್ಲಿ 2014-15ನೇ ಸಾಲಿನಲ್ಲಿ Computers & Networking ಖಾತೆಯಡಿ ಒಟ್ಟು ₹.33,01,28,210/-ಗಳ ವೆಚ್ಚ ಮಾಡಲಾಗಿದೆ (ಪ್ರತಿ ಲಗತ್ತಿಸಿದೆ) ಎಂಬುದು ವಾರ್ಷಿಕ ಲೆಕ್ಕದಿಂದ ತಿಳಿದುಬರುತ್ತದೆ.

ಈ ಬಗ್ಗೆ ಪರಿಶೀಲಿಸಲಾಗಿ, ಈ ಕೆಳಗಿನ ಅಂಶಗಳು/ನ್ಯೂನತೆಗಳು ಕಂಡುಬರುತ್ತದೆ.

1) ವಿ.ತಾ.ವಿ.ವಿ.ಯ ಇಂತಹ ಯಾವುದೇ ಬಿಲ್ಲುಗಳ ಮೇಲೆ ವಿ.ತಾ.ವಿ.ವಿ ಬಜೆಟ್‌ನಲ್ಲಿ ತಿಳಿಸಿದ ಲೆಕ್ಕಶೀರ್ಷಿಕೆಗಳು & ಅವುಗಳಿಗೆ ಎದುರಾದ ವೆಚ್ಚದವಿವರಗಳನ್ನು ದಾಖಲಿಸಿರುವುದು. & ಇಂತಹ ಬಜೆಟ್ ಶೀರ್ಷಿಕೆವಾರು ವೆಚ್ಚದ ರಜಿಸ್ಟರ ನಿರ್ವಹಿಸಿದ ವಿವರಗಳಿರುವುದಿಲ್ಲ.

2) ವಿ.ತಾ.ವಿ.ವಿಯ ಬಜೆಟ್‌ಶೀರ್ಷಿಕೆ ಬಜೆಟ್ ಕೋಡಗಳಲ್ಲದೇ, ಖರೀದಿ ಆದೇಶ/ಬಿಲ್ಲುಗಳನ್ನು ಅನುಮೋದಿಸಿದ್ದರಿಂದ ಯಾವುದೇ ಬಾಬತ್ತಿನ ಖರ್ಚಿನ ಮೊತ್ತಗಳು ಬಜೆಟ್ ನಿಗದಿತಮಿತಿಯನ್ನು ಮೀರಿರುವದಿಲ್ಲ ಎಂಬ ಬಗ್ಗೆ & ಎಲ್ಲ ಶೀರ್ಷಿಕೆಗಳಡಿ, ನಿಯಂತ್ರಣ ಹೊಂದಲು ಸಾಧ್ಯವಾಗಿರುವದಿಲ್ಲ. ಯಾಕೆಂದರೆ. ಅನುಮೋದಿತ

ಬಜೆಟ್‌ನಲ್ಲಿ ಲೆಕ್ಕಶೀರ್ಷಿಕೆಗಳು, ಕಂಪ್ಯೂಟರಗಳ & Acers ಗಳ ಖರೀದಿಗಾಗಿ, ಇದ್ದು ಒಟ್ಟು ಬಜೆಟ್ ಶೀರ್ಷಿಕೆ ₹.590.25ಲಕ್ಷಗಳಿದ್ದರೆ ನೆಟವರ್ಕ ಅಡಿ ₹.350.00ಲಕ್ಷಗಳಿರುತ್ತವೆ.(2ಶೀರ್ಷಿಕೆಗಳು) (ಅನುಬಂಧದಲ್ಲಿ ವಿವರಗಳಿವೆ)(6 ಲೆಕ್ಕಶೀರ್ಷಿಕೆಗಳು) ವಾರ್ಷಿಕ ಲೆಕ್ಕ ಪತ್ರದಡಿ ಈ ವೆಚ್ಚದ ವರ್ಗೀಕರಣವನ್ನು Computers & Networks ಅಡಿಯಲ್ಲಿ ನಿರ್ವಹಿಸಲಾಗಿದೆ. ಹೀಗಾಗಿ ಲೆಕ್ಕಶೀರ್ಷಿಕೆ ವಿವರ ಬಜೆಟನಲ್ಲಿದ್ದದ್ದನ್ನು ವಾರ್ಷಿಕ ಲೆಕ್ಕ ಪತ್ರದಲ್ಲಿ ಅಳವಡಿಸದಿರುವುದಕ್ಕೆ ಕಾರಣಗಳನ್ನು ಲೆಕ್ಕಪರಿಶೋಧನೆಗೆ ನೀಡಲು ಸೂಚಿಸಿದೆ.

ಇದರಿಂದಾಗಿ ಒಟ್ಟಾರೆ ಬಜೆಟನಲ್ಲಿಯ ಅವಕಾಶ ₹.570.25ಲಕ್ಷ+350.00ಲಕ್ಷ ಅಂದರೆ ₹.940.00ಲಕ್ಷಗಳ ಅವಕಾಶ ಇರುವದರಿಂದ. ಅದಕ್ಕೆದುರಾಗಿ ನಿರ್ವಹಿಸಿದ ವೆಚ್ಚ (Ledger Statement & ವಾರ್ಷಿಕ ಲೆಕ್ಕಗಳ ಪ್ರಕಾರ) Computers & Networks ಅಡಿ ₹.33,01,28,210/-ಗಳಾಗಿರುವದೆಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ, ಅಂದರೆ ಬಜೆಟ್ ಅವಕಾಶಕ್ಕಿಂತ ₹.2361.03ಲಕ್ಷಗಳನ್ನು ಹೆಚ್ಚುವರಿಯಾಗಿ ನಿರ್ವಹಿಸಲಾಗಿದೆ.

ಕಾರಣ ಬಜೆಟ್ ಅವಕಾಶಗಳನ್ನು ಗಣನೆಗೆ, ತೆಗೆದುಕೊಳ್ಳದೆ ಇಂತ ಬೃಹತ್ ಮೊತ್ತದ ಖರೀದಿಯನ್ನು ಹೇಗೆ ಅಂಗೀಕರಿಸಲಾಗಿದೆ. & ಈ ಹೆಚ್ಚುವರಿ ಮೊತ್ತಕ್ಕೆ ಯಾವ ಸಂಪನ್ಮೂಲಗಳನ್ನು ಬಳಸಲಾಗಿದೆ ಎಂಬ ಬಗ್ಗೆ ಸೂಕ್ತ ಅನುಸರಣೆಯನ್ನು ಲೆಕ್ಕಪರಿಶೋಧನೆಗೆ ಒದಗಿಸುವದು.

ಅದುವರೆಗೆ ₹.2361.03ಲಕ್ಷಗಳಲ್ಲಿ ₹.234.0.ಲಕ್ಷಗಳ ವೆಚ್ಚದ ಸ್ಪಷ್ಟೀಕರಣ ನೀಡಿದ್ದರಿಂದ ಅದನ್ನು ಹೊರತುಪಡಿಸಿ ಬಾಕಿ ಉಳಿದ ಮೊತ್ತ 2127.03 ಲಕ್ಷ ಗಳನ್ನು ~~ಮುಂದುವರೆದು ಆಕ್ಷೇಪಣೆಯಲ್ಲಿಡಲಾಗಿದೆ.~~ ವಿವರವನ್ನು ಅನುಬಂಧ-16ರಲ್ಲಿ ತೋರಿಸಿದೆ. ಶೀಘ್ರವಾಗಿ ಲೆಕ್ಕ ತಪಾಸಣೆಗೆ ಈ ದಾಖಲೆಗಳನ್ನು ಒದಗಿಸುವಂತೆ ಸೂಚಿಸಿದೆ.

(ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :55 ದಿನಾಂಕ: 04-01-2016)

53) ಜಾಹಿರಾತು ಬಿಲ್ಲುಗಳ ಪಾವತಿ ಕುರಿತು.

ಮೇಲಿನ ವಿಷಯದನ್ವಯ

1. ಚೆಕ್ ಸಂ: 220060 ದಿ: 16-6-2014 ₹. 593960 ಎಂ.ಕೆ
   ಚೆಕ್ ಸಂ: 220061 ದಿ: 16-6-2014 ₹. 10700 ಪಬ್ಲಿಸಿಟಿ ಬೆಳಗಾವಿ
   ಒಟ್ಟು ₹. 534600
2. ಚೆಕ್ ಸಂ: 220063 ದಿ: 16-6-2014 ₹. 24500 ಹಸಿರು ಕ್ರಾಂತಿ ಬೆಳಗಾವಿ
   ₹. 500
   ಒಟ್ಟು ₹. 5000
3. ಚೆಕ್ ಸಂ: 220064 ದಿ: 16-6-2014 ₹. 19600 ಹಳ್ಳಿ ಸಂದೇಶ ಬೆಳಗಾವಿ
   ₹. 400
   ಒಟ್ಟು ₹. 2000
4. ಚೆಕ್ ಸಂ: 232490 ದಿ: 1-8-2014 ₹. 536430 ಮೆ॥ ಕವಿತಾ ಕಮುನಿಕೇಶನ್ಸ್ ಬೆಂಗಳೂರು
   ₹. 10950
   ಒಟ್ಟು ₹. 547380

ಈ ರೀತಿ ಪತ್ರಿಕಾ ಜಾಹಿರಾತು ಬಿಲ್ಲುಗಳ ಪಾವತಿಯನ್ನು ಮಾಡಲಾಗಿದೆ. ವಿವರಗಳು ಈ ಕೆಳಗಿನಂತೆ ಇರುತ್ತದೆ.

1) M.K ಪಬ್ಲಿಸಿಟಿ ಬೆಳಗಾವಿ ಇವರಿಗೆ 13ನೇ ಘಟಿಕೋತ್ಸವ ದಿನಾಂಕ 20-5-14 ರಂದು ಜರುಗಿಸುವ ಜಾಹಿರಾತು ಬಿಲ್ಲು ಪಾವತಿಸಿದೆ ರೂ. 312=50 ಪ್ರತಿ Column CM2 ಗೆ ಪಾವತಿಸಿದೆ ಆದರೆ ಒಟ್ಟು ಎಷ್ಟು ಸ್ಥಳ ಎನ್ನುವುದು ಬಿಲ್ಲಿನಲ್ಲಿ ನಮೂದಿಸಿರುವದಿಲ್ಲ. ವಾರ್ತಾ & ಪ್ರಚಾರ ಇವರಿಗೆ ಮುಖಾಂತರ ದರಗಳನ್ನು ಬಿಲ್ಲು ಸಂದಾಯಕ್ಕೆ ಅನುಮೋದನೆ ಪಡೆಯಲಾಗಿದೆಯೇ? ಎನ್ನುವದನ್ನು ಸ್ಪಷ್ಟಪಡಿಸುವದು. ಇದಕ್ಕೆ ಸಂಬಂಧಿಸಿದಂತೆ ಚೆಕ್ ತಲುಪಿದಕ್ಕೆ ಸ್ವೀಕೃತಿಯನ್ನು ಪಡೆಯಲಾಗಿದೆಯೇ? ಪಡೆದಿದ್ದರೆ ಲೆಕ್ಕ ಪರಿಶೋಧನೆಗೆ ಪರಿಶೀಲನೇಗಾಗಿ ದಾಖಲಾತಿಗಳನ್ನು ಹಾಜರುಪಡಿಸುವದು.

2. ಚೆಕ್ ಸಂ: 220063 ದಿ: 16-6-2014 ₹. 24500 ಹಸಿರು ಕ್ರಾಂತಿ
₹. 500
ಒಟ್ಟು ₹. 25000

3. ಚೆಕ್ ಸಂ: 220064 ದಿ: 16-6-2014 ₹. 19600 ಹಳ್ಳಿ ಸಂದೇಶ
₹. 400
ಒಟ್ಟು ₹. 2000

ಈ ರೀತಿ ಬೆಳಗಾವಿಯಲ್ಲಿ ಹಸಿರು ಕ್ರಾಂತಿ ಸ್ಥಳೀಯ ದಿನಪತ್ರಿಕೆ ಹಾಗೂ ಹಳ್ಳಿಸಂದೇಶ ಸ್ಥಳೀಯ ದಿನಪತ್ರಿಕೆಗಳಿಗೆ ಕ್ರಮವಾಗಿ ₹.25000=00 ಹಾಗೂ ₹.20000=00ಗಳನ್ನು & ಪಾವತಿಸಿದ್ದು ಇರುತ್ತದೆ ಒಟ್ಟಾರೆಯಾಗಿ (Lumpsum) ಒಟ್ಟು ಮೊತ್ತವನ್ನು ಪಾವತಿಸಲಾಗಿದೆ ದರ & ಅಳತೆಗಳು ಎರಡೂ ಬಿಲ್ಲಿನಲ್ಲಿ ನಮೂದಿಸಿರುವದಿಲ್ಲ ಇದರಿಂದ ಪಾವತಿಸಿದ ಬಿಲ್ಲು ಮೊತ್ತಕ್ಕೆ ಜಾಹಿರಾತಿನ ವಿಸ್ತಾರದ ಅಳತೆಯ ಮೊತ್ತತಾಳೆ ಆಗುತ್ತದೆ ಎಂಬುದು ಧೃಡಪಡುವದಿಲ್ಲ. ಸ್ವೀಕೃತಿಯನ್ನು ಪಡೆಯಲಾಗಿದೆಯೇ? ಪಡೆದಿದ್ದರೆ ಲೆಕ್ಕ ಪರಿಶೋಧನೆಗೆ ಪರಿಶೀಲನೆಗಾಗಿ ದಾಖಲಾತಿಗಳನ್ನು ಹಾಜರುಪಡಿಸುವದು.

4.ಚೆಕ್ ಸಂ: 232490 ದಿ: 1-8-2014 ₹.536430 ಮೆ॥ ಕವಿತಾ ₹.10950 ಕಮುನಿಕೇಶನ್ಸ್ ಮೆ॥ ಕವಿತಾ ಕಮ್ಯುನಿಕೇಶನ್ಸ್ ಭೆಂಗಳೂರು ಇವರಿಗೆ ಸ್ನಾತಕೋತ್ತರ ಪದವೀಧರರ ಪ್ರವೇಶ ಅಧಿಸೂಚನೆಯ ಜಾಹಿರಾತು ಬಿಲ್ಲು ₹.547380=00ಗಳಿಗೆ ಪಾವತಿ ಮಾಡಲಾಗಿದೆ ಬಿಲ್ಲಿನಲ್ಲಿ ಟಿನ್ ಸಂಖ್ಯೆ ನಮೂದು ಆಗಿರುವದಿಲ್ಲ. ವಾರ್ತಾ & ಪ್ರಚಾರ ಇಲಾಖೆಯವರ ದರಗಳು ಕಡತದಲ್ಲಿ ಲಭ್ಯವಾಗಲಿಲ್ಲ ಅಥವಾ ಕೆ.ಟಿ.ಪಿ.ಪಿ ನಿಯಮಗಳನ್ನು ಪಾಲಿಸಿರುವ ಬಗ್ಗೆ ವಿವರಗಳಿಲ್ಲ. ಈ ಕೆಲಸವನ್ನು ನೇರವಾಗಿ ನಿರ್ವಹಿಸಲು ವಾರ್ತಾ & ಪ್ರಚಾರ ಇಲಾಖೆಗೆ ತಿಳಿಸಿದಲ್ಲಿ ಆಕ್ರಮ ನಿಯಮ ಬದ್ಧ ಎನಿಸುತ್ತಿತ್ತು DIPO ದರಗಳ ಆಧಾರದ ಮೇಲೆ ಜಾಹಿರಾತು ಪ್ರಕಟಣಾ ಏಜೆನ್ಸಿಗಳ ಹೆಸರುಗಳ ಪಟ್ಟಿ ವಿತಾವಿವಿಯೆಂದ ಅನುಮೋದನೆಗೊಂಡ E.C. ನಡುವಳಿಗಳು ಇದ್ದಲ್ಲಿ ಆ ದಾಖಲೆಗಳ ಬಗ್ಗೆ ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವದು.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 68 ದಿನಾಂಕ: 10-02-2016 ನ್ನು ನೀಡಿ ಈ ಮೇಲಿನ ಅಂಶಗಳಿಗೆ ಅನುಸರಣೆ ವರದಿಯನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ತಿಳಿಸಲಾಗಿತ್ತು ಆದರೆ ಆಕ್ಷೇಪಿತ ಅಂಶಗಳಿಗುಣವಾಗಿ ಅನುಸರಣೆ ಇರುವುದಿಲ್ಲವಾದ್ದರಿಂದ ಅಲ್ಲಿಯವರೆಗೆ ಪಾವತಿಸಿದ ಮೊತ್ತ ₹.1127040/- ಗಳನ್ನು ಆಕ್ಷೇಪಣೆಯಲ್ಲಿರಿಸಲಾಗುವದು.

54) 13ನೇ ಘಟಿಕೋತ್ಸವಕ್ಕಾಗಿ ಲೆದರ್ ಫೋಲ್ಡರಗಳ ಪೂರೈಕೆ ಬಿಲ್ಲುಗಳ ಕುರಿತು.

ಮೇಲಿನ 1. ಖರೀದಿ ಆದೇಶ ಸಂ: ವಿಟಿಯು/ಎಸ್.ಎ.ಪಿ/ಆರ್.ಇ.ಜಿ/ಇ-526/2013-14/11228 ದಿ: 20-12-2013 ಚೆಕ್ ಸಂ:219776 ಮತ್ತು 219777 ದಿ:23-5-2014

2. -ಸದರ- ವಿಟಿಯು/Exam/2013-14/1052/ ದಿ:13-12-2013

3.----------ಸದರ-----------1053 ದಿ: 31-12-2013

4.-----------ಸದರ-----------1054 ದಿ: 13-12-2013

5.-----------ಸದರ---------1055 ದಿ:13-12-2013 ನ್ವಯ ವಿ.ತಾ.ವಿ ವಿ ಬೆಳಗಾವಿಯ 13ನೇ ಘಟಿಕೋತ್ಸವಕ್ಕೆ ಒಟ್ಟು 500 ಲೆದರ್‌ಪೋಲ್ಡರ್‌ಗಳನ್ನು ಖರೀದಿಸಲು ಪೂರೈಕೆ ಆದೇಶ ನೀಡಲಾಗಿರುತ್ತದೆ. ಆ ಪೈಕಿ ಕ್ರಮಸಂಖ್ಯೆ1 ರ ಪೂರೈಕೆ ಆದೇಶವು ವಿ.ತಾ.ವಿ ವಿಯ ದಾಸ್ತಾನು ಮತ್ತು ಖರೀದಿ ವಿಭಾಗದಿಂದ ನಿರ್ವಹಿಸಲ್ಪಟ್ಟಿದ್ದು ದಿನಾಂಕ 20/12/2013 ರಂದು ನೀಡಲಾಗಿರುತ್ತದೆ. ಇದರಡಿ ತಿಳಿಸಿರುವ ಮೊತ್ತ ₹.4,82,500/- ಗಳಾಗಿರುತ್ತವೆ. ಆದರೆ ಸದರ ಸಾಮಗ್ರಿಗಳ ಪೂರೈಕೆದಾರರಾದಂತಹ ಮಿಸ್ ಎಸ್. ಭಾರತಿ. ಬೆಳಗಾವಿ ಇವರು ಸಲ್ಲಿಸಿದ ಬಿಲ್ಲು ಮತ್ತು ಸದರ ಬಿಲ್ಲಿನ ಪ್ರಕಾರ ಮೊತ್ತವನ್ನು ಪರಿಶೀಲಿಸಲಾಗಿ ಅದು ₹.4,85,000/- ಗಳಾಗಿರುತ್ತದೆ. ಇದರಿಂದಾಗಿ ₹.2500ಗಳನ್ನು ಹೆಚ್ಚಿಗೆ ಪಾವತಿಸಿದಂತಾಗಿರುತ್ತದೆ. ಈ ಹೆಚ್ಚುವರಿ ಮೊತ್ತವನ್ನು ಸಂಬಂಧಿಸಿದವರಿಂದ ವಸೂಲಿಸುವುದು ಅವಶ್ಯ.

2) 1. ಖರೀದಿ ಆದೇಶ ಸಂ: ವಿಟಿಯು/ಎಸ್.ಎ.ಪಿ/ಆರ್.ಇ.ಜಿ/ಇ-526/2013-14/11228 ದಿ: 20-12-2013 ಚೆಕ್ ಸಂ:219776 ಮತ್ತು 219777 ದಿ:23-5-2014 ಪೂರೈಕೆ ಆದೇಶಗಳನ್ನು ಪರಿಶೀಲಿಸಲಾಗಿ ಡಿಸೆಂಬರ 2013ರಲ್ಲಿ ನೀಡಿದ ಪೂರೈಕೆ ಆದೇಶಕ್ಕೆ ಪ್ರತಿಯಾಗಿ ಮೇ 2014ರಲ್ಲಿ ಸಾಮಗ್ರಿಗಳನ್ನು ಪೂರೈಸಿ ಸಂದಾಯಮಾಡಲಾಗಿದೆ. ಇದರಿಂದಾಗಿ 5 ತಿಂಗಳವರೆಗೆ ಈ ಸಾಮಗ್ರಿಗಳನ್ನು ಪೂರೈಸದೇ ಇದ್ದುದಕ್ಕೆ ಕಾರಣಗಳೇನು ಎಂಬುದು ತಿಳಿದುಬರುವುದಿಲ್ಲ. ಅದುಅಲ್ಲದೇ ಪ್ರಧಾನವಾಗಿ ಈ ಕುರಿತು ಗಮನಿಸಿದ ಅಂಶವೆನೆಂದರೆ ಕ್ರಮಸಂಖ್ಯೆ-2 ರಿಂದ 5ರ ವರೆಗಿನ ಪೂರೈಕೆ ಆದೇಶಗಳಲ್ಲಿ ತಿಳಿಸಿರುವ ಪ್ರಮಾಣವು ತಲಾ 100 ಎಂದಿದ್ದರೆ ನೀಡಿದ ಬಿಲ್ಲು ತಲಾ 125 ಸಂಖ್ಯೆಯದ್ದಾಗಿರುತ್ತದೆ ಮತ್ತು ಸದರಿ ಬಿಲ್ಲುಗಳ ಮೇಲೆ ಕ್ರಮ ಸಂಖ್ಯೆ 1ನ್ನು ಹೊರತುಪಡಿಸಿ ನೀಡಿದ ದಾಸ್ತಾನು ಸ್ವೀಕೃತಿ ಇತ್ಯಾದಿ ಪ್ರಮಾಣ ಪತ್ರಗಳಲ್ಲಿ ಪೂರೈಕೆಯ ಪ್ರಮಾಣವನ್ನು ದಾಖಲಿಸಿರುವದಿಲ್ಲ ಇದರಿಂದಾಗಿ ಒಟ್ಟಾರೆ 100 ಲೆದರ್ ಫೋಲ್ಡರ್‌ಗಳನ್ನು ಅಗತ್ಯಕ್ಕಿಂತ ಹೆಚ್ಚಿಗೆ ಪೂರೈಸಲಾಗಿದ್ದನ್ನು ಧೃಢೀಕರಿಸಿದಂತಾಗಿದೆ ಮತ್ತು ಸಂದಾಯಮಾಡಲಾಗಿದೆ. ಏಕೆಂದರೆ ಪರೀಕ್ಷಾ ವಿಭಾಗದ ದಾಸ್ತಾನು ರಜಿಸ್ಟರನ್ನು ಈ ಕುರಿತು ಪರಿಶೀಲಿಸಲಾಗಿ 125 ಲೆದರ್ ಪೋಲ್ಡರ್‌ಗಳು ದಾಸ್ತಾನುದಲ್ಲಿ ಉಳಿದಿದ್ದು ದಾಸ್ತಾನು ರಜಿಸ್ಟರದಿಂದ ಕಂಡುಬಂದಿರುತ್ತದೆ. ಹೀಗಾಗಿ ವಿಶ್ವವಿದ್ಯಾಲಯಕ್ಕೆ ಅನಗತ್ಯವಾಗಿ ₹.48250/- ಗಳ ಆರ್ಥಿಕ ಹೊರೆಯನ್ನು ಮಾಡಿದಂತಾಗುತ್ತದೆ. ಕಾರಣ ಈ ಕುರಿತು ಹೆಚ್ಚುವರಿ ಪ್ರಮಾಣದ ಅನಗತ್ಯವಾದ ದಾಸ್ತಾನುಗಳನ್ನು ಪಡೆದುಕೊಂಡಿರುವುದಕ್ಕೆ ಸೂಕ್ತ ಅನುಸರಣೆಯನ್ನು ನೀಡುವುದು.

3) ಸಂಬಂಧಿತ ಪೂರೈಕೆ ಸಂಸ್ಥೆಯಿಂದ ನೀಡಿದ ಬಿಲ್ಲುಗಳನ್ನು ಪರಿಶೀಲಿಸಲಾಗಿ ಈ ಬಿಲ್ಲುಗಳು ನಿಯಮಾನುಸಾರ ಮುದ್ರಿತ ಬಿಲ್ಲು ಸಂಖ್ಯೆಗಳನ್ನು ಹೊಂದಿರದೇ ಇದ್ದು ಅನಧೀಕೃತವಾದ ಬಿಲ್ಲುಗಳಾಗಿರುತ್ತವೆ ಮತ್ತು ಸದರ ಬಿಲ್ಲುಗಳ ಮೇಲೆ ಲೆಟರ ಹೆಡ್‌ನಲ್ಲಿ ಬರೆಯುವಂತೆ ಸಂಸ್ಥೆಯ ರೆಫರೆನ್ಸ ಸಂಖ್ಯೆಯನ್ನು ದಾಖಲಿಸಿದ್ದು ಇರುತ್ತದೆ. ಹೀಗಾಗಿ ಇದು ಸ್ವಾಭಾವಿಕವಾಗಿ ಬಿಲ್ಲು ನಮೂನೆಯಾಗಿರದೇ ಇದು ಲೆಟರ ಹೆಡ್ ನಮೂನೆಯದ್ದಾಗಿರುತ್ತದೆ ಎಂದು ಕಂಡುಬಥುತ್ತದೆ. ಇದರಿಂದ ಈ ಬಿಲ್ಲುಗಳು ಅಧಿಕೃತ ಬಿಲ್ಲುಗಳೆಂದು ಅನಿಸುವುದಿಲ್ಲ. ಕಾರಣ ಈ ಕುರಿತು ಸೂಕ್ತ ಅನುಸರಣೆ ನೀಡುವುದು ಅವಶ್ಯವಾಗಿರುತ್ತದೆ & ಸದರ ಸಾಮಗ್ರಿಗಳ ಕುರಿತಾದ ಮಾರಾಟ ತೆರಗೆಯ ಸಂಬಂಧಿತ ಸಂಸ್ಥೆಯಿಂದ ಸಂದಾಯವಾಗಿರುವುದನ್ನು ಧೃಡಿಪಡಿಸಿಕೊಂಡು ಲೆಕ್ಕಪರಿಶೋಧನೆಗೆ ತಿಳಿಸಲು ಕೋರಿದೆ.

4) ಈ ಕ್ರಮ ಸಂಖ್ಯೆ 1 ರಲ್ಲಿನ (11228) ದಿನಾಂಕ/20/12/2013) ಪೂರೈಕೆ ಆದೇಶಕ್ಕೆ ಸಂಬಂಧಿಸಿದಂತೆ ಕೈಕೊಂಡ ಕ್ರಮವನ್ನು ಪರಿಶೀಲಿಸಲಾಗಿ ನೀಡಿದ ಕೊಟೇಶನಗಳ ಲಕೋಟೆಗಳು ಸಂಬಂಧಿತ ಪೂರೈಕೆದಾರರಿಂದ ನೀಡಿದ ಲಕೋಟೆಗಳಾಗಿರದೇ ವಿ.ತಾ.ವಿ.ವಿ ಯಿಂದಲೇ ನೀಡಿದ ಲಕೋಟೆಗಳಾಗಿರುತ್ತವೆ. ಅದು ಅಲ್ಲದೇ ನೀಡಿದ ಕೊಟೇಶನಗಳನ್ನು ಪರಿಶೀಲಿಸಲಾಗಿ ಕೊಟೆಶನಗಳನ್ನು ತೆರೆದ ದಿನಾಂಕ ಮತ್ತು ಸಮಯವನ್ನು ಲಕೋಟೆಯ ಮೇಲೆ ಬರೆದಿರುವುದಿಲ್ಲ ಮತ್ತು ಈ ಕೊಟೇಶನಗಳ ಆಧಾರದ ಮೇಲೆ ತುಲನಾತ್ಮಕ ಪಟ್ಟಿಯನ್ನು ತಯಾರಿಸಿರುವದಿಲ್ಲ. ಹೀಗಾಗಿ ಕೈಕೊಂಡ ಕ್ರಮವು ಅಸಮರ್ಪಕವೆಂದನಿಸುತ್ತದೆ. ಈ ಎಲ್ಲ ದೃಷ್ಟಿಯಿಂದ ಸದರ ಖರೀದಿಯ ಕ್ರಮಗಳು ಪಾರದರ್ಶಕವೆನಿಸುವುದಿಲ್ಲ ಮತ್ತು ಕೆ.ಟಿ.ಪಿ.ಪಿ ಕಾಯ್ದೆ 1999 ನಿಯಮ 2000 ರ ಸೆಕ್ಷನ್ 4(ಇ) ಮತ್ತು 4(ಇಇ) ರ ನುಸಾರ ಗಳಿಗೆ ವ್ಯತಿರಿಕ್ತವಾಗಿರುತ್ತದೆ. ಕಾರಣ ಸದರ ಗಂಭೀರ ನ್ಯೂನತೆಗಳಿಗೆ ಸೂಕ್ತ ಅನುಸರಣೆ ನೀಡುವುದು. ಅದುವರೆಗೆ ಸದರ ಖರೀದಿಯಲ್ಲಿ ಅಡಕವಾದ ₹.2897500 ಗಳಲ್ಲಿ ₹.2895000ಗಳನ್ನು ಆಕ್ಷೇಪಣೆಯಡಿ ಹಾಗೂ ₹.2500 ಗಳನ್ನು ವಸೂಲಿಗೆ ಸೂಚಿಸಿ ಇರಿಸಲಾಗಿದೆ. ಕಾರಣ ಮೇಲಿನ ಎಲ್ಲ ಅಂಶಗಳಿಗೆ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :70 ದಿನಾಂಕ: 12-02-2016ನ್ನು ನೀಡಿ ಸೂಕ್ತ ಅನುಸರಣೆಯನ್ನು ಕೋರಲಾಗಿತ್ತು. ಆದರೆ ಆಕ್ಷೇಪಣಾ ಕಂಡಿಕೆಗಳ ಅಂಶಗಳಿಗೆ ಅನುಗುಣವಾಗಿ ಇರುವದಿಲ್ಲ.

೨೨) J.M. Work wear Bangalore ಇವರಿಂದ ಸ್ನಾತಕೋತ್ತರ ಅಧ್ಯಯನ ಕೇಂದ್ರ ಬೆಂಗಳೂರಿನ ಮೊದಲನೇ ವರ್ಷದ ಎಂ.ಟೆಕ್/ಎಂ.ಬಿ.ಎ/ಎಂ.ಸಿ.ಎ ವಿದ್ಯಾರ್ಥಿಗಳಿಗೆ ಸಮವಸ್ತ್ರ ಪೂರೈಕೆ ಕುರಿತು.

A) ಮೇಲೆ ವಿವರಿಸದಂತೆ ವಿ.ತಾ.ವಿ.ವಿಯ ಸ್ನಾತಕೋತ್ತರ ಅದ್ಯಯನ ಕೇಂದ್ರ ಬೆಂಗಳೂರಿನಲ್ಲಿ ವ್ಯಾಸಂಗ ಮಾಡುತ್ತಿರುವ 1ನೇ ವರ್ಷದ M.Tech/MBA/MCA ವಿದ್ಯಾರ್ಥಿಗಳಿಗೆ ಸಮವಸ್ತ್ರ ಪೂರೈಕೆ ಕುರಿತು ತಲಾ.3000/-ಗಳ ಶುಲ್ಕ ವಸೂಲಿ ಮಾಡಿ ಸಂಬಂಧಿತರಿಗೆ ಸಮವಸ್ತ್ರ ನೀಡುವ ಕುರಿತು ಕ್ರಮಕೈಕೊಳ್ಳಲಾಗಿದೆ, ಈ ಕುರಿತು ರಸೀದಿ ಸಂಖ್ಯೆ-6057/7-11-2013ರನ್ವಯ ಸ್ವೀಕರಿಸಿ ವಿ.ತಾ.ವಿ.ವಿಗೆ ನೀಡಿದ್ದರ ಬಗ್ಗೆ ಕಚೇರಿ ಟಿಪ್ಪಣಿಯಲ್ಲಿ ದಾಖಲಿಸಲಾಗಿದೆ, ಅದರ ಆಧಾರದ ಮೇಲೆ ಸ್ನಾತಕೊತ್ತರ ಆಧಿನಿಯಮ ಕೇಂದ್ರ ಬೆಂಗಳೂರಿನಿಂದ 3ಕೊಟೇಶನಗಳನ್ನು ಜನವರಿ-2014 ಕರೆದು

.ಎ. ಕೋಟೇಶನ್ ದಿ:22-1-2014 .28668(J.M. Work wear)
ಬಿ. -ಸದರ-- ದಿ:17-1-2013 3075 (S S Textiles)
ಸಿ. ---ಸದರ-- ದಿ:7-1-2014 3370(Muturaj fashion ms)

ಪೂರೈಕೆ ಆದೇಶವನ್ನು **ಪೂರೈಕೆ ಆದೇಶ** ಸಂ:ವಿಟಿಯು/ಎಸ್.ಎ.ಪಿ/ಪಿಎ.ಎಸ್-56/2014-15/1257 ದಿ:12-5-2014 (J.M. Work wear ಇವರಿಗೆ ವಹಿಸಿದೆ)ರ ಪ್ರಕಾರ ದಿ-12-5-2014ರಂದು ನೀಡಲಾಗಿದೆ. ಅಂದರೆ ಈ ಕುರಿತು ಸುಮಾರು 4ತಿಂಗಳ ಕಾಲಾವಧಿಯನ್ನು ತೆಗೆದುಕೊಳ್ಳಲಾಗಿದೆ. & ಈ ಪೂರೈಕೆಗಾಗಿ ಪೂರೈಕೆ ಆದೇಶದಲ್ಲಿ ನಿಗದಿಸಿದ ಅವಧಿ ಒಂದುವಾರವಾಗಿರುತ್ತಾದೆ. ಈ ಬಗ್ಗೆ ಪರಿಶೀಲಿಸಲಾಗಿದೆ.

ಅ) ಪಡೆದ ಕೊಟೇಶನಗಳ ದಿನಾಂಕಗಳು ಸರಿಯಾಗಿ ಇರುವುದಿಲ್ಲ. (S.S.Textiles date-17-1-13) ದರಪಟ್ಟಿ ಆಹ್ವಾನಿಸಿದ ಬಗ್ಗೆ ಆಹ್ವಾನ ಪತ್ರ ಲಭ್ಯವಿಲ್ಲ & ಮೊಹರಬಂದ ಲಕೋಟೆಗಳನ್ನು ಪಡೆದ ಬಗ್ಗೆ & ದರಪಟ್ಟಿಯನ್ನು ತೆರೆದ ಬಗ್ಗೆ ನಮೂದನೆ (ದಿನಾಂಕ&ಸಮಯ) ಸಹ ಇರುವದಿಲ್ಲ ಇದರಿಂದಾಗಿ ದರಪಟ್ಟಿಗಳ ಸಿಂಧುತ್ವ ಪ್ರಶ್ನಾರ್ಹವಾಗುತ್ತದೆ.

ಬ) ಸದರ ಸಾಮಗ್ರಿಗಳ ಪೂರೈಕೆಗಾಗಿ 4. J.M. Work wear ಇವರ ಬಿಲ್ಲು ಸಂ: 1119 ದಿ: 26-6-2014ರನ್ವಯ ₹.8,43,000/-ಗಳ ಬಿಲ್ಲನ್ನು ದಿ-26-6-2014ರಂದು ನೀಡಿದ್ದು ಸದರ ಬಿಲ್ಲಿನ ಪಾವತಿಯನ್ನು ಚೆಕ್ ನಂ.232718/21-8-2014 ₹.8,43,000/-(ಚೆಕ್ ಮೊತ್ತ ₹.8,26,140/-)ರನ್ವಯ ಪಾವತಿಸಲಾಗಿದೆ.

ಅಂದರೆ ಬಿಲ್ಲ ನೀಡಿದ ಸುಮಾರು 2 ತಿಂಗಳ ನಂತರ ಬಿಲ್ಲು ಸಂದಾಯವಾಗಿರುತ್ತದೆ. ಇದರಿಂದಾಗಿ ಸದರ ಪಾವತಿ ಎದುರು ಈ ದರಪಟ್ಟಿಗಳನ್ನು ಪಡೆದಿದೆ ಎಂದು ತೋರಿಸಲು ಪ್ರಯತ್ನಿಸಿದ ಪ್ರಕರಣವಾಗಿದೆ ಎಂದು ತಿಳಿಯಬೇಕಾಗಿದೆ.

ಕ) ಸದರ ಬಿಲ್ಲಿನ ಮೇಲೆ ಬಿಲ್ಲಿನಲ್ಲಿ ತಿಳಿಸಿದ ಪೂರೈಕೆ ಆದ ಸಾಮಗ್ರಿಗಳು ಪೂರೈಕೆ ಆದೇಶದಲ್ಲಿ ತಿಳಿಸಿದ ವಿನ್ಯಾಸ, ಪ್ರಮಾಣಗಳಿಗೆ ತಕ್ಕಂತೆ ಸಮರ್ಪಕವಾಗಿ ಪೂರೈಕೆ ಆಗಿವೆ & ಅವುಗಳನ್ನು ಸ್ವೀಕರಿಸಿ ಸಂಬಂಧಿತ ದಾಸ್ತಾನು ರಜಿಸ್ಟರಿನಲ್ಲಿ ದಾಖಲಿಸಿದ ಬಗ್ಗೆ ಪ್ರಮಾಣ ಪತ್ರಗಳಿರುವದಿಲ್ಲ ಈ ಬಗ್ಗೆ ದಾಸ್ತಾನು & ಖರೀದಿ ವಿಭಾಗದವರಿಂದಲೂ ಪ್ರಮಾಣಿಕರಿಸಿರುವುದಿಲ್ಲ.।

ಈ ಎಲ್ಲ ವಿವರಗಳನ್ನು ಪರಿಶೀಲಿಸಿದಾಗ ಸರಕಾರದ ಪಾರದರ್ಶಕ ನಿಯಮಗಳನ್ನು ಉಲ್ಲಂಘಿಸಿ (ಟೆಂಡರ್ ಕರೆಯದೇ), ದರಪಟ್ಟಿಗಳನ್ನು ಸಮರ್ಪಕವಾಗಿ ಕರೆಯುವ ಕ್ರಮಕೈಕೊಳ್ಳದೇ. ಬಿಲ್ಲನ್ನು ಸಂದಾಯ ಮಾಡಿದ್ದು ಆಕ್ಷೇಪಾರ್ಹ ವಿಷಯವಾದೆ. ಅಲ್ಲದೇ ನೀಡಿದ Delivery Challan (ಪಟ್ಟಿ ಲಗತ್ತಿಸಿದೆ) ಪರಿಶೀಲಿಸಿದಾಗ ಕೇವಲ 253ನಂಬರ್ಸಗಳು ಸಲಿಸಲ್ಪಟ್ಟಿದ್ದು 28 ಸಂಖ್ಯೆಗಳಷ್ಟು ಸೆಟ್ಟು ಇನ್ನು ನೀಡಲ್ಪಡಬೇಕಿದೆ ಇದರಿಂದಾಗಿ ₹.84,000/-ಗಳಷ್ಟು ಮೊತ್ತ ಹೆಚ್ಚಿಗೆ ಸಂದಾಯವಾಗಿವೆ.

ಡ) ಇದು ಅಲ್ಲದೇ ಜೆ.ಎಮ್.ವರ್ಕವೇರ ಬೆಂಗಳೂರು ಇವರು ನೀಡಿದ ಕೊಟೇಶನ್ ದರವು ₹.2868/-ಪ್ರತಿ ಸೆಟ್ಟಿಗೆ ಇದ್ದು ಬಿಲ್ಲಿನಲ್ಲಿ ಕ್ಲೇಮು ಮಾಡಿದ ಮೊತ್ತ & ಮಾನ್ಯ ಕುಲಪತಿಗಳಿಂದ ಅನುಮೋದಿತ ಮೊತ್ತ

₹.3000/-ಪ್ರತಿ ಸೆಟ್ಟಿಗೆ ನಿಗದಿಸಿ ಪಾವತಿ ಮಾಡಿದ್ದರಿಂದ ಒಟ್ಟು 281 ಸೆಟ್ಟುಗಳಿಗೆ ₹.37,092/-ಗಳನ್ನು ಹೆಚ್ಚಿಗೆ ಪಾವತಿಸದಂತಾಗಿದೆ.

ಕಾರಣ ಈ ಹೆಚ್ಚುವರಿ ಪಾವತಿಗೆ ಸೂಕ್ತ ಅನುಸರಣೆಯನ್ನು ಒದಗಿಸಲು ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :76 ದಿನಾಂಕ: 17-02-2016 ರಂದು ಕೋರಲಾಗಿತ್ತು. ಆದರೆ ಅನುಸರಣೆಯನ್ನು ನೀಡಿರುವುದಿಲ್ಲ. ಆದ್ದರಿಂದ ₹.37,092/-ಗಳನ್ನು ಮತ್ತು ₹.84,000/-ಗಳನ್ನು ವಸೂಲಿಗೆ ಸೂಚಿಸಲಾಗಿದೆ. ಮತ್ತು ₹.7,21,908/-ಗಳನ್ನು ಆಕ್ಷೇಪಣೆ ಅಡಿ ಇರಿಸಲಾಗಿದೆ.

J.M. Work wear Bangalore ಇವರಿಂದ ನೀಡಿದ Delivery Challan ಗಳ ವಿವರಣಾ ಪಟ್ಟಿ

SlNo	Details	Date	
1	Delivery Challan No: 184	13-3-2014	16 No's
2	Delivery Challan No: 185	13-3-2014	22 No's
3	Delivery Challan No: 186	13-3-2014	18 No's
4	Delivery Challan No: 183	13-3-2014	24 No's
5	Delivery Challan No: 182	12-3-2014	19 No's
6	Delivery Challan No: 180	12-3-2014	48 No's
7	Delivery Challan No: 181	12-3-2014	106 No's
		TOTAL	253 No's

56) J.M. Work wear ಬೆಂಗಳೂರು ಇವರಿಂದ ವಿತಾವಿವಿ ಘಟಿಕೋತ್ಸವ 2014ಕ್ಕೆ ಮತ್ತು ಕ್ರೀಡಾ ವಿಭಾಗಕ್ಕೆ ಬೆಳ್ಳಿ ಪದಕಗಳನ್ನು ಪೂರೈಸಿದ ಕುರಿತು.

ವಿ.ತಾ.ವಿ.ವಿ ಬೆಳಗಾವಿಯಲ್ಲಿ ಆದೇಶಗಳನ್ವಯ ಖರೀದಿ ಆದೇಶ ಸಂ. ವಿಟಿಯು/ಎಸ್.ಎ.ಪಿಒ/ಕಾನ್ವೋಕೇಶನ್-2014/ಇ-542 ದಿ:2013-14/14210 ದಿ:11-3-2014 ರೂ.497873 ಮತ್ತು ಖರೀದಿ ಆದೇಶ ಸಂ: ವಿಟಿಯು/ಎಸ್.ಎ.ಪಿಒ/ಕಾನ್ವೋಕೇಶನ್-2014/ಇ-542 ದಿ:2013-14/14310 ದಿ:14-3-2014 ₹.277768/- ಜೆ.ಎಮ್.ವರ್ಕವೇಯರ್ ಬೆಂಗಳೂರು ಇವರಿಂದ ವಿ.ತಾ.ವಿ.ವಿ -2014ರ ಘಟಿಕೋತ್ಸವಕ್ಕೆ 143+12=155 ಬೆಳ್ಳಿ ಪದಕ (ಬಂಗಾರದ ಖರಕ ಹಾಕಿದ) ಗಳನ್ನು. ಖರೀದಿಸಲಾಗಿದೆ ಇದಕ್ಕಾಗಿ ಕ್ರಮವಾಗಿ ₹.4,97,877/-& ₹.27,768/-ಗಳನ್ನು ನಿಗದಿ ಪಡಿಸಿಲಾಗಿದೆ & ಆ ಪೈಕಿ ಜೆ.ಎಂ ವರ್ಕವಿಯರ್ಸ್ ಬೆಂಗಳೂರು ಇವರ ಬಿಲ್ಲು ಸಂ:1126/4-7-2014 ರೂ.493793/-ನ್ವಯ ₹.4,93,793/-ಗಳನ್ನು ಪಾವತಿಸಲಾಗಿದೆ.

ಹಾಗೆಯೇ ವಿ.ತಾ.ವಿ.ವಿ ಕ್ರೀಡಾ ವಿಭಾಗದ ಸಲುವಾಗಿ ಖರೀದಿ ಆದೇಶ ಸಂ: ವಿಟಿಯು/ಸ್ಪೋರ್ಟ್ಸ್/ಟಿ-225/ -2014-15/520 ದಿ: 19-4-2014 ₹.2013268 ₹.497873 ಖರೀದಿ ಆದೇಶದನ್ವಯ 1742 ಬೆಳ್ಳಿ ಪದಕಗಳನ್ನು ಸಹ ಅದೇ ಸಂಸ್ಥೆಯಿಂದ ಖರೀದಿಸಲಾಗಿದೆ, ಇದಕ್ಕಾಗಿ ₹.20,13,268/-ಗಳನ್ನು ನಿಗದಿಸಿದ್ದು, ಜೆ.ಎಂ.ವರ್ಕವಿಯರ್ಸ್ ಬೆಂಗಳೂರು ಇವರ ಬಿಲ್ಲು ಸಂ:1149/20-8-2014 ₹.20,10,800/-ಗಳನ್ನು ಸಂದಾಯಮಾಡಲಾಗಿದೆ.

ಈ ಬಗ್ಗೆ ಪರಿಶೀಲಿಸಲಾಗಿ, ಕನಿಷ್ಠ ದರ ನೀಡಿದ/ಟೆಂಡರನಲ್ಲಿಯ ಯಶಸ್ವೀ ಬಿಡದಾರರಾದ ಜೆ.ಎಮ್.ವರ್ಕವೇಯರ್ ಬೆಂಗಳೂರು ಇವರಿಗೆ ನೀಡಿದ ಖರೀದಿ ಆದೇಶವು ಈ ಕೆಳಗಿನ ಪರಿಶೀಲನೆಯಾಗಿ ಅನಧಿಕೃತವೆಂದೆನಿಸುತ್ತದೆ ಯಾಕೆಂದರೆ ಸಂಸ್ಥೆಯು ಒಂದು ಹೊಲಿಗೆ ಘಟಕ(The Stitching Unit) ಎಂದು ಅವರ ಬಿಲ್ಲಿನ ಮೇಲೆ ದಾಖಲಿಸಿದ್ದು ಅದೇ ಸಂಸ್ಥೆಯವರು ಬೆಂಗಳೂರು ಸ್ನಾತಕೊತ್ತರ ಕೇಂದ್ರದ ವಿದ್ಯಾರ್ಥಿಗಳಿಗೆ 281 ಸಮವಸ್ತ್ರವನ್ನು ಪೂರೈಸಿದ್ದು ಇರುತ್ತದೆ. ಇದರಿಂದಾಗಿ ಹೊಲಿಗೆ ಘಟಕದವರು ಚಿನಿವಾಲವೃತ್ತಿಯ(Goldsmithy) ಕೆಲಸಗಳನ್ನು ಹೇಗೆ ನಿರ್ವಹಿಸುತ್ತಾರೆ, & ಇಂತಹ ಸಂಸ್ಥೆಯವರನ್ನು ಟೆಂಡರಿನಲ್ಲಿ ಅರ್ಹ ಸಂಸ್ಥೆ ಎಂದು ಹೇಗೆ ಪರಿಗಣಿಸಲಾಗಿದೆ ಎಂಬುದು ಪ್ರಶ್ನಾರ್ಹ ವಿಷಯವಾಗಿದೆ. ಕಾರಣ ಈ ಆರ್ಥಿಕ ವ್ಯವಹಾರಗಳು ಖರೀದಿ ನಿಯಮಗಳಡಿ ಅಧಿಕೃತ & ನೈಜ ವ್ಯವಹಾರಗಳೆಂದೆನಿಸುವುದಿಲ್ಲ. ಕಾರಣ ಈ ಕುರಿತು ಸೂಕ್ತ ಅನುಸರಣೆ ನೀಡಲು ಸೂಚಿಸಲಾಗಿದೆ.

ಅದೂ ಅಲ್ಲದೇ ಸದರ ಬೆಳ್ಳಿ ಪದಕಗಳನ್ನು ಬೆಂಗಳೂರಿನಿಂದ ಬೆಳಗಾವಿ ವಿ.ತಾ.ವಿ.ವಿಗೆ ಸಾಗಾಣಿಕೆ ಮಾಡಲು Delivery note & E-Sugam (ಮಾರಾಟ ತೆರಿಗೆ ಚಲನ್) ದಾಖಲೆಗಳು ಬಿಲ್ಲಿಗೆ ಲಗತ್ತಿಸಿರುವುದಿಲ್ಲ. & ಸಾಗಾಣಿಕೆದಾರರು ಯಾರೆಂಬ ಬಗ್ಗೆ ಸಹ ವಿವರಗಳು ಬಿಲ್ಲಿನೊಂದಿಗೆ ಲಭ್ಯವಿರುವದಿಲ್ಲ.ಸದರ ಸಾಮಗ್ರಿ ಪೂರೈಕೆ ಕುರಿತ ಬಿಲ್ಲಿನಲ್ಲಿ ವ್ಯಾಟ ಕಟಾಯಿಸಿರುವದಿಲ್ಲ. ಇಂತಹ ಅಂಶಗಳಿಂದಾಗಿ ಈ ಕೆಳಗಿನ ಬಿಲ್ಲುಗಳಡಿ ಮಾಡಿದ ಸಂದಾಯಗಳನ್ನು ಆಕ್ಷೇಪಣೆ ಅಡಿ ಇರಿಸಲಾಗಿದೆ.

1	1126/4-7-2014	₹.4,93,793/-	ಜೆ.ಎಮ್.ವರ್ಕವೇಯರ್ ಬೆಂಗಳೂರು
2	1149/20-8-2014	₹.20,10,800/-	ಜೆ.ಎಮ್.ವರ್ಕವೇಯರ್ ಬೆಂಗಳೂರು
	ಒಟ್ಟು	₹. 25,04,593/-	

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :77 ದಿನಾಂಕ: 17-02-2016 ರಂದು ನೀಡಲಾಗಿತ್ತು. ಆದರೆ ಅನುಸರಣೆಯನ್ನು ನೀಡಿರುವುದಿಲ್ಲ.

57) ಯುವಜನೋತ್ಸವದ ವಿತಾವಿವಿ ಬೆಳಗಾವಿಯಲ್ಲಿ ಪೆಂಡಾಲ, ಕುರ್ಚಿ, ಟೇಬಲ್, ಲೈಟಿಂಗ್ ಇತರೆ ವ್ಯವಸ್ಥೆ ಮಾಡಲು ಟೆಂಡರ ಕರೆಯದೇ ಮುಂಗಡ ನೀಡಿದ ಕುರಿತು.

ರಾಜ್ಯಮಟ್ಟದ 2014-15ರ ಯುವಜನೋತ್ಸವ ವಿತಾವಿ ಬೆಳಗಾವಿಯಲ್ಲಿ ದಿನಾಂಕ-28 ಮಾರ್ಚ್ ರಿಂದ 31-2015ರ ವರೆಗೆ ಆಚರಿಸುವಗೋಸ್ಕರವಾಗಿ ಮೆ||ARCL ಇವೆಂಟ್ ದಾವಣಗೇರಿ ಇವರಿಗೆ work order ಸಂಖ್ಯೆ VTU/ACA/RE/2014-15/12299/ ದಿನಾಂಕ: 16-3-2015 ರಡಿಯಲ್ಲಿ ಮುಖ್ಯ ಮಂಟಪ, ಊಟದ ಹಾಲ್ ಮಂಟಪ Food Stall Matting ಲೈಟನಿಂಗ ಹಾಗೂ ಕುರ್ಚಿ, ಟೇಬಲ್ ಪೂರೈಸಲು ಆದೇಶವನ್ನು ₹.30,91,500/- ಗಳಿಗೆ ನೀಡಲಾಗಿತ್ತು. ಸದರಿಯವರಿಗೆ ನೀಡಿದ ಚೆಕ್ಕನಂಬರ - 238386, ದಿನಾಂಕ 23-3-2015 ₹.13,50,000/- ಮುಂಗಡ ಹಣವನ್ನು ನೀಡಲಾಗಿದೆ.

ಮುಂದುವರೆದು, ಸದರಿ ಮುಂಗಡ ನೀಡುವ ಮುನ್ನ ದೈಹಿಕ ಶಿಕ್ಷಣ ನಿರ್ದೇಶಕರು ವಿ.ತಾ.ವಿ.ವಿ ಬೆಳಗಾವಿ ಇವರ ದಿನಾಂಕ 23-3-2015 ರಲ್ಲಿ ₹.13.50 ಲಕ್ಷಗಳ ಮುಂಗಡ ಬೇಡಿಕೆ ಟಿಪ್ಪಣೆಯಲ್ಲಿ ಸದರ ಯುವಜನೋತ್ಸವದಕ್ಕೆ ₹.27ಲಕ್ಷಗಳಿಗೆ ಸಂಧಾನದ ಮೂಲಕ ನಿಗದಿಪಡಿಸಲಾಗಿದೆ. (ಪ್ರತಿ ಲಗತ್ತಿಸಿದೆ) ಎಂಬುದಾಗಿ ತಿಳಿಸಿದ್ದರೂ ಆದೇಶ ಸಂಖ್ಯೆ 12299/ದಿ/16-3-2015 ರ ಪ್ರಕಾರ ₹.30,91,500/- ಗಳನ್ನು ಅಂಗೀಕರಿಸಿ ಆ ಮೊತ್ತಕ್ಕೆ ಕೆಲಸ ನಿರ್ವಹಿಸಲಾಗಿದೆ ಮತ್ತು ದಿನಾಂಕ: 28-3-2015 ರಿಂದ 31-3-2015 ರ ಅವಧಿಯಲ್ಲಿ ನಿರ್ವಹಿಸಿದ ಈ ಕಾರ್ಯಕ್ರಮದ ಈ ಮುಂಗಡ ಹೊಂದಾಣಿಕೆ ಬಾಕಿ ಹಣ ಪಾವತಿ ಮಾಡಿದ್ದು DD ಸಂಖ್ಯೆ 238774/20-5-2015 ₹.14,71,500/- (ಮುಂಗಡ ರಜಿಸ್ಟರ ಐಟಂ ನಂಬರ 406/2014-15 ರನ್ವಯ) ಇದ್ದು ಈ ವಿಷಯವನ್ನು ಲೆಕ್ಕ ಪರಿಶೋಧನೆಯಲ್ಲಿ ಗಮನಿಸಲಾಗಿದೆ. ಅಂದರೆ ಕಾರ್ಯಕ್ರಮ ಮುಗಿದ ಸುಮಾರು 2ತಿಂಗಳ ಅವಧಿಯವರೆಗೆ ಮುಂಗಡ ಮೊತ್ತ ಹೊಂದಾಣಿಕೆ ಆಗದೇ ಉಳಿಸಿಕೊಂಡದ್ದು ಆಕ್ಷೇಪಾರ್ಹ ವಿಷಯವಾಗಿದೆ. ಮತ್ತು ₹.1,21,500/- ಗಳನ್ನು ಹೆಚ್ಚುವರಿಯಾಗಿ ನೀಡಿದಂತಾಗಿದೆ. ಅದೂ ಅಲ್ಲದೇ ₹.13.50 ಲಕ್ಷಗಳ ಮುಂಗಡ ನೀಡಲು ನಿಯಮಗಳಲ್ಲಿ ಅವಕಾಶಗಳಿಲ್ಲದಾಗ ಮತ್ತು ಸಂಬಂಧಿತ ಸಂಸ್ಥೆ ಈ ಮುಂಗಡ ಒದಗಿಸಲು ಮನವಿ ನೀಡದೇ ಇದ್ದಾಗ್ಯೂ ಈ ಮುಂಗಡ ನೀಡಿದ್ದೂ ಸಹ **ಆಕ್ಷೇಪಾರ್ಹ** ವಿಷಯವಾಗಿದೆ.

ಹಾಗೆಯೇ ಈ ಕುರಿತು ಕೆ.ಟಿ.ಪಿ.ಪೀ ಆ್ಯಕ್ಟ್ 1999 ರ ನಿಯಮ 2000 ರ ಸೆಕ್ಷನ್ 4(ಇ) ಮತ್ತು 4(ಇಇ) ರನುಸಾರ ಕ್ರಮಕೈಕೊಳ್ಳದೇ ಈ ಕೆಲಸವನ್ನು M/S ARCL Event Management ದಾವಣಗೇರಿ ಇವರಿಗೆ ನೇರವಾಗಿ ವಹಿಸಿರುವದರಿಂದ ನಿಯಮಾವಳಿಗಳಿಗೆ ವ್ಯತಿರಿಕ್ತವಾಗಿರುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಕಾರಣ ವರದಿ ಅವಧಿಯಲ್ಲಿ ಒಟ್ಟು ಮುಂಗಡ ಮೊತ್ತ ₹.13,50,000/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಈ ಪ್ರಕರಣವನ್ನು ಉದಾಹರಣೆಗೆ ಮಾತ್ರ ನೀಡಲಾಗಿದ್ದು ಇನ್ನುಳಿದ ಇಂತಹ ಎಲ್ಲ ಪ್ರಕರಣಗಳಿಗೂ ಈ ಅಂಶಗಳು ಅನ್ವಯವಾಗುತ್ತದೆ.

ಸೂಕ್ತ ಅನುಸರಣೆ ನೀಡಲು ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :81 ದಿನಾಂಕ:19-02-2016 ರಂದು ಕೋರಲಾಗಿತ್ತು. ಆದರೆ ಯಾವುದೇ ಅನುಸರಣೆಯನ್ನು ನೀಡಿರುವುದಿಲ್ಲ.

58) ಶ್ರೀ. ಎಸ್.ಡಿ. ಗುರವ ಜಿಪಿಎ ಹೋಲ್ಡರ್ ಮೆ|| ಬಿರ್ಲಾ ಎರ್‌ಕಾನ್ ಇನಫ್ರಾಸ್ಟ್ರಕ್ಚರ್ ಪ್ರೈ.ಲಿ., ಮುಂಬಯಿ ಇವರಿಗೆ ಚಾಲ್ತಿ ಬಿಲ್ಲಿನಲ್ಲಿ ಕಾಯ್ದಿರಿಸಿದ ಮೊತ್ತವನ್ನು ಪಾವತಿ ಮಾಡಿರುವ ಕುರಿತು.

ಶ್ರೀ.S.D. ಗುರವ ಜಿಪಿಎ ಹೊಲ್ಡಿರ್ ಮೆ|| ಬಿರ್ಲಾ ಎರ್‌ಕಾನ್ ಇನ್‌ಫ್ರಾಸ್ಟ್ರಕ್ಚರ್ ಪ್ರೈಲಿ ಮುಂಬಯಿ ಇವರಿಗೆ ಚಾಲ್ತಿ ಬಿಲ್ಲಿನಲ್ಲಿ ಕಾಯ್ದಿರಿಸಿದ ಮೊತ್ತವನ್ನು **ಚೆಕ್ ಸಂ: 238612 ದಿ:28-3-2015** ₹.2,90,836/-ಗಳನ್ನು ಸದರಿ ಗುತ್ತಿಗೆದಾರ ಸಂಸ್ಥೆಗೆ ಪಾವತಿಸಲಾಗಿದೆ. ಸದರಿ ಪಾವತಿಯನ್ನು ಪರಿಶೀಲಿಸಲಾಗಿ ಈ ಕೆಳಗಿನ ಆಕ್ಷೇಪಣೆಗಳು ಕಂಡು ಬಂದಿದ್ದು ಅವು ಈ ಕೆಳಗಿನಂತೆ ಇವೆ.

1. ₹.2,90,836/-ಕ್ಕೆ ಪ್ರತ್ಯೇಕ ಬಿಲ್ಲು ತಯಾರಿಸಿ ಬಿಲ್ಲಿಗೆ ಗುತ್ತಿಗೆದಾರ ಸಂಸ್ಥೆಯ ರುಜು ಪಡೆದಿರುವದಿಲ್ಲ. ಸದರ ಬಿಲ್ಲು ಪಾವತಿಗೆ ಪಾಸು ಮಾಡಿರುವದಿಲ್ಲ. ಇದರಿಂದಾಗಿ ಅಧಿಕೃತ ವೋಚರ್ ಇಲ್ಲದೇ U.O. ಟಿಪ್ಪಣೆಯ ಮೇಲೆ ಹಣ ಸಂದಾಯ ಮಾಡಿದಂತೆ ಆಗಿರುತ್ತದೆ. ಕಾರಣ ಇದು ಅವಶ್ಯವಾಗಿ ಬೇಕಾಗಿರುತ್ತದೆ.
2. ಯಾವ ಉದ್ದೇಶಕ್ಕಾಗಿ ಮೊತ್ತವನ್ನು ಕಾಯ್ದಿರಿಸಲಾಗಿದೆಯೋ ಆ ಉದ್ದೇಶವು ಸಫಲವಾಗಿದೆ ಎನ್ನುವ ಕುರಿತು ಯಾವುದೇ ವರದಿಗಳು ದಾಖಲಾತಿಗಳು ಕಡತದಲ್ಲಿ ಲಭ್ಯವಿರುವದಿಲ್ಲ.
3. ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದಗಳ ಪ್ರಕಾರ ಯಾವುದೇ ಒಂದು ಚೆಕ್‌ನ್ನು ವಿತರಿಸುವ ಪೂರ್ವದಲ್ಲಿ ಬಿಲ್ಲು ಹಾಗೂ ಅದಕ್ಕೆ ಸಂಬಂಧಿಸಿದ ದಾಖಲೆಗಳು ಪೂರ್ಣ ಪ್ರಮಾಣದಲ್ಲಿ ಇರುವ ಬಗ್ಗೆ ಖಚಿತ ಪಡಿಸಕೊಳ್ಳಲಾರದೆಯೇ ಸದರಿ ಗುತ್ತಿಗೆದಾರ ಸಂಸ್ಥೆಯ ಹೆಸರಿನಲ್ಲಿ ಚೆಕ್‌ನ್ನು ಡ್ರಾ ಮಾಡಿ ಬಟವಡೆ ಮಾಡಿರುವ ಔಚಿತ್ಯವನ್ನು ಲೆಕ್ಕ ಪರಿಶೋಧನೆಗೆ ಮಾಹಿತಿ ಪಡಿಸುವದು.
4. ಸದರಿ ಗುತ್ತಿಗೆದಾರ ಸಂಸ್ಥೆಯವರು ವಿತಾವಿವಿಯಿಂದ ಚೆಕ್‌ನ್ನು ಸ್ವೀಕರಿಸಿದ ಕುರಿತು ಸೀಕೃತಿ ಪತ್ರ ಇತ್ಯಾದಿ ದಾಖಲೆಗಳು ಕಡತದಲ್ಲಿ ಲಭ್ಯವಾಗಲಿಲ್ಲ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ : 86 ದಿನಾಂಕ: 25-02-2016 ರಂದು ನೀಡಲಾಗಿದ್ದು, ಆದರೆ ಆಕ್ಷೇಪಿತ ಅಂಶಗಳಿಗುಣವಾಗಿ ಅನುಸರಣೆ ಇರುವುದಿಲ್ಲವಾದ್ದರಿಂದ ಪಾವತಿಸಿದ ಮೊತ್ತ ₹.2,90,836/-ಗಳನ್ನು ಆಕ್ಷೇಪಣೆಯಲ್ಲಿರಿಸಲಾಗಿದೆ. ಈ ಪ್ರಕರಣವು ಉದಾಹರಣೆಯಾಗಿದ್ದು ಇದೇ ತರಹದ ಹಲವಾರು ಪಾವತಿಗಳಿಗೂ ಮೇಲಿನ ಅಂಶಗಳು ಅನ್ವಯವಾಗುತ್ತವೆ. ಅವುಗಳನ್ನು ಸಹ ಮೇಲಿನಂತೆ ಕ್ರಮಬದ್ಧತೆಗೊಳಿಸಲು ತಿಳಿಸಲಾಗಿದೆ.

59) ಯು.ಬಿ.ಡಿ.ಟಿ ಕಾಲೇಜ್ ಆಫ್ ಇಂಜಿನಿಯಂರಿಗ್ ದಾವಣಗೆರೆ ಇವರಿಗೆ 95ನಂ ಟ್ಯೂಬ್ಯೂಲರ್ ಬ್ಯಾಟರಿಗಳನ್ನು ಹಾಗೂ 6ನಂ. ಸ್ಟ್ಯಾಂಡ್‌ಗಳನ್ನು ಪೂರೈಸಿದ್ದರ ಬಿಲ್ಲು ಪಾವತಿ ಕುರಿತು.

UBDT ಕಾಲೇಜ ಆಪ್ ಇಂಜನಿಯರಿಂಗ್ ದಾವಣಗೆರೆ ಇವರ ವಿವಿಧ ಲ್ಯಾಬೊರೇಟರಿಗಳಿಗೆ ಟುಬ್ಯುಲರ್ ಬ್ಯಾಟರಿಗಳನ್ನು 95ನಂ ಹಾಗೂ 6ನಂ ಸ್ಟ್ಯಾಂಡಗಳನ್ನು ಪೂರೈಸಿ, ಅಳವಡಿಸುವಿಕೆ ಪರಿಶೀಲಿನೆ ಚಾಲನಾ ಕಾರ್ಯಗಳಿಗಾಗಿ ಮೆ॥ಇನ್ಫೋ ಎನ್ ಪವರ್ ಸೊಲ್ಯುಶನ್ಸ ಬೆಂಗಳೂರು ಇವರಿಗೆ **ಚೆಕ್ ನಂ: 232543 ದಿನಾಂಕ:07-08-2014 ₹.1375920 + 131500 = 1507420/-** ಮೂಲಕ ಪಾವತಿಸಲಾಗಿದೆ. ಸದರಿ ಪಾವತಿಯನ್ನು ಪರಿಶೀಲಿಸಲಾಗಿ ಈ ಕೆಳಗಿನ ಅಂಶಗಳು ಕಂಡು ಬಂದಿದ್ದು ಈ ಕೆಳಗಿನಂತೆ ಇರುತ್ತವೆ.

1) ಸದರಿ ಪೂರೈಕೆಯ ಅಂದಾಜು ಪಟ್ಟಿ ಮೊತ್ತ ₹.16,15,000/-ಇದ್ದು ತುಲನಾತ್ಮಕ ದರಗಳ ಪಟ್ಟಿಯ ಪ್ರಕಾರ ಶೇಕಡಾ 8.13ರಷ್ಟು ಕಡಿಮೆ ದರಗಳಿಗೆ ಅನುಮೋದನೆ ನೀಡಿ ಕೋಟೆಶನ್ ಆಧಾರದ ಮೇಲೆ ಪೂರೈಕೆ ಆದೇಶ 14224 ದಿನಾಂಕ 11-3-14ರನ್ವಯ ನೀಡಿದಾಗ, ನಿಗದಿತ ಅವಧಿಯಲ್ಲಿ ಪೂರೈಸದೇ ಇರುವ ಕಾರಣ ಪತ್ರ ಸಂಖ್ಯೆ 320 ದಿನಾಂಕ 8-4-2014 ರಂದು ಅಂತಿಮ ನೋಟಿಸು ನೀಡಿದ ಮೇಲೆ ಈ ಸಾಮಗ್ರಿಗಳ ಪೂರೈಕೆಯಾಗಿರುತ್ತವೆ. ಕೋಟೆಶನ್ ಆಧಾರದ ಮೇಲೆ ಪೂರೈಕೆ ಆದೇಶ ನೀಡಿದ್ದರಿಂದ, ಇಲ್ಲಿ ಕೆ.ಟಿ.ಪಿ.ಪಿ ನಿಯಮಗಳ ಉಲ್ಲಂಘನೆ

ಆಗಿರುವದು ಸ್ಪಷ್ಟವಾಗಿ ತಿಳಿದುಬರುತ್ತದೆ. ಈ ರೀತಿ ಸರಕಾರದ ನಿಯಮಗಳನ್ನು ಉಲ್ಲಂಘಿಸಿ ಪೂರೈಕೆ ಆದೇಶ ನೀಡಿರುವದರ ಔಚಿತ್ಯವನ್ನು ಲೆಕ್ಕಪರಿಶೋಧನೆಗೆ ತಿಳಿಸುವದು.

2) ಬಿಲ್ಲಿನ ಶೆಡ್ಯೂಲ್ 'ಬಿ' ಯಲ್ಲಿ ಇನ್‌ವಾ ಟುಬ್ಯುಲರ್ ಐಟಿ 500 ಸೂಪರ್ ಬ್ಯಾಟರಿಗಳ ಪೂರೈಕೆಗಾಗಿ ₹.15,030/-ಪ್ರತಿಯೊಂದಕ್ಕೆ ತುಲನಾತ್ಮಕ ದರಗಳ ಪಟ್ಟಿಯಲ್ಲಿ & ಸ್ಟ್ಯಾಂಡಗಾಗಿ ₹.9297/-ಗಳಿಗೆ ಅನುಮೊದನೆ ನೀಡಲಾಗಿದೆ ಆದರೆ 3ನೇ ಪಕ್ಷದವರಾದ ಕ್ಯಾಟಕಾನ್ ಕನ್ಸಲ್ಟಂಟ್ಸ್ ಬೆಳಗಾವಿ ಇವರ ಪ್ರಮಾಣ ಪತ್ರದಲ್ಲಿ ಟೆಂಡರ್ ವಿವರಣೆಗಳಿಗನುಸಾರ ಸಾಮಗ್ರಿಗಳನ್ನು ಉಪಯೋಗಿಸುವಿಕೆ, ಅನುಮೊದಿತ ತಯಾರಿಕೆ ಹಾಗೂ ಈ ಕಾರ್ಯವು ಭಾರತಿಯ ವಿದ್ಯುಚ್ಛಕ್ತಿ ನಿಯಮಗಳನುಸಾರ ಸ್ಥಿರೀಕರಿಸಲಾಗಿದೆ ಎಂದು ಪ್ರಮಾಣೀಕರೀಸಿರುವದು ವ್ಯತಿರಿಕ್ತವಾಗುತ್ತದೆ. & ಪೂರೈಕೆ ಆದೇಶದಲ್ಲಿಯ ಟುಬ್ಯುಲರ್ ಬ್ಯಾಟರಿಗಳ ವಿನ್ಯಾಸ & ಪೂರೈಸಿದ ಬಿಲ್ಲಿನಲ್ಲಿ ಕ್ಲೇಮುಮಾಡಿದ ಈ ಬ್ಯಾಟರಿಗಳ ವಿನ್ಯಾಸದಲ್ಲಿ ವ್ಯತ್ಯಾಸಗಳಿರುವುದರಿಂದ & ದರದಲ್ಲಿ ಸಹ ಈ ವ್ಯತ್ಯಾಸದ ಬಗ್ಗೆ ವಿವರಗಳ ಲಭ್ಯತೆ ಇಲ್ಲದ್ದರಿಂದ ಈ ಸಾಮಗ್ರಿ ಪೂರೈಕೆಯಲ್ಲಿ ಅಗತ್ಯವಾದ & ಸಮರ್ಪಕ ದರಗಳ ಕುರಿತು ನ್ಯಾಯ ಒದಗಿಸಲಾಗಿದೆ ಎಂದು ಧೃಢೀಕರಿಸಲಾಗುವುದಿಲ್ಲ.

ಏಕೆಂದರೆ ಎಸ್.ಡಿ.ಸುಳಿಗಾವಿ ವಿದ್ಯುಚ್ಛಕ್ತಿ ಸಲಹೆಗಾರರ ವಿವಿರಣೆ 1ರಲ್ಲಿ ಎಕ್ಸೈಡ್ ಮಾದರಿ/ನಂ. 6EL150ನ್ನು ಇನ್‌ವಾಟುಬ್ಯುಲರ್ ಐಟಿ500 ಸೂಪರ್ ಬದಲಿಗೆ ಅಳವಡಿಸಿರುವರು ಇದು ಟೆಂಡರ್ ದಾಖಲೆಗಳುನುಸಾರ ಸರಿ ಇರುತ್ತದೆ ಎನ್ನುವ ಪ್ರಮಾಣ ಪತ್ರವು ದಾಖಲೆಗಳುನುಸಾರ ವ್ಯತಿರಿಕ್ತವಾಗುತ್ತದೆ. ಇದರಿಂದಾಗಿ ಪೂರೈಸಿದ ಬ್ಯಾಟರಿಗಳ ಗುಣಮಟ್ಟ, ಪರಿಮಣ, ದರ ಇತ್ಯಾದಿ ಇವುಗಳ ಪರಿಶೀಲನಾ ಕಾರ್ಯವು ಸಮರ್ಪಕವಾಗಿ ನಿರ್ವಹಣೆ ಆಗಿರುವದಿಲ್ಲ। ಎನ್ನುವದು ಸ್ಪಷ್ಟವಾಗಿ ತಿಳಿದುಬರುತ್ತದೆ. ಎರಡೂ ಪ್ರಮಾಣ ಪತ್ರಗಳನ್ನು ವಿ.ತಾ.ವಿ.ವಿಯಿಂದ ಅಂಗೀಕರಿಸಿ ಧೃಢೀಕರಿಸಿರುವದಿಲ್ಲ.

1) 95ನಂ.ಬ್ಯಾಟರಿಗಳ ಹಾಗೂ 6ನಂ. ಸ್ಟ್ಯಾಂಡಗಳ ಪರಿಮಾಣಗಳನ್ನು ಕರಾರು ಒಪ್ಪಂದದಲ್ಲಿ ಸ್ಪಷ್ಟವಾಗಿ ನಮೋದಿಸಿರುವದಿಲ್ಲ. ಇದು ಅವಶ್ಯವಾಗಿ ಬೇಕಾಗುತ್ತದೆ.

₹.1,31,500ಗಳ ಹೆಚ್ಚುವರಿ ಕಾರ್ಯಾಧಾರಿತ ಭದ್ರತಾ ಮೊತ್ತವನ್ನು ಸದರಿ ಬಿಲ್ಲಿನ ಮೊತ್ತದೊಂದಿಗೆ ಸೇರಿಸಿ ಪಾವತಿಸಿರುವದು ಸರಿಯಾದ ಕ್ರಮವಲ್ಲ.ಅಲ್ಲದೇ ₹.1,31,500/-ಗಳ ಮೊತ್ತಕ್ಕೆ ಬೇರೆ ಬಿಲ್ಲು(ವೋಚರ್) ತಯಾರಿಸಿ ಗುತ್ತೇದಾರ ಸಂಸ್ಥೆಯ ರುಜು ಹೊಂದಿದ ಅಧಿಕೃತ ಬಿಲ್ಲ ಪಡೆಯದೇ R.A.Billಬಿಲ್ಲನೊಂದಿಗೆ (ವೋಚರನಲ್ಲಿ ಸೇರಿಸಿ)ಪಾವತಿಸಿರುವದು ಸಮರ್ಪಕವಲ್ಲ (ವೋಚರ ಲಗತ್ತಿಸಿದೆ) ಹಾಗೂ ₹.74,182/-ಗಳ ಸುರಕ್ಷಾ ಠೇವಣಿ ಪಡೆದ ಬಗ್ಗೆ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲಿಲ್ಲ.

5) ಸದರಿ ಬಿಲ್ಲನ್ನು ಚಾಲ್ತಿ5 ಬಿಲ್ಲು ನಮೂನೆ ಉಪಯೊಗಿಸಲಾಗಿದೆ. ಈ ಕಾರ್ಯವು/ಪೂರೈಕೆ ಇರುವ ಪ್ರಯುಕ್ತ ಫರ್ಮ ಬಿಲ್ಲಿನಲ್ಲಿಯೇ ಕ್ಲೇಮನ್ನು ಅಂಗೀಕರಿಬೇಕಾಗಿತ್ತು. ಇದರಿಂದಾಗಿ ಶಾಸನಬದ್ಧ ಕಡಿತಗಳು ಸರಿಯಾಗಿ ಕಟಾವಣೆಯಾಗಿ ಸಂಬಂಧಿಸಿದ ಇಲಾಖೆಗಳ ಲೆಕ್ಕಶಿರ್ಷಿಕೆಗಳಿಗೆ ಜಮೆ ಆದ ಬಗ್ಗೆ ಧೃಢೀಕರಿಸಿಕೊಳ್ಳಲು ಆಗುವದಿಲ್ಲ.

6) ಈಗಾಗಲೇ ಉಪಯೋಗಿಸಲಾದ ಬ್ಯಾಟರಿಗಳು/ಖರೀದಿಸಿರುವ ಕುರಿತು ಈ ಬಿಲ್ಲಿನಲ್ಲಿ ಮೊತ್ತವನ್ನು ನಮೂದಿಸಿರುವದಿಲ್ಲ & ಕಡಿತಗೊಳಿಸಿರುವದಿಲ್ಲ ಇದರಿಂದಾಗಿ ವಿಟಿಯುಗೆ ಬರುವಂತಹ ಆರ್ಥಿಕ ಆದಾಯವನ್ನು ತಪ್ಪಿಸದಂತಾಗಿದೆ. ಅದೂ ಅಲ್ಲದೆ ಈ ಸಾಮಗ್ರಿಗಳನ್ನು ಸಂಬಂಧಿತ ಸಂಸ್ಥೆಯ ಅಧಿಕೃತ ಬಿಲ್ಲಿನ ಮೇಲೆ ಈ

ಪೂರೈಕೆ ಮೊತ್ತದ ಸಂದಾಯ ಮಾಡದೇ, R.A.Billಬಿಲ್ಲನಲ್ಲಿ ಬಿಲ್ಲ ಸಂದಾಯ ಮಾಡಿರುವದರಿಂದ ಈ ಸಂಸ್ಥೆ ಸರಕಾರಕ್ಕೆ ಸಲ್ಲಿಸಬೇಕಾದ ಎಲ್ಲ ತೆರಿಗೆಗಳನ್ನು ಪಾವತಿಸಿದೆ ಎಂದು ಧೃಢೀಕರಿಸಲಾಗುವುದಿಲ್ಲ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :87 ದಿನಾಂಕ: 25-02-2016 ರಂದು ಸೂಕ್ತ ಅನುಸರಣೆ ವರದಿಯನ್ನು ಲೆಕ್ಕಪರಿಶೋಧನೆಗೆ ನೀಡಲು ಕೋರಲಾಗಿತ್ತು. ಆದರೆ ನೀಡಿದ ಅನುಸರಣೆ ಆಕ್ಷೇಪಿತ ಅಂಶಗಳಿಗುಣವಾಗಿ ಇರುವುದಿಲ್ಲ. ಆದ್ದರಿಂದ ಪಾವತಿಸಿದ ಮೊತ್ತ ₹.15,07,420/- ಗಳನ್ನು ಆಕ್ಷೇಪಣೆಯಲ್ಲಿರಿಸಲಾಗಿದೆ.

60) ಗ್ರಂಥಾಲಯಕ್ಕೆ ಮುಸ್ತಕಗಳನ್ನು ಪೂರೈಸಿದ ಪೂರೈಕೆ ಬಿಲ್ಲು ಮತ್ತು ಸಂಬಂಧಿಸಿದ ದಾಖಲೆ ಹಾಜರು ಪಡಿಸುವ ಬಗ್ಗೆ.

2014-15 ನೇ ಸಾಲಿನಲ್ಲಿ ಗ್ರಂಥಾಲಯಕ್ಕೆ ಮುಸ್ತಕಗಳನ್ನು Allied publishers LTD Bengaluru & M/s aopollo book distributors, Bengaluru ಇವರಿಗೆ ಪೂರೈಸಲು ಅನುಮೋದನೆ ನೀಡಿದ್ದು ಇದೆ ಸದರಿಯವರಿಗೆ ಈ ಕೆಳಕಾಣಿಸಿದಂತೆ ಪಾವತಿಸಲಾಗಿದೆ.

ಅ.ನಂ.	ಚೆಕ್‌ನಂಬರ	ಪಾವತಿಸಿದ ಮೊತ್ತ	ವಿವರ
1	238387 / 23-3-15	₹. 43,69,611	Allied Publishers LTD Bengaluru
2	238388 / 23-3-15	₹. 36,67,637	M/s appollo book distributors, Bengaluru
3	238389 / 23-3-15	₹. 1,64,030	Income Tax
	Total →	82,01,278=00	

1. Allied publishers LTD Bengaluru & M/s aopollo book distributors, Bengaluru ಇವರು ಪೂರೈಸಿದ Original Bill ಗಳನ್ನು ಪರಿಶೀಲನೆಗೆ ಪೂರೈಸಿಲ್ಲ.

2. ಈ ಮುಸ್ತಕಗಳನ್ನು ಖರೀದಿ ಮಾಡಲು ಪೂರೈಕೆ ಆದೇಶ ಪ್ರತಿ ಲಗತ್ತಿಸಿಲ್ಲ ಯಾವ ಆಧಾರದ ಮೇಲೆ ಈ ಮುಸ್ತಕ ಪೂರೈಕೆದಾರರನ್ನು ಮುಸ್ತಕ ಪೂರೈಕೆಗಾಗಿ ಆಯ್ಕೆ ಮಾಡಲಾಗಿದೆ ಎಂಬ ಬಗ್ಗೆ ಗೊತ್ತಾಗುವದಿಲ್ಲ. ಈ ಸಂಸ್ಥೆಗಳು GOC ಯ ಅಧಿಕೃತ ಸಂಸ್ಥೆಗಳಾಗಿರುವ ಬಗ್ಗೆ ಯಾವುದೇ ಅಧಿಕೃತ ದಾಖಲೆ ಇಲ್ಲ. ಈ ಮುಸ್ತಕ ಖರೀದಿಗಾಗಿ ವಾಚನಾಲಯ ಅಭಿವೃದ್ಧಿ ಕಮಿಟಿ ಇತರೆ ಕಮಿಟಿಯ ಅಂದರೆ E.C ಕಮಿಟಿಯ ಅನುಮೋದನೆ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಲಿಲ್ಲ.

ಅದೂ ಅಲ್ಲದೇ ಖರೀದಿಸಿದ ಮುಸ್ತಕಗಳ ಖರೀದಿ ಕುರಿತು ಅಧಿಕೃತ Catalogue & ಇತ್ತೀಚಿನ ಪ್ರಕಟಣೆ (ಆವೃತ್ತಿ)ಯ ಮುಸ್ತಕಗಳನ್ನೇ ಪೂರೈಸಿದ ಬಗ್ಗೆ ಪ್ರಮಾಣೀಕರಣ & Accession ರಜಿಸ್ಟರಿನಲ್ಲಿಯ ದಾಖಲೀಕರಣದ ಪ್ರಮಾಣೀಕರಣ ಇತ್ಯಾದಿ ವಿವರಗಳು ಆಡಿಟ್‌ಗೆ ಲಭ್ಯವಾಗಲಿಲ್ಲ ಕಾರಣ ಸದರ ಖರೀದಿ ಮೊತ್ತ ₹.82,01,278/- ಗಳನ್ನು ಆಕ್ಷೇಪಣೆಯಲ್ಲಿ ಇರಿಸಲಾಗಿದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :82 ದಿನಾಂಕ: 19-02-2016 ನ್ನು ನೀಡಲಾಗಿತ್ತು . ಆದರೆ ಯಾವುದೇ ಅನುಸರಣೆಯನ್ನು ನೀಡಿರುವುದಿಲ್ಲ.

61) ಎಸಿಬಿಲ್ ಮುಖಾಂತರ ಡ್ರಾ ಮಾಡಿದ ಮುಂಗಡ ಮೊತ್ತವನ್ನು ವಿಳಂಬವಾಗಿ NDC ಬಿಲ್ ಮುಖಾಂತರ ಹೊಂದಾಣಿಕೆ ಮಾಡಿದ್ದು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಧೀನ ಸಂಸ್ಥೆಗಳಿಗೆ ಕಾರ್ಯಕ್ರಮಗಳನ್ನು ನಿರ್ವಹಿಸುವ ಕುರಿತಾಗಿ ಎಸಿಬಿಲ್ ಮುಖಾಂತರ ಮುಂಗಢಗಳನ್ನು ಡ್ರಾ ಮಾಡಿ ಆಯಾ ಸಂಸ್ಥೆಗಳಿಗೆ ನೀಡಲಾಗುತ್ತಿದೆ. ಉದಾಹರಣೆ ಪ್ರಾಚಾರ್ಯರು BDT ಇಂಜಿನಿಯರಿಂಗ್ ಕಾಲೇಜ್ ದಾವಣಗೆರೆ ಇವರಿಗೆ ಚೈತ್ರ 2014 ರ ಕಾರ್ಯಕ್ರಮಕ್ಕಾಗಿ ₹.5,87,500ಗಳನ್ನು ಚೆಕ್ ನಂ.219243 ದಿ:4/4/2014 ರ ಪ್ರಕಾರ ನೀಡಲಾಗಿರುತ್ತದೆ ಆದರೆ ಈ ಮುಂಗಡವನ್ನು ದಿನಾಂಕ.19/03/2015 ರಂದು. NDC ಬಿಲ್ ಮುಖಾಂತರ ಹೊಂದಾಣಿಕೆ ಮಾಡಲಾಗಿದ್ದು. ಆ ಪೈಕಿ ₹.3,43,319ಗಳ ವೆಚ್ಚಗಳನ್ನು ಹೊಂದಾಣಿಕೆ ಮಾಡಲ್ಪಟ್ಟರೆ ₹.2,44,181ಗಳನ್ನು ಡಿಡಿ ಮುಖಾಂತರ (ಡಿಡಿಸಂಖ್ಯೆ-610008)ದಿ-19-03-2015ರ ಪ್ರಕಾರ ಮರುಭರಣಾ ಮಾಡಲಾಗಿದೆ. ಈ ವಿಷಯಗಳನ್ನು ಪರಿಶೀಲಿಸಲಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕಾಗಿ ರೂ.5,87,500ಗಳನ್ನು ಡ್ರಾ ಮಾಡಿ ಅದನ್ನು ಕಾರ್ಯಕ್ರಮ ಅನುಷ್ಠಾನಗೊಳಿಸಿದ 1 ಮತ್ತು 2 ದಿನಗೊಳಗಾಗಿಯೇ ಕನಿಷ್ಠ ಪಕ್ಷ ಮುಂದಿನ ತಿಂಗಳ ಒಳಗಾಗಿ ಹೊಂದಾಣಿಕೆ ಮಾಡಬೇಕೆಂಬ K.F.C. ಅನುಚ್ಛೇದ-240 ಎ ಪ್ರಕಾರ ವಿಧಿಸಲಾಗಿದೆ ಮತ್ತು ಅನಿಯೋಗಿತ ಮೊತ್ತಗಳನ್ನು ಕೂಡಲೇ ಖಜಾನೆಗೆ (ವಿಶ್ವವಿದ್ಯಾಲಯ ನಿಧಿಗೆ) ಭರಿಸಬೇಕೆಂದು ಸಹ ತಿಳಿಸಲಾಗಿರುತ್ತದೆ. ಆದರೆ ಹಣ ಡ್ರಾ ಮಾಡಿ ಸುಮಾರು ಒಂದುವರುಷದ ನಂತರ ಹೊದಾಣಿಕೆ ಬಿಲ್ಲನ್ನು ಸಲ್ಲಿಸಲ್ಪಟ್ಟಿದ್ದು ಅದರಲ್ಲಿ ₹.2,44,181/-ಗಳ ಡಿಡಿ ಮುಖಾಂತರ ವಿಶ್ವವಿದ್ಯಾಲಯ ನಿಧಿಗೆ ಮರುಭರಣಾ ಮಾಡಿದ್ದರಿಂದ ಮುಂಗಡದ ಅವಿನಿಯೋಗಿತ ಮೊತ್ತಗಳನ್ನು ಅನಿಯಮಿತವಾಗಿ ಇಟ್ಟುಕೊಂಡಿದ್ದರಿಂದ ಅದು ಸಂಬಂಧಿಸಿದವರಿಗೆ ಅನುಚಿತ ಪ್ರಯೋಜನ ನೀಡಿದಂತಾಗುತ್ತದೆ. ಕಾರಣ ಇಂಥಹ ಅನಿಯಮಿತ ಮುಂಗಡ ಹೊಂದಾಣಿಕೆಗೆ ಸೂಕ್ತ ಅನುಸರಣೆಯನ್ನು ನೀಡಲು ಸೂಚಿಸಲಾಗಿದೆ.

ಇದೂ ಅಲ್ಲದೇ ಯಾವುದೇ ಮುಂಗಡಗಳನ್ನು ನೀಡುವ ಪೂರ್ವದಲ್ಲಿ ಮುಂಗಡದ ಉದ್ದೇಶಕ್ಕಾಗಿ ಬೇಕಾಗಿರುವ ಮೊತ್ತವನ್ನು ತಿಳಿಸುವ ಅಂದಾಜು ವೆಚ್ಚದ ವಿವರಗಳನ್ನು ಪಡೆಯದೇ ನೇರವಾಗಿ ಬೇಡಿಕೆಯಿಟ್ಟ ಮೊತ್ತಕ್ಕೆ ಮುಂಗಡಗಳನ್ನು ನೀಡುವದು ಅನಿಯಮಿತ ಇದರಿಂದಾಗಿ ಮುಂಗಡ ಮೊತ್ತದ ಅಂದಾಜು 40% ಮೊತ್ತವನ್ನು ಒಂದು ವರ್ಷದವರೆಗೆ ಉಳಿಸಿಕೊಂಡು ವಿಶ್ವವಿದ್ಯಾಲಯ ನಿಧಿಗೆ ಮರುಭರಣಾ ಮಾಡಿದ್ದನ್ನು ಸ್ಪಷ್ಟಪಡಿಸುತ್ತದೆ ಕಾರಣ ಈ ಕ್ರಮಗಳನ್ನು ಕೈಗೊಳ್ಳದಿರುವದಕ್ಕೆ ಸೂಕ್ತ ಅನುಸರಣೆಯನ್ನು ಲೆಕ್ಕಪರಿಶೋಧನೆಗೆ ಒದಗಿಸುವದು ಈ ಪ್ರಕರಣವನ್ನು ಉದಾಹರಣೆಗೆ ಮಾತ್ರ ನೀಡಲ್ಪಟ್ಟಿದ್ದು ಈ ಆಕ್ಷೇಪಣೆಗಳು ಇಂತಹ ಇನ್ನೂಳಿದ ಪ್ರಕರಣಗಳಲ್ಲಿಯೂ ಸಹ ಅನ್ವಯವಾಗುತ್ತದೆ. ಕಾರಣ ಈ ಬಗ್ಗೆ ಸಹ ಸೂಕ್ತ ಅನುಸರಣೆ ನೀಡಲು ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :09 ದಿನಾಂಕ: 11-11-2015 ರಂದು ಕೋರಲಾಗಿತ್ತು. ಆದರೆ ಯಾವುದೇ ಅನುಸರಣೆಯನ್ನು ನೀಡಿರುವುದಿಲ್ಲ. ಆದ್ದರಿಂದ ₹.587500/-ಗಳನ್ನು ಆಕ್ಷೇಪಣೆಯಲ್ಲಿರಿಸಲಾಗಿದೆ. (ಈ ಮೊತ್ತ ಮುಂಗಡದ ಒಟ್ಟು ಮೊತ್ತದಲ್ಲಿ ಸೇರಿಸಲ್ಪಟ್ಟಿದೆ.)

62) ವಿ.ತಾ.ವಿಶ್ವವಿದ್ಯಾಲಯದಲ್ಲಿ ಮುಂಗಡ ರಜಿಸ್ಟರ್ ನಿರ್ವಹಣೆ & ಮುಂಗಡ ನೀಡುವಿಕೆಯಲ್ಲಿನ ನ್ಯೂನತೆಗಳ ಬಗ್ಗೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯಲ್ಲಿ 2014-15 ರಲ್ಲಿ ನಿರ್ವಹಿಸಿದ ಮುಂಗಡ ರಜಿಸ್ಟರನ್ನು ಪರಿಶೀಲನೆಗಾಗಿ ಈ ಕೆಳಗಿನ ಅಂಶಗಳು ಕಂಡು ಬರುತ್ತವೆ.

1) ವಿ.ತಾ.ವಿವಿಯ 2014-15ರ ಮುಂಗಡ ರಜಿಸ್ಟರನ ವಿತ್ತೀಯ ಸ್ಥಿತಿ ಈ ಕೆಳಗಿನಂತೆ ಕಂಡುಬರುತ್ತದೆ.

ಮುಂಗಡ ರಜಿಸ್ಟರ 2014-15.

1)	ಪ್ರಾರಂಭಿಕ ಶಿಲ್ಕು –	49,51,21,556-00 (Dr)
2)	2014-15ರಲ್ಲಿ ನೀಡಿದ ಮುಂಗಡಗಳು –	69,78,93,302-00 (Dr)
3)	ಒಟ್ಟು ಮುಂಗಡಗಳು –	1,19,30,14,858-00 (Dr)
4)	2014-15ರಲ್ಲಿ ನೀಡಿದ ಹೊಂದಾಣಿಕೆಗಳು.	50,64,52,784-00 (Cr)
5)	ಕೊನೆಯ ಶಿಲ್ಕು –	68,65,69,074-00 (Dr)

ಈ ಬಗ್ಗೆ ಪರಿಶೀಲಿಸಲಾಗಿ, 2013-14ರಲ್ಲಿ ನೀಡಿದ ಮುಂಗಡ ₹.53,09,10,473/- ಗಳಾದರೆ ಪ್ರಸಕ್ತ ವರ್ಷ(2014-15)ರಲ್ಲಿ ನೀಡಿದ ಮುಂಗಡ ₹.69,78,93,302/-ಗಳಾಗಿವೆ. ಹಾಗೆಯೇ 2013-14ರಲ್ಲಿ ₹.38,95,06,148/-ಗಳ ಮುಂಗಡ ಹೊಂದಾಣಿಕೆ ಆದರೆ ಪ್ರಸಕ್ತವರ್ಷದ ಮುಂಗಡ ಹೊಂದಾಣಿಕೆ ₹.50,64,52,784/-ಗಳಾಗಿವೆ. ಇದರಿಂದಾಗಿ ಕ್ರಮವಾಗಿ ₹.16,69,82,829/-ಗಳು (ಮುಂಗಡ ನೀಡಿಕೆ) ಹಾಗೂ ₹.11,30,46,636/-(ಹೊಂದಾಣಿಕೆ)ಗಳಷ್ಟು ನೀಡಿಕೆ & ಹೊಂದಾಣಿಕೆಗಳಲ್ಲಿ ಹೆಚ್ಚಳವಾಗಿದೆ ಅಂದರೆ ಮುಂಗಡ ನೀಡಿಕೆಯ ಸಮಯದಲ್ಲಿ ಸಮರ್ಪಕ ನಿಯಂತ್ರಣ ವಹಿಸುವಲ್ಲಿ ವಿ,ವಿ ದಿಂದ ಯಾವುದೇ ಮುತವರ್ಜಿ ವಹಿಸದೇ ಇರುವದು ಕಂಡುಬರುತ್ತದೆ. ಯಾಕೆಂದರೆ ಮುಂಗಡ ನೀಡಿದ ಉದ್ದೇಶ ಈಡೇರಿದ 1-2 ದಿನಗಳಲ್ಲಿ ಈ ಮುಂಗಡ ಹೊಂದಾಣಿಕೆ ಮಾಡಬೇಕೆಂದು, ಕೊನೆಪಕ್ಷ ಕನಿಷ್ಠ ಮುಂಗಡ ನೀಡಿಕೆಯ 1 ತಿಂಗಳ ಒಳಗಾಗಿ ಈ ಮುಂಗಡಗಳ ಹೊಂದಾಣಿಕೆ ಆಗಬೇಕೆಂದು ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 240(a)ರಡಿ ವಿಧಿಸಲಾಗಿದೆ.

ಆದರೆ ಇಂತಹ ಕ್ರಮ ಕೈಕೊಳ್ಳದೇ ಹೊಂದಾಣಿಕೆಯಾಗದೇ ಮುಂಗಡಗಳು 1998-99ರಿಂದಲೂ ಬಾಕಿ ಉಳಿದ ಪ್ರಕರಣಗಳನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ~~ಉದಾಹರಣೆಗೆ~~ ವಿವರಗಳನ್ನು ಈ ಪತ್ರಕ್ಕೆ ಲಗತ್ತಿಸಿದ **ಅನುಬಂಧ-8** ರಲ್ಲಿ ತಿಳಿಸಲಾಗಿದೆ. ಹೊಂದಾಣಿಕೆಯಾಗದ ಮೊತ್ತ ರೂ 6865.68 ಲಕ್ಷಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

2) ಇನ್ನು ಮುಂಗಡ ಇತರೇ ಉಪಶೀರ್ಷಿಕೆ ಅಡಿ (Trial Balance ಪ್ರಕಾರ) ₹.8,40,000/-ಗಳನ್ನು ಗೇಟ ಸ್ಕಾಲರಶಿಪ್ ಎಂಬ ಹೆಸರಿನಡಿ ಮುಂಗಡದಡಿ ನೀಡಲಾಗಿದೆ. ಸ್ಕಾಲರಶಿಪ್‌ಗಳು ಸರ್ಕಾರದಿಂದ / ಸಂಸ್ಥೆಗಳಿಂದ ಮಂಜೂರಾಗಿ ಸಂಬಂಧಿತ ವಿದ್ಯಾರ್ಥಿಗಳ ಹೆಸರಿಗೆ ಬಿಡುಗಡೆಯಾಗುವದು ವಿಧಿಬದ್ಧ ಆದರೆ. ಈ ಪ್ರಕರಣದಲ್ಲಿ ಗೇಟ ಸ್ಕಾಲರಶಿಪ್ ಎಂದು ಮುಂಗಡ ಬಿಡುಗಡೆ ಮಾಡಿದ್ದು ನಿಯಮಬಾಹಿರವಾಗಿದೆ. ಅದೂ ಅಲ್ಲದೆ ಮುಂಗಡ ಐಟಂ ನಂ.32 & 33ರಡಿ ಅನುಕ್ರಮವಾಗಿ ದಿ: 16-10-2008 & 22-10-2008ಗಳಂದು ₹.7,20,000/- & ₹.1,20,000/-ಗಳ ಶಿಲ್ಕು ಬಾಕಿ ಉಳಿದಿದ್ದು, ಇದು ಯಾರ ಹೆಸರಿನಲ್ಲಿ ಬಾಕಿ ಉಳಿದಿದೆ ಎಂಬ ಬಗ್ಗೆ ಮುಂಗಡ ರಜಿಸ್ಟರಿನಲ್ಲಿ ವಿವರಗಳಿಲ್ಲ. ಕಾರಣ ಈ ಅನಿಯಮಿತ ಮುಂಗಡ ಬಾಕಿ ಕುರಿತು & ಅದಕ್ಕಾಗಿ (ಹೊಂದಾಣಿಕೆಗಾಗಿ) ವಿ.ವಿ ಯಿಂದ ಯಾವ ಕ್ರಮ ಕೈಕೊಳ್ಳಲಾಗಿದೆ? ಎಂಬ ಬಗ್ಗೆ ಸೂಕ್ತ ಅನುಸರಣೆಯನ್ನು ಲೆಕ್ಕಪರಿಶೋಧನೆಗೆ ಒದಗಿಸುವುದು.

3) ಇನ್ನು ಕೆಲವು ಪ್ರಕರಣಗಳಲ್ಲಿ ಮುಂಗಡಗಳನ್ನು (ವಿವಿಯ ಸಂಲಗ್ನ ಕಾಲೇಜುಗಳಿಗೆ ಸಂಬಂಧಿಸಿದ) ಅನವಶ್ಯಕವಾಗಿ ಪಡೆದು 3-4 ತಿಂಗಳವರೆಗೆ ಉಳಿಸಿಕೊಂಡು ಅದರಲ್ಲಿ ಕೆಲವಂಶ ಮಾತ್ರ ವಿನಿಯೋಗಿಸಿ ಬಾಕಿ ಉಳಿದ ಮೊತ್ತಗಳನ್ನು ವಿ.ವಿ ನಿಧಿಗೆ ಭರಿಸಿದ್ದು ಲೆಕ್ಕಪರಿಶೋಧನೆಯ ಗಮನಕ್ಕೆ ಬಂದಿರುತ್ತದೆ ಇನ್ನು ಕೆಲವಡೆ ಪಡೆದ ಮುಂಗಡವನ್ನು ಸುಮಾರು 3-4 ತಿಂಗಳು ಉಳಿಸಿಕೊಡು ತದನಂತರ ಆ ಮೊತ್ತವನ್ನು ಮರಳಿ ವಿ.ವಿ ನಿಧಿಗೆ ಜಮಾ ಮಾಡಿದ್ದನ್ನು ಸಹ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

ಉದಾ: 1) ದೊಡ್ಡ ಮೊತ್ತ ಹಣ ವಿ.ವಿ ನಿಧಿಗೆ ಮರುಪಾವತಿಮಾಡಿದ್ದು-

ಐಟಂ $\frac{201,\ 207,}{2014-15}$ $\frac{200\&208}{2014-15}$ ಐಟಂ $\frac{199\&209}{2014-15}$ ಮತ್ತು $\frac{198\&210,}{2014-15}$

$\frac{121}{9-6-14}$ ಚೆಕ್ ನಂ. $\frac{232306}{16-7-14}$, ₹.20,00,000/- ದಿನಾಂಕ: 17-10-2014. ₹.20,00,000/-

3) ಮುಂಗಡದ ಹಣವನ್ನು ವಿನಿಯೋಗಿಸದೇ ಮರಳಿ ವಿ.ವಿ ನಿಧಿಗೆ ಭರಣಾಮಾಡಿದ್ದು.

Spl.Officer R.O Bengaluru.

(ಬ್ಯಾಂಕ ಖಾತೆ ಸಂಖ್ಯೆ 54003362309 ಕ್ಕೆ ಜಮಾ ಮಾಡಿದ್ದು)

ಈ ರೀತಿ ಮುಂಗಡವನ್ನು ಪಡೆದು 3-4 ತಿಂಗಳು ತಮ್ಮ ಹತ್ತಿರ ಇಟ್ಟುಕೊಂಡು, ಕೆಲವಂಶ ಮಾತ್ರ ವಿನಿಯೊಗಿಸಿ.ಉಳಿದ ದೊಡ್ಡ ಮೊತ್ತವನ್ನು ವಿ.ವಿ ನಿಧಿಗೆ ಜಮಾ ಮಾಡುವುದಾಗಲಿ, ಯಾವುದೇ ಮುಂಗಡ ವಿನಿಯೋಗಿಸದೇ. ಎಲ್ಲ ಮೊತ್ತವನ್ನು ವಿ.ವಿ ನಿಧಿಗೆ ಭರಿಸುವುದಾಗಲಿ ಮಾಡಿದ್ದನ್ನು ಗಮನಿಸಿದಾಗ ಮುಂಗಡ ನೀಡುವ ಮೊದಲು ವಾಸ್ತವಿಕವಾಗಿ ಅವಶ್ಯವಿರುವ ಮೊತ್ತದ ಕುರಿತು ಸೂಕ್ತ ಪರಿಶೀಲನೆ ಮಾಡಿ (ಬೇಕಿರುವ ಮುಂಗಡ ಉದ್ದೇಶಕ್ಕೆ ಅಂದಾಜನ್ನು ಪಡೆದು) ಅಗತ್ಯ ಮೊತ್ತದ ಮುಂಗಡ ನೀಡುವದು ಅಗತ್ಯವಿತ್ತು ಆದರೆ ಇಂತಹ ಯಾವುದೇ ಅಗತ್ಯ ಕ್ರಮಕೈಕೊಳ್ಳದೇ ಮುಂಗಡ ನೀಡುವಿಕೆಯ ನಿಯಮಗಳನ್ನು ನಿರ್ಲಕ್ಷಿಸಿ ನೀಡಿದಂತಹ ಮುಂಗಡಗಳೆಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯ ಪಡಬೇಕಾಗುತ್ತದೆ.

4) ಇನ್ನು ಅತೀ ಮುಖ್ಯವಾಗಿ ಲೆಕ್ಕಪರಿಶೋಧನೆಯಲ್ಲಿ ಗಮನಿಸಿದ ಅಂಶವೆಂದರೆ ಮುಂಗಡಗಳನ್ನು ಅನಿಯಮಿತವಾಗಿ ಖಾಸಗಿ ಸಂಸ್ಥೆಗಳಿಗೆ ನೀಡಿದ್ದು ವಿ.ವಿ ದ ವಿವಿಧ ಕಾರ್ಯಗಳಿಗೆ ಸಂಬಂಧಿಸಿದಂತೆ ಮಾಡಿಕೊಂಡ ಕರಾರುಪತ್ರಗಳನ್ನು ಖರೀದಿ ನಿಯಮಗಳನ್ವಯ / KTPP ನಿಯಮಗಳನ್ವಯ ಮಾಡಿಕೊಂಡು ಸಂಬಂಧಿತ ಸಂಸ್ಥೆಯಿಂದ ಬಿಲ್ಲುಗಳನ್ನು ಪಡೆದು ಅದಕ್ಕಾಧರಿಸಿ ಸೂಕ್ತ ನಿಯಮಬದ್ಧ ಪರಿಶೀಲನೆಯ ನಂತರ ಹಣ ಪಾವತಿಸಬೇಕಿತ್ತು ಆದರೆ ಇಂತಹ ನಿಯಮಗಳನ್ನು ಪಾಲಿಸದೇ ಕರಾರು ಒಪ್ಪಂದ ಮಾಡಿಕೊಂಡ ಸಂಸ್ಥೆಗಳಿಗೆ ಮುಂಗಡ ನೀಡಿ ವರ್ಷಗಟ್ಟಲೆ ಹೊಂದಾಣಿಕೆ ಮಾಡಿಕೊಳ್ಳದೇ ಮುಂದುವರೆಸಿದ ಕಂಡಿಕೆಗಳು ಲೆಕ್ಕಪರಿಶೋಧನೆಯ ಗಮನಕ್ಕೆ ಬಂದಿರುತ್ತವೆ.~~(ವಿವರಗಳು ಅನುಬಂಧ 3ರಲ್ಲಿದೆ)~~

2014-15 ರ ಅಂತ್ಯಕ್ಕೆ ಉಳಿದ ಶಿಲ್ಕು.

ಉದಾ: 1) ಶ್ರೀ ಅರವಿಂದ ಕುಬಸದ C.A. – 3,01,30,000/-
2) CANEUS International – 12,01,855/-
3) ISQT Process & Consulting Services - 5,00,000/-
4) Lattitude Edutech Pvt. Ltd. - 30,00,000/-
5) ARCL Event Management - 13,50,000/-
6) BSR Infratech India pvt.Ltd.- 2,31,03,000/-
7) DJPR Construction Pvt. Ltd.- Hyderabad 1,17,85,000/-
8) EPIL Chennai - 1,60,20,000/-
9) Rites Ltd. Bengaluru- 42,00,40,089/-
10) S.D.Gurav - 2,38,00,230/-

ಒಟ್ಟು= 53,09,30,204/-

ಕಾರಣ ಇಂತಹ ಅನಿಯಮಿತ ಮುಂಗಡಗಳ ನೀಡಿಕೆಗಾಗಿ ಯಾವ ನಿಯಮಗಳಡಿಯ ಅವಕಾಶಗಳನ್ನು ಬಳಸಿ ನೀಡಲಾಗಿದೆ ಎಂಬ ಬಗ್ಗೆ ಸೂಕ್ತ ಅನುಸರಣೆಗಳನ್ನು ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :11 ದಿನಾಂಕ: 13-11-2015 ರಲ್ಲಿ ನೀಡಲು ಕೋರಲಾಗಿತ್ತು ಆದರೆ ನೀಡಿದ ಅನುಸರಣೆಯು ನಿಯಮಬದ್ಧವಾಗಿರುವದಿಲ್ಲ ಕಂಡಿಕೆವಾರು ವಿವರಗಳು ಅನುಸರಣೆಯಲ್ಲಿಲ್ಲ. ~~ಅದಕಾರಣ ₹.53,09,30,204/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.~~

63) ವಿತಾವಿವಿಯ ಬೆಳಗಾವಿಯಲ್ಲಿ ನಿರ್ವಹಿಸಿದ 2014-15ನೇ ಸಾಲಿನ ಬ್ಯಾಂಕಗ್ಯಾರಂಟಿ ರಜಿಸ್ಟರ್ ಕುರಿತು.

ವಿತಾವಿವಿ ಬೆಳಗಾವಿಯಲ್ಲಿ ಮತ್ತು ಅದರ ಅಧೀನ ಕೇಂದ್ರ/ಕಾಲೇಜು ಇತ್ಯಾದಿಗಳಲ್ಲಿ ನಿರ್ವಹಿಸುತ್ತಿರುವ/ಅನುಷ್ಠಾನಗೊಳಿಸುತ್ತಿರುವ ಗುತ್ತಿಗೆ ಕಾಮಗಾರಿಗಳ ಕುರಿತಾದ ಭದ್ರತಾ ಠೇವಣಿ/ನೀಡಲಾಗುವ ಮುಂಗಡಳಿಗೆ ಭದ್ರತೆ ಕುರಿತು ನೀಡಲಾಗಿರುವ ಬ್ಯಾಂಕ ಭರವಸೆ ಪತ್ರ (ಬ್ಯಾಂಕ್ ಗ್ಯಾರಂಟಿಸ್)ಗಳ ಕುರಿತು ಬ್ಯಾಂಕ ಗ್ಯಾರಂಟಿ ರಜಿಸ್ಟರ್ ನಿರ್ವಹಿಸಲಾಗಿದೆ. ಸದರ ರಜಿಸ್ಟರನ್ನು ಪರಿಶೀಲಿಸಲಾಗಿ ಈ ಕೆಳಗಿನ ನ್ಯೂನತೆಗಳು ಕಂಡುಬರುತ್ತವೆ.

1) ಸದರ ಅವಧಿಯಲ್ಲಿ ಚಾಲ್ತಿಯಲ್ಲಿರುವ/ಹೊಸದಾಗಿ ಪಡೆದಿರುವ ಬ್ಯಾಂಕ ಗ್ಯಾರಂಟಿ ಪತ್ರಗಳನ್ನು ಚಾಲ್ತಿಯಲ್ಲಿರುವಾಗಲೇ ಸಾಕಷ್ಟು ಮುಂಚಿತವಾಗಿ ನವೀಕರಿಸಿಕೊಳ್ಳುವ ಕುರಿತು ಕ್ರಮ ಕೈಕೊಳ್ಳುವುದು ಅವಶ್ಯ. ಆದರೆ ಕೆಲವು ಬ್ಯಾಂಕ ಗ್ಯಾರಂಟಿಗಳು ಅವಧಿ ಮುಗಿದಾಗ್ಯೂ ನವೀಕರಣಗೊಳ್ಳದೇ ಇರುವ ಬ್ಯಾಂಕ ಗ್ಯಾರಂಟಿಗಳ ವಿವರ ಸದರ ರಜಿಸ್ಟರಿನಲ್ಲಿ ಉಳಿದಿರುವದನ್ನು ಗಮನಿಸಲಾಗಿದೆ. ಅಂತಹ ಲ್ಯಾಪ್ಸ್ ಆದತಂಹ ಬ್ಯಾಂಕ ಗ್ಯಾರಂಟಿಗಳ ವಿವರಗಳನ್ನು ಈ ವಿಚಾರಣಾ ಪತ್ರಕ್ಕೆ ಲಗತ್ತಿಸಿದ ಅನುಬಂಧದಲ್ಲಿ ವಿವರಿಸಲಾಗಿದೆ.

ಕಾರಣ ಇಂತಹ ಅವಧಿ ಮೀರಿದ ಬ್ಯಾಂಕ ಗ್ಯಾರಂಟಿಗಳನ್ನು ಸಕಾಲದಲ್ಲಿ ನವೀಕರಿಸದೇ ಇರುವುದರಿಂದ ಇಂತಹ ಎಲ್ಲ ಬ್ಯಾಂಕ ಗ್ಯಾರಂಟಿಗಳು ಅಸ್ತಿತ್ವದಲ್ಲಿ ಉಳಿದಿವೆ ಎಂಬುದನ್ನು ದೃಢೀಕರಿಸಲು ಸಾಧ್ಯವಾಗುವುದಿಲ್ಲ. ಹೀಗಾಗಿ ಇಂತಹ ನಿಯಮಬಾಹಿರ ಕ್ರಮಗಳಿಂದ ವಿಶಾವಿವಿಗೆ ಉಂಟಾದ ಹಾನಿಯ ಬಗ್ಗೆ ಯಾವ ಕ್ರಮ ಕೈಕೊಳ್ಳಲಾಗಿದೆ ಎಂಬ ಬಗ್ಗೆ ಸೂಕ್ತ ಅನುಸರಣೆ ನೀಡಲು ಕೋರಿದೆ. ಈಗ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಇಂತಹ ಅವಧಿ ಮೀರಿದ ಬ್ಯಾಂಕ ಗ್ಯಾರಂಟಿಗಳ ಒಟ್ಟು ಮೊತ್ತ ₹.33441785/-ಗಳಾಗಿರುತ್ತವೆ.

2) ಇನ್ನು ಸದರ ಬ್ಯಾಂಕಗ್ಯಾರಂಟಿಗಳಲ್ಲಿ ಬಹುತೇಕ ಬ್ಯಾಂಕಗ್ಯಾರಂಟಿಗಳಿಗೆ ಸಂಬಂಧಿತ ಬ್ಯಾಂಕ ಪ್ರಾಧಿಕಾರ(ಬ್ಯಾಂಕ ಗ್ಯಾರಂಟಿ ನೀಡುವ ಪ್ರಾಧಿಕಾರ) ದಿಂದ ಇಂತಹ ಬ್ಯಾಂಕಗ್ಯಾರಂಟಿಗಳು ಸಂಬಂಧಿತ ಬ್ಯಾಂಕನಿಂದಲೇ ನೀಡಲ್ಪಟ್ಟಿವೆ ಎಂಬ ಬಗ್ಗೆ ಸ್ಥಿರೀಕರಣ ಪತ್ರ(Confirmation Letter)ವನ್ನು ಪಡೆದಿರುವದಿಲ್ಲ.

ಉದಾಹರಣೆ:- ಈಕೆಳಗಿನ ಬ್ಯಾಂಕಗ್ಯಾರಂಟಿಗಳನ್ನು ವಿವರಿಸಲಾಗಿದೆ.

ಕ್ರಸಂ	ಬಿಜಿ ರಜಿಸ್ಟರ್ ಕ್ರಸಂ	ಗುತ್ತಿಗೆದಾರರ ಹೆಸರು	ಕಾಮಗಾರಿಗಳ ಹೆಸರು	ಬಿಜಿ ನೀಡಿದ ಬ್ಯಾಂಕಿನ ಹೆಸರು	ಬಿಜಿ ಸಂಖ್ಯೆ ಮತ್ತು ದಿನಾಂಕ	ಬಿಜಿ ಮೊತ್ತ	ಬಿಜಿಯ ವ್ಯಾಲಿಡಿಟಿ ಮುಗಿಯುವ ದಿನಾಂಕ
1	12	m/s BSR Infotech india ltd Bangalore.	Constn of phase –II Bidg atr VIAT mudhebihal Dist: chikkabllapur	Corporation bank Bangalore.	BG No PB G/2013 23-9-13	62020000	29-9-2016
2	15	m/s DJPR Constn PVT LTD Hyderabad.	Constn of Auditorium Building at UBDT	State bank india patamata Vijayawada	BG 000 0057814BG 0000004 13-1-14	16346000	17-2-2017
3	13(ಎ)	Star Builders & Developers Bangalore.	Cosntn of phase –II Building at VAIT Regional centre mysore.	HDFC Bank Bangalore.	BG No 0213274005 1-10-13	41627000	15-5-2017
					Total	119993000	

ಕಾರಣ ಬ್ಯಾಂಕ ಗ್ಯಾರಂಟಿಯನ್ನು ಪಡೆದ ತಕ್ಷಣ ಗುಪ್ತವಾಗಿ(Confidentially) ಸದರ ಬ್ಯಾಂಕಗ್ಯಾರಂಟಿಯನ್ನು ಸಂಬಂಧಿತ ಬ್ಯಾಂಕನಿಂದ ನೀಡಿದ್ದರ ಬಗ್ಗೆ ಮತ್ತು ಬ್ಯಾಂಕಗ್ಯಾರಂಟಿ ಎಲ್ಲ ವಿವರಗಳು ಬ್ಯಾಂಕನಲ್ಲಿರುವ ದಸ್ತಾವೇಜನೊಂದಿಗೆ ತಾಳೆ ಆಗುತ್ತದೆಯೇ ಎಂಬ ಬಗ್ಗೆ ಸ್ಥಿರೀಕರಣ ಪತ್ರವನ್ನು ಪಡೆಯುವ ಕುರಿತು ಯಾವ ಕ್ರಮ ಕೈಕೊಳ್ಳಲಾಗಿದೆ ಎಂಬ ಬಗ್ಗೆ ಸೂಕ್ತ ಅನುಸರಣೆ ನೀಡಲು ಕೋರಿದೆ.

3) ಇನ್ನು ಅನುಬಂಧದಲ್ಲಿರುವ ಗುತ್ತಿಗೆದಾರರ ಪೈಕಿ ಕ್ರ.ಸಂ1ರಲ್ಲಿರುವ ಮೆ॥ರಾಮಣಿ ಇನ್ ಫ್ರಾಸ್ಟ್ರಕ್ಚರ್ ಗ್ಯಾರಂಟಿ ಲಿ ಹೈದಾರಾದಾರ ಇವರ ಮತ್ತು ಮೆ॥ಸ್ಟಾರ ಬಿಲ್ಡರ್ಸ್ ಮತ್ತು ಡೆವಲಪರ್ಸ್ ಇವರಿಂದ ನೀಡಲ್ಪಟ್ಟ ಬ್ಯಾಂಕಗ್ಯಾರಂಟಿಗಳನ್ನು ಗಮನಿಸಲಾಗಿ, ನೀಡಲ್ಪಟ್ಟ ಬ್ಯಾಂಕಗ್ಯಾರಂಟಿ ರಾಷ್ಟ್ರೀಕೃತ ಬ್ಯಾಂಕಗಳಾಗಿರದೇ ಇತರೆ ಬ್ಯಾಂಕಗಳಾಗಿರುವದರಿಂದ (Public Sector Bank) ಯಾವ ಆಧಾರದ ಮೇಲೆ ಇಂತ ದೊಡ್ಡ ಮೊತ್ತದ ಬ್ಯಾಂಕ ಗ್ಯಾರಂಟಿಗಳನ್ನು ಇತರೆ ಬ್ಯಾಂಕುಗಳಿಂದ ಪಡೆದ ಅಂಗೀಕರಿಸಿದೆ ಎಂಬ ಬಗ್ಗೆ ಲೆಕ್ಕ ಪರಿಶೋಧನೆಗೆ ಅನುಸರಣೆ ನೀಡಲು ಕೋರಿದೆ. ಈ ಇಂಥ ಬ್ಯಾಂಕ ಗ್ಯಾರಂಟಿಗಳ ವಿವರ ಈ ಕೆಳಗಿನಂತಿದೆ.

ಅ ನಂ	ವಿವರ	ವಿವರ	ಬ್ಯಾಂಕ ವಿವರ	ಖಾತೆವಿವರ ದಿನಾಂಕ	ಮೊತ್ತ	ದಿನಾಂಕ
1	ಮೆ॥ರಾಮಣಿ ಇನ್‌ಫ್ರಾಸ್ಟ್ರಕ್ಚರ್ ಲಿ ಹೈದರಾಬಾದ	1.Dev of VTU regional centre gulbarga	Axis Bank LTD Hyderabad	BG 0080100002453 13-3-2010	2214000	31-3-2011
		2.for phase-II works at VTU Belagavi.	ING vyasya Bank	BG-700LG0670/08 31-3-2010	3000000	31-3-2011
		3. --do-	--do--	BG-700LG0761/05 31-3-2010	1586000	31-3-2011
		4. --do	--do--	BG-700LG0718/08 1-7-2010	1500000	31-3-2011
				Total	8300000	
2	ಮೆ॥ಸ್ಟಾರ್ ಬಿಲ್ಡರ್ಸ್ ಮತ್ತು ಡೆವಲಪರ್ಸ್ ಬೆಂಗಳೂರು	1.Constn of phase-II Building & Dev works at VTU Regional centre Myasore.	HDFC Bank Bangalore	BG-009GT0213274005 1-10-2013	41627000	11-5-2017
		2.---do--	--do---	BG-009GT01132900023 17-10-2013	2000000	15-11-2015
		3.---do--	--do--	BG-009GT01132900006 17-11-2013	2000000	31-12-2015
		4. ---do-	--do--	BG-009GT01132900010 17-10-2013	2000000	31-12-2015
		5.---do-	--do---	BG-009GT01132900014 17-10-2013	2000000	31-3-2016
				Total	49627000	

ಕಾರಣ ಮೇಲಿನ ಅಂಶಗಳನ್ನು ಅನುಲಕ್ಷಿಸಿ, ಬ್ಯಾಂಕಗ್ಯಾರಂಟಿಗಳ ದಾಖಲೆಗಳ ನಿರ್ವಹಣೆ ಮತ್ತು ಬ್ಯಾಂಕಗ್ಯಾರಂಟಿಗಳ ನಿರ್ವಹಣೆ ಕುರಿತ ಕ್ರಮಗಳ ಬಗ್ಗೆ/ನ್ಯೂನತೆಗಳ ಬಗ್ಗೆ ಸೂಕ್ತ ಅನುಸರಣೆ ನೀಡಲು ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ : 25 ದಿನಾಂಕ: 12-01-2016 ರಲ್ಲಿ ಕೋರಲಾಗಿತ್ತು. ಆದರೆ ಸೂಕ್ತ ಅನುಸರಣೆಯನ್ನು ನೀಡಿರುವುದಿಲ್ಲ. ಆದ್ದರಿಂದ ₹.33441785/-, ₹.119993000/- ಮತ್ತು ₹.~~16300000/-~~ 579927000/- ~~ಅಂದರೆ ಒಟ್ಟು ರೂ. 16,97,34,785/- ಆಕ್ಷೇಪಣೆಯಲ್ಲಿ ಇರಿಸಲಾಗಿದೆ.~~ [illegible]

64) ಮೆ||ಸ್ಟಾರ ಬಿಲ್ಡರ್ಸ & ಡೆವ್ಹಲಪರ್ಸ ಬೆಂಗಳೂರು ಹಾಗೂ ಮೆ||ಬಿ.ಎಸ್.ಆರ್ ಇನ್‌ಫ್ರಾಟೆಕ್ ಇಂಡಿಯಾ ಲಿ. ಬೆಂಗಳೂರು ಇವರಿಗೆ ಮೊಬಲೈಜೆಶನ್ ಮುಂಗಡ ನೀಡಿದ ಬಗ್ಗೆ.

1. ವಿಟಿಯು ಚೆಕ್ನಂ: 0751453 ದಿ:28-10-2013 ರೂ.39200000/- 2. ವಿಟಿಯು ಚೆಕ್ ಸಂ: 071401 ದಿ:23-10-2013 ರೂ.60760000/-ಳನ್ವಯ ಈ ಕೆಳಗೆ ವಿವರಿಸಿದಂತೆ ಮೊಬಲೈಜೆಶನ್ ಮುಂಗಡಗಳನ್ನು ನೀಡಲಾಗಿದೆ. ವಿವರ ಈ ಕೆಳಗಿನಂತಿದೆ.

ಅನಂ	ವಿವರ	ಮುಂಗಡದ ಮೊತ್ತ	ಮುಂಗಡ ನೀಡಿದ ದಿನಾಂಕ
1	ಮೆ//ಸ್ಟಾರ ಬಿಲ್ಡರ್ಸ & ಡೆವ್ಹಲಪರ್ಸ ಬೆಂಗಳೂರು	₹.4,00,00,000/-	28-10-2013
2	ಮೆ//ಬಿ.ಎಸ್.ಆರ್ ಇನ್‌ಫ್ರಾಟೆಕ್ ಇಂಡಿಯಾ ಲಿ. ಬೆಂಗಳೂರು	₹.6,20,00,000/-	23-10-2013

ಸದರ ಮುಂಗಡಗಳನ್ನು ಮಂಜೂರು ಮಾಡಿದ ಬಗ್ಗೆ & ಈ ದೊಡ್ಡ ಮೊತ್ತದ ಮುಂಗಡಗಳನ್ನು ಮಂಜೂರು ಮಾಡಲು ವಿ.ತಾ.ವಿವಿಯ ಆರ್ಥಿಕ ಸಮಿತಿ & Exucutive Council ಗಳಿಂದ ಅನುಮೋದನೆ ಮಾಡಿದ ಸಭಾ ನಡುವಳಿಕೆಗಳು ದಾಖಲೆಗಳನ್ನು & ಸದರ ಅನುಮೊದನೆ ಆಧಾರದ ಮೇಲೆ ಸಂಬಂಧಿತ ಸಂಸ್ಥೆಗೆ ಮೊಬಲೈಜೆಶನ್ ಮುಂಗಡ ಮಂಜೂರಿ ಆದೇಶ ನೀಡಿದ ವಿವರಗಳು ಲೆಕ್ಕಪರಿಶೋಧನೆಯ ಪರಿಶೀಲನೆಗೆ ಲಭ್ಯವಾಗಿರುವುದಿಲ್ಲ.

ಕಾರಣ ಸದರ ವಿವರಗಳಿದ್ದಲ್ಲಿ ಲೆಕ್ಕಪರಿಶೋಧನೆಗೆ ಒದಗಿಸುದು ಈ ಮೂಲಭೂತ ದಾಖಲೆ ಇಲ್ಲದೇ ಮೊಬಲೈಜೇಶನ್ ಮುಂಗಡ ನೀಡಿದ್ದು ಆಕ್ಷೇಪಾರ್ಹ ಎನಿಸುತ್ತದೆ. ಅದೂ ಅಲ್ಲದೇ ಸದರ ಮುಂಗಡವನ್ನು ಯಾವ ಉದ್ದೇಶಕ್ಕಾಗಿ ನೀಡಲಾಗಿದೆ ಯಾವ ಯಾವ ಯಂತ್ರಗಳು ಉಪಕರಣಗಳು ಈ ಕಾಮಗಾರಿ ನಿರ್ಮಾಣಕ್ಕಾಗಿ ಅವಶ್ಯವಿದ್ದವು? ಅವುಗಳನ್ನು ಖರೀದಿಸಿದ ಕುರಿತು ಗುತ್ತಿಗೆದಾರರು ಇನ್‌ವಾಯ್ಸ ನೀಡಿದ್ದಾರೆಯೇ? ಎಂಬ ವಿವರಗಳನ್ನು ಪರಿಶೀಲಿಸದೇ & ಆರ್ಥಿಕ ಶಾಖೆಯಿಂದ ಈ ಮುಂಗಡಗಳನ್ನು ನೀಡವದು ಸಮರ್ಪಕವಲ್ಲ ಎಂಬುದಾಗಿ ತಿಳಿಸಿದಾಗ್ಯೂ ಅನಿಯಮಿತವಾಗಿ ಈ ದೊಡ್ಡ ಮೊತ್ತಗಳನ್ನು ನೀಡಲು ಸಂಬಂಧಿತ ಯಂತ್ರೋಪಕರಣಗಳ ಇನ್‌ವಾಯ್ಸ ದಾಖಲೆಗಳನ್ನು ಗುತ್ತಿಗೆದಾರರಿಂದ ಹಾಜರು ಪಡಿಸಿದ್ಯಾಗ್ಯೋ ಮುಂಗಡವನ್ನು ಪಾವತಿಸಿದ್ದಕ್ಕೆ ಸಮರ್ಥಕ, ಸಮರ್ಪಕ ಕಾರಣಗಳನ್ನು ಪರಿಶೀಲನೆಗೆ ಒದಗಿಸಲು ಕೋರಿದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :32 ದಿನಾಂಕ: 20-01-2016 ರಂದು ನೀಡಲಾಗಿತ್ತು. ವಿವಿಯಿಂದ ಈ ಮುಂಗಡದ ಕುರಿತು ನೀಡಿದ ಅನುಸರಣೆಯಲ್ಲಿ ಮುಂಗಡದ ಮೊತ್ತಕ್ಕೆ ಎದುರಾಗಿ ಗುತ್ತಿಗೆದಾರರು ಇನ್‌ವೈಸ್‌ಗಳ ವಿವರಗಳನ್ನು ಲೆಕ್ಕಪರಿಶೋಧನಕ್ಕೆ ಹಾಜರುಪಡಿಸಿದ್ದರಿಂದ ಅನುಸರಣೆಯು ಸಮರ್ಪಕವೆನಿಸುವುದಿಲ್ಲ. ಈ ಬಗೆಗಿನ ಸಮರ್ಪಕ ಅನುಸರಣೆಯನ್ನು ನೀಡುವವರೆಗೆ ₹.4,00,00,000/- & ₹.6,20,00,000/- ಗಳನ್ನು ಅಂದರೆ ಒಟ್ಟು ರೂ. 10,20,00,000/- ಆಕ್ಷೇಪಣೆಯಲ್ಲಿರಿಸಲಾಗಿದೆ.

65) M/s. DJPR Constructions Pvt. Ltd. ಇವರಿಗೆ ₹. 1,60,00,000/-ಗಳ ಮೊಬಲೈಜೇಶನ್ ಮುಂಗಡ ನೀಡಿದ್ದರ ಬಗ್ಗೆ.

ವಿ.ತಾ.ವಿವಿ ಬೆಳಗಾವಿಯಲ್ಲಿ ಚೆಕ್ ನಂ.219271/7-4-2014 ರನ್ವಯ ಮೆ//DJPR Construction Pvt. Ltd. ಇವರಿಗೆ. ಕಾಮಗಾರಿ ಕುರಿತಾಗಿ ₹.1,60,00,000/-ಗಳ ಮೊಬೈಲೇಶನ್ ಮುಂಗಡವನ್ನು ನೀಡಲಾಗಿದೆ.ದಿನಾಂಕ:04-04-2016 ರೂ.53.00ಲಕ್ಷ ಸದರ ಮುಂಗಡದ ವಿವರವನ್ನು ಮುಂಗಡ ರಜಿಸ್ಟರಿನಲ್ಲಿ ಸಮರ್ಪಕವಾಗಿ ನಮೂದಿಸಿರುವುದಿಲ್ಲ.

ಸದರ ಮುಂಗಡ ನೀಡಿರುವ ಕುರಿತು ನಿರ್ವಹಿಸಿರಬೇಕಾದ ಮೊಬೈಲೇಶನ್ ಮುಂಗಡ ಮಂಜೂರಾತಿ ಆದೇಶ (ವಿ.ವಿಯ Exucutive Council ಠರಾವು ನಡುವಳಿಯೊಂದಿಗೆ), ಸಂಬಂಧಿತ ಗುತ್ತೇದಾರ ಸಂಸ್ಥೆ ಈ ಬಗ್ಗೆ ನೀಡಬೇಕಾದ ಮುಚ್ಚಳಿಕೆ ಪತ್ರ, (ಸಮರ್ಪಕ ಮೊತ್ತದ ಮುದ್ರಾಂಕ ಶುಲ್ಕದ ಪತ್ರದಲ್ಲಿ) ಸದರ ಮುಂಗಡದ ಕುರಿತು ವಿಧಿಸಿದ ವಿಧಿಗಳು & ಷರತ್ತುಗಳು (Terms & Conditions) ಇತ್ಯಾದಿ ಅಗತ್ಯ ದಾಖಲೆಗಳನ್ನು ಲೆಕ್ಕಪರಿಶೋಧನೆಯ ಪರಿಶೀಲನೆಗೆ ಒದಗಿಸಿರುವುದಿಲ್ಲ. ಕಾರಣ ಸದರ ದಾಖಲೆಗಳನ್ನು ನಿರ್ವಹಿಸಿದಲ್ಲಿ ಪರಿಶೀಲನೆಗೆ ಒದಗಿಸಲು ಸೂಚಿಸಿದೆ.

ಸದರ ಮೊಬಲೈಜೇಶನ್ ಮುಂಗಡವನ್ನು ನೀಡಿದ್ದರ ಉದ್ದೇಶವನ್ನು ವೋಚರಿನಲ್ಲಿ ಅಥವಾ ಟಿಪ್ಪಣಿಯಲ್ಲಿ ಅಥವಾ ಸಂಬಂಧಿತ ಸಂಸ್ಥೆಯಿಂದ ಪತ್ರ ಪಡೆದಿದ್ದಲ್ಲಿ ದಾಖಲಿಸಿದ ವಿವರಗಳೂ ಸಹ ಲಭ್ಯವಾಗಲಿಲ್ಲ.

ಆದರೆ ಮೊಬಲೈಜೇಶನ್ ಮುಂಗಡದ ಕುರಿತು ಲಗತ್ತಿಸಿದ ಕೆಲವು ದಾಖಲೆಗಳನ್ನು ಪರಿಶಿಲಿಸಲಾಗಿ ಈ ವಿಚಾರಣಾ ಪತ್ರಕ್ಕೆ ಲಗತ್ತಿಸಿದ ಅನುಬಂಧದಲ್ಲಿ ವಿವರಿಸಿದಂತೆ ಕೆಲವು ಮಿಕ್ಸರಗಳನ್ನು, ಈ ವಿವಿಧ ಗಾತ್ರದ ಉಕ್ಕು/ ಕಬ್ಬಿಣವನ್ನು ಖರೀದಿಸಲು ಈ ಮುಂಗಡ ಪಡೆಯಲಾಗಿದೆ ಎಂದು ವಿವರಿಸಲಾಗಿದೆ (ಅನುಬಂಧ ಐಟಂ ನಂ. 2ರಿಂದ5) ಈ ಬಗ್ಗೆ ಪರಿಶೀಲಿಸಲಾಗಿ, ಈ ಕೆಳಗಿನ ನ್ಯೂನತೆಗಳನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

1) ಖರೀದಿಸಿದೆ ಎಂದು ತಿಳಿಸಿದ ಯಂತ್ರೋಪಕರಣಗಳನ್ನು (Mixeres etc.) ವಿ.ತಾ.ವಿ.ವಿಗೆ ಅಡಮಾನವಿರಿಸಿದ ಬಗ್ಗೆ ದಾಖಲೆಗಳು ಪರಿಶೀಲನೆಗೆ ಹಾಜರುಪಡಿಸಲಿಲ್ಲ ಇದ್ದಲ್ಲಿ ಹಾಜರುಪಡಿಸುವದು.

2) ಯಂತ್ರೋಪಕರಣಗಳನ್ನು ಮಂಜೂರಾದ ಪೂರ್ಣಮೊತ್ತಕ್ಕೆ ಖರೀದಿಸಿದೇ ಅದರಲ್ಲಿ ₹.65,13,220/-ಗಳ ಕಬ್ಬಿಣ/ಉಕ್ಕನ್ನು ಖರೀದಿಸಿದ್ದು ಉದ್ದೇಶಿತ ಕಾರಣಗಳನ್ನು ಬಿಟ್ಟು ಸಾಮಗ್ರಿ ಖರೀದಿಸಿದ್ದು ಮುಂಗಡದ ಉದ್ದೇಶವನ್ನು

ವಿಫಲಗೊಳಿಸಿದಂತಾಗಿದೆ. ಅಂದರೆ ಈ ಮುಂಗಡ ಪಡೆಯುವ ಬದಲಾಗಿ Secured Advನ್ನು ಪಡೆಯಬಹುದಾಗಿತ್ತು.

ಇನ್ನು ಈ ಪ್ರಮಾಣದ ಕಬ್ಬಿಣದ ಖರೀದಿಗಾಗಿ ನಿವಾಸಿ ಅಭಿಯಂತರಿಂದ ಈ ಪ್ರಮಾಣದ ಕಬ್ಬಿಣದ ಅಳತೆಗಳನ್ನು ಅಳತೆ ಪುಸ್ತಕದಲ್ಲಿ ನಮೂದಿಸಿದ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವದು ಅವಶ್ಯ.

3) ಇದಲ್ಲದೇ ಈ ಸಾಮಗ್ರಿಗಳನ್ನು ಸಂಬಂಧಿತ ಕಾಮಗಾರಿಗಾಗಿ ಮಾತ್ರ ವಿನಿಯೋಗಿಸಲಾಗುವುದೆಂದು, ಈ ಸಾಮಗ್ರಿಗಳು ಕಾಮಗಾರಿಗೆ ವಿನಿಯೋಗವಾಗುವವರೆಗೆ. ಸಂರಕ್ಷಿಸುವ & ಕಾಮಗಾರಿಗಾಗಿ ಉಪಯೋಗಿಸುವ ಜವಾಬ್ದಾರಿ ಗುತ್ತೇದಾರ ಸಂಸ್ಥೆಯದೆಂದು & ಈ ವಿವರಗಳನ್ನು ಸಂಬಂಧಿತ ಗುತ್ತೇದಾರ ಸಂಸ್ಥೆ ಮುದ್ರಾಂಕ ಶುಲ್ಕದ ಮುಚ್ಚಳಿಕೆ ಪತ್ರದಲ್ಲಿ ಘೋಷಿಸಿದ್ದಕ್ಕೆ ದಾಖಲೆಗಳನ್ನು, ವಿವರಗಳನ್ನು ಲೆಕ್ಕಪರಿಶೋಧನೆಗೆ ನೀಡುವದು ಅವಶ್ಯ.

4) ಇನ್ನು ಈ ಮುಂಗಡದ ಮೊತ್ತಕ್ಕೆ ಸಮವಾಗುವಂತೆ ಗುತ್ತೇದಾರ ಸಂಸ್ಥೆ ನೀಡಿದ ಭದ್ರತೆಯ ಕುರಿತು ಸೂಕ್ತ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಸೂಚಿಸಿದೆ.

ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :33 ದಿನಾಂಕ: 20-01-2016 ರಂದು ನೀಡಲಾಗಿತ್ತು. ಈ ಕುರಿತು ವಿವಿಯಿಂದ ನೀಡಿದ ಅನುಸರಣೆಯು ಕಂಡಿಕೆ ಅಂಶಗಳಿಗೆ ಅನುಗುಣವಾಗಿರುವದಿಲ್ಲ. ಮತ್ತು ಸಮರ್ಪಕವಾಗಿರುವದಿಲ್ಲ.

ಆದ್ದರಿಂದ ಸದರ ಮುಂಗಡದ ಮೊತ್ತ ₹.1,60,00,000/-ಗಳನ್ನು ಆಕ್ಷೇಪಣೆಯಲ್ಲಿರಿಸಲಾಗಿದೆ.

66) ವಿ.ತಾ.ವಿ.ಯ ಕಾಮಗಾರಿಯ ಮೂಲಗುತ್ತಿಗೆದಾರರ ಹೆಸರಿನಲ್ಲಿ ಎಸ್.ಡಿ. (ಸುರಕ್ಷಾ ಠೇವಣಿ) ಇರಿಸದೇ ಜಿ.ಪಿ.ಎ. ಹೊಂದಿದ ಗುತ್ತಿಗೆದಾರರ ಹೆಸರಿನಲ್ಲಿ ಇರಿಸಿದ ಬಗ್ಗೆ.

ವಿ.ತಾ.ವಿ.ವಿಯಲ್ಲಿ ಮೆ//Birla Aircon Infrastruct Pvt Ltd. ಮುಂಬಯಿ ಹೆಸರಿನಲ್ಲಿ ಅನುಮೋದಿತ ಕಾಮಗಾರಿಯಾದ Construction of South and Block of Adminstrative Building@VTU Jnan Sangam Belagavi ನ್ನು ಶ್ರೀ ಎಸ್.ಡಿ.ಗುರವ ಗುತ್ತೇದಾರರಿಗೆ General Power Attorney ಮೂಲಕ ಅಧಿಕಾರ ಹಸ್ತಾಂತರಿಸಿದ್ದು.ಸದರ ಗುತ್ತಿಗೆಯ ಹೆಚ್ಚುವರಿ ಸುರಕ್ಷಾ ಠೇವಣಿಯ ಮೊತ್ತವನ್ನು ಸದರ ಕಾಮಗಾರಿಯ II ನೇ RA ಬಿಲ್ಲಿನಲ್ಲಿ ಕಟಾಯಿಸಿದ್ದನ್ನು ಶ್ರೀ.ಎಸ್.ಡಿ.ಗುರವ ಗುತ್ತೇದಾರರಿಗೆ ಮರುಪಾವತಿಸಲು (ಅವರಿಂದ FDR ಪಡೆದು) ಕ್ರಮ ಕೈಕೊಳ್ಳಲಾಗಿದೆ. ಇ-ಮೊತ್ತವನ್ನು ಚೆಕ್ ನಂ.219520/30-4-2014 ₹.8,68,159/-ರ ಮೂಲಕ ಪಾವತಿಸಲಾಗಿದೆ.

ಈ ಬಗ್ಗೆ ಪರಿಶೀಲಿಸಲಾಗಿ, ಕಾಮಗಾರಿಯ ಒಪ್ಪಂದ ಪತ್ರದಡಿಯ ಷರತ್ತು 7(ಕೆ.ಡಬ್ಲೂ4)ಗಳನ್ನು ಪರಿಶೀಲಿಸಿದಾಗ ಈ ಗುತ್ತಿಗೆಯ ಕೆಲಸವನ್ನು ಬೇರೆಯವರಿಗೆ Sub Let (ಮರು ಗುತ್ತಿಗೆ) ಮಾಡುವಂತಿಲ್ಲವೆಂದೂ,& ಗುತ್ತಿಗೆಯ ಕುರಿತಾದ ಎಲ್ಲ ಬಾಧ್ಯತೆಯು ಕಾಮಗಾರಿಯ ಗುತ್ತೇದಾರರಲ್ಲಿ ಆಗಿರುತ್ತದೆ ಎಂಬುದಾಗಿದೆ. ಇದರಿಂದಾಗಿ ಶ್ರೀ ಎಸ್.ಡಿ.ಗುರವ ಗುತ್ತೇದಾರರಿಗೆ ಮರುಗುತ್ತಿಗೆ ನೀಡಿದ್ದು ಆಕ್ಷೇಪಾರ್ಹವಾಗಿದ್ದು, ಇ ಬಗ್ಗೆ

ಈಗಾಗಲೇ ವಿಚಾರಣಾ ಪತ್ರದಡಿ ವಿವರಿಸಿದೆ. ಹಾಗೆಯೇ ಮೂಲ ಗುತ್ತೇದಾರ ಹೆಸರಿನಲ್ಲಿ ಸುರಕ್ಷತಾ ಠೇವಣಿ ಇರಿಸಬೇಕಾದ್ದು ನಿಯಮಬದ್ಧ ಯಾಕೆಂದರೆ ಕಾಮಗಾರಿ ಪೂರ್ಣವಾಗುವವರೆಗೆ & Maintainance Period ಮುಗಿಯುವವರೆಗೆ ಸುರಕ್ಷತಾ ಠೇವಣಿ ಮೊತ್ತ ಗುತ್ತೇದಾರರ ಹೆಸರಿನಲ್ಲಿ ಇದ್ದಲ್ಲಿ ಮೊತ್ತ ಅವರ ಬಾಧ್ಯತೆಗೆ ಆಸ್ಪದವಿರುತ್ತದೆ ಇಲ್ಲದಿದ್ದಲ್ಲಿ ಆ ಸುರಕ್ಷಾ ಠೇವಣೀಗೆ ನಿಯಮಗಳಲ್ಲಿ ಅರ್ಥವಿರುವದಿಲ್ಲ.

ಕಾರಣ ಈ ಬಗ್ಗೆ ಸುರಕ್ಷಾ ಠೇವಣಿಯ FDR ನ್ನು ಮೂಲ ಗುತ್ತಿಗೆದಾರರ (ಶ್ರೀ ಎಸ್.ಡಿ.ಗುರವ ಇವರ ಹೆಸರನ್ನು ತೆಗೆದು) ಹೆಸರಿನಲ್ಲಿ ವರ್ಗಾಯಿಸಬೇಕಾಗುದು ಅವಶ್ಯ, ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :41 ದಿನಾಂಕ: 23-01-2016 ರಂದು ನೀಡಿಧರೂ ಯಾವುದೇ ಅನುಸರಣೆಯನ್ನು ನೀಡಿರುವುದಿಲ್ಲ. ಆದ್ದರಿಂದ ₹.8,68,159/-ಗಳನ್ನು ಆಕ್ಷೇಪಣೆಯಲ್ಲಿರಿಸಲಾಗಿದೆ.

67) ವಿ.ತಾ.ವಿ ವಿ ಬೆಳಗಾವಿಯಿಂದ ನಿರ್ವಹಿಸಿದ "Train the Trainer" and "Capacity Building" ತರಬೇತಿ ಕುರಿತು.

ವಿ.ತಾ.ವಿ ವಿ ಬೆಳಗಾವಿಯಲ್ಲಿ 2014-15ನೇ ಸಾಲಿನಲ್ಲಿ, ITC ಸೆಕ್ಟರಿನ ಇಂಜನೀಯರಿಂಗ (Uder Graduate & Post Graduate) ಭೋಧಕ (Faculties) ಮತ್ತು ವಿದ್ಯಾರ್ಥಿಗಳಿಗೆ Talent Pool and Resource Base ಗಳ ಸೃಜನೆಗಾಗಿ Train the Trainer ಅಡಿ 50 ಜನ ಭೋಧಕರಿಗೆ ತರಬೇತಿ ನೀಡಲು ಮತ್ತು Capacity Building ಅಡಿಯಲ್ಲಿ 1715 ಇಂಜನಿಯರಿಂಗ್ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು Karnataka Bio-Technology and Information Technology Society Bengaluru ಸಂಸ್ಥೆಯಿಂದ ಪ್ರಾಯೋಜಿಸಿದ ಈ ಕಾರ್ಯಕ್ರಮ ನಿರ್ವಹಿಸಲು ವಿ.ತಾ.ವಿವಿಯು MOU **KBITS** ಸಂಸ್ಥೆಯೊಂದಿಗೆ ವಿಟಿಯು ಮಾಡಿಕೊಂಡ ಎಂ.ಓ.ಯು. ಕರಾರು ಪತ್ರ ಕರಾರು ಪತ್ರದಿ: 28-3-2014ರ ಪ್ರಕಾರ ಒಡಂಬಡಿಕೆ ಮಾಡಿಕೊಂಡಿರುತ್ತದೆ.

ಈ ತರಬೇತಿ ಕಾರ್ಯಕ್ರಮಕ್ಕೆ ಒಟ್ಟು ₹. 35.00 ಲಕ್ಷ + ಸರ್ವೀಸ್ ಟ್ಯಾಕ್ಸ್(12.36%)ಗಳನ್ನು ಬಿಡುಗಡೆ ಮಾಡಲು KBITS ಒಪ್ಪಿಕೊಂಡಿರುತ್ತಾರೆ. ಈ ಅನುದಾನವನ್ನು ಸರಕಾರವು KBITS ಲೆ,ಶೀ-3451-00-090-2-30-059 ಅಡಿಯಲ್ಲಿ ಬಿಡುಗಡೆ ಮಾಡುತ್ತದೆ.

ಆ ಪ್ರಕಾರ KBITS ಸಂಸ್ಥೆ ಈ ಕೆಳಗಿನಂತೆ ಅನುದಾನವನ್ನು ಬಿಡುಗಡೆ ಮಾಡಿರುತ್ತದೆ.

1) ಚೆಕ್ ನಂ. 557478 ದಿ-28/03/2014- ₹. 20,47,200/- (KBITS Lr No 28/03/2014)
2) ಚೆಕ್ ನಂ. 145224 ದಿ-22/12/2014- ₹. 13,24,320/- (KBITS Lr No 24/12/2014)
3) ಚೆಕ್ ನಂ. 145265 ದಿ-25/07/2015- ₹. 3,12,000/- (KBITS Lr N –KBITS/Do /Proposal /VTU / 2012-13 Date : 27/07/2015)

ಒಟ್ಟು ₹. 3693520/-

ಈ ತರಬೇತಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ವಿ.ತಾ.ವಿ.ವಿಯ Latitude Edutech Consulting Pvt.Ltd ವಸಂತನಗರ ಬೆಂಗಳೂರು ಇವರನ್ನು ತರಬೇತಿ ಪಾಲುದಾರರನ್ನಾಗಿ ಮಾಡಿಕೊಂಡಿರುತ್ತಾರೆ. ಈ ಕುರಿತು MOU (ಒಡಂಬಡಿಕೆ ಪತ್ರ) ಮಾಡಿಕೊಂಡ ಬಗ್ಗೆ MOUದ ಛಾಯಾಪ್ರತಿ ಇದ್ದು, ಅದರಲ್ಲಿ ಬಾಂಡ ಪೇಪರಿನಲ್ಲಿ ಈ MOU ಮಾಡಿಕೊಂಡ ಕುರಿತ ವಿವರಗಳಿಲ್ಲ. ಕಾರಣ ಮೂಲ ಒಡಂಬಡಿಕೆ ಪತ್ರವನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಸೂಚಿಸಿದಾಗ್ಯೂ ದಾಖಲೆ ಒದಗಿಸಲಿಲ್ಲ.

ಈ ಒಡಂಬಡಿಕೆ ಮಾಡಿಕೊಳ್ಳಲು KTPP ನಿಯಮಗಳನ್ನು ಅನುಸರಿಸಿ ಟೆಂಡರು ಕರೆಯುವದು ಅವಶ್ಯವಿದ್ದು, ಈ ಕುರಿತು (ಟೆಂಡರ್ ಮೂಲಕ ತರಬೇತಿ ಸಂಸ್ಥೆಯ ಆಯ್ಕೆಗೆ) ಕೈಕೊಂಡ ಕ್ರಮಕ್ಕೆ ಲೆಕ್ಕಪರಿಶೋಧನೆಗೆ ವಿವರಗಳನ್ನು ಒದಗಿಸುವದು ಒಂದುವೇಳೆ ಇಂಥ ಕ್ರಮ ಕೈಕೊಳ್ಳದಿದ್ದಲ್ಲಿ ಅದು KTPP ನಿಯಮಗಳ ಉಲ್ಲಂಘನೆಯಾಗುತ್ತದೆ.

ಇನ್ನು Latitude Edutech Bengaluru ನೊಂದಿಗೆ ಮಾಡಿಕೊಂಡ ಒಡಂಬಡಿಕೆಯಲ್ಲಿ ಸದರ ಸಂಸ್ಥೆಗೆ ನೀಡಬೇಕಾದ ಶುಲ್ಕದ ಬಗ್ಗೆ ಯಾವುದೇ ಪ್ರಮಾಣ ದರಗಳನ್ನು ದಾಖಲಿಸದೇ (ಅಂದರೆ ಪ್ರತಿ ತರಬೇತಿ ಬ್ಯಾಚನಲ್ಲಿಯ Faculty/Students ಗಳ ಸಂಖ್ಯೆ ನಿಗದಿಸಿದದರ, ಪೂರ್ಣಗೊಳಿಸಬೇಕಾದ ಅವಧಿ, ತೆರಿಗೆಗಳ ಕಟಾವಣೆ, ಇತ್ಯಾದಿ ವಿವರಗಳನ್ನು ದಾಖಲಿಸದೇ) ಕೇವಲ ವಿತಾವಿವಿಯಿಂದ, ಪರಸ್ಪರ ಒಪ್ಪ ಬಹುದಾದಂತ ಶುಲ್ಕಗಳನ್ನು ಲೆಕ್ಕಹಾಕಲಾಗುವದು ತಿಳಿಸಲಾಗಿದೆ ಇದರಿಂದಾಗಿ ಒಡಂಬಡಿಕೆಯಲ್ಲಿ ಒಟ್ಟು Latitude Edutech ಸಂಸ್ಥೆಗೆ ನೀಡಬೇಕಾದ ಮೊತ್ತದ ಬಗ್ಗೆ ವಿವರಗಳನ್ನು ದಾಖಲಿಸಲ್ಪಡಲಿಲ್ಲ.

ಇನ್ನು ಸದರ ತರಬೇತಿ ಪಾಲುದಾರ ಸಂಸ್ಥೆಗೆ ದಿ:31/05/2014 ರಂದು ರೂ. 18.00ಲಕ್ಷ+2.00ಲಕ್ಷ(TDS)=20ಲಕ್ಷ & ದಿ: 13/12/2015 ರಂದು ಮತ್ತು ₹.9.00ಲಕ್ಷ+1.00ಲಕ್ಷ(TDS) =10.00ಲಕ್ಷ ಗಳನ್ನು ಕ್ರಮವಾಗಿ ವೋಚರ ಸಂಖ್ಯೆ: 98703 & 753 & 5856ಗಳನ್ವಯ ಸಂದಾಯಮಾಡಿದ್ದಾಗಿ Ledger ನಲ್ಲಿ ದಾಖಲಿಸಲಾಗಿದೆ.

ಅಂದರೆ ಒಟ್ಟಾರೆ ₹.30.00ಲಕ್ಷಗಳನ್ನು ಸಂಬಂಧಿಸಿದ ಸಂಸ್ಥೆಗೆ ಪಾವತಿಸಿದಂತಾಗಿದೆ. ಆದರೆ ಇದು ಅಮಾನತ್ತಿನಲ್ಲಿ ಇರುವದರಿಂದ ಯಾವುದೇ ನಿಖರ ವೆಚ್ಚ ಎಂದು ಲೆಕ್ಕಪತ್ರಗಳಲ್ಲಿ ತೋರಿಸಿರುವುದಿಲ್ಲ. ಮುಂದುವರೆದು KBITS ನೊಂದಿಗೆ VTU ಮಾಡಿಕೊಂಡ MOU ಕಂಡಿಕೆ.18 ರನ್ವಯ KBITS ನಿಂದ ನೀಡುವ ಮೊತ್ತಕ್ಕೆ ಸರಿಸಮನಾದ ಮೊತ್ತದ ವಂತಿಗೆಯನ್ನು ಈ ತರಬೇತಿ ಕಾರ್ಯಕ್ರಮದಲ್ಲಿ VTUನಿಂದ ತೊಡಗಿಸಬೇಕೆಂದು ವಿಧಿಸಲಾಗಿದೆ. ಆದರೆ ಇದುವರೆಗೂ ಯಾವುದೇ ವಂತಿಗೆಯನ್ನು ವಿ.ತಾ.ವಿವಿಯಿಂದ ಒದಗಿಸಿರುವುದಿಲ್ಲ. ಈ ಬಗ್ಗೆ 2ನೇ ಮತ್ತು 3ನೇ ಕಂತಿನ ಅನುದಾನ ಬಿಡುಗಡೆ ಪತ್ರದಲ್ಲಿ ಈ ಬಗ್ಗೆ KBITS ನಿಂದ ತಿಳಿಸಲಾಗಿದೆ. ಆದಾಗ್ಯೂ ಇದುವರೆಗೂ ಯಾವುದೇ ವಂತಿಗೆ ಮೊತ್ತ ತೊಡಗಿಸಿರುವುದಿಲ್ಲ. ಅದೂ ಅಲ್ಲದೇ ದಿ: 9/04/2015 ರ KBITS & VTU ನಡುವಣ ಸಭೆಯಲ್ಲಿ, MOU ನಲ್ಲಿ ವಿಧಿಸಿದ ಷರತ್ತುಗಳನ್ನು ಪಾಲಿಸದಿರುವ ಬಗ್ಗೆ (ಅಂದರೆ ವಿ.ತಾ.ವಿವಿ ಪಾಲಿನ ವಂತಿಗೆ ನೀಡದಿರುವದು, ಪ್ರತ್ಯೇಕ ಬ್ಯಾಂಕ ಖಾತೆಯ ವಿವರಗಳನ್ನು KBITS ಗೆ ಒದಗಿಸದೇ ಇರುವದು,

ಕಾರ್ಯಕ್ರಮಕ್ಕೆ ವಿನಿಯೋಗಿಸಿದ ಮೊತ್ತದ ವಿವರಗಳನ್ನು ಒದಗಿಸದೇ ಇರುವದು), ಮತ್ತು MOU ಷರತ್ತುಗಳನ್ನು ಪಾಲಿಸದೇ ಇರುವದಕ್ಕೆ ತನ್ನ ತೀವ್ರ ಅಸಮಾಧಾನವನ್ನು ತೋರ್ಪಡಿಸಿದೆ. ಅದಲ್ಲದೇ ವ್ಹಿ.ಟಿ.ಯು ಕ್ಕೆ ಈ ಕೆಳಗಿನ ವಿವರಗಳನ್ನು ಒದಗಿಸಲು ಸೂಚಿಸಿದೆ.

1) NASSCOM – Certification ವಿವರ ಒದಗಿಸುವದು.
2) ತರಬೇತಿಯಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳ ಉತ್ತೀರ್ಣತಾ ಪ್ರತಿಶತ (Pass Percentage) ವನ್ನು NASSCOM ಮೂಲಕ ತಿಳಿಸುವದು.
3) ತರಬೇತಿಯಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳಲ್ಲಿನ ಸುಧಾರಣೆ. ವಿವರಗಳನ್ನು ಒದಗಿಸುವದು.
4) ಈ ತರಬೇತಿಯ ಪ್ರಭಾವ ವಿಶ್ಲೇಷಣೆ/ವಿಮರ್ಶೆ (Impact Analysis) ಒದಗಿಸುವದು.
5) ಇದುವರೆಗೂ KBITS ನಿಂದ ಬಿಡುಗಡೆಮಾಡಿದ ಅನುದಾನದಡಿ ವಿನಿಯೋಗಿಸಿದ ಮೊತ್ತಗಳ ಆರ್ಥಿಕ ಲೆಕ್ಕಪತ್ರಗಳ ಲೆಕ್ಕಪರಿಶೊಧಿತ ವರದಿಯನ್ನು ಒದಗಿಸುವದು.
6) ವ್ಹಿ.ಟಿ.ಯು ನಿಂದ ತೊಡಗಿಸಿದ ಸಮಾನ ಮೊತ್ತದ ವಂತಿಗೆ ಒದಗಿಸುವದು.

ಈ ನಿಬಂಧನೆಗಳಿಗೆ ಸಂವಾದಿಯಾಗಿ ವ್ಹಿ.ಟಿ.ಯು ನಿಂದ Latitude Edutech ಸಂಸ್ಥೆಗೆ ಕೇಳಿದ ವಿವರಗಳಿಗೆ ಪ್ರತಿಯಾಗಿ ಸದರ ಸಂಸ್ಥೆ ದಿ: 17/09/2015 ರ ಪ್ರಕಾರ 143 ಬೋಧಕರು ಮತ್ತು 1715 ವಿದ್ಯಾರ್ಥಿಗಳು ತರಬೇತಿಯನ್ನು ಪೂರ್ಣಗೊಳಿಸಿದ್ದರೂ NAC TECH Test Assessment ಪ್ರಕಾರ 184 ವಿದ್ಯಾರ್ಥಿಗಳು ಸಮರ್ಪವಾಗಿ ತರಬೇತಿ ಪೂರ್ಣಗೊಳಿಸಿದ್ದು 1531 ಜನರು ಪೂರ್ಣಗೊಳಿಸಿರುವದಿಲ್ಲ ಎಂದು ತಿಳಿಸಿದೆ. ಅದಕ್ಕೆ ಸರಿಯಾದ ಮೂಲ ಸೌಕರ್ಯಗಳಿಲ್ಲದ್ದರಿಂದ & Latitude ಸಂಸ್ಥೆ ತರಬೇತಿ ನೀಡುವ ಸಂಸ್ಥೆಯಾಗಿದ್ದು ಅಸೆಸ್‌ಮೆಂಟ ಟೆಸ್ಟ್ ನಡೆಸುವ ಸಂಸ್ಥೆ ಅಲ್ಲವೆಂದು ತಿಳಿಸಿರುತ್ತದೆ.

ಇದರಿಂದಾಗಿ ಸದರ ಸಂಸ್ಥೆಯೊಂದಿಗೆ ಮಾಡಿಕೊಂಡ MOU ಸಮರ್ಪಕ ಪರಿಪೂರ್ಣ MOU ಇಲ್ಲದ್ದರಿಂದ ಮತ್ತು ಸರಿಯಾದ ನಿಬಂಧನೆಗಳೊಂದಿಗೆ ಉಪಬಂಧಿಸಲ್ಪಡದೇ ಇರುವುದರಿಂದ ಇಂತಹ ನ್ಯೂನತೆಗಳು ತರಬೇತಿ ಕಾರ್ಯಕ್ರಮ ಅನುಷ್ಠಾನದಲ್ಲಿ ಉಂಟಾಗುತ್ತವೆ ಎಂದು ತಿಳಿಯಬೇಕಾಗುತ್ತದೆ. ಕಾರಣ ಈ ತರಬೇತಿ ಕಾರ್ಯಕ್ರಮ ಮತ್ತು ಅದರ ಉದ್ದೇಶ ನಿಷ್ಫಲವಾಗಿದೆ ಎಂದು ಅಭಿಪ್ರಾಯ ಪಡಬೇಕಾಗಿದೆ, ಆದ್ದರಿಂದ ಸೂಕ್ತ ಅನುಸರಣೆಯನ್ನು ನೀಡಲು ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ :07 ದಿನಾಂಕ: 05-11-2015 ರಲ್ಲಿ ಸೂಚಿಸಲಾಗಿತ್ತು. ಆದರೆ ಯಾವುದೇ ಅನುಸರಣೆಯನ್ನು ನೀಡಿರುವುದಿಲ್ಲ. ಆದ್ದರಿಂದ ₹. 3693520/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

68) ಪರೀಕ್ಷೆ ವಿಭಾಗಗಳ ಶುಲ್ಕಗಳ ಸ್ವೀಕೃತಿ ರಜಿಸ್ಟರ್ :-

ಪ್ರಸಕ್ತ ಸಾಲಿನ ಪರೀಕ್ಷಾ ವಿಭಾಗದ ಶುಲ್ಕ ಸ್ವೀಕರಿಸಿದ ವಿವರದ ರಜಿಸ್ಟರ್‌ಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವದಿಲ್ಲ. ಸಂಬಂಧಿಸಿದ ವಿಷಯ ನಿರ್ವಾಹಕರಿಗೆ ಅನೇಕ ಸಲ ಮೌಖಿಕವಾಗಿ ಕೇಳಲಾಗಿದ್ದರು ಸಹ ಈ ವಿವರಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಪ್ರಸಕ್ತ ಸಾಲಿನ ಪರೀಕ್ಷಾ ವಿಭಾಗಕ್ಕೆ ಸ್ವೀಕೃತಿಗೊಳ್ಳುವ ಮೊತ್ತದ ವಿವರಗಳನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಆದಾಗ್ಯೂ ಲೆಕ್ಕಪರಿಶೋಧನೆ ಕೊನೆಯ ದಿನದಂದು

ಜಮೆಯ ವಿವರಗಳ ದಾಖಲೆಯನ್ನು ಮಾತ್ರ ಒದಗಿಸಿರುವರು. ಮುಂದುವರೆಯುತ್ತಾ, ಸದರ ದಾಖಲೆಯು ಅಂತ್ಯಂತ ಅವಶ್ಯಕ ಇರುವದರಿಂದ ಪ್ರತಿ ಆರ್ಥಿಕ ಸಾಲಿನಲ್ಲಿಯು ಸ್ವೀಕೃತಿಗೊಳ್ಳುವ ಪರೀಕ್ಷಾ ಶುಲ್ಕಗಳ ವಿವರಗಳ ರಜಿಸ್ಟರ್‌ನ್ನು ಕಟ್ಟುನಿಟ್ಟಾಗಿ ನಿರ್ವಹಿಸುವುದು. ಹಾಗೂ ಲೆಕ್ಕಪರಿಶೋಧನೆಗೆ ಸಕಾಲದಲ್ಲಿ ಹಾಜರುಪಡಿಸಲು ಅವಶ್ಯವಿರುತ್ತದೆ. ಆದರೆ ಈ ಬಗ್ಗೆ ನೀಡಿದ ವಿಚಾರಣಾ ಪತ್ರಗಳಿಗೆ ಎಲ್ಲ ವಿವರಗಳನ್ನು ನೀಡಲಾಗಿದೆ ಎಂಬ ತಪ್ಪು ಅನುಸರಣೆಯನ್ನು ನೀಡಿದ್ದು ಆಕ್ಷೇಪಣೆಯ ವಿಷಯವಾಗಿದೆ.

69) ಭೋಧಕ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆ ಕುರಿತು ದಾಖಲೆಗಳನ್ನು ಹಾಜರುಪಡಿಸದಿರುವ ಕುರಿತು:-

2014-15ನೇ ಸಾಲಿನ ಸದರಿ ವಿಶ್ವವಿದ್ಯಾಲಯದ ಲೆಕ್ಕಪರಿಶೋಧನೆಯಲ್ಲಿ ಭೋಧಕ ಸಿಬ್ಬಂದಿಗಳ ಸೇವಾ ಪುಸ್ತಕ ಪರಿಶೀಲನೆಯಲ್ಲಿ ಡಿ.ಪಿ.ಎ.ಆರ್. ವಿಭಾಗದವರು ಮಾಹಿತಿಯಂತೆ 148 ಭೋಧಕ ಸಿಬ್ಬಂದಿಗಳು ಅಸಿಸ್ಟಂಟ್ ಪ್ರೊಫೆಸರ್, ಅಸೋಸಿಯೇಟ್ ಪ್ರೊಫೆಸರ್ ಹಾಗೂ ಪ್ರೊಫೆಸರ್ ಹುದ್ದೆಗೆ ನೇಮಕಗೊಂಡಿದ್ದು, ವಿವಿಧ ಡಿಪಾರ್ಟಮೆಂಟ್/ಕೋಸ ಅಂದರೆ Computer Engineering, Computer Science, & Engineering, Product Design & manufacturing, VLSI Design & Embedded system, Water management Aerospace propuletion technology, Computer aided engineering, Digital Electronics & Communication system, Nano technology, construction technology, Machine design, Thermal Power enginerring, MBA, MCA Industrial automation Engineering Structural enginerring ಗಳಿಗೆ ನೇಮಕಗೊಂಡಿದ್ದು ಗಮನಿಸಿದೆ ಈ ನೇಮಕಾತಿಗಳಿಗೆ ಸಂಬಂಧಿಸಿದ ಮಾಹಿತಿ/ದಾಖಲೆಗಳ ವಿವರ ಈ ಕೆಳಗಿನಂತಿದೆ.

1) ವಿಶ್ವವಿದ್ಯಾಲಯದ ಸದರ ವಿಭಾಗಗಳ/ಕೋರ್ಸಗಳು ಸರಕಾರದಿಂದ ಅನುಮೋದಿತ ವಿಭಾಗಗಳು ಸರಕಾರದಿಂದ ಮಂಜೂರು ಮಾಡಿದ ಹುದ್ದೆಗಳು ಈ ನೇಮಕಾತಿಗೆ ಸರಕಾರದ ನೀಡಿದ ಒಪ್ಪಿಗೆ ಕುರಿತು ಮಾಹಿತಿ/ದಾಖಲೆಗಳನ್ನು ಲೆಕ್ಕಪರಿಶೋಧನೆ ನೀಡುವುದು.
2) ಸದರ ನೇಮಕಾತಿಗಳಿಗೆ ಸಂಬಂಧಿಸಿದಂತೆ ಪತ್ರಿಕಾ ಪ್ರಕಟಣೆ ಸಂಖ್ಯೆ:VTU/DPAR/2012-13/716 D:16-3-2013 Selection Committee ನಡಾವಳಿ D:19-01-2014, Executive Council Resolution No:8, 6 D:20-01-2014 ಕುರಿತು/ದಾಖಲೆ ಮಾಹಿತಿ ಲೆಕ್ಕ ಪರಿಶೋಧನೆಗೆ ನೀಡುವುದು.
3) ಸದರ ಸಿಬ್ಬಂದಿಗಳು ಈ ವಿವಿಗೆ ಹಾಜರು ಆದನಂತರ ಯಾವ ಹುದ್ದೆಯಲ್ಲಿ ಸೇಲ್‌ನಲ್ಲಿ ಮಂಜೂರಾತಿ ಅನುಗುಣವಾಗಿ ಭರ್ತಿ ಮಾಡಿದ ಸಂಖ್ಯೆ ಹಾಗೂ ಖಾಲಿ ಹುದ್ದೆಗಳ ಸಂಖ್ಯೆ ಒಳಗೊಂಡ ಸ್ಕೇಲ್ ರಜಿಸ್ಟರ್ ನಿರ್ವಹಿಸಿದ್ದಲ್ಲಿ ಲೆಕ್ಕಪರಿಶೋಧನೆಗೆ ನೀಡುವುದು.

ಈ ಮೇಲಿನ ದಾಖಲೆ/ಮಾಹಿತಿ ಅನುಪಸ್ಥಿಯಲ್ಲಿ ಸದರ ಸಿಬ್ಬಂದಿಗಳ ಸೇವಾ ಪುಸ್ತಕ ಪರಿಶೀಲನೆ ಅಪೂರ್ಣಗೊಳ್ಳುತ್ತದೆ. ಆದ್ದರಿಂದ ಕೋರಿರುವ ಮಾಹಿತಿ/ದಾಖಲೆ ನೀಡಲು ವಿಚಾರಣಾ ಪತ್ರ ಸಂಖ್ಯೆ: 95/05-03-2016ರ ಪ್ರಕಾರ ಕೇಳಲಾಗಿದ್ದು, ರಜಿಸ್ಟರ್, ವಿತಾವಿ ಬೆಳಗಾವಿ ಇವರು ಅನುಸರಣೆ ನೀಡುತ್ತಾ ಮೇಲಿನ ನೇಮಕಾತಿಗಳ ಕುರಿತು ಎಲ್ಲ ದಾಖಲೆಗಳನ್ನು ಖುದ್ದು ಪರಿಶೀಲನೆಗಾಗಿ ಫ್ಯಾಕ್ಟ ಫೈಡಿಂಗ್ ಕಮೀಟಿಯವರು ತೆಗೆದುಕೊಂಡಿರುವ ಕಾರಣ ಅವುಗಳನ್ನು ಮುಂದಿನ ಲೆಕ್ಕಪರಿಶೋಧನೆಗೆ ಹಾಜರಪಡಿಸಲಾಗುವುದು ಎಂದು ತಿಳಿಸಿರುವ ಹಿನ್ನಲೆಯಲ್ಲಿ ಫ್ಯಾಕ್ಟ್ ಪೈಡಿಂಗ್ ಕಮೀಟಿ ನಿರ್ಣಯಗಳು ಅದರ ಮೇಲೆ ತೆಗೆದುಕೊಂಡ ಕ್ರಮದೊಂದಿಗೆ ಮುಂದಿನ ಸಾಲಿನ ಲೆಕ್ಕಪರಿಶೋಧನೆಗೆ ಸಮಗ್ರ ದಾಖಲೆಯನ್ನು ನೀಡಲು ಸೂಚಿಸಿದೆ.

70) ಭೋಧಕ ಸಿಬ್ಬಂದಿಗಳ ಸೇವಾ ಪುಸ್ತಕದಲ್ಲಿ ಕಂಡುಬಂದ ನ್ಯೂನತೆಗಳ ಬಗ್ಗೆ :-

2014-15ನೇ ಸಾಲಿನ ಭೋಧಕ ಸಿಬ್ಬಂದಿಗಳ ಸೇವಾ ಪುಸ್ತಕಗಳ ಪರಿಶೀಲನೆಯಲ್ಲಿ ಕಂಡುಬಂದ ನ್ಯೂನತೆಗಳ ವಿವರ ಈ ಕೆಳಗಿನಂತಿವೆ.

ಸೇವಾ ಪುಸ್ತಕದ ಭಾಗ-1 ಕಾಲಂ ಸಂಖ್ಯೆ: 7ರಲ್ಲಿ ವಿದ್ಯಾರ್ಹತೆ ಹೊಂದಿದ ಬಗ್ಗೆ M.Tech, MBA, MCA, ME ಪೂರ್ಣಗೊಂಡ ವರ್ಷದ ದಾಖಲಿಸಿಲ್ಲ.

1) ಸೇವಾ ಪುಸ್ತಕದ ಭಾಗ-1 ಕಾಲಂ ಸಂಖ್ಯೆ:13ರಲ್ಲಿ ಸರಕಾರಿ ನೌಕರನ ಸಹಿ ಅಥವಾ ಎಡಗೈ ಹೆಬ್ಬಟ್ಟಿನ ಗುರುತು ಸಾಕಷ್ಟು ಸೇವಾ ಪುಸ್ತಕದಲ್ಲಿ ಖಾಲಿ ಇರುತ್ತದೆ.
2) ಕೆಲವೊಂದು ಸೇವಾ ಪುಸ್ತಕದಲ್ಲಿ ಕಾಲಂ ಸಂಖ್ಯೆ:12ರಲ್ಲಿ ಸ್ವಂತ ಸ್ಥಳ ಅಥವಾ ಗ್ರಾಮ ಕುರಿತು ಮಾಹಿತಿ ದಾಖಲಿಸಿಲ್ಲ.
3) ಸೇವಾ ಪುಸ್ತಕದ ಬಾಗ-2ರಲ್ಲಿ ನೇಮಕಾತಿ ಆದೇಶ ಕುರಿತು ಸೇವಾ ಪುಸ್ತಕದಲ್ಲಿ ಲಿಖಿತರೂಪದಲ್ಲಿ ದಾಖಲಿಸದೆ ನೇರವಾಗಿ ಆದೇಶದ ಪ್ರತಿಯನ್ನು ಲಗತ್ತಿಸಲಾಗಿದ್ದು, ಒಪ್ಪಲಾಗುವುದಿಲ್ಲ.
4) ಭೋಧಕ ಸಿಬ್ಬಂದಿಗಳ ಸಾಕಷ್ಟು ಸೇವಾ ಪುಸ್ತಕದಲ್ಲಿ 2014-15ನೇ ಸಾಲಿನ ವಾರ್ಷಿಕ ವೇತನ ಬಡ್ತಿ ದಾಖಲಿಸಿರುವದಿಲ್ಲ.
5) ಸೇವಾ ಪುಸ್ತಕದಲ್ಲಿ "Service Verfication with acquittance roll" ಸರಕಾರಿ ನೌಕರನ ರುಜು ಪಡೆದಿರುವದಿಲ್ಲ.

ಈ ಮೇಲಿನ ನ್ಯೂನತೆಗಳ ಹಿನ್ನಲೆ ಎಲ್ಲ ನಮೂದುಗಳನ್ನು ಮಾಡಿರುತ್ತಾರೆ ವಿಚಾರಣಾ ಪತ್ರ 96/5-3-2016ರ ಕಂಡಿಕೆ(7)ರ ಪ್ರಕಾರ ದಿ:01-04-2016ರ ನಂತರ ನೇಮಕಗೊಂಡ ಸಿಬ್ಬಂದಿಗಳಿಗೆ ಹೊಸ ಪಿಂಚಣಿ ಯೋಜನೆ (ಎನ್.ಪಿ.ಎಸ್.) ಅನ್ವಯಿಸುತ್ತಿದ್ದು ಸೇವಾ ಪುಸ್ತಕದಲ್ಲಿ ಎನ್.ಎಸ್.ಡಿ.ಎಲ್-ಸಿ.ಆರ್.ಎ ಪ್ರಕಾರ ಟಿ.ಆಯ್.ಇ.ಆರ್-1 ಅಡಿಯಲ್ಲಿ ಪಿಂಚಣಿ ಮೊತ್ತ ಹೂಡಿಕೆ ಮಾಡಲಾಗಿರುವ ಕುರಿತು ನಮೂದಿಸಿರುವುದಿಲ್ಲ. ಈ ವಿಷಯ ಕುರಿತು ಸದರಿ ವಿವಿಯ ಕುಲಸಚಿವರು ಅನುಸರಣೆ ನೀಡಿದ್ದು ಎನ್.ಪಿ.ಎಸ್. ಕುರಿತು ಸರಕಾರಕ್ಕೆ ಈ ಕಛೇರಿ ಪತ್ರ ಸಂಖ್ಯೆ: ವಿತಾವಿ/ಡಿಪಿ.ಎಆರ್/2015-16/766 ದಿ:27-1-2016 ರಲ್ಲಿ ಅನುಮೋದನೆ ಕುರಿತು ಬರೆಯಲಾಗಿದೆ. ಮಂಜೂರಾತಿ ಬಂದ ತಕ್ಷಣ ಮುಂದಿನ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿರುವ ಹಿನ್ನಲೆಯಲ್ಲಿ ಸದರ ಕ್ರಮಕೈಗೊಂಡು ವರದಿ ನೀಡಲು ಸೂಚಿಸಿದೆ.

71) ಸರಕಾರದಿಂದ ಮಂಜೂರಾದ ಹುದ್ದೆಗಳಗೆ Special Officer, Placement Officer, R.E, P.G. Co-Ordinator & Prof P.G.S ಭೋಧಕೇತರ ಹುದ್ದೆಗಳಗೆ ನಿಯಮಬಾಹಿರವಾಗಿ ನೇಮಕ ಮಾಡಿಕೊಂಡು ವೇತನ ಪಾವತಿಸುತ್ತಿರುವ ಬಗ್ಗೆ.

2014-15ನೇ ಸಾಲಿನ ಸದರ ವಿಶ್ವವಿದ್ಯಾಲಯದ ಸೇವಾ ಪುಸ್ತಕ ಲೆಕ್ಕಪರಿಶೋಧನೆಯಲ್ಲಿ Special Officer, Placement Officer, R.E, P.G. Co-Ordinator & Prof P.G.S ಭೋಧಕೇತರ ಹುದ್ದೆಗಳಿಗೆ ನಿಯಮಬಾಹಿರವಾಗಿ ನೇಮಕ ಮಾಡಿಕೊಂಡಿದ್ದು, ವೇತನ ಪಾವತಿಸುತ್ತಿರುವ ಬಗ್ಗೆ ಗಮನಿಸಿದೆ. ಸರಕಾರದ ಅಧೀನ ಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯ) ಇವರ ಪತ್ರ ಸಂ:ಕ್ರಮಾಂಕ: :ಯುಟಿವಿ ಇಡಿದಿ: 12-9-2007ರ ಪ್ರಕಾರ ಈಗಾಗಲೇ ಮಂಜೂರಾಗಿರುವ 144 ಭೋಧಕೇತರ ಹುದ್ದೆಗಳ ಜೊತೆಗೆ ಇನ್ನು 181 ಹೆಚ್ಚುವರಿ ಭೋಧಕೇತರ ಹುದ್ದೆಗಳು ಸೇರಿ ಒಟ್ಟಾರೆ 325 ಭೋಧಕೇತರ ಹುದ್ದೆಗಳನ್ನು ಸೃಜಿಸಲು ಸರಕಾರವು ತಾತ್ಕಾಲಿಕ ಅನುಮೋದನೆಯನ್ನು ನೀಡಿರುತ್ತದೆ ಮತ್ತು ಸದರಿ ಹುದ್ದೆಗಳಿಗೆ ನಿಯಮಾವಳಿಯನುಸಾರ ಭರ್ತಿ ಮಾಡಿಕೊಳ್ಳಲು ಹಾಗೂ ಸೃಜಿಸಲಾದ ಒಟ್ಟು 325 ಭೋಧಕೇತರ ಹುದ್ದೆಗಳಿಗೆ ವಿಶ್ವವಿದ್ಯಾಲಯವೇ ತನ್ನ ಆಂತರಿಕ ಸಂಪನ್ಮೂಲಗಳಿಂದ ವೇತನ ಮತ್ತು ಭತ್ಯೆಗಳನ್ನು ಭರಿಸತಕ್ಕದ್ದು ಎಂಬ ಷರತ್ತಿಗೊಳಪಡಿಸಿ ಅನುಮತಿಯನ್ನು ನೀಡಿರುತ್ತದೆ. ಆದರೆ ಸರಕಾರದ ಪತ್ರ ದಿ:12-09-2007ರೊಂದಿಗೆ ಈ ಕೆಳಕಾಣಿಸಿದ ತಃಖ್ತೆಯಲ್ಲಿ Special Officer, Placement Officer, R.E, P.G. Co-Ordinator & Prof P.G.S ಹುದ್ದೆಗಳ ಕುರಿತಾದ ವಿವರಗಳಿರುವುದಿಲ್ಲ. ಅಲ್ಲದೇ Special Officer ಹುದ್ದೆ ಭೋಧಕೇತರ ವೃಂದದ ಹುದ್ದೆಯಾಗಿದ್ದು ಭೋಧಕ ಸಿಬ್ಬಂದಿಗಳಿಗೆ ಸದರ ಭೋಧಕೇತರ ಹುದ್ದೆಗಳ ಕಾರ್ಯಭಾರವಹಿಸಿದ್ದು (ಕ್ರ.ಸಂ 14ರ ಬಗ್ಗೆ ವಿಷಕ ಸ್ಪಷ್ಟೀಕರಣ) ಸರಕಾರದ ಪತ್ರ ಸಂ: ಇಡಿ190 ಯುಎನ್ಇ 2007 ದಿ:20-12-2007ಕ್ಕೆ ವ್ಯತಿರಿಕ್ತವಾಗಿರುತ್ತದೆ ಮತ್ತು ಅಷ್ಟರ ಮಟ್ಟಿಗೆ ಬೋಧನಾ ಕರ್ತವ್ಯಗಳು ಕುಂಠಿತವಾಗುವುದಕ್ಕೆ ಕಾರಣವಾಗಿರುತ್ತದೆ. ಕಾರಣ ಈ ಬಗ್ಗೆ ಸ್ಪಷ್ಟೀಕರಣ ನೀಡುವುದು.

ಈ ಹಿನ್ನಲೆಯಲ್ಲಿ ಸದರಿ ಹುದ್ದೆಗಳಿಗೆ ಸರಕಾರದಿಂದ ಸೃಜಿಸಿ ಮಂಜೂರಾತಿ ಪಡೆಯದೇ ಪ್ರಸ್ತುತ ಚಾಲ್ತಿಯಲ್ಲಿರುವ ಯಾವ ನಿಯಮಾನುಸಾರ ನೇಮಕಾತಿ ಮಾಡಿಕೊಳ್ಳಲಾಗಿದೆ ಹಾಗೂ 2014-15ನೇ ಸಾಲಿನ ಆಯವ್ಯಯ ಅಂದಾಜು ಪತ್ರಿಕೆಯ ಯಾವ ಲೆಕ್ಕ ಶೀರ್ಷಿಕೆಯ ಪ್ರಾವದಾನಗಳಡಿ ಸದರ ಸಿಬ್ಬಂದಿಗಳಿಗೆ ವೇತನ ಪಾವತಿಸಲಾಗಿದೆ ಎಂಬ ಕುರಿತು ಲೆಕ್ಕಪರಿಶೋಧನೆಗೆ ಸ್ಪಷ್ಟೀಕರಣ ನೀಡುವುದು ಕ್ರೋಢೀಕರಣ ಕುರಿತು ತಿಳಿಸುವುದು. ಈ ಕುರಿತು ವಿಚಾರಣಾ ಪತ್ರ ಸಂಖ್ಯೆ:94 ದಿ:04-03-2016ರ ಪ್ರಕಾರ ಮಾಹಿತಿ ನೀಡಲು ತಿಳಿಸಿದ್ದು ನೀಡಿದ ಅನುಸರಣೆ ಆಕ್ಷೇಪಣೆಗೆ ಅನುಗುಣವಾಗಿಲ್ಲ. ಈ ಹಿನ್ನಲೆಯಲ್ಲಿ 2014-15ನೇ ಸಾಲಿನಲ್ಲಿ ಪಾವತಿಸಿರುವ ಒಟ್ಟು ಮೊತ್ತ ₹.12656701-00ಗಳನ್ನು ಆಕ್ಷೇಪಿಸಲಾಗಿದೆ. ಆಕ್ಷೇಪಿತ ಮೊತ್ತದ ವಿವರಗಳು ಈ ಕೆಳಕಾಣಿಸಿದಂತಿದೆ. ಸದರಿ ಹುದ್ದೆಗಳಿಗೆ ನೇಮಕಾತಿ ಮಾಡಿಕೊಂಡು ವೇತನ ಪಾವತಿಸುತ್ತಿರುವ ಪ್ರಾರಂಭದ ದಿನಾಂಕದಿಂದ ಇಲ್ಲಿಯವರೆಗೆ ಪಾವತಿಸಿರುವ ವೇತನ+ಭತ್ಯೆಗಳನ್ನು ಲೆಕ್ಕಹಾಕಿ ಲೆಕ್ಕಪರಿಶೋಧನೆಗೆ ಅನುಸರಣೆ ಸಲ್ಲಿಸುವುದು.

ಸೃಜಿಸದೇ ಇರುವ ಬೋಧಕೇತರ ಹುದ್ದೆ ಎದುರಾಗಿ ಪಡೆದ ವೇತನ ಮತ್ತು ಭತ್ಯೆಗಳ ವಿವರಣಾ ಪಟ್ಟಿ ಈ ಕೆಳಗಿನಂತಿದೆ:

ಅಸಂ	ಹೆಸರು/ಪದನಾಮ	ಅವಧಿ	ಮೊತ್ತ	ಷರಾ
1	Sri: V.N.Kamalesh R.O Spl Officer Mysore.	1-4-2014 ರಿಂದ 30-11-2014	806592	ಡಿಸೆಂಬರ್-2014 ರಿಂದ ಮಾರ್ಚ್-2015ರವರೆಗೆ ವೇತನ ಬಟವಡೆ ಮಾಡಿದ ಮಾಹಿತಿ ಲಭ್ಯವಿಲ್ಲ.
2	Sri: S.R.Mangalwada S.O. Exam Sector	1-4-2014 ರಿಂದ 30-11-2015	1146261	-
3	Sri:V.R.Bayali S.O Exam Sector	--ಸದರ---	561788	-
4	Sri:S.K.Dhulkhed S.O Exam Sector	--ಸದರ---	996360	-
5	Sri: Venkantesh Satwik S.O Exam Sector	--ಸದರ---	1039401	-
6	Sri:S.B.Ullagaddi S.O Exam Sector	1-4-2014 ರಿಂದ 31-3-2015	915204	-
7	Prof Khadaki Prof P.G.S	1-4-2014 ರಿಂದ 31-7-2014	202155	ಅಗಷ್ಟ-2014 ರಿಂದ ಮಾರ್ಚ್-2015ರ ವರೆಗೆ ವೇತನ ಪಾವತಿ ಮಾಡಿದ ಮಾಹಿತಿ ಲಭ್ಯವಿಲ್ಲ.
8	D.H.RO P.G Co-Oridinator	1-4-2014 ರಿಂದ 31-3-2015	1923534	-
9	Sri:K.M.Ravikumar SO R O Mysore	ಏಪ್ರೀಲ್-14 ಮತ್ತು ಜುಲೈ-2014	133855	ಮೈ-2014, ಜೂನ್-2014, ಅಗಷ್ಟ-2014 ರಿಂದ ಮಾರ್ಚ್-2015ರ ವರೆಗೆ ವೇತನ ಬಟವಡೆ ಮಾಡಿದ ಮಾಹಿತಿ ಲಭ್ಯವಿಲ್ಲ.
10	Sri:C.C.Gavimath SO Belagavi V.T.U	1-4-2014 ರಿಂದ 31-3-2015	723840	-
11	Sri: Munivenkata R N SO Academic Sec	1-4-2014 ರಿಂದ 31-3-2015	345600	-
12	Sri:Vamangndi SO Academic Sec	1-4-2014 ರಿಂದ 31-3-2015	1083552	-
13	Sri:C. Nataraja SO V.T.U	1-4-2014 ರಿಂದ 31-3-2015	1040310	-
14	GEO D SILVA PLACEMENT OFFICE	1-4-2014 ರಿಂದ 31-3-2015	836880	-
15	Sri: Praveen Huntikar SO Gulbarga (R.O)	ಅಗಷ್ಟ-2015	108625	ಏಪ್ರಿಲ್-2014 ರಿಂದ ಜುಲೈ-14 ಮತ್ತು ಸಪ್ಟಂಬರ್-14 ರಿಂದ ಮಾರ್ಚ್-15 ವೇತನ ಬಟವಡೆ ಮಾಹಿತಿ ಲಭ್ಯವಿಲ್ಲ.
16	Sri: Gururaj M Gadag R.O Gulbarga Spl Officer	ನವ್ಹೆಂಬರ್-14 ರಿಂದ ಜನೇವರಿ-15	309990	ಏಪ್ರಿಲ್-2014 ರಿಂದ ಅಕ್ಟೋಬರ್-14 ಫೆಬ್ರವರಿ15 ರಿಂದ ಮಾರ್ಚ್-15 ವೇತನ ಬಟವಡೆ ಮಾಡಿದ ಮಾಹಿತಿ ಲಭ್ಯವಿಲ್ಲ.
17	Sri:Dattakumar R SO RO Mysore	ನವ್ಹೆಂಬರ್-14 ರಿಂದ ಮಾರ್ಚ್-15	650000	ಏಪ್ರಿಲ್-2014 ರಿಂದ ಅಕ್ಟೋಬರ್-14 ರ ವರೆಗೆ ವೇತನ ಬಟವಡೆ ಮಾಡಿದ ಮಾಹಿತಿ ಲಭ್ಯವಿಲ್ಲ.
18	Sri: Shivkumar H.R SO RO Mysore	ನವ್ಹೆಂಬರ್-14 ರಿಂದ ಮಾರ್ಚ್-15	527140	ಏಪ್ರಿಲ್-2014 ರಿಂದ ಅಕ್ಟೋಬರ್-14 ರ ವರೆಗೆ ವೇತನ ಬಟವಡೆ ಮಾಡಿದ ಮಾಹಿತಿ ಲಭ್ಯವಿಲ್ಲ.
19	Sri: B.C.Shatappa Redent Engg VTU Belagavi	ಏಪ್ರಿಲ್-14 ರಿಂದ ಮಾರ್ಚ್-15	1229148	-
		ಒಟ್ಟು	14580235	
		(-)	1923534	
		ಒಟ್ಟು	12656701	

72) ಲೆಕ್ಕ ಪರಿಶೋಧನಾ ಶುಲ್ಕದ ಬಗ್ಗೆ :-

ಕ್ರ ಸಂ	ಲೆಕ್ಕಪರಿಶೋಧನಾ ತಂಡದ ವಿವರ	ವೇತನ	ಉಪಯೋಗಿಸಿದ ಮಾನವ ದಿನಗಳು	ಪ್ರತಿ ದಿನಕ್ಕೆ	ಒಟ್ಟು ಮೊತ್ತ
1	ಲೆಕ್ಕ ಪರಿಶೋಧನಾಧಿಕಾರಿಗಳು	54285	53	1810	95904
2	ಲೆಕ್ಕ ಪರಿಶೋಧನಾಧಿಕಾರಿಗಳು	54285	38	1810	68761
3	ಲೆಕ್ಕ ಅಧೀಕ್ಷಕರು	35070	56	1169	65464
4	ಲೆಕ್ಕ ಅಧೀಕ್ಷಕರು	36900	53	1230	6590
5	ಲೆಕ್ಕ ಅಧೀಕ್ಷಕರು	36900	4	1230	4920
6	ಲೆಕ್ಕ ಪರಿಶೋಧಕರು	28413	6	947	5682
7	ಲೆಕ್ಕ ಪರಿಶೋಧಕರು	23606	2	787	1574
8	ಲೆಕ್ಕ ಪರಿಶೋಧಕರು	23606	3	787	2361
9	ಲೆಕ್ಕ ಪರಿಶೋಧಕರು	27953	7	932	6523
		ಒಟ್ಟು	222		316379

ಈ ಮೇಲಿನಂತೆ ಒಟ್ಟು ₹.316379/- ಗಳನ್ನು ಈ ಕೆಳಕಾಣಿಸಿದ ಲೆಕ್ಕ ಶೀರ್ಷಿಕೆಗೆ ಸರಕಾರಿ ಚಲನ್ ಮುಖಾಂತರ ಭರಣಾ ಮಾಡಲು ಮತ್ತು ಭರಣಾ ಮಾಡಿದ ಚಲನ್ ಧೃಢೀಕೃತ ಎರಡು ಪ್ರತಿಯನ್ನು ನಮ್ಮ ಕಛೇರಿಗೆ ಕಳುಹಿಸಿಕೊಡಲು ಕೋರಿದೆ.

0070	ಇತರೆ ಆಡಳಿತ ಸೇವೆಗಳು
60	ಇತರೆ ಸೇವೆಗಳು
110	ಸರ್ಕಾರಿ ಲೆಕ್ಕಪರಿಶೋಧನಾ ಶುಲ್ಕ
001	ಲೆಕ್ಕ ಪರಿಶೋಧನಾ ಶುಲ್ಕ

73) ಸಾಮಾನ್ಯ ಅಭಿಪ್ರಾಯ :-

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಒಟ್ಟಾರೆ ಆಡಳಿತಾತ್ಮಕ/ಆರ್ಥಿಕ/ಪರೀಕ್ಷೆಗೆ ಸಂಬಂಧಿಸಿದ/ವಿದ್ಯಾಮಂಡಲಕ್ಕೆ ಸಂಬಂಧಿಸಿದ/ಕಾಮಗಾರಿ ಹಾಗೂ ಸಾಮಗ್ರಿ ಪೂರೈಕೆಗಳಿಗೆ ಸಂಬಂಧಿಸಿದಂತೆ ಸಮರ್ಪಕ ನಿಯಮಬದ್ಧವಾಗಿ ಕ್ರಮಗಳನ್ನು ಕೈಕೊಳ್ಳದೇ ಇರುವುದನ್ನು ಲೆಕ್ಕ ಪರಿಶೋಧನೆಯಲ್ಲಿ ಗಮನಿಸಲಾಗಿದೆ. ಅದರಲ್ಲೂ ಕೆ.ಟಿ.ಪಿ.ಪಿ ನಿಯಮಗಳ ಉಲ್ಲಂಘನೆ ಎಲ್ಲ ಹಂತದಲ್ಲೂ ನಡೆದಿರುವುದು ಕಂಡು ಬರುತ್ತದೆ. ಹಾಗೆಯೇ ಆರ್ಥಿಕವಾಗಿ ನಿರ್ವಹಿಸಬೇಕಾದಂತಹ ವ್ಯವಹಾರಗಳನ್ನು ಹೆಚ್ಚಿನ ಪಾರದರ್ಶಕತೆ ಹಾಗೂ ನಿಯಮಬದ್ಧ ರೀತಿಯಲ್ಲಿ ನಿರ್ವಹಿಸುವುದು ಅವಶ್ಯಕ ಮತ್ತು ಲೆಕ್ಕ ಪರಿಶೋಧನೆಯಲ್ಲಿ ಅಪೇಕ್ಷಿತ ವಿಷಯವಾಗಿರುತ್ತದೆ. ಕಾರಣ ಈ ಕುರಿತು ಹೆಚ್ಚಿನ ವೈಯಕ್ತಿಕ ಗಮನಹರಿಸಿ ವಿಶ್ವವಿದ್ಯಾಲಯದ ಹಿತಾಸಕ್ತಿಯನ್ನು ಕಾಪಾಡುವಲ್ಲಿ ಎಲ್ಲ ಹಂತದಲ್ಲೂ ಎಲ್ಲ ಶಾಸನಬದ್ಧ ಅಧಿಕಾರಿಗಳು ಕಾರ್ಯಗತರಾಗಿರಬೇಕಾದದ್ದು ಅತ್ಯಂತ ಅವಶ್ಯಕ.

ಅಪರ ನಿರ್ದೇಶಕರು,
ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನ,
ಮತ್ತು ಲೆಕ್ಕಪತ್ರ ಇಲಾಖೆ,
ಪ್ರಾಂತೀಯ ಕಛೇರಿ, ಬೆಳಗಾವಿ.